ಕರ್ನಾಟಕದ ಬುಡಕಟ್ಟು ಚಿತ್ರಕಲೆ

ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪಿಎಚ್.ಡಿ ಮಹಾಪ್ರಬಂಧ


61-65

ಸಂಶೋಧಕ
ಎಂ.ಕೆ. ಗಿರೀಶ್ ಕುಮಾರ್

ಮಾರ್ಗದರ್ಶಕರು
ಡಾ. ಹಿ.ಚಿ. ಬೋರಲಿಂಗಯ್ಯ
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೦೨

65



ಪರಾಮರ್ಶೆಗೆ ಮಾತ್ರ

'ಸಿರಿಗನ್ನಡ' ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ,
ವಿದ್ಯಾರಣ್ಯ ೫೮೩ ೨೭೬.

'ಸಿರಿಗನ್ನಡ' ಗ್ರಂಥಾಲಯ
ವಿಶ್ವವಿದ್ಯಾಲಯ, ಹಂಪಿ

SHREE MAHANT
XEROX & BOOK BI
Near S.B.I., K.C.D. Roa


ಮಹೇಂದ್ರ

65

65

ಕರ್ನಾಟಕದ ಬುಡಕಟ್ಟು ಚಿತ್ರಕಲೆ

ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪಿಎಚ್.ಡಿ ಮಹಾಪ್ರಬಂಧ

ಸಂಶೋಧಕ

ಎಂ.ಕೆ. ಗಿರೀಶ್ ಕುಮಾರ್

ಮಾರ್ಗದರ್ಶಕರು

ಡಾ. ಹಿ.ಚಿ. ಬೋರಲಿಂಗಯ್ಯ

ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು

ಬುಡಕಟ್ಟು ಅಧ್ಯಯನ ವಿಭಾಗ

ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

"ಅಂಗವ್ವದ" ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಮಾಜ ವಿಜ್ಞಾನಗಳ ನಿಕಾಯ

ಬುಡಕಟ್ಟು ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೩


AKSHARA GRANTHALAYA
ACC.NO. 050530

ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

050530

759.95487
GIR

65



ಕರ್ನಾಟಕದ ಬುಡಕಟ್ಟು ಚಿತ್ರಕಲೆ

ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸಂಶೋಧಕ
ಎಂ.ಕೆ. ಗಿರೀಶ್ ಕುಮಾರ್

709.5487
GIR

ದೃಢೀಕರಣ ಪತ್ರ

ಶ್ರೀ ಎಂ.ಕೆ. ಗಿರೀಶ್ ಕುಮಾರ್ ಇವರು **ಕರ್ನಾಟಕದ ಬುಡಕಟ್ಟು ಚಿತ್ರಕಲೆ** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಪಿಎಚ್.ಡಿ ಪದವಿಗಾಗಿ ಈ ಮಹಾಪ್ರಬಂಧವನ್ನು ಸಲ್ಲಿಸಲಾಗುತ್ತಿದೆ. ಇದರ ಯಾವುದೇ ಭಾಗವನ್ನು ಈ ಮೊದಲು, ಯಾವುದೇ ಪದವಿಗಾಗಿ ಅಥವಾ ಇತರ ಉದ್ದೇಶಗಳಿಗಾಗಿ ಬಳಸಿಕೊಂಡಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 05-2-2004
ಸ್ಥಳ : ವಿದ್ಯಾರಣ್ಯ

ಡಾ.ಹಿ.ಚಿ. ಬೋರಲಿಂಗಯ್ಯ
ಮಾರ್ಗದರ್ಶಕರು ಹಾಗೂ ಪ್ರಾಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪ್ರಮಾಣ ಪತ್ರ

ಕರ್ನಾಟಕದ ಬುಡಕಟ್ಟು ಚಿತ್ರಕಲೆ ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ಡಾ.ಹಿ.ಚಿ.ಬೋರಲಿಂಗಯ್ಯ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಈ ಮಹಾಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು, ಯಾವುದೇ ಪದವಿ ಅಥವಾ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ :
ಸ್ಥಳ : ವಿದ್ಯಾರಣ್ಯ

ಎಂ.ಕೆ. ಗಿರೀಶ್ ಕುಮಾರ್
ಸಂಶೋಧಕ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

[illegible]

[illegible]

[illegible]

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎಚ್.ಜೆ.ಲಕ್ಕಪ್ಪಗೌಡ ಅವರಿಗೆ, ಪಿಎಚ್.ಡಿ. ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟ ಹಿಂದಿನ ಕುಲಪತಿಗಳಾದ ಡಾ. ಎಂ.ಎಂ.ಕಲಬುರ್ಗಿ ಹಾಗೂ ಡಾ. ಚಂದ್ರಶೇಖರ ಕಂಬಾರ ಅವರಿಗೆ ಹಾಗೂ ಕುಲಸಚಿವರಾದ ಡಾ. ಕೆ. ವಿ. ನಾರಾಯಣ, ಅಧ್ಯಯನಾಂಗದ ನಿರ್ದೇಶಕರಾದ ಡಾ. ಕರೀಗೌಡ ಬೀಚನಹಳ್ಳಿ ಅವರಿಗೆ,

ನನ್ನ ಅಧ್ಯಯನದ ಉದ್ದಕ್ಕೂ ಮಾರ್ಗದರ್ಶನ ನೀಡಿ ಪ್ರೋತ್ಸಾಹಿಸಿದ ಡಾ. ಹಿ. ಚಿ. ಬೋರಲಿಂಗಯ್ಯನವರಿಗೆ, ಬುಡಕಟ್ಟು ಅಧ್ಯಯನ ವಿಭಾಗದ ಎ. ಎಸ್. ಪ್ರಭಾಕರ, ಡಾ. ಕೆ. ಎಂ. ಮೈತ್ರಿ, ಡಾ. ಕೇಶವನ್ ಪ್ರಸಾದ್, ಚಲುವರಾಜು, ಡಾ. ಹರಿಶ್ಚಂದ್ರ ದಿಗ್ಸಂಗೀಕರ್ ಅವರಿಗೆ, ಅಧ್ಯಯನದ ಅವಧಿಯಲ್ಲಿ ಬೆನ್ನುತಟ್ಟಿ ಪ್ರೋತ್ಸಾಹಿಸಿದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಡಾ. ಎಸ್. ಸಿ. ಪಾಟೀಲ, ಪ್ರೊ. ಲಕ್ಷ್ಮಣ್ ತೆಲಗಾವಿ ಅವರಿಗೆ ಹಾಗೂ ಕಲೆಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ನೀಡಿದ ಹಿರಿಯ ಕಲಾವಿದರಾದ ಆರ್. ಎಂ. ಹಡಪದ, ಎನ್. ಮರಿಶಾಮಾಚಾರ್, ವ್ಹಿ. ಜಿ. ಅಂದಾನಿ, ಪೀಟರ್ ಲೂಯಿಸ್, ಎಂ. ಹೆಚ್. ಕೃಷ್ಣಯ್ಯ, ಅ. ಲ. ನರಸಿಂಹ, ಎನ್. ನಂಜುಂಡರಾವ್, ಎಚ್.ಎಲ್.ನಾಗೇಗೌಡ, ಡಾ. ಕಾಳೇಗೌಡ ನಾಗವಾರ, ಹುಚ್ಚಪ್ಪಮಾಸ್ತರ್, ರಾಮದಾಸ್, ದೇಶಪಾಂಡೆ, ಅವರಿಗೆ,

ನನ್ನ ಹಿರಿಯ ಗುರುಗಳಾದ ಸರ್ವಶ್ರೀ ವ್ಹಿ. ಬಿ. ಹಿರೇಗೌಡರ, ವೈ. ಎಚ್. ಸೂಗೂರು, ಕಾಳಿದಾಸ ಪತ್ತಾರ್, ಮಲ್ಲಿಕಾರ್ಜುನ ಜಾಧವ, ಎಲ್. ಕೆ. ಹನುಮಂತಾಚಾರ್, ದಿ. ಶಂಕರ ಪಾಟೀಲ್, ಗಣೇಶ ಗುಡಿ, ಶ್ರೀನಿವಾಸ ವ್ಹಿ., ಬಿ. ಆರ್. ಕೊರ್ತಿ, ಶಹೀದಾ ಬೇಗಂ, ಕೆ.ಜಿ.ಕಮ್ಮಾರ್, ವ್ಹಿ.ಸೋಮಶೇಖರಪ್ಪ, ಟಿ. ಬಿ. ಸೊಲಬಕ್ಕನವರ್, ಪರ್ವತಿಕರ್, ಜಿ. ಎಚ್. ಸೂಗೂರ್, ಪ್ರೊ. ಬಿ. ವಿ. ವೀರಭದ್ರಪ್ಪ, ಡಾ. ಎಂ. ಜಿ. ಈಶ್ವರಪ್ಪ ಅವರಿಗೆ,

ಇಲ್ಲಿಯವರೆಗೆ ನಾನು ಓದುವಂತೆ ಪ್ರೇರಣೆ ನೀಡಿದ ತಂದೆ ಎಂ. ಕೊಟ್ರಯ್ಯ, ತಾಯಿ ಶಿವಗಂಗಮ್ಮ, ತಂಗಿ ಗೀತಾ, ಅಜ್ಜಿ ನಾಗಮ್ಮ, ನನ್ನ ಮಡದಿ ತ್ರಿವೇಣಿ ಹಾಗೂ ನನ್ನ ಸೋದರ ಮಾವ ಎಂ. ಕಪ್ಲೆಪ್ಪಯ್ಯ, ಪ್ರಭುದೇವಯ್ಯ ಶಾಬನೂರು, ಮಾವನವರಾದ ಕರಿಬಸಯ್ಯ, ಶ್ರೀಮತಿ ಸುಲೋಚನಾ ಕರಿಬಸಯ್ಯ, ಸುರೇಶ, ನಾಗರಾಜ, ಜಗಳೂರು, ನನ್ನ ಚಿಕ್ಕಪ್ಪನವರಾದ ಶಿವಮೂರ್ತಯ್ಯ ಹಾಲಯ್ಯ ಕ್ಯಾರಕಟ್ಟಿ ಇವರಿಗೆ,

ನನ್ನ ಆತ್ಮೀಯ ಗೆಳೆಯರಾದ ವ್ಹಿ. ಸಿ. ಮಾರುತಿ, ಹುಲ್ಲಪ್ಪ ಸೊಬಾನದ, ಮ್ಯಾಗೇರಿ, ಸಂತೋಷ ಕುಲಕರ್ಣಿ, ಗುರುರಾಜ ನಾಯಕ, ಎ. ಪಿ. ಚಂದ್ರಶೇಖರ, ಚಂದ್ರಶೇಖರ ಸಂಘು, ಸಿದ್ಧಲಿಂಗಯ್ಯಸ್ವಾಮಿ ಹಿರೇಮಠ, ಬಾಬುರಾವ ಹೆಚ್., ಪಾಟೀಲ, ಅಣ್ಣಪ್ಪ ಶಲವಾರ್, ಈಶ್ವರ ಪ್ರಕಾಶ, ದತ್ತಾತ್ರೇಯ ನಾರಾಯಣ ಭಟ್, ವೆಂಕಟೇಶ್, ರುದ್ರಗೌಡ ಪಾಟೀಲ್ ಹಾಗೂ ನನ್ನ ಕಾಲೇಜಿನ ಸೂಪರಿಂಡೆಂಟ್ ಬಸವರಾಜಪ್ಪ, ಗ್ರಂಥಪಾಲಕಿ ಶ್ರೀಮತಿ ಲತಾ ಕಮ್ಮಾರ್ ಮತ್ತು ಆಡಳಿತ ವರ್ಗದವರಿಗೆ,

ಮುಖಪುಟಕ್ಕೆ ಅಕ್ಷರಗಳನ್ನು ಸಂಯೋಜಿಸಿಕೊಟ್ಟ ಕೆ.ಕೆ.ಮಕಾಳೆ, ತಾಂತ್ರಿಕ ನೆರವು ನೀಡಿದ ಗೋಪಾಲಗೌಡ, ಕೆಲವು ಉಪಯುಕ್ತ ಲೇಖನಗಳನ್ನು ಒದಗಿಸಿದ ಗೆಳೆಯ ಜೆ. ತಿಪ್ಪೇಶ್, ಕಲರ್ ಝೆರಾಕ್ಸ್ ಮಾಡಿಕೊಟ್ಟ ಎಲ್.ಎಂ.ಯೋಗೀಶ್, ಪ್ರಬಂಧವನ್ನು ಸುಂದರವಾಗಿ ವಿನ್ಯಾಸ ಮಾಡಿದ ಶರಣನಿಗೆ, ಅಚ್ಚುಕಟ್ಟಾಗಿ ಬೈಂಡಿಂಗ್ ಮಾಡಿಕೊಟ್ಟ ಮಹಾಂತೇಶ ಬುಕ್ ಬೈಂಡರ್ಸ್, ಧಾರವಾಡ ,ಇವರಿಗೆ,

ತುಂಬು ಹೃದಯದ ಕೃತಜ್ಞತೆಗಳು,

ಎಂ. ಕೆ. ಗಿರಿಶ್ ಕುಮಾರ್

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

[illegible]

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

ಅಧ್ಯಯನದ ಉದ್ದೇಶ

ಮನುಷ್ಯನ ಇತಿಹಾಸ ಇಂದು ನಿನ್ನೆಯದಲ್ಲ. ಅದಕ್ಕೆ ಸಹಸ್ರಾರು ವರ್ಷಗಳ ಪರಂಪರೆ ಇದೆ. ನಿಸರ್ಗದಲ್ಲಿ ಇರುವ ಇತರೆಲ್ಲಾ ಪ್ರಾಣಿಗಳಂತೆ ಮನುಷ್ಯನ ಜೀವನವೂ ಆರಂಭವಾಯಿತು. ಆದರೆ ಮೆದುಳು ಬೆಳೆದಂತೆ ಇತರ ಪ್ರಾಣಿಗಳಿಗಿಂತ ಭಿನ್ನವಾಗಿ ಮನುಷ್ಯ ಆಲೋಚಿಸತೊಡಗಿದೆ. ಆದಿಮ ಮಾನವ ನಿಸರ್ಗದಲ್ಲಿ ಒಬ್ಬನಾಗಿ ಬೆಳೆದರೂ ಅವನಿಗೆ ಆಲೋಚನಾಶಕ್ತಿ ಉಂಟಾದ ಕಾರಣ ಅವನ ಚಟುವಟಿಕೆಗಳು ಭಿನ್ನವಾದವು. ಮನಸ್ಸಿನಲ್ಲಿ ಉಂಟಾದ ಭಾವನೆಗಳನ್ನ ತನ್ನ ಚಟುವಟಿಕೆಗಳ ಮೂಲಕ ವ್ಯಕ್ತಪಡಿಸಲು ಪ್ರಾರಂಭಿದ್ದೇ ಮನುಷ್ಯ ಸಂಸ್ಕೃತಿಯ ಉಗಮಕ್ಕೆ ಕಾರಣವಾಯಿತು ಎನ್ನಬಹುದು. ಈ ವ್ಯಕ್ತಪಡಿಸುವಿಕೆ ಹಲವು ಆಯಾಮಗಳಲ್ಲಿ ನಡೆಯಿತು. ಅಂತಹ ವಿವಿಧ ಅಭಿವ್ಯಕ್ತಿ ಸ್ವರೂಪಗಳನ್ನು ನಾವು ಕಲೆಯೆಂದು ಕರೆದಿದ್ದೇವೆ.

ಮನುಷ್ಯ ಅಭಿವ್ಯಕ್ತಿಗೆ ಆಯ್ದುಕೊಂಡ ಮಾಧ್ಯಮಗಳು ಹಲವಾರು. ಆದರೆ ಮನುಷ್ಯನಿಗೆ ಅಕ್ಷರಗಳು ದಕ್ಕದೇ ಇದ್ದ ಹಂತದಲ್ಲಿಯ ಅಭಿವ್ಯಕ್ತಿಕ್ರಮ ಮಾತ್ರ ತುಂಬಾ ಸಂಕೀರ್ಣವಾದದ್ದು. ಇಂದು ಇತಿಹಾಸ ಪೂರ್ವಕಾಲದಲ್ಲಿನ ಚಿತ್ರಕಲೆಯ ಕುರಿತು ಇನ್ನು ಅಧ್ಯಯನ ಆಗಬೇಕಿದೆ. ಏಕೆಂದರೆ ಮನುಷ್ಯನ ಅಂತರಂಗದ ಹೊಳಹುಗಳಿಗೆ ವೇದಿಕೆಯಾಗುವ ಮಾಧ್ಯಮ ಅಂದಿನ ಮಾನವನ ಮಹತ್ವದ ಮತ್ತು ಬಲಶಾಲಿ ವೇದಿಕೆಯಾಗಿರುತ್ತದೆ. ಅಕ್ಷರಗಳೇ ಇಲ್ಲದ ಹೊತ್ತಿನಲ್ಲಿ ಮನುಷ್ಯ ಕಂಡುಕೊಂಡ ಅಭಿವ್ಯಕ್ತಿ ಕ್ರಮಗಳಾದ ಸಂಜ್ಞೆಗಳು, ಅಭಿನಯ ಮತ್ತು ಚಿತ್ರಕಲೆಗಳು ಒಂದು ಸಂಕೀರ್ಣ ಅಧ್ಯಯನಕ್ಕೆ ಎಡೆಮಾಡಿಕೊಡುತ್ತವೆ. ಭಾಷೆಯೇ ಇಲ್ಲದ ಕಾಲದ ಸಂವಹನದ ತೊಡಕುಗಳ ಕಟ್ಟಿಕೊಡುವ ಇತಿಹಾಸ ಅದ್ಭುತವಾದದ್ದು. ಇತಿಹಾಸಕ್ಕೆ ನಾವು ಇಸಿವಿಗಳನ್ನು ಬರೆದುಕೊಳ್ಳ ತೊಡಗಿದ ನಂತರ ಇಂಡಿಯಾದ ಚರಿತ್ರೆ ನಮಗೆಲ್ಲಾ ಗೊತ್ತೇ ಇದೆ. ಇಲ್ಲಿ ಸ್ವಚ್ಛಂದ ಬದುಕುಗಳ ವಿಘಟನೆ, ಹೊರಗಿನ ಶಕ್ತಿಗಳ ಆಕ್ರಮಣ, ಇದೆಲ್ಲ ಈಗ ಚರಿತ್ರೆ ಮಾತ್ರ. ಭಾರತದಲ್ಲಿ ಉಂಟಾದ ಈ ಸಾಂಸ್ಕೃತಿಕ ಮತ್ತು ಸಾಮಾಜಿಕ ವಿಘಟನೆ ಹಲವು ಸ್ಥಿತ್ಯಂತರಗಳಿಗೆ ಕಾರಣವಾಯ್ತು. ಆಕ್ರಮಣಕಾರರ ರಭಸಕ್ಕೆ ಎದೆಯೊಡ್ಡಿದ ದೇಶೀ ಜನತೆ ಶ್ರೇಣೀಕರಸಲ್ಪಟ್ಟರು. ಅನೇಕ ಸಮುದಾಯಗಳು ಅಜ್ಞಾತವಾಗಿಯೇ ಉಳಿದವು. ಶಿಷ್ಟ ಜಗತ್ತೆಂಬ ನಾಡಲ್ಲಿ

[illegible]

[illegible]

[illegible]

[illegible]

ಜನಗಳು ಹೀನಾಯವಾಗಿ ವರ್ಗೀಕರಿಲ್ಪಟ್ಟರೆ, ಕಾಡಲ್ಲಿ ಸ್ವಚ್ಛಂದ ಬದುಕಿನ ಇನ್ನೊಂದು ಆಯಾಮವನ್ನು ಕಂಡುಕೊಂಡ ಗಿರಿಜನರು ಇಸ್ವಿಗಳನ್ನು ಬರೆಸಿಕೊಂಡ ಚರಿತ್ರೆ ಹಿಂದಿನ ಸ್ಥಿತಿಯಲ್ಲೇ ಬದುಕತೊಡಗಿದರು. ಶಿಷ್ಟ ಜಗತ್ತೆಂಬ ಸ್ಥಾವರ ಪರಂಪರೆಯ ಅಭಿವ್ಯಕ್ತಿಗೆ ನಾನಾ ಮಾಧ್ಯಮಗಳಿವೆ. ಇಂದು ಶಿಷ್ಟ ಜಗತ್ತು ವೈಜ್ಞಾನಿಕ ಅವಿಷ್ಕಾರಗಳ ಫಲವಾಗಿ ಅನೇಕ ಅಭಿವ್ಯಕ್ತಿ ಮಾದ್ಯಮಗಳನ್ನು ಹೊಂದಿದೆ. ಆದರೆ ಮೌಖಿಕ ಪರಂಪರೆಯ ಅದರಲ್ಲೂ ಬುಡಕಟ್ಟುಗಳು ಕಟ್ಟಿಕೊಂಡಿರುವ ಕಲಾ ಪ್ರಪಂಚ ಅದ್ಬುತವಾದದ್ದು. ಆಧುನಿಕ ಜಗತ್ತಿನ ಪರಿವೇ ಇಲ್ಲದ ಈ ಗಿರಿಜನರ ಕಲೆಗಳಲ್ಲಿ ಅವರ ಬದುಕಿನ ಅನೇಕ ಒಳ ಸೂಕ್ಷ್ಮಗಳಿವೆ. ಇಡೀ ಸಮುದಾಯದ ಆಲೋಚನಾ ವಿಧಾನವಿದೆ. ಪ್ರಕೃತಿಯ ವಿಸ್ಮಯಗಳು ಹುಟ್ಟಿಸಿದ ತಲ್ಲಣಗಳ ಫಲಿತವಾಗಿ ಅವರಲ್ಲಿ ಜಿನಗಿರಬಹುದಾದ ಈ ಅಭಿವ್ಯಕ್ತಿ ಮಾಧ್ಯಮ ಈ ಜನಸಮುದಾಯದ ಆಲೋಚನಾ ಕ್ರಮವನ್ನು ನಮಗೆ ಕಟ್ಟಿಕೊಡುತ್ತದೆ.

ನಮ್ಮ ಕಣ್ಣ ಮುಂದಿರುವ ಅನೇಕ ರೀತಿಯ ಕಲಾ ಪ್ರಕಾರಗಳಲ್ಲಿ ಚಿತ್ರಕಲೆ ಅತ್ಯಂತ ಮುಖ್ಯವಾದದ್ದು. ಏಕೆಂದರೆ ಇದಕ್ಕೆ ಪ್ರಾಚೀನ ಇತಿಹಾಸವಿದೆ. ಮನುಷ್ಯನ ಅಭಿವ್ಯಕ್ತಿ ಕ್ರಮದಲ್ಲಾದ ರೂಪಾಂತರಗಳನ್ನ ನಾವು, ಆದಿವಾಸಿಗಳ ಚಿತ್ರಕಲೆಯ ಚಾರಿತ್ರಿಕ ಬೆಳವಣಿಗೆಯ ಮೂಲಕ ಕಂಡುಕೊಳ್ಳಬಹುದು. ಮಾನವನ ಅಭಿವ್ಯಕ್ತಿಯ ಸಂಕೀರ್ಣ ಪ್ರವೃತ್ತಿಯ ಸ್ಥಿತ್ಯಂತರಗಳನ್ನು ಈ ಮೂಲಕ ಅಧ್ಯಯನಕ್ಕೊಳ ಪಡಿಸಬಹುದು. ಮನುಷ್ಯ ಸಂಸ್ಕೃತಿಯ ಉಗಮವೇ ಚಿತ್ರಕಲೆಯ ಮೂಲಕ ಆಗಿದೆ. ಮನುಷ್ಯ ಅನಾಗರಿಕನಾಗಿ ನಿಸರ್ಗದಲ್ಲಿ ಪ್ರಾಣಿಗಳೋಪಾದಿಯಲ್ಲಿ ಬದುಕುತ್ತಿದ್ದ ಸಂದರ್ಭದಲ್ಲಿಯೇ ತನಗೆ ಅನಿಸಿದ್ದನ್ನು ಗೀಚುವ ಮೂಲಕ ಅಭಿವ್ಯಕ್ತಿಸತೊಡಗಿದ. ಕ್ರಮೇಣ ತನ್ನ ಸುತ್ತಣ ಪರಿಸರದಲ್ಲಿ ಇರುವ ಪ್ರಾಣಿ ಪಕ್ಷಿ ಮತ್ತು ನಿಸರ್ಗದ ವಿವಿದಾಕಾರಗಳನ್ನು ಅನುಸರಿಸಿ ಬರೆಯತೊಡಗಿದ. ಆದಿಮಾನವನ ಇಂತಹ ಅನೇಕ ಕಲಾಕೃತಿಗಳು ಗುಹೆಗಳಲ್ಲಿ, ಬಂಡೆ, ಬೆಟ್ಟಗಳಲ್ಲಿ, ಕಣಿವೆ, ಕಂದರಗಳಲ್ಲಿ ಇಂದಿಗೂ ಗೋಚರಿಸುತ್ತಿರುವುದು ಇದಕ್ಕೆ ಸಾಕ್ಷಿ.

ಹೀಗಾಗಿ ಚಿತ್ರಕಲೆಯೇ ಎಲ್ಲಾ ಕಲೆಗಳಿಗಿಂತ ಪ್ರಾಚೀನವಾದದ್ದು ಮತ್ತು ಮೂಲವಾದುದ್ದು. ಆನಂತರದಲ್ಲಿ ಮಾತು, ಭಾಷೆ, ಮತ್ತು ಲಿಪಿಗಳು ಹುಟ್ಟಿಕೊಂಡವು. ಚಿತ್ರಕಲೆಯೆಂಬುದು ಆಧುನಿಕ ಸಮುದಾಯ ಮತ್ತು ಬುಡಕಟ್ಟು ಸಮುದಾಯಗಳೆರಡರಲ್ಲೂ ಪ್ರಚಲಿತವಾಗಿದೆ. ಆದರೆ ಆಧುನಿಕ ಮನುಷ್ಯನಿಗಿರುವ ನಾಗರಿಕ ಸೌಲಭ್ಯಗಳಿಂದ ದೂರವಿರುವ ಮತ್ತು ಅಕ್ಷರ ಕಲಿಯದೆ, ನಿಸರ್ಗದ ಒಂದು ಭಾಗವಾಗಿ ಬದುಕುತ್ತಿರುವ ಬುಡಕಟ್ಟು ಸಮುದಾಯಗಳಲ್ಲಿ ಪ್ರಚಲಿತವಿರುವ ಕಲೆಗಳ ಅಧ್ಯಯನ ಬಹುಮುಖ್ಯವಾಗಿ ಆಗಬೇಕಾಗಿದೆ. ಯಾಕೆಂದರೆ ಬುಡಕಟ್ಟು ಸಮುದಾಯಗಳ ಚಿತ್ರಕಲೆಯ ಅಧ್ಯಯನ ಎಂದರೆ ಅದು ಇತಿಹಾಸದ ಅಧ್ಯಯನವೂ ಹೌದು. ಸಂಸ್ಕೃತಿಯ ಅಧ್ಯಯನವೂ ಹೌದು. ಅಲ್ಲದೆ ಮಾನವ ಸ್ವಭಾವಗಳ ಅಧ್ಯಯನವೂ ಹೌದು.

[illegible]

[illegible]

[illegible]

[illegible]

ಆಧುನಿಕ ಸಮಾಜ ವ್ಯವಸ್ಥೆಯಲ್ಲಿ ಬುಡಕಟ್ಟು ಜನರ ಬದುಕು ತೀವ್ರವಾದ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಇಂದು ನಾವು ನೋಡುತ್ತಿರುವ ಈ ಎಲ್ಲಾ ನಾಗರೀಕತೆಗಳಿಗೆ ಮೂಲದ್ರವ್ಯವೆನಿಸಿದ ಆದಿಮ ಸಮಾಜದ ಮೂಲಗಳನ್ನು ಸಂರಕ್ಷಿಸಿಕೊಂಡು ಬಂದಿರುವ ಬುಡಕಟ್ಟುಗಳ ಸಂಸ್ಕೃತಿಯನ್ನು ಅಧ್ಯಯನ ಮಾಡುವುದೆಂದರೆ, ನಮ್ಮ ಬೇರುಗಳನ್ನು ನಾವೇ ಹುಡುಕಿಕೊಂಡಂತೆ. ಬೇರುಗಳಿಲ್ಲದೇ ಕಾಂಡ ಮತ್ತು ಚಿಗುರುಗಳು ಇರಲು ಸಾಧ್ಯವಿಲ್ಲ. ಆದರೆ ಇಂದು ನಾವು ಬೇರುಗಳನ್ನು ನಿರ್ಲಕ್ಷಿಸುತ್ತಿದ್ದೇವೆ. ವಾಸ್ತವವಾಗಿ ಈವತ್ತಿನ ಆಧುನೀಕರಣ ಮತ್ತು ಜಾಗತೀಕರಣಗಳ ಬಿಕ್ಕಟ್ಟುಗಳ ಹಿನ್ನಲೆಯಲ್ಲಿ ನಮ್ಮ ಬೇರುಗಳನ್ನು ನಾವು ಶೋಧಿಸಿಕೊಳ್ಳುವ ಅಗತ್ಯವಿದೆ. ಅಂತಹ ಒಂದು ಪ್ರಯತ್ನವೇ ನನ್ನ ಅಧ್ಯಯನದ ಉದ್ದೇಶವಾಗಿದೆ.

ಇಂದು ನಾವು ಕರ್ನಾಟಕದಲ್ಲಿ ಗುರುತಿಸುವ ಪ್ರತಿಯೊಂದು ಬುಡಕಟ್ಟು ಸಹ ತುಂಬಾ ಭಿನ ಭಿನ್ನ ಕಲೆಗಳನ್ನು ಮೂಲ ರೂಪದಲ್ಲಿಲ್ಲದಿದ್ದರೂ ಮೂಲಕ್ಕೆ ಹತ್ತಿರದಲ್ಲಿರುವ (Form) ಫಾರ್ಮನಲ್ಲಿ ಉಳಿಸಿಕೊಂಡಿದೆ. ಬುಡಕಟ್ಟುಗಳ ನೃತ್ಯ, ಹಾಡು, ಆಚರಣೆ ದಿನನಿತ್ಯದ ಬದುಕಿನ ಜಂಜಾಟದಲ್ಲಿ ತೀರಾ ಲೌಕಿಕ ಅಗತ್ಯಗಳಿಗಾಗಿ ಹುಟ್ಟಿಕೊಂಡವು. ಮನರಂಜನೆ, ಅಭಿವ್ಯಕ್ತಿಯ ತುರ್ತು ಮತ್ತು ಕೈಚಿತ್ತಾದ ಆಧ್ಯಾತ್ಮ ಸಂಬಂಧೀ ಕಲೆಗಳು ಬುಡಕಟ್ಟುಗಳಲ್ಲಿ ಕಂಡುಬರುತ್ತವೆ. ನಿಸರ್ಗ ಹುಟ್ಟಿಸುವ ದಿಗ್ಭ್ರಮೆ, ಆತಂಕ, ತವಕತಲ್ಲಣಗಳನ್ನ ಮುಖಾಮುಖಿಯಾಗುವ ಸಂದರ್ಭದಲ್ಲಿ ಆದಿವಾಸಿಗಳ ಜಟಿಲ ಮನಸ್ಥಿತಿಯ ಪ್ರತಿರೂಪದಂತೆ ಈ ಚಿತ್ರಕಲೆ ಕಾಣಬರುತ್ತದೆ. ಇದೇ ಅಭಿವ್ಯಕ್ತಿ ಮುಂದೆ ಹವ್ಯಾಸವಾಗಿ, ಪ್ರವೃತಿಯಾಗಿ, ಕಲೆಯಾಗಿ, ಆಧ್ಯಾತ್ಮವಾಗಿ ಜನಸಮುದಾಯಕ್ಕೆ ರೂಢಿಯಾಯಿತು. ಮನುಷ್ಯನ ಒಟ್ಟು ಅಭಿವ್ಯಕ್ತಿ ಕ್ರಮಗಳ ಹುಟ್ಟು ಈ ಬಗೆಯ ತಲ್ಲಣಗಳ ಬಿಕ್ಕಟ್ಟಿನಿಂದಲೇ ಆಯಿತು. ಇಂದಿಗೂ ಉತ್ಕೃಷ್ಟ ಅಭಿವ್ಯಕ್ತಿಯು, ಸಮುದಾಯದ ನೆಲೆಯಲ್ಲಿ ಚೋದಿತವಾದರೂ ಸಹ, ವ್ಯಕ್ತಿಗತ ತಲ್ಲಣಗಳ ನಿವಾರಣೆಯ ಭಾಗವಾಗಿಯೇ ಇರುತ್ತದೆ. ಹೀಗಾಗಿ ಬುಡಕಟ್ಟುಗಳ ಚಿತ್ರಕಲೆಯು ಅಧ್ಯಯನವೆಂದರೆ ಮನುಷ್ಯನ ಅಭಿವ್ಯಕ್ತಿಯ ಚಾರಿತ್ರಿಕ ಬೆಳವಣಿಗೆಯ ಅಧ್ಯಯನವೆಂದೇ ಅರ್ಥಮಾಡಿಕೊಳ್ಳಬೇಕು. ನಾನು ಈಗ ಮುಖ್ಯವಾಗಿ ಕರ್ನಾಟಕದ ಕೆಲವು ಪ್ರಮುಖ ಬುಡಕಟ್ಟುಗಳ ಚಿತ್ರಕಲೆಯನ್ನು ಈ ಪ್ರೌಢ ಪ್ರಬಂಧದಲ್ಲಿ ಅಧ್ಯಯನ ಮಾಡಲು ಯತ್ನಿಸಿದ್ದೇನೆ. ಇಂದು ಕರ್ನಾಟಕದಲ್ಲಿ ಮುಖ್ಯವಾಗಿ ಬುಡಕಟ್ಟುಗಳು ಸಿಗುವುದು ಮಲೆನಾಡಿನ ದಟ್ಟ ಕಾಡುಗಳಲ್ಲಿ ಮಾತ್ರ. ದಟ್ಟ ಕಾನನದ ಗರ್ಭದಲ್ಲಿ ಶಿಷ್ಟ ಜಗತ್ತಿನ ಪರಿವೆಯಿಲ್ಲದ ಅನೇಕ ಬುಡಕಟ್ಟುಗಳು ಇಂದು ನಮಗೆ ಕಾಣಸಿಗುತ್ತವೆ. ಇಂದು ಚಿತ್ರಕಲೆಯನ್ನು ಕುರಿತು ಅಧ್ಯಯನಗಳು ನಡೆದಿರುವುದು ಕೇವಲ ಅಭಿಜಾತ ಮತ್ತು ಈಚಿನ ಆಧುನಿಕ ಕಲಾಕೃತಿಗಳ ಬಗ್ಗೆ ಮಾತ್ರ. ರಾಜರು ಕಟ್ಟಿಸಿದ ದೇವಾಲಯಗಳ ವರ್ಣಚಿತ್ರಗಳು ಕುರಿತು ಅಧ್ಯಯನಗಳೂ ಸಾಕಷ್ಟು ನಡೆದಿವೆ. ಇವೆಲ್ಲ ಶಿಷ್ಟ ಜಗತ್ತಿನಲ್ಲಿ ಸಿದ್ಧ ಮಾದರಿಯ ವಾದಗಳ ಹಿನ್ನೆಲೆಯಲ್ಲಿ, ಶಿಷ್ಟ ವರ್ಣಚಿತ್ರಗಳ ಬಗ್ಗೆ ಮಾತ್ರ ಮಾತಾಡುತ್ತವೆ. ಆದರೆ ನಮ್ಮ ಬುಡಕಟ್ಟುಗಳ ರೇಖಾಚಿತ್ರಗಳು, ವರ್ಣಚಿತ್ರಗಳು ಮಾತ್ರ ಅವರ ಅಧ್ಯಯನದ ಕಕ್ಷೆಯ ಆಚೆಗೇ ಉಳಿದುಕೊಂಡು ಬಿಡುತ್ತವೆ. ಇಲ್ಲಿಯವರೆಗೆ ಬುಡಕಟ್ಟುಗಳ ಚಿತ್ರಕಲೆಯ ಕುರಿತು ಕೆಲವು ಲೇಖನಗಳು ಪ್ರಕಟವಾಗಿದ್ದರೂ

ಒಂದು ಸಂಶೋಧನಾ ಪ್ರಬಂಧ ಸಿದ್ದವಾಗಿಲ್ಲ. ಅಲ್ಲದೆ ಒಂದು ಕ್ರಮ ಬದ್ದ ಅಧ್ಯಯನವೂ ನಡೆದಿಲ್ಲ.

ಕಲೆ ಪ್ರತಿಯೊಬ್ಬರ ಬದುಕಿನಲ್ಲೂ ಹಾಸುಹೊಕ್ಕಾಗಿದೆ. ಈ ಕಲೆ ವ್ಯಕ್ತಿ ವ್ಯಕ್ತಿಗಳ ನಡುವೆ ಏಕಸ್ವರೂಪದಲ್ಲಿ ಇರಬಹುದು. ಇಲ್ಲವೆ ಭಿನ್ನ ಸ್ವರೂಪವನ್ನು ಹೊಂದಿರಬಹುದು. ಹಾಗಾಗಿ 'ಕಲೆ'ಯನ್ನು ಮಾನವನಲ್ಲಿ ಹಲವು ಬಗೆಯಲ್ಲಿ ನೋಡುತ್ತೇವೆ. ಈ ಹಲವು ಬಗೆಯ ಕಲೆಗಳು ಜನಾಂಗ ಅಥವಾ ಸಮುದಾಯಗಳ ಹಿನ್ನೆಲೆಯಲ್ಲಿ ವೈಶಿಷ್ಟತೆಯನ್ನು, ವಿಭಿನ್ನತೆಯನ್ನು, ವಿಶೇಷತೆಯನ್ನು ಹೊಂದಿರುತ್ತವೆ. ಇವು ಆಯಾ ಸಮುದಾಯದ ಬದುಕಿಗೆ ಹೊಂದಿಕೊಂಡೇ ಇರುತ್ತವೆ. ಕಲೆಗಳನ್ನು ಬಿಟ್ಟು ಮನುಷ್ಯನ ಬದುಕಿಲ್ಲ. ಅವು ಮಾನವನ ಬದುಕಿನ ಉಸಿರು. ಕಲೆಗಳಿಲ್ಲದೆ ಮನುಷ್ಯನ ಬದುಕಿಗೆ ಅರ್ಥವಿಲ್ಲ. ಈ ಮನುಷ್ಯನ ಹಲವು ಬಗೆಯ ಕಲೆಗಳಲ್ಲಿ ಚಿತ್ರಕಲೆಯೂ ಒಂದು. ಇದು ಮಾನವನ ಬದುಕಲ್ಲಿ ತನ್ನದೇ ಆದಂತ ಸ್ಥಾನವನ್ನು ಹೊಂದಿದೆ.

ಪ್ರತಿಯೊಂದು ಸಮುದಾಯವೂ ಕೂಡ ತನ್ನದೇ ಆದ ಅನನ್ಯತೆಯನ್ನು ಬಿಂಬಿಸುತ್ತದೆ ಹಾಗೆಯೇ ಅಭಿವ್ಯಕ್ತಿಗೊಳಿಸುತ್ತದೆ. ಚಿತ್ರಕಲೆಗೆ ಸಂಬಂಧಿಸಿದಂತೆ ನೋಡುವುದಾದರೆ ಇದು ಸಂಪೂರ್ಣವಾಗಿ ದೃಶ್ಯದ ಮೂಲಕ ಭಾವನೆಗಳನ್ನು ಅಭಿವ್ಯಕ್ತಿಸುವ ಮಾಧ್ಯಮ. "ಶಿಲ್ಪ ಮತ್ತು ಚಿತ್ರಕಲೆ ಮನುಷ್ಯನ ಭಾವ ಜೀವನಕ್ಕೆ ಸಂಬಂಧಿಸಿ ಬೆಳೆದುಬಂದ ಅತ್ಯಂತ ಪೂರ್ವದ ಕಲೆಗಳು."[1] ಭಾವನೆಗಳನ್ನು, ಅನಿಸಿಕೆಗಳನ್ನು, ಅಭಿಪ್ರಾಯಗಳನ್ನು ಯಾವಾಗ ದಾಖಲಿಸಲು ಮಾನವನಲ್ಲಿ ಪ್ರಜ್ಞೆ ಮೂಡಿತೋ ಅಂದೇ ಚಿತ್ರಕಲೆ ಉಗುಮವಾಯಿತು. ಮಾನವನು ತನ್ನದೇ ಆದ ಕಲ್ಪನೆಯಲ್ಲಿ ಚಿತ್ರಕಲೆಯನ್ನು ಅಭಿವ್ಯಕ್ತಿಸುತ್ತಾ ಅದನ್ನು ಆನಂದಿಸುತ್ತಾ ಬಂದಿರುವುದನ್ನು ಚಿತ್ರಕಲೆಯ ಹಿನ್ನೆಲೆಯನ್ನು ಗಮನಿಸಿದಾಗ ಗೊತ್ತಾಗುತ್ತದೆ. "ಇತರ ಕಲೆಗಳಂತೆ ಚಿತ್ರಕಲೆಯೂ ಸಹ ಬಹು ಪ್ರಾಚೀನ ಕಾಲದಿಂದ ಮನುಷ್ಯನ ಸಂಗಾತಿಯಾಗಿ ಬೆಳೆದುಬಂದಿದೆ. ತನ್ನ ಅನುಭವದ ಮನೋಧರ್ಮವನ್ನು ಆತ ಸಂಗೀತದಲ್ಲಿ ನಾದ ವಿನ್ಯಾಸಗಳ ಮೂಲಕ, ನೃತ್ಯದಲ್ಲಿ ದೈಹಿಕ ಚಲನೆ ಮತ್ತು ಹಾವಭಾವಗಳಿಂದ ವ್ಯಕ್ತಪಡಿಸಿದರೆ ಚಿತ್ರಕಲೆಯಲ್ಲಿ ಅವನು ವಿವಿಧ ರೇಖೆಗಳ ಮತ್ತು ವರ್ಣಗಳ ಸಂಯೋಜನೆಯಿಂದ ಹೊರಹೊಮ್ಮಿಸಲು ಪ್ರಯತ್ನಿಸುತ್ತಾನೆ."[2] 'ಚಿತ್ರಕಲೆ' ಅಥವಾ 'ಕಲೆ' ಹುಟ್ಟುವುದೇ ಮಾನವನ ಬದುಕಿನ ಹಿನ್ನೆಲೆಯಲ್ಲಿ. ಈ ಚಿತ್ರಕಲೆ ಅಥವಾ ಕಲೆ ಮಾನವನ ಬದುಕಿನ ವಿಕಾಸದ ಪ್ರಕ್ರಿಯೆಯಲ್ಲಿ ಬದಲಾವಣೆಯ ಸ್ವರೂಪವನ್ನು ಹೊಂದುತ್ತಾ ಬಂದಿದೆ. ಇದು ಚಿತ್ರಕಲೆಯಲ್ಲೇ ಹಲವು ಕವಲುಗಳಾಗಿ ಒಡೆದು ಹೆಮ್ಮರವಾಗಿ ಬೆಳೆದು ನಿಂತಿದೆ. ಈ ಕವಲಲ್ಲಿ ಭಾರತದ ಬುಡಕಟ್ಟು ಚಿತ್ರಕಲೆಗಳೂ ಸೇರಿವೆ. ಈ ವಿವಿಧ ಬುಡಕಟ್ಟುಗಳ ಚಿತ್ರಗಳು ವಿವಿಧ ರೀತಿಯ ವೈವಿಧ್ಯವನ್ನು ಹೊಂದಿರುತ್ತವೆ. ಅವುಗಳ ವಿನ್ಯಾಸ, ಶೈಲಿ, ರೀತಿ ಮುಂತಾವುಗಳ ವ್ಯತ್ಯಾಸ ಹೋಲಿಕೆಗಳಿಂದ ಕೂಡಿರುತ್ತವೆ. ಅವುಗಳನ್ನು ಮಹಾರಾಷ್ಟ್ರದ ವಾರ್ಲಿ, ಬಿಹಾರದ ಮಧುಬನಿ, ಬಿಹಾರದ ಸಾರೋಸ್, ಗುಜರಾತ್, ಹರಿಯಾಣ, ಹಿಮಾಚಲ ಪ್ರದೇಶ ಮುಂತಾದ ಬುಡಕಟ್ಟು ಸಮುದಾಯಗಳ ಚಿತ್ರಗಳಲ್ಲಿ ನೋಡಬಹುದಾಗಿದೆ.

ಹಾಗಾಗಿ ಈ ಅಧ್ಯಯನವು ಕರ್ನಾಟಕದ ಬುಡಕಟ್ಟು ಚಿತ್ರಕಲೆಯನ್ನು ಕುರಿತ ಅಧ್ಯಯನವಾಗಿದೆ. ಬುಡಕಟ್ಟಿನ ಚಿತ್ರಕಲೆಯನ್ನು ಅಧ್ಯಯನ ಮಾಡುವಾಗ ಅವರ ಸಂಪ್ರದಾಯ, ಆಚರಣೆಗಳನ್ನು ಬಿಟ್ಟು ಅಧ್ಯಯನ ಮಾಡಲು ಸಾಧ್ಯವಿಲ್ಲ. ಈ ಸಂಪ್ರದಾಯ ಆಚರಣೆಗಳ ಹಿನ್ನೆಲೆಯಲ್ಲಿ ಬುಡಕಟ್ಟುಗಳ ಚಿತ್ರಕಲೆಯನ್ನು ಅಧ್ಯಯನ ಮಾಡಬೇಕಾಗುತ್ತದೆ. ಹಾಗಾಗಿ ಇಲ್ಲಿಯ ಚಿತ್ರಗಳು ಸಂಪ್ರದಾಯ ಮತ್ತು ಆಚರಣಾ ಸಂಬಂಧಿ ಚಿತ್ರಗಳಾಗಿ ನಮಗೆ ಕಾಣಿಸುತ್ತವೆ. ಈ ಚಿತ್ರಗಳಲ್ಲಿ ಆಯಾ ಬುಡಕಟ್ಟಿನ ಸಂಪ್ರದಾಯ, ಆಚರಣೆ, ನಂಬಿಕೆ, ಜೀವನ ಪದ್ಧತಿ, ಆಚಾರ-ವಿಚಾರ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮುಂತಾದ ಸ್ಥಿತಿಗತಿಗಳು ಮುಖ್ಯವಾಗುತ್ತವೆ. ಇವೆಲ್ಲವುಗಳ ಹಿನ್ನೆಲೆಯನ್ನು ಈ ಬುಡಕಟ್ಟು ಚಿತ್ರಗಳು ಒಳಗೊಂಡಿರುತ್ತವೆ. ಇಂಥ ವಿಷಯಗಳನ್ನು ಇಲ್ಲಿ ಮುಖ್ಯವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಕರ್ನಾಟಕದಲ್ಲಿ ಬುಡಕಟ್ಟು ಸಮುದಾಯಗಳನ್ನು ಕುರಿತು ಅಧ್ಯಯನ ನಡೆದಿರುವುದು ಬಹಳ ಕಡಿಮೆ. ಕರ್ನಾಟಕದಲ್ಲಿ ಬುಡಕಟ್ಟುಗಳನ್ನು ಕುರಿತ ಗಂಭೀರ ಅಧ್ಯಯನ ತೀರಾ ಇತ್ತೀಚಿಗೆ ಆರಂಭವಾಯಿತಾದರೂ ಮಾಹಿತಿ ಸಂಗ್ರಹ ಕಾರ್ಯ ಬಹು ಹಿಂದೆಯೇ ನಡೆಯಿತು. ಬ್ರಿಟೀಷ್ ವಸಾಹತು ಕಾಲದಲ್ಲಿಯೇ ಬುಡಕಟ್ಟು ಮತ್ತು ಇತರೆ ಜನಜಾತಿಗಳನ್ನು ಕುರಿತ ಮಾಹಿತಿ ಸಂಗ್ರಹಣೆಯ ಕಾರ್ಯವನ್ನು ಎಡ್ಗರ್ ಥರ್‌ಸ್ಟನ್ ಮತ್ತು ಕೆ. ರಂಗಾಚಾರಿ ಅವರು "Castes and Tribes of Southern India" ಎಂಬ ಬೃಹತ್ ಸಂಪುಟಗಳ ಮೂಲಕ ಹೊರತಂದರು. ಏಳು ಸಂಪುಟಗಳಲ್ಲಿ ಬಂದ ಈ ಗ್ರಂಥಗಳು ೧೯೦೯ರಷ್ಟು ಹಿಂದೆಯೇ ಪ್ರಕಟವಾದವು. ಅಲ್ಲಿ ಅಧ್ಯಯನಕ್ಕಿಂತ ಹೆಚ್ಚಾಗಿ ಯಾವ ಯಾವ ಪ್ರಾಂತ್ಯದಲ್ಲಿ ಯಾವ ಯಾವ ಜನಜಾತಿಗಳಿವೆ, ಅವು ಯಾವ ಸ್ಥಾನದಲ್ಲಿವೆ, ಯಾವ ಸ್ಥಿತಿಯಲ್ಲಿವೆ, ಏನು ಮಾಡುತ್ತಿವೆ ಮತ್ತು ಅವರ ಸಾಂಸ್ಕೃತಿಕ ಬದುಕು ಎಂಥದ್ದು ಎಂಬುದನ್ನು ತಿಳಿಯುವ ಕುತೂಹಲ ಹೆಚ್ಚಾಗಿತ್ತು. ಈ ಕುತೂಹಲ ಕೇವಲ ಥರ್‌ಸ್ಟನ್ ಅವರದ್ದಲ್ಲ, ಆಗಿನ ಪ್ರಭುತ್ವದ್ದು. ಯಾಕೆಂದರೆ ಹೊರಗಿನಿಂದ ಬಂದು ಆಡಳಿತ ನಡೆಸುವವರಿಗೆ ದೇಶದ ನಾಡಿಯೂ ಗೊತ್ತಾಗಬೇಕು ತಾನೆ? ಅದು ಏನೇ ಇರಲಿ, ದೇಶೀ ಪ್ರಭುತ್ವಗಳು ಅದೆಷ್ಟೋ ಶತಮಾನಗಳಿಂದ ನಿರ್ಲಕ್ಷಿಸಿದ ಅನೇಕ ಸಮುದಾಯಗಳು ಥರ್‌ಸ್ಟನ್ ಅವರ ಈ ಕೆಲಸದಿಂದ ಬೆಳಕಿಗೆ ಬಂದವು ಎಂಬುದನ್ನ ನಾವು ಮರೆಯುವಂತಿಲ್ಲ.

೧೯೩೫ರಲ್ಲಿ ಎಲ್.ಕೆ. ಅನಂತಕೃಷ್ಣ ಅಯ್ಯರ್ ಅವರ The Mysore Tribes and Castes ಶೀರ್ಷಿಕೆಯ ನಾಲ್ಕು ಸಂಪುಟಗಳು ಕೂಡ ಐತಿಹಾಸಿಕ ಮಹತ್ವವುಳ್ಳವು ಎಂಬುದನ್ನು ಹೇಳಲೇಬೇಕು. ಯಾಕೆಂದರೆ ಈ ಸಂಪುಟಗಳಲ್ಲಿ ವಿವರವಾದ ಹಾಗೂ ಕ್ಷೇತ್ರಕಾರ್ಯಧಾರಿತ ಮಾಹಿತಿಗಳನ್ನು ವೈಜ್ಞಾನಿಕವಾಗಿ ಸಂಗ್ರಹಿಸುವ ಪ್ರಯತ್ನ ಮಾಡಲಾಗಿದೆ ಹಾಗೂ ಅವರ ಸಾಮಾಜಿಕ ಹಾಗೂ ಸಾಂಸ್ಕೃತಿಕ ಜೀವನವನ್ನು ಸವಿವರವಾಗಿ ದಾಖಲಿಸುವ ಪ್ರಯತ್ನವನ್ನು ಅಲ್ಲಿ ಮಾಡಲಾಗಿದೆ.

ಆನಂತರದಲ್ಲಿ ಹಲವಾರು ವರ್ಷಗಳ ಕಾಲ ಕರ್ನಾಟಕದ ಬುಡಕಟ್ಟುಗಳನ್ನು ಕುರಿತಾದ ಮಾಹಿತಿ ಸಂಗ್ರಹವಾಗಲೀ, ಅಧ್ಯಯನವಾಗಲೀ ಎಲ್ಲಿಯೂ ನಡೆದಂತೆ ಕಾಣುವುದಿಲ್ಲ. ೧೯೬೧ರಲ್ಲಿ ಮೈಸೂರು

ರಾಜ್ಯದ ವಾರ್ತಾ ಇಲಾಖೆ ಪ್ರಕಟಿಸಿದ ಸಂಪುಟದಲ್ಲಿ ಡಿ. ಕೃಷ್ಣ ಅಯ್ಯರ್ ಅವರು **ಕನ್ನಡ ನಾಡಿನ ಆದಿವಾಸಿಗಳು** ಎಂಬ ಸಂಕ್ಷಿಪ್ತ ಲೇಖನವೊಂದನ್ನು ಬರೆದಿದ್ದಾರೆ. ಬಹುಶಃ ಬುಡಕಟ್ಟುಗಳನ್ನು ಕುರಿತಾದ ಪ್ರಥಮ ಕನ್ನಡ ಲೇಖನ ಇದು. ನಂತರ ೧೯೭೬ರಲ್ಲಿ ಕರ್ನಾಟಕದ ಸಿದ್ಧಿಯರನ್ನು ಕುರಿತು ಬಿ.ಸಿ. ಫಾಲಾಕ್ಷಪ್ಪ ಅವರು ಇಂಗ್ಲೀಷ್‌ನಲ್ಲಿ ಒಂದು ಪುಸ್ತಕವನ್ನು ಪ್ರಕಟಿಸಿದರು. ೭೦ ಮತ್ತು ೮೦ರ ದಶಕದಲ್ಲಿ ಭಾರತೀಯ ಮಾನವಶಾಸ್ತ್ರ ಸರ್ವೇಕ್ಷಣಾ ಇಲಾಖೆಯ ವತಿಯಿಂದ ಕೆಲವು ಬುಡಕಟ್ಟುಗಳನ್ನು ಕುರಿತಾದ ಪರಿಚಯಾತ್ಮಕ ಪುಸ್ತಕಗಳು ಪ್ರಕಟವಾದವು. ನನಗೆ ಗೊತ್ತಿರುವಂತೆ ಕನ್ನಡದಲ್ಲಿ ಬುಡಕಟ್ಟು ಸಂಸ್ಕೃತಿಯೊಂದನ್ನು ಕುರಿತಾದ ಮೊದಲ ಪಿಎಚ್.ಡಿ ಪ್ರಬಂಧ ಡಾ. ತೀ.ನಂ. ಶಂಕರನಾರಾಯಣ ಅವರ **ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು** ಈ ಪುಸ್ತಕ ೧೯೮೨ರಲ್ಲಿ ಪ್ರಕಟವಾಯಿತು. ಆನಂತರದಲ್ಲಿ ಒಂದೊಂದೇ ಬುಡಕಟ್ಟುಗಳನ್ನು ಕುರಿತು ಪ್ರತ್ಯೇಕವಾಗಿ ಅಧ್ಯಯನ ಮಾಡಿದ ಕೆಲವಾರು ಗ್ರಂಥಗಳು ಪ್ರಕಟವಾಗಿವೆ. ಇವೆಲ್ಲ ಬಹುಶಃ ಪಿಎಚ್.ಡಿ ಪದವಿಯನ್ನು ಉದ್ದೇಶವಾಗಿಟ್ಟುಕೊಂಡು ರಚಿತವಾದವುಗಳು. ಇವುಗಳಿಗೆ ಹೊರತಾಗಿ ೧೯೯೨ರಲ್ಲಿ ಪ್ರಕಟವಾದ ಹಿ.ಚಿ. ಬೋರಲಿಂಗಯ್ಯನವರ **ಗಿರಿಜನ ನಾಡಿಗೆ ಪಯಣ** ಎಂಬ ಗ್ರಂಥ ಸಹ್ಯಾದ್ರಿ ಮತ್ತು ಕರಾವಳಿ ಪ್ರದೇಶಗಳ ದಟ್ಟ ಅರಣ್ಯಗಳಲ್ಲಿ ವಾಸಿಸುವ ಹಲವಾರು ಜನಾಂಗಗಳನ್ನು ಪ್ರವಾಸ ಕಥನದ ರೂಪದಲ್ಲಿ ಪರಿಚಯಿಸಿಕೊಡುತ್ತದೆ.

ಇಷ್ಟು ಪ್ರಯತ್ನಗಳನ್ನು ಬಿಟ್ಟರೆ ವಿವಿಧ ಜನವರ್ಗಗಳನ್ನು ಕುರಿತು ಬೃಹತ್ ಪ್ರಮಾಣದಲ್ಲಿ ಪ್ರಕಟಣೆ ಆದದ್ದು ೧೯೯೩ರಲ್ಲಿ. ಕರ್ನಾಟಕ ಸಾಹಿತ್ಯ ಅಕಾಡೆಮಿಯ **ಉಪಸಂಸ್ಕೃತಿ ಮಾಲೆ** ಅಡಿಯಲ್ಲಿ ವಿವಿಧ ಲೇಖಕರ ಸುಮಾರು ೩೫ ಗ್ರಂಥಗಳನ್ನು ಪ್ರೊ. ಬರಗೂರು ರಾಮಚಂದ್ರಪ್ಪ ಅವರ ನೇತೃತ್ವದಲ್ಲಿ ಪ್ರಕಟಿಸುವ ಮೂಲಕ ಬುಡಕಟ್ಟುಗಳನ್ನು ಕುರಿತಾದ ವಿಸ್ತೃತ ಅಧ್ಯಯನಕ್ಕೆ ವಿಫುಲ ಮಾಹಿತಿಗಳನ್ನು ಒದಗಿಸಲಾಯಿತು. ನಂತರ ೧೯೯೨ರಿಂದ ಇಲ್ಲಿಯವರೆಗೆ ಕನ್ನಡ ವಿಶ್ವವಿದ್ಯಾಯವು ತನ್ನ **ಬುಡಕಟ್ಟು ಮಹಾಕಾವ್ಯ ಮಾಲೆ**ಯ ಅಡಿಯಲ್ಲಿ ಸುಮಾರು ೧೦ ಅಪರೂಪದ ಬೃಹತ್ ಬುಡಕಟ್ಟು ಕಾವ್ಯಗಳನ್ನು ಪ್ರೊ. ಹಿ.ಚಿ. ಬೋರಲಿಂಗಯ್ಯ ಅವರ ನೇತೃತ್ವದಲ್ಲಿ ಪ್ರಕಟಿಸಿ ವಿದ್ವತ್ ಲೋಕವು ಬೆರಗುಣ್ಣೆನಿಂದ ನೋಡುವಂತೆ ಮಾಡಿತು. ತದನಂತರ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಡಾ. ಎಚ್.ಜೆ. ಲಕ್ಕಪ್ಪಗೌಡರ ನೇತೃತ್ವದಲ್ಲಿ **ಕರ್ನಾಟಕ ಬುಡಕಟ್ಟುಗಳು** ಎಂಬ ಶೀರ್ಷಿಕೆಯಲ್ಲಿ ಎರಡು ಸಂಪುಟಗಳನ್ನು ಹೊರತಂದಿದ್ದು ಅವು ಅಧ್ಯಯನಸಕ್ತರಿಗೆ ಅನುಕೂಲ ಕಲ್ಪಿಸಿವೆ.

ಕಲೆ ಇಂದು ಪ್ರತಿಯೊಬ್ಬ ಮನುಷ್ಯನ ಬದುಕಿನಲ್ಲಿ ಹಾಸು ಹೊಕ್ಕಾಗಿದೆ. ಹಾಗೆಂದಾಕ್ಷಣ ಇದು ಏಕಸ್ವರೂಪದಲ್ಲಿ ಇದೆ ಎಂದು ಭಾವಿಸುವಂತಿಲ್ಲ. ಬಹುಶಃ ಪ್ರಪಂಚದಲ್ಲಿ ಎಷ್ಟು ಮನುಷ್ಯರು ಇರಬಹುದೊ ಅಷ್ಟೇ ಸಂಖ್ಯೆಯ ಅಭಿವ್ಯಕ್ತಿ ಸ್ವರೂಪಗಳು ನಮಗೆ ಸಿಗಬಹುದು. ಆದರೆ ಇಂದು ನಾವು ಆ ಎಲ್ಲಾ ಅಭಿವ್ಯಕ್ತಿ ಸ್ವರೂಪಗಳನ್ನು ಕಲೆಯೆಂದು ಕರೆಯುವುದಿಲ್ಲ. ಕಲೆಗೆ ಒಂದು ರೂಪವಿರುತ್ತದೆ, ಒಂದು ಚೌಕಟ್ಟು ಇರುತ್ತದೆ, ಉದ್ದೇಶವಿರುತ್ತದೆ. ಅಲ್ಲದೆ ಮನುಷ್ಯನ ಬದುಕಿನ ಪರಂಪರಾಗತ

ಆಶಯಗಳನ್ನು ವ್ಯಕ್ತಪಡಿಸುವ ಹಂಬಲವಿರುತ್ತದೆ. ಹಾಗೆಯೇ ಒಂದು ಸ್ವರೂಪದಲ್ಲಿ ಕಾಣಿಸಿಕೊಳ್ಳುವ ಕಲಾತ್ಮಕ ಸಂಗತಿಗಳನ್ನು ನಾವು ಕಲೆಯೆಂದು ಕರೆಯುತ್ತೇವೆ. ಕಲೆಗೆ ನಾನಾ ಮುಖಗಳಿವೆ. ಬಹುಶಃ ಮನುಷ್ಯನ ಮನಸ್ಸು ಎಷ್ಟೆಲ್ಲಾ ರೀತಿಯಲ್ಲಿ ಆಲೋಚಿಸಬಹುದೋ ಅಷ್ಟೆಲ್ಲಾ ರೀತಿಯ ಕಲಾ ಸ್ವರೂಪಗಳು ಇರಲು ಸಾಧ್ಯ. ಸಹಸ್ರಾರು ವರ್ಷಗಳ ಜೀವನಾನುಭವದ ತಾಲೀಮಿನಲ್ಲಿ ಪಕ್ವಗೊಂಡ ಸೃಜನಾತ್ಮಕ ಸ್ವರೂಪಗಳನ್ನು ಕಲೆಯೆಂದು ಕರೆಯಲು ಆರಂಭಿಸಿದ್ದೇವೆ. ಹೀಗೆ ಯಾವುದೇ ಕಲೆಯೆಂಬದು ಅದು ಆಧುನಿಕ ಕಲೆಯಾಗಿರಲಿ ಅಥವಾ ಸಾಂಪ್ರದಾಯಿಕ ಕಲೆಯಾಗಿರಲಿ ಅದು ದಿಢೀರನೇ ಹುಟ್ಟಿಕೊಂಡಿದ್ದಲ್ಲ. ಅದಕ್ಕೆ ಸಹಸ್ರಾರು ವರ್ಷಗಳ ಇತಿಹಾಸವಿದೆ, ಮತ್ತು ಪರಂಪರೆಯ ಆಸರೆ ಇದೆ. ಬಹುಶಃ ಇಂದು ಇವುಗಳ ಬಗ್ಗೆ ಸ್ಪಷ್ಟವಾದ ಸಮುಗ್ರವಾದ ಅಧ್ಯಯನಗಳ ಕೃತಿಗಳು ಕಡಿಮೆ ಸಂಖ್ಯೆಯಲ್ಲಿವೆ. ಕರ್ನಾಟಕ ಬುಡಕಟ್ಟುಗಳಿಗೆ ಸಂಬಂಧಿಸಿದಂತೆ ಉಪಸಂಸ್ಕೃತಿ ಮಾಲೆಯ ಕೆಲವು ಕೃತಿಗಳು **ಕರ್ನಾಟಕ ಬುಡಕಟ್ಟುಗಳು** ಸಂಪುಟ ೧, ಸಂಪುಟ ೨ ಮತ್ತೆ ಕೆಲವು ಸಣ್ಣಪುಟ್ಟ ಪರಿಚಯಾತ್ಮಕ ಪುಸ್ತಕಗಳು ಇವು ಬುಡಕಟ್ಟು ಸಮುದಾಯಗಳ ಕೆಲವು ವಿವರಗಳನ್ನು ನೀಡುತ್ತದೆ. ಇಲ್ಲಿಯವರೆಗೆ ಪ್ರಕಟವಾಗಿರುವ ಬುಡಕಟ್ಟುಗಳಿಗೆ ಸಂಬಂಧಿಸಿದ ಕೃತಿಗಳನ್ನು ಆಧಾರವಾಗಿಟ್ಟುಕೊಂಡು ಹಲವು ನೆಲೆಗಳಲ್ಲಿ ಸಂಶೋಧನೆಗಳು ನಡೆಯಬೇಕಿದೆ. ಒಂದೊಂದು ಬುಡಕಟ್ಟು ಸಮುದಾಯವನ್ನು ತೆಗೆದುಕೊಂಡು ಹಲವು ನೆಲೆಗಳಲ್ಲಿ ವಿಭಿನ್ನ ದೃಷ್ಟಿಕೋನಗಳನ್ನು ಒಳಗೊಂಡು ಅಧ್ಯಯನ ನಡೆಯಬೇಕಿದೆ. ಕರ್ನಾಟಕ ಬುಡಕಟ್ಟು ಅಧ್ಯಯನಕ್ಕೆ ಸ್ಪಷ್ಟವಾದ ಚಾಲನೆ ಸಿಕ್ಕಿದ್ದೇ ಕನ್ನಡ ವಿಶ್ವವಿದ್ಯಾಲಯ ಹಂಪಿಯ ಬುಡಕಟ್ಟು ಅಧ್ಯಯನ ವಿಭಾಗ ಪ್ರಾರಂಭವಾದ ನಂತರ ಎಂಬುದು ನನ್ನ ಭಾವನೆ. ಈ ವಿಭಾಗವು ಬುಡಕಟ್ಟು ಸಮುದಾಯಗಳನ್ನು, ಅವುಗಳ ಸಂಸ್ಕೃತಿಯನ್ನು, ಸಾಹಿತ್ಯವನ್ನು, ಕಲೆಯನ್ನು ಸಂಶೋಧನೆ ಮಾಡುವ ಕಾರ್ಯ ಆರಂಭಿಸಿದೆ. ನನಗೆ ಈ ವಿಭಾಗದ ಮೂಲಕವೇ ಕರ್ನಾಟಕ ಬುಡಕಟ್ಟು ಚಿತ್ರಕಲೆ ಎಂಬ ಶೀರ್ಷಿಕೆಯಲ್ಲಿ ಸಂಶೋಧನೆ ನಡೆಸಲು ಅವಕಾಶ ಸಿಕ್ಕಿದೆ. ಬುಡಕಟ್ಟು ಸಮುದಾಯದ ಒಡಲಲ್ಲಿ ಹುಟ್ಟಿ ಬೆಳೆದು ವಿಕಾಸಗೊಂಡು ಬದಲಾಗುತ್ತಿರುವ, ನಾಶ ಹೊಂದುತ್ತಿರುವ, ಆಧುನಿಕತೆಯ ಪ್ರಭಾವ ಬೀರುತ್ತಿರುವ ಸಂದರ್ಭದಲ್ಲಿ ಕರ್ನಾಟಕ ಬುಡಕಟ್ಟುಗಳ ಸ್ಥಿತಿಗತಿ, ಬದುಕು ಒಂದು ಕ್ರಮದಲ್ಲಿ ಇಲ್ಲ. ಇದು ಇಂದು ಚಿತ್ರಕಲೆಯ ಮೇಲೂ ಹಲವು ರೀತಿಯ ಪರಿಣಾಮವನ್ನು ಬೀರುತ್ತಲಿದೆ. ಬುಡಕಟ್ಟುಗಳ ಮೇಲೂ ಹಲವು ರೀತಿಯ ಪರಿಣಾಮವನ್ನು ಬೀರುತ್ತಲಿದೆ. ಬುಡಕಟ್ಟು ಬದುಕಲ್ಲಿ ರೂಪಗೊಂಡ ಇವರ ಕಲೆಗಳ ಬಗ್ಗೆ ಸಂಶೋಧನೆ ನಡೆಯುವುದು ಅಗತ್ಯವಾಗಿದೆ. ನನ್ನ ಅಧ್ಯಯನದ ಮುಖ್ಯ ಉದ್ದೇಶವೂ ಇದೇ ಆಗಿದೆ.

ನನ್ನ ಈ ಅಧ್ಯಯಯನಕ್ಕೆ ೧೨ ಬುಡಕಟ್ಟು ಸಮುದಾಯಗಳನ್ನು ಆಯ್ದುಕೊಳ್ಳಲಾಗಿದೆ. ಇವು ಕಾಡಿನ ಸಂಬಂಧವನ್ನು ಇಟ್ಟುಕೊಂಡು ಬದುಕನ್ನು ನಡೆಸುತ್ತಿವೆ. ಅಂದರೆ ಇವರೆಲ್ಲ ಮಲೆನಾಡಿನಲ್ಲಿ ವಾಸಿಸುತ್ತಿದ್ದಾರೆ. ಇವರಲ್ಲಿ ಗ್ರಾಮ, ನಗರಗಳನ್ನು ಕಾಣದೆ ತಮ್ಮದೇ ಆದ ಲೋಕದಲ್ಲಿ ಬದುಕನ್ನು ನಡೆಸುತ್ತಿರುವ ಸಮುದಾಯಗಳೂ ಇವೆ. ಸಾಮಾಜಿಕ ಸೌಲಭ್ಯಗಳು ಇವರಿಗೆ ಸಿಕ್ಕೇ ಇಲ್ಲ. ಕಾಡಿನಲ್ಲಿ

ಹೇಗೋ ಹಾಗೆ ಬದುಕನ್ನು ನಡೆಸುತ್ತಾ, ಯಜಮಾನಿಕೆಯ ಕರಿನೆರಳಲ್ಲಿ ದುಡಿದು ಜೀವನವನ್ನು ಸಾಗಿಸುತ್ತಾ ಬದುಕುತ್ತಿದ್ದಾರೆ. ಇಂದು ನಗರಗಳಿಗೆ ಸಿಕ್ಕ ಸೌಲಭ್ಯಗಳು ಗ್ರಾಮಗಳಿಗೆ ಸಿಗುತ್ತಿಲ್ಲ. ಗ್ರಾಮಗಳಿಗೆ ಸಿಗುತ್ತಿರುವ ಸೌಲಭ್ಯಗಳು ಕಾಡಿನಲ್ಲಿ ವಾಸಿಸುತ್ತಿರುವ ಬುಡಕಟ್ಟು ಸಮುದಾಯಗಳಿಗೆ ಸಿಗುತ್ತಿಲ್ಲ. ಆಧುನಿಕತೆಯ ಪ್ರವೇಶ ಮೂರನೆಯ ಜಗತ್ತಿನ ರಾಷ್ಟ್ರಗಳಿಗೆ ತಲುಪಿ, ಹಲವು ಅವಕಾಶಗಳನ್ನು ಕಲ್ಪಿಸುತ್ತಿದೆ. ಈ ಸಮಯದಲ್ಲಿ ಬುಡಕಟ್ಟು ಸಮುದಾಯಗಳು ಹಲವು ರೀತಿಯ ಬದಲಾವಣೆಯ ಒಳಗಾಗುತ್ತಿವೆ. "ಯಾವುದೇ ಸಮುದಾಯ ತನ್ನ ಸಂಸ್ಕೃತಿಯ ಕೋಶದ ಒಳಗೆ ಕಾಲದ ಅನಿವಾರ್ಯತೆಯ ಫಲವಾಗಿ ಏರ್ಪಡುವ ಉಬ್ಬರ ಇಳಿತಗಳನ್ನು ಸಾವಧಾನವಾಗಿ ಗಮನಿಸುತ್ತಲೇ ಇರುತ್ತದೆ. ಬದಲಾಗುವ ಕಾಲದ ಲಯಕ್ಕೆ ಹೊಂದಿಕೊಳ್ಳುವ ಪ್ರಯತ್ನವನ್ನು ಯಾವತ್ತೂ ಜೀವಂತವಾಗಿಟ್ಟುಕೊಂಡಿರುತ್ತದೆ."[೩] ಬದಲಾವಣೆ ಎಂದ ಮಾತ್ರಕ್ಕೆ ಸಂಪೂರ್ಣವಾಗಿ ಸಮುದಾಯಗಳ ಸಂಸ್ಕೃತಿಯನ್ನು, ಅದರ ಜಟಿಲ ಜೀವಕೋಶಗಳನ್ನು ಸುಟ್ಟು ಹೊಸದೊಂದು ಜೀವನಕ್ಕೆ ಕಾಲಿಡುವುದು ಎಂದು ಅಲ್ಲ. ಇದು ತನ್ನ ಬದಲಾವಣೆಯ ಸಂಗತಿಗಳನ್ನು ತನ್ನ ಬದುಕು ಅಂತರಂಗದಲ್ಲಿ ಸ್ವೀಕಾರ ಮಾಡಿಕೊಂಡು ಜೀವನ ನಡೆಸುತ್ತದೆ. ಈ ಬದಲಾವಣೆಯ ಪ್ರಕ್ರಿಯೆಗಳು ಹಳೆಯ ಜೀವನ ಮೌಲ್ಯಗಳೊಂದಿಗೆ ಬೆರತು ಅದರೊಂದಿಗೆ ಒಂದಾಗಿ ವಾತಾವರಣವನ್ನು ತನ್ನದಾಗಿಸಿಕೊಳ್ಳುತ್ತದೆ.

ಈ ಸಂದರ್ಭದಲ್ಲಿ ಕರ್ನಾಟಕ ಬುಡಕಟ್ಟು ಸಮುದಾಯಗಳಿಗೆ ವಂಶಪಾರಂಪರ್ಯವಾಗಿ ದಕ್ಕಿರುವ ಕಾಡೇ ಕೆಲವು ಅವಕಾಶಗಳನ್ನು ತಪ್ಪಿಸುತ್ತಿದೆ. ಇದಕ್ಕೆ ಹಲವು ಕಾರಣಗಳೂ ಇವೆ. ಶತಶತಮಾನಗಳಿಂದ ಇವರು ಕಾಡಿನಲ್ಲಿ ಬದುಕುತ್ತಾ, ಕಾಡಿಗೆ ಯಾವುದೇ ರೀತಿಯ ಕೆಡುಕಾಗದೆ ಕಾಡಿನ ಸಂಪನ್ಮೂಲಗಳನ್ನು ಉಪಯೋಗಿಸಿಕೊಳ್ಳುತ್ತಿದ್ದರು. ಅಲ್ಲಿಯೇ ತಮಗೆ ಬೇಕಾದ ಅಗತ್ಯ ಆಹಾರಗಳನ್ನ ಉತ್ಪಾದನೆ ಮಾಡಿಕೊಳ್ಳುತ್ತಿದ್ದರು. ಇಂದು ಈ ಬುಡಕಟ್ಟು ಸಮುದಾಯಗಳು ಕಾಡಿನಲ್ಲಿ ಅಷ್ಟೊಂದು ಸ್ವತಂತ್ರವಾಗಿ ಬದುಕುತ್ತಿಲ್ಲ. ಭೂಮಾಲಿಕರ ಹಾವಳಿ, ಅರಣ್ಯ ಇಲಾಖೆಗಳ ಪೂರ್ವಗ್ರಹ ಪೀಡಿತ ನೋಟ ಮತ್ತು ನಿಯಮಾವಳಿಗಳು ಇವರ ಬದುಕನ್ನು ತಲ್ಲಣಗೊಳಿಸಿವೆ. ಇತ್ತ, ಅರಣ್ಯದ ಒಳಗೆ ಬದುಕುವ ಅವಕಾಶಗಳು ಕಡಿಮೆಗೊಂಡು, ಅರಣ್ಯದ ಹೊರಗೆ ಬದುಕಲು ಆಗದೆ ಅತಂತ್ರ ಸ್ಥಿತಿಯಲ್ಲಿ ಬದುಕು ನಡೆಸುತ್ತಿದ್ದಾರೆ. ಅರಣ್ಯದಲ್ಲಿ ವಾಸಿಸುತ್ತಿರುವ ಬುಡಕಟ್ಟು ಸಮುದಾಯಗಳಿಗೆ ಇನ್ನೂ ಪ್ರಾಥಮಿಕ ಸವಲತ್ತುಗಳು ಹಕ್ಕಿಲ್ಲ, ಇತ್ತ ಆಧುನಿಕ ಆಕರ್ಷಣೆಗಳನ್ನು ಪೂರೈಸಿಕೊಳ್ಳಲಾರದೆ ತಮ್ಮ ಪ್ರಾದೇಶಿಕ ಹಿನ್ನೆಲೆಯಲ್ಲಿ ಸುಖವಾಗಿ ಬದುಕು ನಡೆಸಲಾರದೆ ಅತಂತ್ರ ಸ್ಥಿತಿಯನ್ನು ತಲುಪಿವೆ.

ಈ ದ್ವಂದ್ವ ಪರಿಸ್ಥಿತಿಗೆ ಇವರ ಇಂದಿನ ಬದುಕು ಕಾರಣವಾಗಿದೆ. ಆಳುವ ವ್ಯವಸ್ಥೆ ಒಂದು ಕಡೆ ಪ್ರಭುತ್ವವನ್ನು ಹೇರಿದರೆ, ಮತ್ತೊಂದು ಕಡೆ ಆಧುನಿಕ ಸೌಲಭ್ಯಗಳು ಕಂಡು, ಕಾಣದಂತೆ, ಎಟುಕದಂತೆ ದೂರದಲ್ಲಿವೆ. ಹಾಗೆಯೇ ಇನ್ನೊಂದು ಕಡೆ ಸಾಮಾಜಿಕ ಸೌಲಭ್ಯಗಳು ಆಳುವ ಶಕ್ತಿ

ರಾಜಕಾರಣದಿಂದ ಸಮಗ್ರವಾಗಿ ಸಿಗುತ್ತಿಲ್ಲ. ಇದು ಇವರ ಜೀವನ ವಿಧಾನದ ಮೇಲೆ ಸಾಕಷ್ಟು ಪರಿಣಾಮವನ್ನು ಬೀರುತ್ತಿದೆ. ಜೊತೆಗೆ ಇಂದಿನ ಜಾಗತೀಕರಣದ ಪ್ರಭಾವದಿಂದ ಬುಡಕಟ್ಟು ಸಮುದಾಯಗಳ ಕುಲ ಕುಸುಬಿನ ಮೇಲೆ ಸಾಕಷ್ಟು ಏಟು ಬೀಳುತ್ತಲಿದೆ. ಬಿದಿರು, ಚಿತ್ರಗಳಿಂದ ತಯಾರಿಸಿದ ಬುಟ್ಟಿ, ಮಂಕರಿ, ಚಾಪೆ, ವಿವಿಧ ವಿನ್ಯಾಸಗಳ ಕರಕುಶಲ ವಸ್ತುಗಳಿಗೆ ಆಧುನಿಕರಣದ ಮಾರುಕಟ್ಟೆಯಲ್ಲಿ ಬೆಲೆ ಸಿಗುತ್ತಿಲ್ಲ. ಹಾಗಾಗಿ ಇವರ ಕರಕುಶಲ ಕಲೆಯ ಬೇಡಿಕೆ ಸಾಮಾನ್ಯವಾಗಿ ಕಡಿಮೆಯಾಗುತ್ತಾ ಬರುತ್ತಿದೆ. ಬದುಕಿನ ಅನಿವಾರ್ಯತೆಗಾಗಿ ಹಲವು ಕೆಲಸಕಾರ್ಯಗಳನ್ನು ಹಿಡಿಯಬೇಕಾಗಿದೆ. ಬದುಕಿನ ಅನಿವಾರ್ಯತೆಗಾಗಿ ಹಲವು ಕೆಲಸಕಾರ್ಯಗಳನ್ನು ಹಿಡಿಯಬೇಕಾಗಿದೆ. ಇದ್ದ ಜೀವನವ್ಯವಸ್ಥೆಗೆ ಸರಿಯಾದ ಅವಕಾಶಗಳು ಸಿಗದೆ ಇವರು ಶ್ರಮದಾಯಕ ಜೀವನವನ್ನು ಸಾಗಿಸುತ್ತಿದ್ದಾರೆ.

ಕರ್ನಾಟಕ ಚಿತ್ರಕಲೆಗೆ ಸಂಬಂಧಿಸಿದಂತೆ ಈಗಾಗಲೇ ಕೆಲವು ಅಧ್ಯಯನಗಳು ನಡೆದಿವೆ. ಕೆಲವು ಕೃತಿಗಳು ಲೇಖನಗಳು ಬಂದಿವೆ. ಆದರೆ ಕರ್ನಾಟಕ ಬುಡಕಟ್ಟು ಚಿತ್ರಕಲೆಗೆ ಸಂಬಂಧಿಸಿದಂತೆ ಅಧ್ಯಯನ ನಡೆದಿಲ್ಲ. ಬಿಡಿ ಲೇಖನಗಳೂ ಬಂದಿಲ್ಲ. ಆಧುನಿಕ ಚಿತ್ರಕಲೆ, ಜನಪದ ಚಿತ್ರಕಲೆ, ಶಿಷ್ಟಪದ ಚಿತ್ರಕಲೆ, ಆದಿಮ ಚಿತ್ರಕಲೆಗಳಂತೆ ಬುಡಕಟ್ಟು ಚಿತ್ರಕಲೆಯು ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿದೆ. ಇವರ ಮನೆಯ ಗೋಡೆಗಳ ಮೇಲೆ ಹಾಕುವ ಗೀರುಗಳಾಗಿರಬಹುದು. ಗೋಡೆಗಳ ಮೇಲೆ ಹಾಕಿರುವ ಬಣ್ಣಗಳ ಕಲ್ಪನೆಯಾಗಿರಬಹುದು. ಸೇಡಿ ಚಿತ್ತಾರ, ಅಲಿ ಚಿತ್ತಾರ, ಬಿತ್ತಿ ಚಿತ್ತಾರ, ಹಬ್ಬ ಹುಣ್ಣಿಮೆ, ಸಂಪ್ರದಾಯ ಮುಂತಾದ 'ಸಂದರ್ಭಗಳಲ್ಲಿ ಬರೆಯುವ ಚಿತ್ತಾರಗಳು ಆಗಿರಬಹುದು. ಇವು ತಮ್ಮದೇ ಆದ ವೈಶಿಷ್ಟ್ಯತೆಯನ್ನು ಹೊಂದಿವೆ. ಆಯಾ ಸಮುದಾಯದ ಒಪ್ಪಂದದ ಬದುಕಲ್ಲಿ ಮೈದಾಳಿದ ವಿಭಿನ್ನ ಅಭಿವ್ಯಕ್ತಿಗಳೇ ಆಗಿದೆ. ಅಲ್ಲದೆ ಇವರು ಪ್ರಾಕೃತಿಕವಾಗಿ ಸಿಗುವ ನೈಸರ್ಗಿಕ ಸಂಪನ್ಮೂಲಗಳನ್ನೇ ಬಣ್ಣವನ್ನಾಗಿ ತಯಾರುಮಾಡಿಕೊಳ್ಳುತ್ತಾರೆ. ಬಣ್ಣಗಳ ಕಲ್ಪನೆಯಲ್ಲಿ ಅದನ್ನು ಬಳಸುವ ವಿಧಾನದಲ್ಲಿ ತಮ್ಮದೇ ಆದಂತ ಕಲ್ಪನೆಯನ್ನು ಹೊಂದಿದ್ದಾರೆ. ಅದಕ್ಕೆ ಹಲವಾರು ಪ್ರಾದೇಶಿಕ ಕಾರಣಗಳು ಇವೆ.

ಇವರ ಚಿತ್ತಾರಗಳಲ್ಲಿ ಸಾಂಪ್ರದಾಯಿಕ, ಆಚರಣಾತ್ಮಕ ಚಿತ್ತಾರಗಳು ವಿಶೇಷವಾಗಿ ಕಂಡುಬರುತ್ತವೆ. ಈ ಎರಡು ರೀತಿಯ ಚಿತ್ತಾರಗಳು ಸಂದರ್ಭಕ್ಕೆ ತಕ್ಕಂತೆ ವಿಶೇಷತೆಯನ್ನು, ವಿಭಿನ್ನತೆಯನ್ನು ಹೊಂದಿರುತ್ತವೆ. ಇವರು ಬರೆಯುವ ಚಿತ್ರಗಳು ಸಾಮಾನ್ಯವಾಗಿ ಕಂಡರೂ ಅದು ವಿಶೇಷತೆಯನ್ನು ಹೇಳುತ್ತದೆ. ಇವುಗಳನ್ನು ಸಂಗ್ರಹಿಸಿ, ವ್ಯಾಖ್ಯಾನಿಸಿ, ವಿಶ್ಲೇಷಿಸಿ, ವಿವರಣೆ ನೀಡುವುದು ಈ ಅಧ್ಯಯನದ ಉದ್ದೇಶವಾಗಿದೆ. ಜೊತೆಗೆ ಆಧುನಿಕತೆಯ ಸೊಂಕು ತಗುಲಿರುವ ಬುಡಕಟ್ಟುಗಳಲ್ಲಿ ಚಿತ್ರಕಲೆ ಮಾಯವಾಗುತ್ತಾ ಬರುತ್ತಿದೆ. ಹಾಗಾಗಿ ಈ ಬುಡಕಟ್ಟು ಸಮುದಾಯಗಳಲ್ಲಿ ಇರುವ ಹಲವು ಬಗೆಯ ಚಿತ್ರಗಳನ್ನು ಇಲ್ಲಿ ಅಧ್ಯಯನದ ಚೌಕಟ್ಟಿಗೆ ತರುವ ಮೂಲಕ ಅವುಗಳ ಅಗತ್ಯ ಮತ್ತು ಮಹತ್ವ ತಿಳಿಸಿಕೊಡುವುದು. ಈ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ.

[illegible]

ಅಧ್ಯಯನದ ವ್ಯಾಪ್ತಿ

ಚಿತ್ರಕಲೆಯನ್ನು ಕುರಿತ ಅಧ್ಯಯನಗಳು ಸಮುದಾಯ ಕೇಂದ್ರಿತವಾಗಿರುತ್ತವೆ. ಪ್ರತಿ ಸಮುದಾಯವೂ ಕೂಡ ತನ್ನದೇ ಆದಂತ ಸಂಸ್ಕೃತಿಯನ್ನು ಗರ್ಭೀಕರಿಸಿಕೊಂಡಿರುತ್ತದೆ. ಈ ಸಂಸ್ಕೃತಿಯ ಭಾಗವಾಗಿ ಕಲೆ, ಚಿತ್ರಕಲೆಗಳು ಕಂಡುಬರುತ್ತವೆ. ಅದರಲ್ಲೂ ಬುಡಕಟ್ಟುಗಳಲ್ಲಿ 'ಕಲೆ', ಚಿತ್ರಕಲೆಗಳು ಸಂಪ್ರದಾಯ ಮತ್ತು ಆಚರಣೆಗಳೊಂದಿಗೆ ಮಿಳಿತಗೊಂಡಿರುವುದನ್ನು ನಾವು ನೋಡುತ್ತೇವೆ.

ಯಾವುದೇ ಅಧ್ಯಯನವು ತನ್ನದೇ ಆದಂತ ಅಧ್ಯಯನ ವ್ಯಾಪ್ತಿಯನ್ನು ಹೊಂದಿರುತ್ತದೆ. ಅಧ್ಯಯನಕ್ಕೆ ಅಧ್ಯಯನದ ಚೌಕಟ್ಟು ಮುಖ್ಯವಾಗುತ್ತದೆ. ಅಂತೆಯೇ **ಕರ್ನಾಟಕ ಬುಡಕಟ್ಟು ಚಿತ್ರಕಲೆಯನ್ನು** ಕುರಿತ ನನ್ನ ಅಧ್ಯಯನಕ್ಕೆ ನಿಶ್ಚಿತ ಚೌಕಟ್ಟನ್ನು ಹಾಕಿಕೊಳ್ಳಲಾಗಿದೆ. ಇಂದಿನ ಚಿತ್ರಕಲೆ ಹಲವು ರೀತಿಯ ಅಧ್ಯಯನ ಶಿಸ್ತಿಗೆ ಒಳಪಟ್ಟಿರುವುದನ್ನು ನಾವು ನೋಡುತ್ತೇವೆ. ಅವುಗಳ ಅರ್ಥೈಸುವಿಕೆ ವಿಮರ್ಶೆ, ವಿಭಿನ್ನ ರೀತಿಯ ಅರ್ಥವನ್ನು ಕೊಡುತ್ತವೆ. ಯಾವುದೇ ಚಿತ್ರಲೆಯನ್ನು ನೋಡುವಾಗ ಅದು ತನ್ನದೇ ಆದಂಥ ಅನನ್ಯತೆಯನ್ನು ಹೊಂದಿರುತ್ತದೆ. ಅಂತೆಯೇ ಬುಡಟ್ಟು ಚಿತ್ರಕಲೆಯನ್ನು ಸಹ ನೋಡಬಹುದು. ಈ ಚಿತ್ರಕಲೆಗಳ ಅಧ್ಯಯನ ಶಿಸ್ತುಗಳು ತಮ್ಮದೇ ಆದಂಥ ವ್ಯಾಖ್ಯಾನ ವಿವರಣೆಯನ್ನು ಬಯಸುತ್ತಾ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಲಿದೆ. ಇಂಥ ಸಂದರ್ಭದಲ್ಲಿ ಕರ್ನಾಟಕ ಬುಡಕಟ್ಟು ಸಮುದಾಯಗಳ ಚಿತ್ರಗಳನ್ನು ಸಹ ನೋಡಬೇಕಾಗಿದೆ. ಅದು ಇವರ ಬದುಕಿನಲ್ಲಿ ಅವಿಬಾಜ್ಯ ಅಂಗವಾಗಿದೆ. ಹಾಗಾಗಿ ಇಂಥ ಪ್ರಥಮ ವಿಷಯವನ್ನು ಪಿಎಚ್.ಡಿ ಮಹಾಪ್ರಬಂಧಕ್ಕೆ ವಿಷಯವಾಗಿ ಆಯ್ಕೆಮಾಡಿಕೊಂಡು ಅಧ್ಯಯನ ನಡೆಸಲು ಉದ್ದೇಶಿಸಿದ್ದೇನೆ. ಜೊತೆಗೆ ಈ ಅಧ್ಯಯನದ ವ್ಯಾಪ್ತಿಯನ್ನು ಕರ್ನಾಟಕಕ್ಕೆ ಸೀಮಿತ ಮಾಡಿಕೊಳ್ಳಲಾಗಿದೆ. ಕರ್ನಾಟಕದಲ್ಲಿ ಸಹ್ಯಾದ್ರಿ ಪರ್ವತಗಳು ಆರಂಭವಾಗುವ ಸಂಕೋಲೆಯಿಂದ ದಟ್ಟ ಕಾಡಿನ ಮಲೆಮಾದೇಶ್ವರ ಬೆಟ್ಟದವರೆಗೆ ವಾಸಿಸುವ ಆಯ್ದ ಬುಡಕಟ್ಟುಗಳ ಚಿತ್ರಕಲೆಯನ್ನು ಇಲ್ಲಿ ಅಧ್ಯಯನಕ್ಕೊಳಪಡಿಸಲಾಗಿದೆ. ಇದರಲ್ಲಿ ಮಲೆಮಾದೇಶ್ವರ ಬೆಟ್ಟ, ಬಿಳಿಗಿರಿರಂಗನಬೆಟ್ಟ, ನಾಗರ ಹೊಳೆಯ ಕಾಡು, ಕಾಕನಕೋಟೆಯ ಕಾಡು, ಕರಾವಳಿ ತೀರದ ವಿಶಿಷ್ಟ ಪ್ರದೇಶ, ಸಹ್ಯಾದ್ರಿ ಪರ್ವತಶ್ರೇಣಿ ಮುಂತಾದ ಸ್ಥಳಗಳಲ್ಲಿ ವಾಸಿಸುವಂತಹ ಒಟ್ಟು ೧೨ ಬುಡಕಟ್ಟು ಸಮುದಾಯಗಳು ಈ ಅಧ್ಯಯನದ ವ್ಯಾಪ್ತಿಗೆ ಒಳಪಡುತ್ತವೆ. ಈ ಬುಡಕಟ್ಟುಗಳ ಪರಿಚಯವನ್ನು ಮುಂದಿನ ಅಧ್ಯಯಗಳಲ್ಲಿ ನೀಡಲಾಗಿದೆ.

ಅಧ್ಯಯನದ ವಿಧಾನ

ಈ ಮಹಾಪ್ರಬಂಧದ ಅಧ್ಯಯನಕ್ಕೆ ಎರಡು ರೀತಿಯ ಆಕರ ಸಾಮಗ್ರಿಗಳನ್ನು ಬಳಸಿಕೊಳ್ಳಲಾಗಿದೆ. ಈ ಎರಡು ರೀತಿಯ ಆಕರ ಸಾಮಗ್ರಿಗಳು ಅಧ್ಯಯನಕ್ಕೆ ಪೂರಕವಾಗಿವೆ. ಹಾಗೂ ಮಹಾಪ್ರಬಂಧವನ್ನು ರೂಪಿಸಲು ಸಹಾಯಕವಾಗಿವೆ ಎಂದು ನಾನು ನಂಬಿದ್ದೇನೆ. ಈ ಆಕರಗಳನ್ನು ಹೀಗೆ ವಿಭಾಗ ಮಾಡಿಕೊಳ್ಳಬಹುದು. ೧. ಕ್ಷೇತ್ರಕಾರ್ಯದ ಮೂಲಕ ಮಾಹಿತಿ ಸಂಗ್ರಹಣೆ ಅಥವಾ ಅಧ್ಯಯನಕ್ಕೆ ಮೂಲ ಆಕರ ಸಾಮಗ್ರಿಗಳು ೨. ಅನುಷಾಂಗಿಕ ಆಕರ ಸಾಮಗ್ರಿ.

[illegible]

೧. ಕ್ಷೇತ್ರಕಾರ್ಯದ ಮೂಲಕ ದೊರಕುವ ಮೂಲ ಆಕರಗಳು : ಈ ಅಧ್ಯಯನವು ಪ್ರಧಾನವಾಗಿ ಕ್ಷೇತ್ರಕಾರ್ಯದ ಮೂಲಕ ಸಿಗುವ ಮಾಹಿತಿಗಳನ್ನು ಅವಲಂಬಿಸಿದೆ. ಕ್ಷೇತ್ರಕಾರ್ಯದಲ್ಲಿ ದೊರೆತ ಮಾಹಿತಿಯನ್ನು ಆಧಾರವಾಗಿಟ್ಟುಕೊಂಡು ಅದಕ್ಕೆ ಪೂರಕವಾದ ಅನುಷಂಗಿಕ ಮಾಹಿತಿಗಳ ಸಹಾಯದಿಂದ ಮಹಾಪ್ರಬಂಧವನ್ನು ರಚಿಸುವುದು ನನ್ನ ಉದ್ದೇಶ. ಇಲ್ಲಿ ಈ ಎರಡು ವಿಧಾಗಳೂ ಮುಖ್ಯವೇ. ಇವು ಮಹಾಪ್ರಬಂಧದ ಹೆಣಿಕೆಯಲ್ಲಿ ಒಂದಕ್ಕೊಂದು ಪೂರಕವಾದ ಕೆಲಸವನ್ನು ಮಾಡಿವೆ. ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ಬಗೆಯೂ ಮತ್ತಷ್ಟು ವಿಭಾಗೀಕರಣವನ್ನು ಬಯಸುತ್ತದೆ. ಇವುಗಳನ್ನು ಈ ರೀತಿಯಾಗಿ ವರ್ಗೀಕರಿಸಿಕೊಳ್ಳಲಾಗಿದೆ.

೧. ಬುಡಕಟ್ಟು ಸಮುದಾಯಗಳ ಆಯ್ಕೆ
೨. ಬುಡಕಟ್ಟು ಸಮುದಾಯಗಳ ಹಾಡಿ, ಪೋಡು, ವಾಡೆ ಅಥವಾ ಊರುಗಳ ಆಯ್ಕೆ
೩. ವಕ್ತೃಗಳ ಪರಿಚಯ ಮತ್ತು ಅವರಿಂದ ಚಿತ್ರಕಲೆಯ ಬಗ್ಗೆ ಮಾಹಿತಿ ಸಂಗ್ರಹಣೆ
೪. ಸಂದರ್ಶನ ಮತ್ತು ಹಲವು ಬಗೆಯ ಮಾಹಿತಿ ಸಂಗ್ರಹಣೆ
೫. ಸಂಭಾಷಣೆ ಮತ್ತು ಸಮುದಾಯಗಳ ಪರಿಚಯ
೬. ಚಿತ್ರಗಳ ಪ್ರತಿಕೃತಿ ತಯಾರಿಕೆ ಮತ್ತು ಟಿಪ್ಪಣೆ ಮಾಡಿಕೊಳ್ಳುವುದು
೭. ಫೋಟೋ ಸೆರೆಹಿಡಿಯುವಿಕೆ
೮. ಚಿತ್ರಗಳನ್ನು ಸ್ಥಳದಲ್ಲಿಯೇ ಬರೆದುಕೊಳ್ಳುವುದು
೯. ಚಿತ್ರಗಳನ್ನು ಬುಡಕಟ್ಟು ಸಮುದಾಯದವರಿಂದಲೇ ಬಿಡಿಸುವುದು

೧. ಬುಡಕಟ್ಟು ಸಮುದಾಯಗಳ ಆಯ್ಕೆ : ಈ ಅಧ್ಯಯನದ ಚೌಕಟ್ಟಿಗಾಗಿ ಕೆಲವು ಬುಡಕಟ್ಟು ಸಮುದಾಯಗಳನ್ನು ಮಾರ್ಗದರ್ಶಕರೊಂದಿಗೆ ಚರ್ಚೆ ನಡೆಸಿ ಆಯ್ಕೆಮಾಡಿಕೊಳ್ಳಲಾಗಿದೆ. ಅದರಲ್ಲಿಯೂ ಕರ್ನಾಟಕದ ಮಲೆನಾಡು ಮತ್ತು ಕರಾವಳಿ ತೀರದ ಪ್ರದೇಶದಲ್ಲಿರುವ ಬುಡಕಟ್ಟು ಸಮುದಾಯಗಳನ್ನು ವಿಶೇಷವಾಗಿ ಆಯ್ಕೆಮಾಡಿಕೊಳ್ಳಲಾಗಿದೆ.

೨. ಬುಡಕಟ್ಟು ಸಮುದಾಯಗಳ ಪೋಡು, ಹಾಡಿ, ವಾಡೆ ಮತ್ತು ಊರುಗಳ ಆಯ್ಕೆ : ಇಲ್ಲಿ ಎರಡು ರೀತಿಯಲ್ಲಿ ಪೋಡು, ಹಾಡಿ, ವಾಡಿ, ಊರುಗಳನ್ನು ಆಯ್ಕೆಮಾಡಿಕೊಳ್ಳಲಾಗಿದೆ. ಅಂದರೆ ನಗರ ಸಂಪರ್ಕಕ್ಕೆ ಹತ್ತಿರವಿರುವ ಸ್ಥಳಗಳು ಮತ್ತು ನಗರ ಸಂಪರ್ಕವೇ ಇಲ್ಲದ, ಸೌಲಭ್ಯ ಅವಕಾಶರಹಿತ ಸ್ಥಳಗಳು. ಈ ಎರಡು ಸ್ಥಳಗಳಿಗೂ ಬೇಟಿ ನೀಡಿ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸುವ ವಿಧಾನವನ್ನು ಅನುಸರಿಸಲಾಗಿದೆ. ಇದರಲ್ಲಿ ನಾಗರಿಕ ಸೌಲಭ್ಯಗಳು ಸಂಪರ್ಕಗಳು ಗೊತ್ತಿರುವ ಸಮುದಾಯಗಳಿಗೂ, ಗೊತ್ತಿರದ ಸಮುದಾಯಗಳಿಗೂ ಸಾಕಷ್ಟು ಭಿನ್ನತೆಯನ್ನು ಕಾಣುತ್ತೇವೆ. ಈ ವಿವರ ಅವರು ಬರೆಯುವ ಚಿತ್ರ ಬಳಸುವ ಬಣ್ಣಗಳಿಂದ ಗೊತ್ತಾಗುತ್ತದೆ.

೩. ವಕ್ತೃಗಳ ಪರಿಚಯ ಮತ್ತು ಅವರಿಂದ ಚಿತ್ರಕಲೆಯ ಬಗ್ಗೆ ಮಾಹಿತಿ ಸಂಗ್ರಹಣೆ : ಕ್ಷೇತ್ರಕಾರ್ಯದ ಸಮಯದಲ್ಲಿ ಮೊದಲು ಸಂಬಂಧಿಸಿದ ವಕ್ತೃಗಳನ್ನು ಪರಿಚಯ ಮಾಡಿಕೊಳ್ಳಲಾಗಿದೆ. ಏಕೆಂದರೆ ಬುಡಕಟ್ಟು

[illegible]

[illegible]

[illegible]

[illegible]

ಸಮುದಾಯದವರು ಕಟ್ಟುಪಾಡು, ರೀತಿ ನೀತಿಗಳಿಗೆ ಬದ್ಧರಾಗಿರುವಂಥವರು. ಅಂತೆಯೇ ಸಂಪ್ರದಾಯ ಆಚರಣೆಗಳನ್ನು ಅನುಸರಿಸುತ್ತಾ ಬದುಕಿದವರು. ಇವರಿಗೆ ಮೊದಲು ಆತ್ಮೀಯರಾಗದೆ ಹೋದರೆ ತಮ್ಮ ಸಮುದಾಯದವರನ್ನು ಮೊದಲು ಪರಿಚಯ ಮತ್ತು ಆತ್ಮೀಯರನ್ನಾಗಿ ಮಾಡಿಕೊಳ್ಳುವುದು ಕ್ಷೇತ್ರಕಾರ್ಯದ ಮೊದಲ ಕೆಲಸ. ಹೀಗೆ ಹಲವು ಸಲದ ಆತ್ಮೀಯ ಭೇಟಿಯ ನಂತರ ಅವರ ಚಿತ್ರಕಲೆಯ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

೪. **ಸಂದರ್ಶನ ಮತ್ತು ಹಲವು ಬಗೆಯ ಮಾಹಿತಿ ಸಂಗ್ರಹಣೆ :** ಸಮುದಾಯಗಳನ್ನು ಸಂದರ್ಶಿಸಿ ಹಲವು ಬಗೆಯ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಬುಡಕಟ್ಟು ಸಮುದಾಯಗಳ ಚಿತ್ರಕಲೆಯ ಬಗ್ಗೆ ವಿಷಯ ಸಂಗ್ರಹಣೆಗೆ ತೊಡಗಿದಾಗ ಅವು ಶಿಷ್ಟ ಸಂಸ್ಕೃತಿಗೆ ವಿರುದ್ಧವಾದ ಪ್ರತಿ ಸಂಸ್ಕೃತಿಯ ಭಾಗವಾಗಿರುತ್ತವೆ ಎಂಬುದು ಮನನವಾಗಿದೆ. ಅಂಥ ಸಂದರ್ಭದಲ್ಲಿ ಹಿರಿಯರನ್ನು ವಿಶೇಷವಾಗಿ ಸಂದರ್ಶಿಸಿ ಅವರ ಸಂಸ್ಕೃತಿಯ ಹಿನ್ನೆಲೆಯನ್ನು ಚಿತ್ರಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಲಾಗಿದೆ.

೫. **ಸಂಭಾಷಣೆ ಮತ್ತು ಸಮುದಾಯಗಳ ಪರಿಚಯ :** ಇಲ್ಲಿ ಸಂಭಾಷಣೆಯೊಂದಿಗೆ ಹಲವು ವಿಷಯಗಳನ್ನು ಬುಡಕಟ್ಟು ಸಮುದಾಯಗಳಿಂದ ಪಡೆಯಲಾಗಿದೆ. ಜೊತೆಗೆ ಇವರ ಬದುಕಿನ ಜೀವನ ವಿಧಾನ ಹಲವು ಬಗೆಯಲ್ಲಿ ಇರುವ ಇವರ ಸಾಹಿತ್ಯಕ ಸಂಪತ್ತುಗಳ ಹಿನ್ನೆಲೆಯಲ್ಲಿ ಮಾಹಿತಿಯನ್ನು ಸಂಗ್ರಹಿಸಲಾಯಿತು. ಹಾಗೆಯೇ ಸಂಭಾಷಣೆ ಮೂಲಕ ಆ ಸಮುದಾಯಗಳ ಪರಿಚಯವನ್ನು ಮಾಡಿಕೊಳ್ಳಲಾಗಿದೆ.

೬. **ಚಿತ್ರಗಳ ಧ್ವನಿ ಮುದ್ರಣ ಮತ್ತು ಟಿಪ್ಪಣೆ ತಯಾರಿಕೆ :** ಪ್ರತಿ ಬುಡಕಟ್ಟು ಸಮುದಾಯಗಳ ವಕ್ತೃಗಳೊಂದಿಗೆ ನಡೆಸಿದ ಸಂಭಾಷಣೆ ಸಂದರ್ಶನ, ಮಾಹಿತಿ ವಿವರಗಳೆಲ್ಲವನ್ನು ಧ್ವನಿಮುದ್ರಣದಿಂದ ದಾಖಲು ಮಾಡಿಕೊಳ್ಳಲಾಗಿದೆ. ಈ ಸಂದರ್ಭದಲ್ಲಿ ಪ್ರತಿಯೊಂದು ಸಮುದಾಯಗಳ ಚಿತ್ರಕಲೆಯ ಬಗ್ಗೆ ಸಂಬಂಧಿಸಿದ ಮಾಹಿತಿಯನ್ನು ಧ್ವನಿಮುದ್ರಣದಲ್ಲಿ ದಾಖಲು ಮಾಡಿಕೊಳ್ಳುವುದರ ಜೊತೆಗೆ ೨ ಕೆಲವು ಮುಖ್ಯವಾದ ವಿಷಯಗಳನ್ನು ಟಿಪ್ಪಣಿ ಮಾಡಿಕೊಳ್ಳಲಾಗಿದೆ. ಸಂಬಂಧಿಸಿದ ವಕ್ತೃಗಳೊಂದಿಗೆ ಅಲ್ಲದೆ, ಸಂಬಂಧಿಸಿದ ವಿದ್ವಾಂಸರೊಂದಿಗೆ ಚಿತ್ರಕಲೆಯ ಬಗ್ಗೆ ಚರ್ಚೆ ನಡೆಸಿ, ಅವುಗಳ ಹಿನ್ನೆಲೆಯನ್ನು ಸಂಪ್ರದಾಯ, ಆಚರಣೆಗಳಿಗೆ ಸಂಬಂಧಿಸಿದಂತೆ ದಾಖಲಿಸಲಾಗಿದೆ.

೭. **ಫೋಟೋ ಸೆರೆಹಿಡಿಯುವಿಕೆ :** ಈ ಬುಡಕಟ್ಟು ಸಮುದಾಯಗಳ ಚಿತ್ರಗಳನ್ನು ಫೋಟೋದಲ್ಲಿ ಸೆರೆ ಹಿಡಿದು ಅವುಗಳ ಕೆಲವು ಚಿತ್ರಗಳನ್ನು ಈ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಈ ಫೋಟೋಗಳು ಈ ಅಧ್ಯಯನದ ಪ್ರಮುಖ ಆಕರ. ಸಾಮಗ್ರಿ ಚಿತ್ರಗಳನ್ನು ಬರೆಯಲು ಬಳಸುವ ಬಣ್ಣಗಳು ತಯಾರಿಸುವ ಕರಕುಶಲ ಕಲೆಗಳು ಮುಂತಾದವುಗಳನ್ನು ಕ್ಯಾಮರದಲ್ಲಿ ಸೆರೆಹಿಡಿಯಲಾಗಿದೆ.

೮. **ಚಿತ್ರಗಳನ್ನು ಸ್ಥಳದಲ್ಲಿಯೇ ಬರೆದುಕೊಳ್ಳುವುದು :** ಮೂಲತಃ ನಾನು ಚಿತ್ರಕಲೆಗೆ ಸಂಬಂಧಿಸಿದ ವಿದ್ಯಾರ್ಥಿಯಾದ್ದರಿಂದ ಬುಡಕಟ್ಟು ಸಮುದಾಯಗಳ ಹಲವು ಬಗೆಯ ಚಿತ್ರಗಳನ್ನು ಸ್ಥಳದಲ್ಲಿಯೇ

ಅನುಕರಣ ಸ್ವರೂಪದಲ್ಲಿ ಬರೆದುಕೊಂಡಿದ್ದೇನೆ. ಈ ಚಿತ್ರಗಳಲ್ಲಿ ಬಿತ್ತಿ ಚಿತ್ರಗಳು, ನೆಲದ ಮೇಲಿನ ಚಿತ್ರಗಳು, ಬಾಗಿಲ ಅಲಂಕಾರಕ್ಕೆ ಬಿಡಿಸಿದ ಚಿತ್ರಗಳು, ಹಸೆಯ ಚಿತ್ರಗಳು, ಹಚ್ಚೆಯ ಚಿತ್ರಗಳು ಮುಂತಾದವುಗಳನ್ನು ಸ್ಥಳದಲ್ಲಿಯೇ ಬರೆದುಕೊಂಡು ಪ್ರತಿಗಳನ್ನು ಮಾಡಿಕೊಳ್ಳಲಾಗಿದೆ. ಹಾಗೆ ಪರಿಷ್ಕರಿಸಿದ ಕೆಲವು ಚಿತ್ರಗಳನ್ನು ಈ ಮಹಾಪ್ರಬಂಧದಲ್ಲಿ ಕೊಡಲಾಗಿದೆ.

೯. ಚಿತ್ರಗಳನ್ನು ಬುಡಕಟ್ಟು ಸಮುದಾಯದವರಿಂದಲೇ ಬಿಡಿಸುವುದು : ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕೆಲವು ಚಿತ್ರಗಳನ್ನು ಬುಡಕಟ್ಟು ಸಮುದಾಯದವರಿಂದಲೇ ಸ್ಥಳದಲ್ಲಿಯೇ ಬಿಡಿಸಲಾಯಿತು. ಏಕೆಂದರೆ ಈ ಚಿತ್ರಗಳು ಬುಡಕಟ್ಟು ಸಮುದಾಯಗಳ ಬದುಕು ಮತ್ತು ಭಾವನೆಗೆ ಸಂಬಂಧಪಟ್ಟಿರುವಂತವುಗಳೇ ಆಗಿವೆ. ಹಾಗಾಗಿ ಇವರಿಂದ ರಂಗೋಲಿ ಚಿತ್ತಾರ, ಅಲಿಚಿತ್ತಾರ, ಸೇಡಿ ಚಿತ್ತಾರ, ಹಸೆಯ ಚಿತ್ತಾರ, ಭೂಮಿಣಿ ಬುಟ್ಟಿಯ ಮೇಲಿನ ಚಿತ್ತಾರಗಳನ್ನು ಬರೆಸಲಾಯಿತು. ಇದರಿಂದ ಈ ಚಿತ್ರಗಳ ವೈಶಿಷ್ಟತೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಯಿತು.

ಕ್ಷೇತ್ರಕಾರ್ಯಕ್ಕೆ ಸಂಬಂಧಿಸಿದ ಈ ಎಲ್ಲಾ ವಿಧಾನವನ್ನು ಅನುಸರಿಸಿ ಕರ್ನಾಟಕ ಬುಡಕಟ್ಟು ಚಿತ್ರಕಲೆಯನ್ನು ಈ ಅಧ್ಯಯನಕ್ಕೆ ಒಳಪಡಿಸಲಾಗಿದೆ.

೨ ಅನುಷಂಗಿಕ ಆಕರ ಸಾಮಗ್ರಿ : ಕಲೆಯ ಬಗ್ಗೆ, ಚಿತ್ರಕಲೆಯ ಬಗ್ಗೆ, ಅದರ ಉಗಮ, ವಿಕಾಸದ ಬಗ್ಗೆ ಅವು ಬೆಳೆದುಬಂದ ರೀತಿಯ ಬಗ್ಗೆ, ಈಗಾಗಲೇ ಕೆಲವು ಕೃತಿಗಳು ಬಂದಿವೆ. ಅವುಗಳಲ್ಲಿ ಸಾಹಿತ್ಯಕ ಕೃತಿಗಳು, ಸಂಶೋಧನ ಕೃತಿಗಳು, ವಿಮರ್ಶಾಕೃತಿಗಳು, ಪ್ರವಾಸ ಕಥನಗಳು, ಪ್ರವಾಸಿ ಬರಹಗಳು, ಪಿಎಚ್.ಡಿ ಪ್ರಬಂಧಗಳು, ನಿಘಂಟುಗಳು, ಹಲವು ಬಗೆಯ ಕೋಶಗಳು, ವಿಶ್ವಕೋಶ, ಸಂಪಾದಿತ ಕೃತಿಗಳು ಹೀಗೆ ಹಲವಾರು ಬಗೆಯ ಮಾಹಿತಿ ನಮಗೆ ಸಿಗುತ್ತವೆ. ಈ ಸಂಬಂಧಿಸಿದ ಕೃತಿಗಳನ್ನು ಇಲ್ಲಿಯ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಇವುಗಳನ್ನು ಕರ್ನಾಟಕ ಬುಡಕಟ್ಟು ಚಿತ್ರಕಲೆ ಅಧ್ಯಯನಕ್ಕೆ ಅನುಷಂಗಿಕ ಆಕರ ಸಾಮಗ್ರಿಯಾಗಿ ಬಳಸಿಕೊಳ್ಳಲಾಗಿದೆ.

ಈ ಮೇಲಿನ ಎರಡು ರೀತಿಯಲ್ಲಿ ಅಧ್ಯಯನ ನೆಡಸಿ, ಅವುಗಳನ್ನು ಗ್ರಹಿಸಿ, ಅರ್ಥವ್ಯಾಖ್ಯಾನಗಳನ್ನು ವಿಶ್ಲೇಷಣೆ ಮತ್ತು ವಿವರಣೆಗಳನ್ನು ಮಾಡಲಾಗಿದೆ. ಈ ಅಧ್ಯಯನವು ಮೇಲಿನ ಎರಡು ರೀತಿಯ ವಿಧಾನವನ್ನು ಅನುಸರಿಸಿ, ಅವುಗಳ ಮಾಹಿತಿಯನ್ನು ಆಧರಿಸಿ ಸಿದ್ಧಪಡಿಸಲಾದ ಪ್ರಬಂಧವಾಗಿದೆ.

ಅಡಿಟಿಪ್ಪಣೆಗಳು

೧. ಕರ್ನಾಟಕದಲ್ಲಿ ಚಿತ್ರಕಲೆ, ಡಾ. ಶಿವರಾಮಕಾರಂತ, ಪುಟ: ೧

೨. ಚಿತ್ರಕಲೆ ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಾ. ಎಚ್. ತಿಪ್ಪೇರುದ್ರಸ್ವಾಮಿ, ಪುಟ: ೭೧೭

೩. ಕರ್ನಾಟಕ ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ಎ.ಎಸ್. ಪ್ರಭಾಕರ, ಪುಟ: ೧

*****

[illegible]

[illegible]

[illegible]

[illegible]

[illegible]

[illegible]

ಅಧ್ಯಾಯ ೨

ಕಲೆಯ ಉಗಮ, ವಿಕಾಸ ಮತ್ತು ವರ್ಗೀಕರಣ

ಕಲೆಯ ಉಗಮ, ವಿಕಾಸ ಮತ್ತು ವರ್ಗೀಕರಣ

ಕಲೆ

ಮಾನವನ ಬದುಕಿನ ವಿಕಾಸದಲ್ಲಿ, ಕಲೆ ಹಲವು ರೂಪಾಂತರಗಳಿಗೆ ಒಳಗಾಗುತ್ತಾ ಬಂದಿದೆ. ಇದನ್ನು ಮಾನವನ ಬೆಳವಣಿಗೆಯ ಹಲವು ಹಂತದಿಂದ ಗುರುತಿಸಬಹುದು. ಮಾನವನ ವಿವಿಧ ಭಾವನೆಗಳಿಂದ ಮೂಡಿರುವ ಪ್ರತಿಭೆ ಕಲ್ಪನೆಗಳ ಪ್ರತಿಬಿಂಬವೇ 'ಕಲೆ'. "ಕಲೆ ಮಾನವನ ಕ್ರಿಯಾಶಕ್ತಿಯ ಕುಶಲ ಅಭಿವ್ಯಕ್ತಿ. ಈ ಅಭಿವ್ಯಕ್ತಿಯು ಹಲವಾರು ಸ್ತರಗಳಿಂದ ವ್ಯಕ್ತವಾಗಿದ್ದು, ಆಗಾಗ ಬದಲಾವಣೆ ಆಗುತ್ತಾ ಬಂದಿದೆ."[೧] "ಇಂಗ್ಲೀಷ್‌ನ Art ಎಂಬ ಶಬ್ಧಕ್ಕೆ Skill, Music, Painting ವಿದ್ಯೆ, ಚಾತುರ್ಯ, ಲಲಿತಕಲೆ, ಕಾವ್ಯ, ಶಿಲ್ಪ, ಗತಿ, ನಡೆ, ಸಂತೋಷದಾಯಕ ಎಂಬಿವೇ ಮುಂತಾದ ಅರ್ಥಗಳಿವೆ. 'Art is life seen through a different temparament' ಎಂಬ ಇಂಗ್ಲೀಷಿನ ಮಾತು ಅರ್ಥಪೂರ್ಣವಾಗಿದೆ. ವ್ಯಕ್ತಿಯ ವಿವಿಧ ಕಣ್ಣುಗಳಿಂದ ಕಂಡ ಬದುಕೇ ಕಲೆ."[೨] "ಕಲೆ ಮಾನವ ನಿರ್ಮಿತ ಕೃತಿ. ಒಂದು ಮಾಧ್ಯಮದ ಬಳಸುವಿಕೆಯಿಂದ ಕಲಾವಿದನು ಸುಂದರ ವಸ್ತುವೊಂದನ್ನು ನಿರ್ಮಿಸುತ್ತಾನೆ."[೩] ಕಲೆಗೆ "ಗುರುತು; ಲಲಿತವಿದ್ಯೆ; ಕ್ರಾಂತಿ"[೪] ಎಂಬ ಅರ್ಥಗಳೂ ಇವೆ. ಕಲೆ ಎಂಬ ಈ ಜಗತ್ತು ಪ್ರತಿಕೃತಿಗಳ ಸೃಷ್ಟಿಯ ಆಮೋದದಲ್ಲಿ ತೊಡಗಿರುವ ಪರಮ ಪುರುಷನ ಆಟ."[೫] ಯಾವುದೇ ಕಲೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದು ಕಲೆಯ ಮಾಧ್ಯಮದ ಮೂಲಕ. ಇದು ಅಭಿವ್ಯಕ್ತಿಯ ಮೂಲಕ ಒಂದು ಮಾಧ್ಯಮವಾಗುತ್ತದೆ. 'ಕಲೆ'ಯು ಮೂಲತಃ ಅಭಿವ್ಯಕ್ತಿಗೆ ಸಂಬಂಧಪಟ್ಟಿರುವುದು ಆಗಿರುತ್ತದೆ. ಕಲೆಗೆ ಸಂಬಂಧಿಸಿದಂತೆ "ಟಾಲ್‌ಸ್ಟಾಯ್ ಅವರ ಪ್ರಕಾರ ಅನುಭವಿಸಿ ಆಗಿರುವ ಭಾವವನ್ನು ಒಬ್ಬಾತ ತನ್ನಲ್ಲಿ ಉಚ್ಚರಿಸಿಕೊಂಡು ಅದನ್ನು ಚಲನೆ, ರೇಖೆ, ಬಣ್ಣ, ನಾದ, ಆಕೃತಿ ಅಥವಾ ಶಬ್ಧಗಳ ಮೂಲಕ ಅಭಿವ್ಯಕ್ತಿಗೊಳಿಸಿ, ಆ ಭಾವವನ್ನು ಇನ್ನೊಬ್ಬನೆಡೆಗೆ ಪ್ರವಹಿಸಿದಾಗ ಎರಡನೆಯವನಲ್ಲಿ ಮೂಲದ ಭಾವ ಸ್ಫುರಿಸುವಂತೆ ಮಾಡುವುದೇ 'ಕಲೆ'ಯ ಕೆಲಸ. ಇಮ್ಯಾನ್ಯುಯಲ್ ಕ್ಯಾಂಟ್ ಅವರ ಪ್ರಕಾರ ಯಾವುದು ತಾಟಸ್ಥ್ಯ ಚಿಂತನೆಯಲ್ಲಿ ಆನಂದವನ್ನು ಕೊಡಬಲ್ಲದೋ ಅದೇ 'ಕಲೆ'. ಈ ತಾಟಸ್ಥ್ಯವು ಶುದ್ಧವಾದ ಚಿಂತನೆಯಾಗಿದ್ದು ಅದಕ್ಕೆ ವಸ್ತುವಿನ ಇರುವಿಕೆಯ ಅವಶ್ಯಕತೆ ಇಲ್ಲ.

ವಸ್ತುವಿನ ಅಸ್ತಿತ್ವದ ಮೇಲಿರುವ ಆಸಕ್ತಿಯೊಡನೆ, ಆ ವಸ್ತು ಒಳ್ಳೆಯದು, ಹಿತಕಾರಿ ಎಂಬ

[illegible]

[illegible]

ಗುಣಗಳೂ ಸೇರಿರುತ್ತವೆ. ಆದರೆ ಯಾವುದು ಸುಂದರವಾಗಿದೆಯೋ ಅದು ಈ ಬಗೆಯ ಎಲ್ಲಾ ಆಸಕ್ತಿಗಳಿಂದ ಸ್ವತಂತ್ರವಾಗಿರುತ್ತದೆ."[೬] ಹಾಗೆ ಕ್ರೋಚೆ ಕಲೆಯನ್ನು 'ಇಂದ್ರಿಯ ಜ್ಞಾನ'ವೆಂದು ಹೇಳುತ್ತಾ "ಕಲೆ ಕ್ರಿಯಾಶೀಲವಾಗಿರುತ್ತದೆ. 'ಕಲೆ' ಎಂದರೆ ತಾಟಸ್ಥ್ಯ ಅವಲೋಕನವೂ ಅಲ್ಲ. ಹಗಲುಗನಸು ಕಾಣುವುದೂ ಅಲ್ಲ, ಅದು ವ್ಯವಸ್ಥಾಪಿಸಲ್ಪಟ್ಟ ಪ್ರತಿಮೆಗಳ ಮೂಲಕ ಉಂಟಾಗುವ ಮಾನಸಿಕ ದೃಶ್ಯ"[೭] ವೆಂದು ಹೇಳುತ್ತಾನೆ. ಅಂತೆಯೇ ಕೈವ್‌ಬೆಲ್‌ನ ಪ್ರಕಾರ "ಕಲೆಯಲ್ಲಿ ಕಾಣುವ ಅದರ ಅಚ್ಯುತ ಗುಣ ಸ್ವರೂಪವೇ ಅದರ ಸ್ವರೂಪ. ಸ್ವರೂಪವೆಂದರೆ ವ್ಯವಸ್ಥೆ, ಕ್ರಮಾನುಗತಿ ಚಾಲನೆ ಮತ್ತು ಆಕಾರಗಳ ಒಪ್ಪಂದ. ಕಲೆಯು ಭಾವನಾತ್ಮಕವಾಗಿದ್ದರೂ ಅದು ಪ್ರಚೋದಿತ ಸೌಂದರ್ಯಭಾವ."[೮] ಈ ಎಲ್ಲಾ ವಿದ್ವಾಂಸರ ಅಭಿಪ್ರಾಯಗಳನ್ನು ಗಮನಿಸಿದರೆ 'ಕಲೆ' ಎನ್ನುವುದು ವ್ಯಕ್ತಿಯಿಂದ ಹೊರಹೊಮ್ಮುವ ಒಂದು ಅಭಿವ್ಯಕ್ತಿ. ಇಲ್ಲಿ 'ಕಲೆ' ವ್ಯಕ್ತಿಯ ಅಥವಾ ಕಲಾವಿದನ ಭಾವನೆಗಳ ಪ್ರತಿಕ್ರಿಯೆ. ಅದು ಸಂಬಂಧಿಸಿದ ಕ್ಷೇತ್ರದಲ್ಲಿ ತನ್ನದೇ ಆದ ವ್ಯಾಪ್ತಿ ಮತ್ತು ವೈಶಾಲ್ಯತೆಯನ್ನು ಪಡೆದಿರುತ್ತದೆ. ಈ 'ಕಲೆ'ಯನ್ನು ಒಟ್ಟಾರೆಯಾಗಿ ನೋಡುವುದು, ಆಲಿಸುವುದು, ಕೇಳುವುದು, ಅನುಭವಿಸುವುದು ಆಗಿರುತ್ತದೆ. ಇವುಗಳ ವಿವರಣೆಯನ್ನು ಹಾಗೇ ಎಂದು ನಿಖರವಾಗಿ ಹೇಳಲು ಬರುವುದಿಲ್ಲ. ಈ ಕಲೆಗಳು ಅಥವಾ ಎಲ್ಲಾ ಕಲೆಗಳು ಎಲ್ಲರನ್ನು ಸ್ಪರ್ಶಿಸಬೇಕು ಅಥವಾ ಹತ್ತಿರವಾಗಬೇಕು ಎಂಬ ನಿಯಮವಿಲ್ಲ. ಹಾಗಾಗಿ ಕಲೆಯ ಬಗ್ಗೆ, ಕಲೆಯ ಅರ್ಥೈಸುವಿಕೆಯ ಬಗ್ಗೆ ಇದೇ ಅಂತಿಮ ಎಂದು ವಿವರಿಸುವುದು, ವ್ಯಾಖ್ಯಾನಿಸುವುದು ಕಷ್ಟ ಸಾಧ್ಯ.

ಹಾಗಾದರೆ ಕಲೆ ನಮಗೆ ಅರ್ಥ ಆಗುವುದು ಹೇಗೆ? ಈ ಕಲೆ ವ್ಯಕ್ತಿಗೆ ಮುಟ್ಟುವುದು ಹೇಗೆ? ಎಂಬೆಲ್ಲಾ ಪ್ರಶ್ನೆಗಳು ಉಗಮವಾಗುತ್ತವೆ. ಈ ಕಲೆ ವ್ಯಕ್ತಿಗೆ ಅದರ ಪ್ರಕ್ರಿಯೆಯ ಮೂಲಕ ಮುಟ್ಟಬಹುದು. ಹಾಗಾಗಿ ಕಲೆಯು ತನ್ನದೇ ಆದಂಥ ಕಾರ್ಯಚಟುವಟಿಕೆಯನ್ನು, ಕಾರ್ಯವಿಧಾನವನ್ನು ಹೊಂದಿರುತ್ತದೆ. "ಕಲೆ ನಮಗೆ ಸಾಧ್ಯವಾಗುವುದು ಒಂದು ಮಾಧ್ಯಮದ ಮೂಲಕವೇ. ಕಲಾವಿದ ಎಷ್ಟೇ ಅನುಭವಿಸುತ್ತಾನೆ ಎಂದರೂ ಅಸ್ಪಷ್ಟವಾಗಿ ಅನುಭವ ಇರಲು, ಆಗಲು ಸಾಧ್ಯವೇ? ಬಹುಶಃ ಅನುಭವ ಕೂಡ ಅವರವರ ಭಾಷೆಯಲ್ಲಿ ಅಥವಾ ಅವರವರು ಎಣಿಸಿದ ಮಾಧ್ಯಮದ ಮೂಲಕವೇ ಆಗುತ್ತದೆ. ಹಾಗೆ ನೋಡಿದಾಗ ಒಬ್ಬ ಕಲಾವಿದನಾದಂಥವನು ತನ್ನ ಅತ್ಯಂತ ಅನಿವಾರ್ಯದಂತಹ ಮಾಧ್ಯಮವನ್ನು ಆಯ್ಕೆ ಮಾಡಿಕೊಳ್ಳಬೇಕಾದಂತಹ ಅನಿವಾರ್ಯತೆ ಪ್ರಾಪ್ತವಾಗುತ್ತದೆ. ಹೀಗೆ 'ಕಲೆ'ಯೆಂದಾಗ ಒಂದು ಅಭಿವ್ಯಕ್ತಿ, ಆ ಅಭಿವ್ಯಕ್ತಿಗೆ ಒಂದು ಮಾಧ್ಯಮ ಬೇಕು. ಈ ಅಭಿವ್ಯಕ್ತಿಗೆ ಕಾರಣನಾದವನು ಒಬ್ಬ ಕಲಾವಿದ. ಹೀಗೆ ಕಲೆಗೂ, ಅಭಿವ್ಯಕ್ತಿಗೂ, ಮಾಧ್ಯಮಕ್ಕೂ ಒಂದು ಸಂಕೀರ್ಣವಾದ ಸಂಬಂಧ ಇದೆ."[೯] ಕಲೆಯನ್ನು ಅರ್ಥಮಾಡಿಕೊಳ್ಳಲು ಮನಸ್ಸು ಬೇಕು. ಇದು ವ್ಯಕ್ತಿಯ ದೃಷ್ಟಿಗೆ ಸಂಬಂಧಪಟ್ಟಿರುತ್ತದೆ. ಆಗ ಅದು ತನ್ನದೇ ಆದ ನೆಲೆಯಲ್ಲಿ ಆನಂದವನ್ನು ಕೊಡುತ್ತದೆ.

ಈ ಕಲೆಯು "ರಸಾನುಭವ ಆಗಬೇಕಾದರೆ ಯಾವುದು ರಸಾನುಭವವನ್ನು ಉಂಟು ಮಾಡಬಲ್ಲದೋ,

[illegible]

[illegible]

ಕಲಾತ್ಮಕ ಆನಂದವನ್ನು ಉಂಟುಮಾಡಬಲ್ಲದೋ ಲೋಕದ ಆನಂದಕ್ಕಿಂತ ಭಿನ್ನವಾದದ್ದು, ಲೋಕದ ಅನುಭವಕ್ಕಿಂತ ಭಿನ್ನವಾದದ್ದು. ಅದನ್ನು ನಾವು ಕಲಾನಂದ Aesthetic Pleasure ಎನ್ನುತ್ತೇವೆ. ಇದೇ ರಸಾನುಭವ. ಈ ರಸಾನುಭವದಲ್ಲಿ ಆಗುವ ಆನಂದ ಶುದ್ಧವಾದದ್ದು."[೧೦] ಇದು ಸಂಪೂರ್ಣವಾಗಿ ಮನೋವಿಜ್ಞಾನಕ್ಕೆ ಸಂಬಂಧಪಟ್ಟಿರುತ್ತದೆ. ಇಲ್ಲಿ ಕಲೆಯು ಬೌದ್ಧಿಕ, ತಾತ್ವಿಕ ಹಾಗೂ ಹೃದಯಸ್ಪರ್ಶಿ ಕ್ರಿಯೆಗೆ ಸಂಬಂಧಹೊಂದಿರುತ್ತದೆ. ಆದರೆ ಕಲಾದರ್ಶನದಲ್ಲಿ ಬೌದ್ಧಿಕತೆ ಮತ್ತು ತಾತ್ವಿಕತೆಯ ಕ್ರಿಯಾವಿಧಾನವು ವ್ಯಕ್ತಿಗಳು ನೋಡುವ ನೋಟಗಳಿಗೆ ಸಂಬಂಧಪಟ್ಟಿರುತ್ತವೆ. ವ್ಯಕ್ತಿಗಳ ಪರಿಸರ ಇಲ್ಲಿ ಮುಖ್ಯವಾಗುತ್ತದೆ. ಅಂದರೆ ಒಂದು ಕಲಾಕೃತಿಯನ್ನು ಸಾಹಿತಿ ನೋಡುವುದಕ್ಕೂ, ವಿಜ್ಞಾನಿ ನೋಡುವುದುಕ್ಕೂ, ಸಾಮಾನ್ಯ ಸಹೃದಯಿ ನೋಡುವುದಕ್ಕೂ, ಒಬ್ಬ ಸಾಮಾನ್ಯ ಕಲಾವಿದ ನೋಡುವುದಕ್ಕೂ ಸಾಕಷ್ಟು ವ್ಯತ್ಯಾಸ ಇರುತ್ತದೆ. ಇಲ್ಲಿ ಕಲೆಯನ್ನು ಗ್ರಹಿಸುವ ದೃಷ್ಟಿಕೋನ ಮುಖ್ಯವಾಗುತ್ತದೆ.

ಈ ಕಲೆಯನ್ನು ಅರ್ಥಮಾಡಿಕೊಳ್ಳುವಾಗ ಅಥವಾ ಅವುಗಳನ್ನು ವಿಮರ್ಶಾತ್ಮಕವಾಗಿ ನೋಡುವಾಗ "ಸಾಮಾನ್ಯವಾಗಿ ಕಲೆಯನ್ನು ಉತ್ತಮ ಮತ್ತು ಸಾಮಾನ್ಯ (Higher and lower types) ಎಂದು ಎರಡು ರೀತಿಯಲ್ಲಿ ವಿಂಗಡಿಸಬಹುದು. ಉತ್ತಮ ರೀತಿಯ ಕಲೆ ಆಧ್ಯಾತ್ಮಿಕ ಅಂಶ (Spiritual elements) ಗಳನ್ನು ಒಳಗೊಂಡು ಮಾನವನ ಬಾಳಿನಲ್ಲಿ ನಿರಂತರ ಹರಿದು ಬರುವ ಸ್ಥಿರವಾದ ಮೌಲ್ಯ (Enternal Values)ಗಳನ್ನು ಸಮನ್ವಯಗೊಳಿಸಿ ಅಂತಹ ಅಮರ ಅಂಶಗಳನ್ನೇ ಪ್ರತಿಬಿಂಬಿಸುತ್ತದೆ. ಸಾಮಾನ್ಯ ರೀತಿಯ ಕಲೆಯು ಐಹಿಕ ಅಂಶ (Temperal Values) ಗಳನ್ನೊಳಗೊಂಡು ಕೇವಲ ವ್ಯಕ್ತಿಗಳ ಚಂಚಲವಾದ ಅನುಭವಗಳಿಗೆ (Transient Experiences) ಅನ್ವಯಿಸಿದ್ದು, ಕಾಲಗತಿಯಿಂದ ನಡೆಸುವಂತಹದು. ಒಬ್ಬ ಪ್ರತಿಭಾನ್ವಿತನ ಅಂತರಂಗದಲ್ಲಿ ಮೊಳೆತು ರೂಪಗೊಂಡ ಚೈತನ್ಯವೇ ಉತ್ತಮ ರೀತಿಯ ಕಲೆಯಾಗಿ ಪರಿಣಮಿಸುತ್ತದೆ. ಕಲೆಗೆ ಕಾಲದ ಭಯವಿಲ್ಲ, ಅದು ಅಮರವಾದುದು."[೧೧] ಹಾಗಾಗಿ ಯಾವುದೇ ಕಲೆಯನ್ನು ನೋಡುವಾಗ ಅದು ತಮ್ಮದೇ ಆದಂಥ ಸಂಪ್ರದಾಯದ ಹಿನ್ನೆಲೆಯಲ್ಲಿ ಇದ್ದು ಪ್ರಾದೇಶಿಕ ಅನನ್ಯತೆಯನ್ನು ಹೊಂದಿರುತ್ತದೆ.

ಅಂತೆಯೇ ಕಲೆ ಸಮಾಜಕ್ಕೆ ಅಭಿಮುಖವಾಗಿರುತ್ತದೆ. ಅದು ಸಮಾಜದ ಅಥವಾ ಸಮುದಾಯದ ಕನ್ನಡಿ ಇದ್ದಂತೆ. ಪ್ರತಿಯೊಂದು ಕಲೆಯು ಸಮಾಜದ ಅಂಗವಾಗಿರುತ್ತದೆಯೇ ಹೊರತು ಸಮಾಜದಿಂದ ಭಿನ್ನವಾಗಿ ಇರುವುದಿಲ್ಲ. ಇಲ್ಲಿ ಕಲಾವಿದ ತನ್ನನ್ನು ಹೇಗೆ ಗುರುತಿಸಿಕೊಳ್ಳುತ್ತಾನೆ, ಜೊತೆಗೆ ಸಮಾಜಕ್ಕೆ ತನ್ನ ಕೊಡುಗೆ ಯಾವ ರೀತಿಯದು? ಎಂಬುದು ಮುಖ್ಯವಾಗುತ್ತದೆ. ಈ ಕಲೆ ಮತ್ತು ಸಾಮಾಜಿಕ ಜೀವನಗಳ ಸಂಬಂಧಗಳು ಎರಡು ರೀತಿಯಲ್ಲಿ ಚರ್ಚೆಗೊಳ್ಳುತ್ತವೆ. "ಕಲೆಗಾರ ಇರುವುದು ಸಮಾಜಕ್ಕಾಗಿಯೇ ಹೊರತು ಸಮಾಜ ಇರುವುದು ಕಲೆಗಾರನಿಗೋಸ್ಕರವಲ್ಲ. ಮನುಷ್ಯನ ಪ್ರಜ್ಞೆಯನ್ನು ಬಳಸಿ ಸಮಾಜವ್ಯವಸ್ಥೆಯನ್ನು ಉತ್ತಮ ಪಡಿಸಲು ನೆರವಾಗುವುದೇ ಕಲೆಯ ಕೆಲಸ."[೧೨] ಇಲ್ಲಿ ಕಲೆಗೆ ಜವಾಬ್ದಾರಿಯೇ ಹೆಚ್ಚು. ಕಲೆ ಮಾರ್ಗದರ್ಶಿಯಾಗಿ ಸಮಾಜದಲ್ಲಿ ಕಾರ್ಯನಿರ್ವಹಿಸುವ ಹೊಣೆಯನ್ನು

[illegible]

ಹೊರಬೇಕಾಗುತ್ತದೆ. ಕಲೆಯು ಬದುಕಿಗೆ ಪೂರಕವಾಗಿರಬೇಕು. ಸಮಾಜದಲ್ಲಿ ಕಲೆ ತನ್ನ ಸಂಸ್ಕೃತಿಯೊಂದಿಗೆ ಸಂಸ್ಕಾರವನ್ನು ಹೊಂದಬೇಕೆಂಬುದು ಒಂದು ವಾದವಾದರೆ ಇನ್ನೂ ಕೆಲವರು ಈ ದೃಷ್ಟಿಯನ್ನು ಪ್ರಬಲವಾಗಿ ನಿರಾಕರಿಸುತ್ತಾರೆ. “ಕಲೆಯ ಉದ್ದೇಶ ಕಲೆಯೇ, ಕಲೆಯ ಮೂಲಕ ಅದಕ್ಕೆ ಹೊರತಾದ ನೇರ ಸಂಬಂಧವಿಲ್ಲದ ಗುರಿಯನ್ನು (ಅದು ಎಷ್ಟೇ ಉದಾತ್ತವಾಗಿರಲಿ) ಸಾಧಿಸ ಹೊರಡುವುದು ಒಂದು ಕಲಾಕೃತಿಯ ಘನತೆಯನ್ನು ತಗ್ಗಿಸಿದಂತಾಗುತ್ತದೆ.”[೧೩] ಇಲ್ಲಿ ಕಲೆಗೆ ತನ್ನದೇ ಆದ ಸ್ಥಾನ ಇದೆ. ಇದಕ್ಕೆ ಯಾವುದೇ ಸಾಮಾಜಿಕ ಒತ್ತಡವನ್ನು ಹೇರದಿರುವುದು, ಅಂತೆಯೇ ಇದನ್ನು ಒಂದು ಕಲೆಯಾಗಿ ನೋಡುವುದು ಪ್ರಮುಖವಾದುದಾಗಿದೆ. ಕಲೆ ಸಮಾಜದ ಪ್ರತಿಬಿಂಬ, ಆದ್ದರಿಂದ ಅದಕ್ಕೆ ಯಾವುದೇ ರೀತಿಯ ಒತ್ತಡ ಹೇರಬಾರದು, ಅದನ್ನು ಅನುಭವಿಸಬೇಕು ಅಷ್ಟೇ. ಕಲೆಗಾಗಿ ಕಲೆಯೇ ಹೊರತು ಸಮಾಜಕ್ಕಾಗಿ ಅಲ್ಲ.” ಹೀಗೆ ಕಲೆಯ ಬಗ್ಗೆ ವಿರುದ್ಧ ವೈರುದ್ಯ ಚರ್ಚೆಗಳನ್ನು ನೋಡಬಹುದು. ಇದು ೧೮೬೦ರ ರಷ್ಯನ್ ಸಾಹಿತ್ಯದ ಸಂದರ್ಭದಲ್ಲಿ ಕಾಣಿಸಿಕೊಂಡ ಚರ್ಚೆ. ಚೆನಿಶೆವ್‌ವೆಸ್ಕಿಯ ಅಭಿಪ್ರಾಯದಲ್ಲಿ ಕಲೆಗಳ, ಅದರಲ್ಲೂ ಕಾವ್ಯಕಲೆಯ ಮೌಲ್ಯವು ಸಮಾಜದ ಸಂದರ್ಭದಲ್ಲಿ ಕಲೆಗಳು ಪ್ರಸರಿಸುವ ಜ್ಞಾನದ ಮೊತ್ತವನ್ನು ಹೊಂದಿಕೊಂಡಿರುತ್ತದೆ ಎಂದು ಹೇಳಿದರೆ; ಪುಷ್ಕಿನ್ ‘ಕಲೆಗಾಗಿ ಕಲೆ’ ಎಂಬ ಉಗ್ರವಾದಿ ದೃಷ್ಟಿಕೋನವನ್ನು ಪ್ರಸ್ತುತ ಪಡಿಸುತ್ತಾನೆ. ಇವು ಕಲೆಗಳ ಬಗ್ಗೆ ಬಂದ ಸೈದ್ಧಾಂತಿಕ ನಿಲುವುಗಳು ಈ ಚರ್ಚೆಯನ್ನು ಇಲ್ಲಿ ಅಧ್ಯಯನದ ವ್ಯಾಪ್ತಿಗೆ ತರಲಾಗಿದೆ.

ಕಲೆಯ ಬಗ್ಗೆ ವಿದ್ವಾಂಸರು, ವೈಯಾಕರಣಿಗಳು, ಮೀಮಾಂಸಕರು ತಮ್ಮದೇ ಆದಂಥ ಅನಿಸಿಕೆ, ಅಭಿಪ್ರಾಯ, ವ್ಯಾಖ್ಯಾನಗಳನ್ನು ನೀಡಿ ಚರ್ಚೆ ನಡೆಸಿದ್ದಾರೆ. “ಸಂಸ್ಕೃತದ ಕಲಾ ಎಂಬುದು ಕನ್ನಡದಲ್ಲಿ ಕಲೆಯಾಗಿದೆ. ಕಲಾ ಎಂದರೆ ಚಂದ್ರನ ಹದಿನಾರನೆಯ ಒಂದು ಅಂಶ ಎಂದು ಅರ್ಥ. ಪೋಕಲಾತು ಷೋಡಶೋ ಭಾಗೋ’. ‘ಕಲಾ’ ಎಂದರೆ ಗತಿ, ನಡೆ, ಅರ್ಥ, ಜ್ಞಾನ, ತಿಳುವಳಿಕೆ ಎಂದೂ ಅರ್ಥವಾಗುತ್ತದೆಂದು ನಿಘಂಟುಕಾರರೆನ್ನುತ್ತಾರೆ. ಕಲಾ ಶಿಲ್ಪೇ ಎಂದು ಅಮರಕೋಶದಲ್ಲಿ ಹೇಳಿದರೆ.”[೧೪] ‘ಕಲೆ’ ಸೀಮಿತ ಅರ್ಥದಲ್ಲಿ ಇಲ್ಲಿ ಬಳಕೆಯಾಗದೆ ವಿಶಾಲಾರ್ಥದಲ್ಲಿ ಬಳಕೆಯಾಗುತ್ತ ಬಂದಿದೆ. ‘ಕಲೆ’ ಎಂದರೆ ಮನುಷ್ಯನ ಹಲವು ಅಭಿವ್ಯಕ್ತಿಯ ರೂಪಗಳು. ಮನುಷ್ಯನು ತನ್ನ ಭಾವನೆಯನ್ನು ಹೊರಹೊಮ್ಮಿಸುವುದು ಅಥವಾ ಹೊರಹಾಕುವುದೇ ‘ಕಲೆ’. ಮನುಷ್ಯನಲ್ಲಿ ಕಲೆಗಳನ್ನು ವಿವಿಧ ರೀತಿಗಳಲ್ಲಿ ವಿದ್ವಾಂಸರು ಗುರುತಿಸಿದ್ದಾರೆ.

“ಋಗ್ವೇದದಲ್ಲಿ ಒಂದು ಕಡೆ ‘ಕಲಾ’ ಎಂಬ ಶಬ್ಧ ಪ್ರಯೋಗವಿದೆ. ಇನ್ನೊಂದು ಕಡೆ ‘ಪ್ರಕಲ್ಪವಿತ್’ ಎಂಬ ಶಬ್ಧವಿದೆ. ವಾತ್ಸಾಯನ ಕಾಮಸೂತ್ರದ ದೇವದರಶಾಸ್ತ್ರಿ ಸಂಪಾದಿತ ಕೃತಿಯಲ್ಲಿ ೬೪ ಕಲೆಗಳ ಬಗ್ಗೆ ಬರೆದಿರುವ ಒಬ್ಬೊಬ್ಬ ಲೇಖಕರು ಈ ಮಂತ್ರಗಳನ್ನು ಉದ್ಧರಿಸಿ ಋಗ್ವೇದದಲ್ಲಿಯೇ ಕಲಾ ಎಂಬ ಶಬ್ದ ಈಗಿನ ಅರ್ಥದಲ್ಲಿ ಬಳಸಲ್ಪಟ್ಟಿದೆ ಎಂದಿದ್ದಾರೆ.”[೧೫] ಕಲೆಯ ಬಗ್ಗೆ ಉಪನಿಷತ್ತುಗಳಲ್ಲಿ, ಅಗ್ನಿಪುರಾಣ, ವಿಷ್ಣುಪುರಾಣ, ರಾಮಾಯಣ, ಮಹಾಭಾರತ, ಮುಂತಾದವುಗಳಲ್ಲಿ ಕಲೆಯ ಬಗ್ಗೆ ಕೆಲವು

ಉಲ್ಲೇಖಗಳು ಕಾಣ ಸಿಗುತ್ತವೆ. ಇದೇ ರೀತಿ ಶಾಸ್ತ್ರಗ್ರಂಥಗಳಲ್ಲಿ ೬೪ ಕಲೆಗಳನ್ನು 'ಲಲಿತ ವಿಸ್ತಾರ'ದಲ್ಲಿ ೮೬, 'ಸಮಯಸೂತ್ರ'ದಲ್ಲಿ ೮೭, ಕಲ್ಪಾಂತರ ವ್ಯಾಚ್ರ್ಯನಿಯಲ್ಲಿ ೭೨ ಕಲೆಗಳನ್ನು ಪಟ್ಟಿಮಾಡಿದೆ. ಕಾಮಸೂತ್ರದಲ್ಲಿ ೬೪ ಕಲೆಗಳ ಮೂರು ಪಟ್ಟಿಗಳು ದೊರಯುತ್ತವೆ. ಇದೇ ಕಾಮಸೂತ್ರಕ್ಕೆ ವ್ಯಾಖ್ಯಾನ ಬರೆದ ಯಶೋಧರನು ೫೧೨ ಕಲೆಗಳನ್ನು ಕುರಿತು ಹೇಳುತ್ತಾನೆ."[೧೬] ಹೀಗೆ ಹಲವು ಗ್ರಂಥಗಳಲ್ಲಿ ಗ್ರಂಥಕತೃಗಳು ಹಲವು ರೀತಿಯಲ್ಲಿ ಕಲೆಗಳನ್ನು ವಿಂಗಡಣೆ ಮಾಡಿಕೊಂಡು ವಿವರಣೆಯನ್ನು ನೀಡಿದ್ದಾರೆ.

ಕಾಮಸೂತ್ರದಲ್ಲಿಯ ಒಂದು ಪಟ್ಟಿಯಂತೆ ೬೪ ರೀತಿಯ ಕಲೆಗಳನ್ನು, ಅವುಗಳ ಅರ್ಥಗಳನ್ನು 'ಕಲಾಕೋಶ'ದಲ್ಲಿ ಅ.ಲ. ನರಸಿಂಹನ್ ಅವರು ಈ ರೀತಿಯಲ್ಲಿ ಕೊಟ್ಟಿದ್ದಾರೆ.

೦೧. ಸಂಗೀತ
೦೨. ವಾದ್ಯಗಳು
೦೩. ನೃತ್ಯ
೦೪. ಚಿತ್ರಕಲೆ
೦೫. ವಿಶೇಷಕ ಛೇದ್ಯ (ಮಹಿಳೆಯರ ಆಭರಣ)
೦೬. ತುಂಡು ಲಬಲಿ ಕುಸುವು ವಿಕಾರ
೦೭. ಪುಷ್ಪಾಸ್ತರಣ (ಹೂವುಗಳಿಂದ ಅಲಂಕರಿಸುವುದು)
೦೮. ದರ್ಶನವಸನಾಂಗರಾಗ (ಬಟ್ಟೆಗಳನ್ನು ಬಣ್ಣಗಳಿಂದ ಅಲಂಕರಿಸುವುದು)
೦೯. ಮಣಿಭೂಮಿಕಾಕರ್ಮ (ಮಣಿಗಳಿಂದ ಬೊಂಬೆಗಳನ್ನು ಅಲಂಕರಿಸುವುದು)
೧೦. ಶಯನ ರಚನೆ (ಋತುಮಾನಕ್ಕೆ ತಕ್ಕಂತೆ ಹಾಸಿಗೆಗಳನ್ನು ಸಿದ್ಧಪಡಿಸುವಿಕೆ)
೧೧. ಉದಕ ವಾದ್ಯ (ಜಲತರಂಗ)
೧೨. ಉದಕಾಘಾತ (ನೀರು ಚಿಮ್ಮಿಸುವಿಕೆ)
೧೩. ಚಿತ್ತಾಶ್ವಯೋಗ ಅಥವಾ ಚಿತ್ರಯೋಗ (ಔಷಧಿಗಳಿಂದ ಕಾಮವೃದ್ಧಿ)
೧೪. ಮೌಲ್ಯಗ್ರಥನ ವಿಕಲ್ಪ (ಹೂಮಾಲೆಯನ್ನು ಪೋಣಿಸುವುದು)
೧೫. ಶೇಖರಕಾಪೀಡ ಯೋಜನೆ (ಹೂವನ್ನು ದಾರದಿಂದ ಕಟ್ಟುವುದು)
೧೬. ನೇಪಥ್ಯ ಪ್ರಯೋಗ (ವೇಷಭೂಷಣ)
೧೭. ಕರ್ಣ ಪತ್ರಭಂಗ (ತಾಳೆಯೋಲೆ ಕತ್ತರಿಸುವಿಕೆ)
೧೮. ಗಂಧಯುಕ್ತಿ (ಪರಿಮಳ ದ್ರವ್ಯ ತಯಾರಿಕೆ)
೧೯. ಭೂಷಣ ಯೋಜನೆ (ಆಭರಣ ತೊಡುವಿಕೆ)
೨೦. ಇಂದ್ರಜಾಲ
೨೧. ಕೌಚುಮಾರ ಯೋಗ (ಔಷಧಿ, ಮಂತ್ರ, ತಂತ್ರಗಳಿಂದ ತಾರುಣ್ಯ ಪಡೆಯುವಿಕೆ)
೨೨. ಹಸ್ತಲಾಘವ (ಕೈಚಳಕ)
೨೩. ವಿಚಿತ್ರ ಶಾಕಯೂಷಭಕ್ಷ ವಿಕಾಸಕ್ರಿಯಾ (ಪಾಕಶಾಸ್ತ್ರ)
೨೪. ಪಾನಕ ರಸರಾಗನವ ಯೋಜನಾ (ಅಗ್ನಿಯ ನೆರವಿಲ್ಲದೆ ಮಾಡುವ ತಿನಿಸುಗಳು)
೨೫. ಸೂಜೀವಾನ ಕರ್ಮ (ಹೊಲೆಯುವಿಕೆ)
೨೬. ಸೂತ್ರಕ್ರಿಡಾ (ಸೂತ್ರದ ಗೊಂಬೆಯಾಟ)

[illegible]

೨೭. ವೀಣಾಡಮರುಕ ವಾದ್ಯಾನಿ
೨೮. ಪ್ರಹೇಲಿಕಾ (ಒಗಟುಗಳು ಹೇಳುವಿಕೆ)
೨೯. ಪ್ರತಿಮಾಲ (ಅಂತ್ಯಾಕ್ಷರಿ)
೩೦. ದುರ್ವಾಚಕ ಯೋಗ (ಕ್ಲಿಷ್ಟಪದ ಪ್ರಯೋಗ)
೩೧. ಪುಸ್ತಕ ವಾಚನ
೩೨. ನಾಟಕಾಖ್ಯಾಯಿಕಾ ದರ್ಶನ (ಹರಿಕಥೆ)
೩೩. ಕಾವ್ಯ ನಮಸ್ಯಾಪೂರ್ಣ
೩೪. ಪಟ್ಟಿಕಾವೇತ್ರ ಬಾಣ ವಿಕಲ್ಪ (ಬಿದಿರಿನಿಂದ ಹೆಣೆಯುವಿಕೆ)
೩೫. ತಕ್ಷಕರ್ಮ (ನೂಲು ತೆಗೆಯುವಿಕೆ)
೩೬. ವಾಸ್ತುವಿದ್ಯೆ
೩೭. ರೂಪ ರತ್ನ ಪರೀಕ್ಷೆ (ನಾಣ್ಯ ಪರೀಕ್ಷೆ)
೩೮. ಧಾತುವಾದ (ಭೂಗರ್ಭಶಾಸ್ತ್ರ)
೪೦. ಮಣಿರಾಗಕರ (ವಜ್ರಕ್ಕೆ ಸಂಬಂಧಿಸಿದ)
೪೧. ವೃಕ್ಷಾಯುರ್ವೇದ (ವೃಕ್ಷಗಳಿಗೆ ಸಂಬಂಧಿಸಿದ)
೪೨. ಮೇಷ ಕುಕ್ಕುಟ ಲಾವಿಕ ವಿಧಿ (ಟಗರು ಹಾಗೂ ಕೋಳಿ ಕಾಳಗ)
೪೩. ಶುಕ ಸಾರಿಕಾ ಪ್ರಲಾಪನ (ಗಿಳಿಗೆ ಮಾತು ಕಲಿಸುವಿಕೆ)
೪೪. ಉತ್ಸಾದನ ಸಂವಾಹನ ಕೇಶಮರ್ದನೇಚ ಕೌಶಲ್ಯಂ (ಕೇಶ ಹಾಗೂ ಮೈಗೆ ಎಣ್ಣೆ ಹಚ್ಚಿಕೊಳ್ಳುವಿಕೆ)
೪೫. ಅಕ್ಷರ ಮುಷ್ಟಿಕಾಕಥನ
೪೬. ಮ್ಲೇಚ್ಚಿತಕ ವಿಕಲ್ಪ (ಸಾಂಕೇತಿಕ ಭಾಷೆ)
೪೭. ದೇಶಭಾಷಾ ವಿಜ್ಞಾನ (ದೇಶೀಯ ಭಾಷೆಯಲ್ಲಿ ಪರಿಣಿತಿ)
೪೮. ಪುಷ್ಪಶಕಟಿಕಾ (ಹೂವಿನಿಂದ ಮಾಡಿದ ಆಟಿಕೆಯ ಗಾಡಿ)
೪೯. ನಿಮಿತ್ತಜ್ಞಾನ (ಶಕುನ ಅರ್ಥೈಸುವಿಕೆ)
೫೦. ಯಂತ್ರಮಾತೃಕಾ (ಯಂತ್ರ ರಚನಾಜ್ಞಾನ)
೫೧. ಧಾರಣ ಮಾತೃಕಾ (ಜ್ಞಾಪಕ ಶಕ್ತಿ ಅವಧಾನ)
೫೨. ಸಂಪಾಠ್ಯ (ಸಂವಾದ ಕಲೆ)
೫೩. ಮಾನಸೇ ಕಾವ್ಯಕ್ರಿಯಾ (ಆಶುಕವಿತೆಯ ರಚನೆ)
೫೪. ಅಭಿಧಾನ ಕೋಶ (ಶಬ್ದಗಳ ಉತ್ಪತ್ತಿ)
೫೫. ಛಂದೋ ವಿಜ್ಞಾನ (ಕಾವ್ಯರಚನೆ)
೫೬. ಕ್ರಿಯಾ ವಿಕಲ್ಪ (ಸೃಜನಶೀಲತೆ)
೫೭. ಛಲತಕ ಯೋಗ (ಗುಪ್ತ ವೇಷ ಧರಿಸುವಿಕೆ)
೫೮. ವಸ್ತ್ರಗೋಪನ (ವಸ್ತುಗಳನ್ನು ಕಾಪಾಡಿಕೊಳ್ಳುವುದು)
೫೯. ದ್ಯೂತ ವಿಶೇಷ (ಜೂಜು)
೬೦. ಆದರ್ಶಕ್ರಿಡಾ (ಪಗಡೆಯಾಟ)

೬೧. ಬಾಲಕ್ರಿಡಾನಕ (ಮಕ್ಕಳ ಆಟಕ್ಕೆ ಸಂಬಂಧಿಸಿದ)

೬೨. ವೈನಯಿಕ (ವಿನಯ ತೋರುವಿಕೆ)

೬೩. ವೈಜಯಿಕ (ವಿಜಯ ಸಾಧಿಸುವಿಕೆ)

೬೪. ವೈಯಾಮಿಕ (ಆರೋಗ್ಯ ಕಾಪಾಡಿಕೊಳ್ಳುವಿಕೆ)

ಇವಲ್ಲದೆ ವಾತ್ಸಯನ ಕಾಮಸೂತ್ರಕ್ಕೆ ಸಂಬಂಧಿಸಿದಂತೆ ೬೪ ಕಲೆಗಳನ್ನು ಬೇರೆಯಾಗಿಯೇ ಹೇಳಿದ್ದಾನೆ. ೬೪ ಕಲೆಗಳಿಗೆ ಸಂಬಂಧಿಸಿದಂತೆ ಸಂಸ್ಕೃತ ಪ್ರಾಕೃತ ಸಾಹಿತ್ಯಗಳಲ್ಲಿಯೂ ವಿವರಣೆ ಕಂಡುಬರುತ್ತದೆ. ಈ ಕಲೆಗಳೇ ವಿದ್ಯೆ. ಇದು ಅಭ್ಯಾಸದಿಂದ ಮತ್ತು ಕಲಿಕೆಯಿಂದ ಬರುತ್ತದೆ. ಈ ಕಲೆಗಳು ಮೈಗೂಡಬೇಕಾದರೆ ಅವುಗಳನ್ನು ಒಳಗೊಳ್ಳಲು ಪೂರಕವಾದಂತಹ ವಿದ್ಯೆ ಇರಬೇಕಾಗುತ್ತದೆ. ಈ ವಿದ್ಯೆಯ ಜೊತೆಗೆ ಕಲಾಕಾರನಿಗೆ 'ಕಲ್ಪನಾ ಸಾಮರ್ಥ್ಯ ಮತ್ತು ಪರಿಣಿತಿ' ಸಹಾಯಕವಾಗುತ್ತದೆ. "ಕಲೆಗಳು ೬೪ ಎಂದು ಸಾಮಾನ್ಯವಾಗಿ ಎಲ್ಲಾ ಹಿಂದೂ ಗ್ರಂಥಗಳಲ್ಲಿ ಹೇಳಲಾಗಿದ್ದರೂ, ಜೈನ ಹಾಗೂ ಭೌದ್ಧಗ್ರಂಥಗಳಲ್ಲಿ ಇವುಗಳ ಸಂಖ್ಯೆ ಇನ್ನೂ ಹೆಚ್ಚು. ಲಲಿತ ವಿಸ್ತಾರದಲ್ಲಿ ೮೬, ಸಮಯ ಸೂತ್ರದಲ್ಲಿ ೮೭ ಕಲೆಗಳನ್ನು ಪಟ್ಟಿಕೊಡಲಾಗಿದೆ."[೧೭] ಹಾಗೆ ಹಲವು ಕಲೆಗಳು ಮನುಷ್ಯನ ಬದುಕಲ್ಲಿ ಹಾಸುಹೊಕ್ಕಿವೆ. ಈ ಕಲೆಗಳೆಲ್ಲವೂ ಅವನು ಬದುಕುವಂಥ ಪರಿಸರದಿಂದ ಬಂದಿರುವಂತವೇ ಆಗಿವೆ. ಹಾಗಾಗಿ ಕಲೆಗಳನ್ನು ಹಲವು ರೀತಿಯಲ್ಲಿ ಗುರುತಿಸಿ ಅವುಗಳ ಸಂಖ್ಯೆಗಳನ್ನು ಈ ರೀತಿಯಲ್ಲಿ ಕೃತಿಗಳಲ್ಲಿ ಕೊಡಲಾಗಿದೆ. ಆದ್ದರಿಂದ "ಕಲೆ ಮನುಷ್ಯನ ಮನಸ್ಸನ್ನು ಮುದಗೊಳಿಸಿ ಅವನಲ್ಲಿ ವಿಶಿಷ್ಟವಾದ ಸಂಸ್ಕಾರವನ್ನು ಮೂಡಿಸುತ್ತದೆ. ಮನಸ್ಸನ್ನು ಎತ್ತರ ಎತ್ತರಕೊಯ್ದು ಸಂಸ್ಕಾರಗೊಂಡ, ಹದವಾದ ವ್ಯಕ್ತಿತ್ವವನ್ನು ರೂಪಿಸಲು ಸಹಾಯಕವಾಗುತ್ತದೆ."[೧೮] ಕಲೆ ಬರೀ ಕಲೆಯಾಗಿರದೆ ಅವು ಬದುಕಿನಲ್ಲಿ ಕಂಡುಬರುವ ಸಂಸ್ಕಾರಗಳಾಗಿರುತ್ತವೆ. ಮನುಷ್ಯನ ಶರೀರದ ಬೆಳವಣಿಗೆಗೆ ಆಹಾರ ಎಷ್ಟು ಅಗತ್ಯವೋ, ಮುಖ್ಯವೋ, ಮನಸ್ಸಿನ ಬೆಳವಣಿಗೆಗೆ ಸಂಸ್ಕಾರಕ್ಕೆ ಕಲೆ ಅಷ್ಟೇ ಅವಶ್ಯಕವೆಂದು ಜೀಶಂಪ ಅವರು ಅಭಿಪ್ರಾಯಿಸುತ್ತಾರೆ. "ಕಲೆಗೂ ಸಂಸ್ಕಾರಕ್ಕೂ ಸಂಬಂಧವೇ ಎಂದು ಕೇಳಿದರೆ ಒಂದು ಜೀವವಾದರೆ, ಇನ್ನೊಂದು ಭಾವ ಎನ್ನಬೇಕಾಗುತ್ತದೆ. ಅಷ್ಟು ನಿಕಟ ಮೇಳ ಅವುಗಳಲ್ಲಿ ಇರುತ್ತದೆ. ಬಹುಮಟ್ಟಿಗೆ ಕಲೆಗಳು ಹುಟ್ಟಿಕೊಳ್ಳುವುದಕ್ಕೆ ಮತಧರ್ಮಗಳೇ ಕಾರಣ. ತೀರಾ ಅನಾಧಿಯಲ್ಲಿ ಕಲೆ ಯಾವುದು? ಸಂಸ್ಕಾರ ಯಾವುದು? ಎಂದು ಬಿಡಿಸಲಾರದಷ್ಟು ಅನ್ಯೋನ್ಯತೆ ಅವುಗಳಲ್ಲಿದ್ದಂತೆ ತೋರುತ್ತದೆ. ನೃತ್ಯ, ಗೀತ, ಶಿಲ್ಪ, ವಾಸ್ತು, ಚಿತ್ರ, ಸಾಹಿತ್ಯ, ಇವೆಲ್ಲವೂ ಮೂಲದಲ್ಲಿ ಮತಧರ್ಮ ಪ್ರೇರಿತವಾದ ಅಂಗವಾಗಿಯೇ ಹುಟ್ಟಿದವು."[೧೯] ಅಂತೆಯೇ ಕಲೆಗಳು ಹುಟ್ಟಿಕೊಂಡವು ಎಂದು ಹೇಳಬಹುದು.

೨ ಕಲೆಯ ಉಗಮ ಮತ್ತು ವಿಕಾಸ

"ಬೆಳೆಗೆ ಬೀಜ ಬೇಕು, ಕ್ಷೇತ್ರ ಬೇಕು, ಸಾರ ಬೇಕು, ಮಳೆ ಮುಗಿಲುಗಳು ಅನುಕೂಲವಾದ ಉಷ್ಣಮಾನ ಉಂಟಾಗಬೇಕು, ಮಳೆ ಬೀಳಬೇಕು. ಮೊಳೆತು ಸಸಿಯಾಗಬೇಕು. 'ಕಲೆ'ಯ ಹುಟ್ಟು

[illegible]

[illegible]

[illegible]

ಹೀಗೇನೆ."[೨೦] ಮಾನವ ಪ್ರಕೃತಿ ಜೀವಿ. ಈ ಪ್ರಕೃತಿಯೊಂದಿಗೆ ಬದುಕುವಾಗ ಅವನಲ್ಲಿ ಉಂಟಾದ ಆನಂದ, ಭಯ, ಆಯಾಸ ಮುಂತಾದ ಕ್ರಿಯೆಗಳು ಕಲೆಯ ಉಗಮಕ್ಕೆ ಕಾರಣವಾದವು ಎಂದು ವಿದ್ವಾಂಸರು ಅಭಿಪ್ರಾಯಿಸುತ್ತಾರೆ.

ಕಲೆಯ ಉಗಮ ಮತ್ತು ವಿಕಾಸವನ್ನು ಸಮಾಜಶಾಸ್ತ್ರೀಯ ಹಿನ್ನೆಲೆಯಲ್ಲಿ ಗಮನಿಸಿದಾಗ ಅದು ಸಾಮಾಜಿಕ ಜೀವನದ ಹಿನ್ನೆಲೆಯಲ್ಲಿ ಬೆಳೆದು ಬಂದಿದೆ. ಅಂತೆಯೇ ಇದನ್ನು ಮನಃಶಾಸ್ತ್ರೀಯ ಹಿನ್ನೆಲೆಯಿಂದ ಗಮನಿಸಿದಾಗ ಮನಸ್ಸಿನ ಭಾವನೆಗಳ ಅಭಿವ್ಯಕ್ತಿಯ ಕ್ರಿಯೆಯೇ ಕಲೆಯಾಗಿ ಕಾಣುತ್ತದೆ. "ಮಾನವ ಸಂಸ್ಕೃತಿಯಲ್ಲಿ ಕಲೆಗೆ ಅಗ್ರಸ್ಥಾನ ಇದೆ. ಆದಿಕಾಲದಿಂದಲೂ ಕಲೆ ಮನುಷ್ಯನ ಕೈಹಿಡಿದುಕೊಂಡೇ ಬಂದಿದೆ. ಪ್ರತಿಭೆಯ ಮೂಸೆಯಲ್ಲಿ ಅರಳಿ ನಿಲ್ಲುವ ಇದು ಅವನ ದಿನನಿತ್ಯದ ವ್ಯವಹಾರಗಳಲ್ಲಿ ತೂರಿಬರುತ್ತದೆ. ತನ್ನ ಕೆಲಸಕಾರ್ಯಗಳನ್ನು ಹಗುರ ಮಾಡಿಕೊಳ್ಳುವಲ್ಲಿ, ಶ್ರಮವನ್ನು ಮರೆತು ಕೆಲಕಾಲ ಆನಂದದಲ್ಲಿ ಮೈಮರೆಯುವಲ್ಲಿ ಕಲೆ ಅವನಿಗೆ ಸಹಾಯಕ. ಅದು ಹಾಡಿನ ರೂಪದಲ್ಲಿರಬಹುದು, ಚಿತ್ರದ ರೂಪದಲ್ಲಿರಬಹುದು, ಶಿಲ್ಪದ ರೂಪದಲ್ಲಿರಬಹುದು"[೨೧] ಅಥವಾ ಮತ್ಯಾವುದೋ ಕಲೆಗೆ ಸಂಬಂಧಿಸಿದ ರೂಪದಲ್ಲಿರಬಹುದು. ಇದು ಮಾನವನ ಬದುಕಿನ ಜೊತೆ ಜೊತೆಯಲ್ಲಿಯೇ ಹೊಂದಿಕೊಂಡು ಬಂದಿರುವಂತಹದು ಆಗಿದೆ.

ಕಲೆಯ ಉಗಮವನ್ನು ಆದಿಮಾನವನ ಚಟುವಟಿಕೆಗಳಿಂದ ತಿಳಿದುಕೊಳ್ಳಬಹುದು. ಈ ಕಲೆಗಳು ಅವನಲ್ಲಿ ಹೇಗೆ ಧಾಖಲಾದವು ಎಂಬುದಕ್ಕೆ ಸಾಕ್ಷಿಯಾಗಿ ಅಂದಿನ ಚಿತ್ರಕಲೆಗಳು, ಅವರು ವಾಸಿಸುವ ರೀತಿ, ಉಪಯೋಗಿಸುತ್ತಿದ್ದ ಮಡಿಕೆ-ಕುಡಿಕೆಗಳು, ರೂಢಿಯಲ್ಲಿಟ್ಟುಕೊಂಡು ಬಂದಿದ್ದ ಶವಸಂಸ್ಕಾರ ಪದ್ಧತಿ ಅದರ ನಿಯಮಾವಳಿಗಳು ಹೀಗೆ ಮುಂತಾದವುಗಳ ಆಧಾರಗಳಿಂದ ಕಲೆಯ ಪ್ರಾಚೀನತೆಯನ್ನು ಗುರುತಿಸಲು ಸಾಧ್ಯವಾಗುತ್ತದೆ.

"ಸೃಷ್ಟಿಯಲ್ಲಿ ಮಾನವನ ಅವತಾರವಾದ ಮೊದಲ ದಿನದಿಂದಲೇ ಅವನು ತನ್ನ ಪರಿಸರದಲ್ಲಿನ ವಸ್ತುಗಳ ಆಕಾರಕ್ಕೆ, ಬಣ್ಣಕ್ಕೆ, ಕೇಳಿದ ನಾದಕ್ಕೆ, ಪ್ರತಿಸ್ಪಂದಿಸುತ್ತಲೇ ಬಂದಿದ್ದಾನೆ. ಈ ಗುಣಾಂಶಗಳ ಕೆಲವು ವ್ಯವಸ್ಥೆಗಳಿಂದ ಅವನಿಗೆ ಸಂತೋಷವಾಗಬಹುದು. ನಮ್ಮಲ್ಲಿ ಕಲೆಗಳ ಮೂಲವಿರುವುದೇ ಮಾನವನ ಈ ಪ್ರತಿಕ್ರಿಯೆಯಲ್ಲಿ, ಒಂದು ತರಹದ ವ್ಯವಸ್ಥೆಯಿಂದ ಸಂತೋಷವಾದಾಗ ಆ ಅನುಭವ ಸುಂದರವಾಗುತ್ತದೆ. ಆಗ ಅವನು ಸಂತೋಷಪಟ್ಟ ವಸ್ತುವಿಗೆ, ವ್ಯವಸ್ಥೆಯ ಸ್ವರೂಪದ ಗುಣವನ್ನು ಆರೋಪಿಸುತ್ತಾನೆ."[೨೨] ಸೌಂದರ್ಯದ ಕಲ್ಪನೆ ಯಾವಾಗ ಮಾನವನಲ್ಲಿ ಮೂಡಿತೋ ಅಂದಿನಿಂದ ಕಲೆ ಮೂಡಿಬಂತು. ಕಲೆಯ ಮೂಲದ ಕಲ್ಪನೆಯಲ್ಲಿ ಭಾವನೆಗಳ ಪ್ರತಿಕ್ರಿಯೆ ಸಾಕಷ್ಟು ಕೆಲಸ ಮಾಡುತ್ತದೆ. ಪುರಾತನ ಗ್ರೀಕ್ ಜನರು ಸೌಂದರ್ಯದ ಬಗ್ಗೆ, ಕಲೆಯ ಬಗ್ಗೆ ಈ ರೀತಿಯಲ್ಲಿ ಗ್ರಹಿಸಿದ್ದರು. "ಕಲೆ ಸುಂದರ; ಸುಂದರವಾದುದೆಲ್ಲಾ ಕಲೆ; ಮನುಷ್ಯನಲ್ಲಿ ಕಾಣುವ ಆದರ್ಶೀಕರಣ ಕಲೆಯ ಗುರಿ. ಆ ಕಾಲದ ಗ್ರೀಕ್ ಜನರಲ್ಲಿದ್ದ ಭಗವಂತನ ಪರಿಕಲ್ಪನೆಯಲ್ಲಿ ಕಲೆಯಲ್ಲಿ ಕಾಣುವ ಇಂಥದ್ದೇ ಆದರ್ಶೀಕರಣವನ್ನು

ಗುರುತಿಸಬಹುದು. ಆದರ್ಶದ ನೆಲೆಯನ್ನು ಮುಟ್ಟದ ಮಾನವನೇ ಅವರ ದೇವರು ಎಂದೇ ಆ ದೇವರಲ್ಲಿ ಮನುಷ್ಯನ ರೂಪ ಹಾಗೂ ಗುಣ. ಗ್ರೀಕ್ ಜನರಲ್ಲಿ ಸೌಂದರ್ಯದ ಕಲ್ಪನೆಗೂ ಅವರ ಸ್ವರ್ಗದ ಕಲ್ಪನೆಗೂ ಇರುವ ಸಂಬಂಧವನ್ನು ನಾವು ಅವರು ಕೊಡುವ Olympus ಚಿತ್ರದಲ್ಲಿ ಸ್ಪಷ್ಟವಾಗಿ ಕಾಣಬಹುದು."[೨೩] ಅಂತೆಯೇ "ಗ್ರೀಕ್ ಜನರು ಮನುಷ್ಯನ ರೂಪದ ಆದರ್ಶೀಕರಣವೇ ಕಲೆಯ ಗುರಿಯೆಂದು, ಆ ಜನರು ನಂಬಿದ್ದಾರೆಂದೂ ಅಪೋಲೋ ಬೆಲ್ವಿಡಿಯರ್ ನಂತಹ ಅಥವಾ ಮೆಲೋಸಿನ್ ಆ್ಯಪ್ರೊಡೈತಿಯಂತಹ ಶಿಲ್ಪ ಸಾಧ್ಯವಾಗಿರುವುದು."[೨೪] ಹಾಗಾಗಿ ಕಲೆಯ ಉಗಮ ಸೌಂದರ್ಯ ಮೂಲದಿಂದ ಉಗಮವಾಯಿತು ಎಂದರೆ ತಪ್ಪಾಗಲಾರದು. ಈ ಸೌಂದರ್ಯ ಮೂಲವು ಬದುಕಿನ ಅನುಕೂಲಕ್ಕೆ ತಕ್ಕಂತೆ ಮಾಡಿಕೊಳ್ಳಲಾಯಿತು.

ಕಲೆಯ ಉಗಮವನ್ನು ಪ್ರಕೃತಿ, ಸೌಂದರ್ಯ ಹಾಗೂ ಧರ್ಮದ ಹಿನ್ನೆಲೆಯಲ್ಲಿ ನೋಡಬಹುದು. "ಧರ್ಮದ ಚೌಕಟ್ಟನ್ನು ಹಾಕಿಕೊಂಡಾಗ ಧಾರ್ಮಿಕ ಆಚರಣೆಗಳು ಕಲೆಯ ರೂಪವನ್ನು ತಾಳುವುದನ್ನು ನೋಡುತ್ತೇವೆ. ಎಷ್ಟೋ ಸಲ ಹಿಂದಿನಿಂದ ಬಂದಿದೆ ಅದನ್ನು ಬಿಡಬಾರದೆಂದು ಆಚರಿಸುವ ಅನೇಕ ಆಚರಣೆಗಳು ನಮ್ಮ ಕಣ್ಣ ಮುಂದಿವೆ. ಈ ಧರ್ಮದ ಪ್ರಭಾವಕ್ಕೆ ಸಿಲುಕಿ ದೇವರ ಆರಾಧನೆಗೆ ತೊಡಗಿ, ದೇವರನ್ನು ಸ್ತುತಿಸಲು, ನಲಿಸಲು ದೇವರ ಕಣ್ಣಿಗೆ ಹಬ್ಬ ಮಾಡಲು ಸಾಹಿತ್ಯ, ನೃತ್ಯ, ಅಲಂಕಾರದಂತಹ ಕಲೆಗಳು ಹುಟ್ಟಿ ಬಂದವು."[೨೫] ಧಾರ್ಮಿಕ ಹಿನ್ನೆಲೆಯಲ್ಲಿ ಕಲೆಯನ್ನು ಗುರುತಿಸುವುದು ಒಂದು ವಿಧಾನ. ಇದನ್ನು ಮಾನವ ಕಲೆಗಳ ಬೆಳವಣಿಗೆಯ ಹಂತದಲ್ಲಿ ಗುರುತಿಸಬಹುದು.

ಭಾರತೀಯ ಕಲೆಯ ಉಗಮದ ಬಗ್ಗೆ ವಿದ್ವಾಂಸರು ಹಲವು ರೀತಿಯಲ್ಲಿ ಪ್ರತಿಕ್ರಿಯಿಸಿದ್ದಾರೆ. "ಗ್ರೀಕ್ ಜನರಲ್ಲಿದ್ದ ಸೌಂದರ್ಯಾರಾಧನೆಯ ಮನೋಭಾವ ಪ್ರಾಚೀನ ಭಾರತದ ಕಲಾಸೃಷ್ಟಿಗೆ ಕಾರಣವಾಗಲಿಲ್ಲ. ನಮ್ಮಲ್ಲಿ ಕಲೆ ಬಂದದ್ದು ಒಂದು ಅಮೂರ್ತ ಪರಿಕಲ್ಪನೆಗೆ ಅಭಿವ್ಯಕ್ತಿಯನ್ನು ಕೊಡುವ ಪ್ರಯತ್ನದ ಫಲವಾಗಿ"[೨೬] ಮಾನವನು ತನ್ನ ಬದುಕಲ್ಲಿ ನಂಬಿಕೆಗಳನ್ನು ರೂಢಿಸಿಕೊಂಡು ಬಂದ. ಅಂತೆಯೇ ಈ ನಂಬಿಕೆಗಳ ಮೇಲೆ ಕಲೆ ಸೃಷ್ಟಿಗೊಳ್ಳುತ್ತಾ ಬದಿಂತು. ಅವುಗಳು ಸೃಷ್ಟಿಗೊಂಡ ನಂತರದ ಕಾಲದಲ್ಲಿ ನಂಬಿಕೆ ಹಲವು ಬಗೆಯಲ್ಲಿ ಹುಟ್ಟಿಕೊಂಡವು. ನಂತರ ಅವು ಗಟ್ಟಿಗೊಂಡವು. ಇವು ಕಲೆಗಳಿಗೆ ಪೋಷಕವಾದವು. ಹೀಗೆ ಭಾರತೀಯ ಕಲೆಯನ್ನು ಪುರಾತನ ನಾಗರಿಕತೆಯ ಹಿನ್ನೆಲೆಯಿಂದ ಅರ್ಥಮಾಡಿಕೊಳ್ಳಬಹುದಾಗಿದೆ. "ಭಾರತದ ಸಿಂಧೂ ಕಣಿವೆಯ ನಾಗರಿಕೆತಯನ್ನು ಇತಿಹಾಸಜ್ಞರು ಕ್ರಿ.ಪೂ. ೨,೫೦೦ ರಿಂದ ೧,೫೦೦ರ ತನಕ ವ್ಯಾಪಿಸಿದ ನಾಗರಿಕತೆ ಎಂದು ದೃಢಪಡಿಸಿದ್ದಾರೆ. ಆ ಕಾಲಕ್ಕಿಂತಲೂ ಪೂರ್ವದಲ್ಲಿ ಭಾರತದ ಆದಿವಾಸಿಗಳು ಗಂಗಾನದಿಯ ಬಯಲಿನಲ್ಲಿಯೂ ದಕ್ಷಣ ದಕ್ಷಿಣ ಭಾರತದಲ್ಲೂ ಅಲ್ಲಲ್ಲಿ ಬಾಳಿ ಬದುಕಿದ್ದರು."[೨೭] ಹಾಗಾಗಿ ಅಲ್ಲಿಯ ಜನವಸತಿಗಳ ಉತ್ಖನನದಲ್ಲಿ ಪುರಾತನ ಸಂಸ್ಕೃತಿ ಕಂಡುಬರುತ್ತದೆ. ಜೊತೆಗೆ ಅದಕ್ಕಿಂತಲೂ ಹಿಂದೆ ಮನುಷ್ಯನಲ್ಲಿ ಕಲೆ ಇರುವುದಕ್ಕೆ ದೊರೆತ ಅವರ ಬದುಕಿನ ಚಿತ್ರಣಗಳು ಸಾಕ್ಷಿಯಾಗಿವೆ.


[illegible]

[illegible]


[illegible]

೩. ಕಲೆಯ ವರ್ಗೀಕರಣ


ಈಗಾಗಲೇ ೬೪ ಕಲೆಗಳ ಹೆಸರುಗಳನ್ನು ಈ ಅಧ್ಯಾಯದಲ್ಲಿ ಕೊಡಲಾಗಿದೆ. ಅವುಗಳನ್ನು ಹೊರತುಪಡಿಸಿ ಅಧ್ಯಯನ ದೃಷ್ಟಿಯಿಂದ ಕಲೆಯ ವರ್ಗೀಕರಣವನ್ನು ಈ ಕೆಳಕಂಡಂತೆ ನೋಡಲಾಗಿದೆ. ಅ.ಲ. ನರಸಿಂಹನ್ ಅವರು 'ಕರ್ನಾಟಕ ಬಿತ್ತಿ ಚಿತ್ರ ಪರಂಪರೆ' ಕೃತಿಯಲ್ಲಿ ಕಲೆಯನ್ನು ಈರೀತಿ ವಿಂಗಡಿಸಿದ್ದಾರೆ.



ಹೀಗೆ ವಿಂಗಡಿಸಿ ಇವುಗಳ ಆಂತರಿಕ ಸಂಬಂಧವನ್ನು ಹೇಳುತ್ತಾರೆ. ಇಲ್ಲಿಯ ಆದಿವಾಸಿಗಳ ಕಲೆಯನ್ನು ಬುಡಕಟ್ಟು ಸಮುದಾಯಗಳ ಕಲೆ ಎಂದು ಗುರುತಿಸಿದ್ದಾರೆ. ಕಾಡುಗಳಲ್ಲಿ ಬದುಕುತ್ತಾ, ನಗರ ಸಂಪರ್ಕದಿಂದ ದೂರ ಉಳಿದು ಸೋಂಕು ತಗುಲದೆ ತಮ್ಮದೇ ಆದಂಥ ಕಲೆಯನ್ನು ಬದುಕಿಗೆ ಅಳವಡಿಸಿಕೊಂಡು ಇರುವ ಬುಡಕಟ್ಟು ಸಮುದಾಯಗಳ ಕಲೆಗಳು ವಿಶೇಷವಾಗಿಯೇ ಇರುತ್ತವೆ. 'ಕಲೆ'ಯು ಜನಪದ ಕಲೆಯೊಂದಿಗೆ ಪ್ರಾರಂಭಮಾಡಿ ಎಲ್ಲಾ ಬಗೆಯ ಚಿತ್ರಕಲೆಯ ಅಂತರ್‌ಸಂಬಂಧವನ್ನು



ತ್ರಿಭುಜಾಕೃತಿಯ ನಕ್ಷೆಯಲ್ಲಿ ಗುರುತಿಸಿದ್ದಾರೆ. ಇದರಂತೆಯೇ ಎಸ್.ಸಿ. ಪಾಟೀಲರು 'ಕರ್ನಾಟಕ ಜನಪದ ಚಿತ್ರಕಲೆ ಎಂಬ ಕೃತಿಯಲ್ಲಿ ಕಲೆಯನ್ನು' ಈ ರೀತಿ ವಿಂಗಡಸಿದ್ದಾರೆ.



ಈ ಮೇಲಿನ ಎರಡು ಮಾದರಿಯನ್ನು ಇಟ್ಟುಕೊಂಡು ಅಧ್ಯಯನದ ಅನುಕೂಲಕ್ಕಾಗಿ ಇವುಗಳ

[illegible]

ಪರಸ್ಪರ ಸಂಬಂಧವನ್ನೂ ಹಾಗೆಯೇ ವೈಶಿಷ್ಟತೆಯ ಭಿನ್ನ ಅಂಶಗಳನ್ನು ಹೇಳಲು ಈ ರೇಖಾಚಿತ್ರಗಳನ್ನು ಕೊಡಲಾಗಿದೆ. ಇವುಗಳ ಆಧಾರದ ಮೇಲೆ ಕಲೆಯನ್ನು ಅದರ ವಿವಿಧ ಅಂಗಗಳನ್ನು ಈ ರೀತಿಯಲ್ಲಿ ವರ್ಗೀಕರಿಸಿಕೊಳ್ಳಲಾಗಿದೆ.

೧. ಕಲೆ
೨. ಚಿತ್ರಕಲೆ
೩. ಆದಿಮ ಚಿತ್ರಕಲೆ
೪. ಬುಡಕಟ್ಟು ಚಿತ್ರಕಲೆ
೫. ಜನಪದ ಚಿತ್ರಕಲೆ
೬. ಶಿಷ್ಟಪದ ಚಿತ್ರಕಲೆ
೭. ಆಧುನಿಕ ಚಿತ್ರಕಲೆ

ಇದುವರೆಗೆ ಕಲೆ, ಕಲೆಯ ಉಗಮ ಮತ್ತು ವಿಕಾಸ, ಕಲೆಯ ವರ್ಗೀಕರಣದ ಬಗ್ಗೆ ವಿವರಣೆಯನ್ನು ನೀಡಲಾಗಿದ್ದು. ಇನ್ನು ಮುಂದೆ ಮೇಲೆ ಸೂಚಿಸಿರುವ ಚಿತ್ರಕಲೆಯ ಬಗ್ಗೆ ವಿವರಿಸಲಾಗುವುದು. ಸಾಹಿತ್ಯ, ಮಾನವಿಕ, ಸಾಮಾಜಿಕ, ಸಾಂಸ್ಕೃತಿಕ ಇತರೆ ಅಧ್ಯಯನಗಳ ವರ್ಗೀಕರಣದಂತೆ ಚಿತ್ರಕಲೆಯನ್ನು ವರ್ಗೀಕರಣ ಮಾಡಿಕೊಳ್ಳುವುದು ಅಧ್ಯಯನದ ದೃಷ್ಟಿಯಿಂದ ಸೂಕ್ತ. ಹೀಗೆ ವರ್ಗೀಕರಿಸಿಕೊಂಡು ಅಧ್ಯಯನ ಮಾಡುವುದರಿಂದ ಅವುಗಳ ವಿಭಿನ್ನ ಸ್ವರೂಪ ಹಾಗೂ ನೆಲೆಗಳನ್ನು ಅರ್ಥ ಮಾಡಿಕೊಳ್ಳಬಹುದು. ಇದರಿಂದ ಒಂದು ಅಧ್ಯಯನಕ್ಕೆ ಚೌಕಟ್ಟು ಸಿಗುತ್ತದೆ.

ಈ ಅಧ್ಯಾಯದಲ್ಲಿ ಎಲ್ಲಾ ಬಗೆಯ ಚಿತ್ರಕಲೆಯನ್ನು ಚರ್ಚೆಗೆ ಒಳಪಡಿಸುತ್ತಾ ಬುಡಕಟ್ಟು ಚಿತ್ರಕಲೆಗೆ ಒತ್ತನ್ನು ನೀಡಲಾಗಿದೆ.

೪ ಚಿತ್ರಕಲೆ

೬೪ ಕಲೆಗಳಲ್ಲಿ ಚಿತ್ರಕಲೆ ಒಂದು. ಕಲೆಗೆ ಸಂಬಂಧಿಸಿದಂತೆ ಲಕ್ಷಣಕಾರರು ತಮ್ಮ ತಮ್ಮ ಅಭಿಪ್ರಾಯದಂತೆ ಕಲೆಯ ಸಂಖ್ಯೆಗಳನ್ನು ಹಲವು ರೀತಿಯಲ್ಲಿ ಹೇಳಿದ್ದಾರೆ. ಕಾಮಸೂತ್ರದ ಪಟ್ಟಿಯಲ್ಲಿ ಇರುವ ೬೪ ಕಲೆಗಳಲ್ಲಿ ಚಿತ್ರಕಲೆ ಒಂದಾಗಿದೆ.

ಈ ಚಿತ್ರಕಲೆ ಎಂದರೇನು? ಅದರ ಅರ್ಥ ಸ್ವರೂಪಗಳೇನು? ಎಂಬುದಕ್ಕೆ "ಚಿತ್ರ (ನಾ): ಬರೆದ ಆಕೃತಿ; ಆಶ್ಚರ್ಯ, ಚಮತ್ಕಾರ ಪ್ರಧಾನವಾದ, 'ಚಿತ್ರಿಸು':, ಚಿತ್ರವನ್ನು ಬರೆ, ಕಣ್ಣಿಗೆ ಕಟ್ಟುವಂತೆ ವರ್ಣಿಸು."[೩೧] ಎಂಬ ಅರ್ಥಗಳಿವೆ. ಚಿತ್ರದ ಪದ ಪ್ರಯೋಗ ಸಂಸ್ಕೃತ ಹಾಗೂ ಕನ್ನಡ ಕಾವ್ಯಗಳಲ್ಲಿ ಹಲವು ರೀತಿಯಲ್ಲಿ ಕಂಡುಬಂದಿದೆ. ಚಿತ್ರಕಲೆಯನ್ನು "ಕ್ರಮವಾಗಿ, ಪೂರ್ತಿಯಾಗಿ ಕಡೆದಿರುವ ಶಿಲ್ಪ. ಪಟ್ಟಿಗಳಲ್ಲಿ ಕೊರೆದ ಉಬ್ಬುಶಿಲ್ಪ ಹಾಗೂ ಚಿತ್ರಕಲೆ ಎಂದು ವ್ಯಾಖ್ಯಾನಿಸಲಾಗಿದೆ."[೩೨] ಚಿತ್ರಕಲೆಯನ್ನು (Painting) 'ಚಿತ್ರ' 'ಅಲೇಖ್ಯ' ಎಂಬ ಪದ ಸಂವಾದಿಯಾಗಿ ಬಳಸಲಾಗಿದೆ. "ಚಿತ್ರ ಮತ್ತು

[illegible]

ಚಿತ್ರಾರ್ಥಗಳನ್ನು ಮಣ್ಣು, ಗಾರೆ, ಮರ, ಕಲ್ಲು, ಇಟ್ಟಿಗೆ, ಲೋಹ ಇತ್ಯಾದಿಗಳಿಂದ ರೂಪಿಸಬಹುದೆಂದು, ಹೊಂದುವಂತಹ ಬಣ್ಣ ಹಾಕಿ ಇನ್ನು ಸುಂದರಗೊಳಿಸಬಹುದೆಂದು ಶ್ರೀ ಕುಮಾರನ ಚಿತ್ರ ಲಕ್ಷಣ ಹೇಳುತ್ತದೆ."[೩೩] ಚಿತ್ರಕ್ಕೆ ಒಂದು ವಸ್ತು ಬೇಕು. ಅದು ಮಣ್ಣು ಕಲ್ಲು, ಮರ, ಲೋಹ ಮುಂತಾದ ವಸ್ತುಗಳಾಗಿರಬಹುದು. ಇವುಗಳ ಜೊತೆಗೆ 'ಬಣ್ಣ' ಚಿತ್ರಗಳಲ್ಲಿ ಮುಖ್ಯವಾಗುತ್ತದೆ. ಚಿತ್ರಕಲೆಯಲ್ಲಿ 'ಸೂತ್ರ ಮತ್ತು ತಂತ್ರಗಳು' ಚಿತ್ರಕಲೆಯ ಅಧ್ಯಯನ ಶಿಸ್ತು ಬೆಳದಂದಿನಿಂದ ಬಳಕೆಯಲ್ಲಿವೆ. ಅವು ೧. ಯಥಾರೂಪಣ, ೨. ನೆರಳು ಬೆಳಕಿನ ಸಂಯೋಜನೆ, ೩. ವರ್ಣ ವಿನ್ಯಾಸ. ಈ ಮೂರು ಅಂಶಗಳು ಚಿತ್ರಕಲೆಯಲ್ಲಿ ಪ್ರಧಾನವಾಗಿ ಕಾರ್ಯನಿರ್ವಹಿಸುತ್ತವೆ. ಇವುಗಳನ್ನು ಇಂದು ಹಲವು ವಿಧಾನಗಳಲ್ಲಿ ಕಲಾವಿದರು ಬಳಸಿಕೊಳ್ಳುತ್ತಿದ್ದಾರೆ.

ಚಿತ್ರಕಲೆಯನ್ನು ನಾಲ್ಕು ಹಂತಗಳಲ್ಲಿ ಗುರುತಿಸಬಹುದು. ಈ ಹಂತಗಳ ಪ್ರಕ್ರಿಯೆಯಲ್ಲಿ 'ಚಿತ್ರಕಲೆ' ಸೃಷ್ಟಿಗೊಳ್ಳುತ್ತದೆ. "೧. ರೇಕಾವಾತ (ಆಕೃತಿಯ ಹೊಸ ಮೈಯನ್ನು ಕೆಂಪು ಅಥವಾ ಕಪ್ಪುಬಣ್ಣದ ದಪ್ಪಗೆರೆಯಿಂದ ನಿರ್ದೇಶಿಸಿಕೊಳ್ಳುವುದು) ೨. ವರ್ತನ (ಮುಖ್ಯವಾದ ವಿವರಗಳನ್ನು ಎದ್ದು ಕಾಣುವಂತೆ ಅಳವಡಿಸಿಕೊಳ್ಳುವುದು), ೩. ಅಲಂಕಾರ (ಚಿತ್ರಗಳಿಗೆ ಸೊಗಸು ಹೆಚ್ಚಿಸುವಂತೆ ವಿನ್ಯಾಸಗಳನ್ನು ಸೇರಿಸುವುದು) ವರ್ಣ (ಬಣ್ಣಗಳನ್ನು ತುಂಬಿಸುವುದು)"[೩೪] ಇವುಗಳನ್ನು ಒಂದು ಕ್ರಮಬದ್ಧತೆಯಲ್ಲಿ ಕಲಾಕಾರ (ಚಿತ್ರಕಲಾವಿದ) ತನ್ನ ಅನುಭವಗಳನ್ನು, ಭಾವನೆಗಳನ್ನು ಚಿತ್ರಗಳ ಮೂಲಕ ಅಭಿವ್ಯಕ್ತಿಸುತ್ತಾನೆ. ಇದು ಚಿತ್ರ ಕಲಾವಿದನ ಸೃಜನಶೀಲ ಪ್ರತಿಭೆಗೆ ಸಂಬಂಧಪಟ್ಟಿರುವಂತಹದು. ಇವನು ಚಿತ್ರಗಳಿಗೆ ತನ್ನ ಪ್ರತಿಭೆ ಮತ್ತು ಸಾಮರ್ಥ್ಯವನ್ನು ವ್ಯಕ್ತಪಡಿಸುತ್ತಾನೆ. ಚಿತ್ರಕಲಾವಿದನ ಅಭಿವ್ಯಕ್ತಿಯನ್ನು ಗಮನಿಸುವಾಗ ಆದಿಮ ಚಿತ್ರಕಲೆಯವರೆಗೆ ಕಂಡುಬಂದ ಹಲವಾರು ಭಿನ್ನತೆಗಳನ್ನು ನೋಡುತ್ತೇವೆ. ಇದು ಕಾಲದಿಂದ ಕಾಲಕ್ಕೆ ಆದ ಬದಲಾವಣೆಯ ಪ್ರಕ್ರಿಯೆಗೆ ಸಂಬಂಧಪಟ್ಟಿರುತ್ತದೆ. ತನ್ನ ಅಂತರಂಗದಲ್ಲಿ ಸಂಸ್ಕೃತಿಯ ವಿಶೇಷಣವನ್ನು ಗರ್ಭೀಕರಿಸಿಕೊಂಡಿರುತ್ತದೆ.

ಚಿತ್ರಕಲೆ ಪ್ರಾಚೀನ ಕಾವ್ಯ ಪುರಾಣಗಳಲ್ಲಿ ಬೇರೆಯ ಅರ್ಥವನ್ನು ಪಡೆದುಕೊಂಡು ಬಳಕೆಯಾಗುತ್ತಾ ಬಂದಿದೆ. "ಚಿತ್ರಕಲೆಯನ್ನು ಕಲ್ಯಾಣಚಾಲುಕ್ಯರ ಮೂರನೇ ಸೋಮೇಶ್ವರನ 'ಅಭಿಲಷಿತಾರ್ಥ ಚಿಂತಾಮಣಿ' ಮತ್ತು ವಾತ್ಸಾಯನ ಕಾಮಸೂತ್ರದಲ್ಲಿ 'ಆಲೇಖ್ಯಕಲೆ' ಎಂದೂ ಶಿವರತ್ನಾಕರ 'ಚಿತ್ರರೋಹಕ್ರಿಯೆ' ಎಂದೂ ಹೆಸರಿಸಿವೆ. ಕಾಮಸೂತ್ರದ ವ್ಯಾಖ್ಯಾನಕಾರ ಯಶೋಧರನು ಚಿತ್ರವಿಧಿ ಎಂದು ಕರೆದರೆ, ಕ್ರಿ.ಶ. ೧೧೧೬ರ ಶಾಸನವೊಂದರಲ್ಲಿ 'ಚಿತ್ರಕರ್ಮ'ವೆಂಬ ಉಲ್ಲೇಖವಿದೆ. ರಾಷ್ಟ್ರಕೂಟರ ಖೊಟ್ಟಿಗೆ ತ್ರೈಲೋಕ ಮಲ್ಲನನ್ನಿ ನೊಳಬಂ ಪಲ್ಲವ ಪೆರ್ಮಾನಡಿಯನ್ನು 'ಚಿತ್ರವೆಂಡಂಗ'ನೆಂದು ಶಾಸನಗಳು ವರ್ಣಿಸುತ್ತವೆ. ದಕ್ಷಿಣದ ಬೆಳ್ಗೊಳದಲ್ಲಿ, ಉತ್ತರ ಕೊಪ್ಪಳದಲ್ಲಿ ಬಹುಚಿತ್ರಬಿತ್ತಿಯಂ ನೋಡಿದರಂ' ಮನಗೊಳಿಸುವ ಬಸದಿಗಳನ್ನು ಕಟ್ಟಿಸಿದಂತೆ ಶಾಸನಗಳು ಹೇಳುತ್ತವೆ."[೩೫] ಈ ರೀತಿಯಲ್ಲಿ ಚಿತ್ರಕಲೆಯ ಬಗೆಗಿನ ಪ್ರಸ್ತಾಪವನ್ನು ಉದ್ಧರಣೆಯ ಮೂಲಕ ಎಸ್.ಸಿ. ಪಾಟೀಲ್‌ರು ವಿವರಿಸುತ್ತಾರೆ.

[illegible]

[illegible]

[illegible]

(i) ಭಾರತೀಯ ಚಿತ್ರಕಲೆಯ ಪರಂಪರೆ : ಭಾರತೀಯ ಚಿತ್ರಕಲೆಯ ಪರಂಪರೆ ಬಹುದೊಡ್ಡದು. ಜಗತ್ತಿನ ಆದಿಮ ಸಮಾಜಗಳು ಬದುಕಿ ಬಾಳಿದ, ಜಗತ್ತಿನ ಈ ಭಾಗದಲ್ಲಿ, ಇತಿಹಾಸಪೂರ್ವ ಮಾನವನ ವಾಸಸ್ಥಾನಗಳ ಅಧ್ಯಯನವೂ ನಡೆದಿದೆ. ಹೀಗಾಗಿ ಭಾರತೀಯ ಚಿತ್ರಕಲೆಯ ಅಧ್ಯಯನವೆಂದರೆ, ಅದು ಜಗತ್ತಿನ ಚಿತ್ರಕಲೆಯ ಪರಂಪರೆಯ ಅಧ್ಯಯನವೇ ಆಗಿದೆ. ಇಂದಿಗೂ ಭಾರತದ ಪ್ರಾಚೀನ ಸ್ಥಳಗಳಲ್ಲಿ ಆದಿಮಾನವನ ಚಿತ್ರಕಲೆ ಕಾಣಸಿಗುತ್ತದೆ. ಆದಿಮಾನವನಲ್ಲಿ ಗವಿ, ಗುಹೆ, ಬಂಡೆಗಳ ಮೇಲೆ ಚಿತ್ರಗಳು ಕಾಣಸಿಗುತ್ತವೆ. ಅಂದಿನಿಂದ ಇಂದಿನವರೆಗೆ ಚಿತ್ರಗಳು ಸಂಪ್ರದಾಯ, ಆಚರಣೆಯ ಹಿನ್ನೆಲೆಯಲ್ಲಿ ತಮ್ಮ ಸಂಸ್ಕೃತಿಯ ಅನನ್ಯತೆಯನ್ನು ಪ್ರತಿಬಿಂಬಿಸುವ ಚಿತ್ರಗಳು ಕಾಣಸಿಗುತ್ತವೆ.

ವೇದಗಳ ಕಾಲದಲ್ಲಿ ಚಿತ್ರಕಲೆ ಇತ್ತು ಎಂಬುದಕ್ಕೆ ಹಲವು ಅಂಶಗಳು ಕಾಣಸಿಗುತ್ತವೆ. "ಋಗ್ವೇದದಲ್ಲಿ ಅಗ್ನಿದೇವರನ್ನು ಸ್ತುತಿಮಾಡುವ ಶ್ಲೋಕಗಳಿವೆ. ದೇವರ ಚಿತ್ರವನ್ನು ಚರ್ಮದ ಹಾಳೆಯ ಮೇಲೆ ಚಿತ್ರಿಸುತ್ತಾನೆ ಎಂಬ ವಾಕ್ಯವಿದೆ. ಚರ್ಮದ ಹಾಳೆಯ ಮೇಲೆ ಚಿತ್ರಿಸಿದ ಅನೇಕ ರೂಪಗಳನ್ನು ಪರ್ಶಿಯಾ ಮತ್ತು ಮೊಗಲರ ಶೈಲಿಯ ಚಿತ್ರಗಳಲ್ಲಿ ಈಗಲೂ ಕಾಣಬಹುದು."[೩೬] ಈ ಋಗ್ವೇದ ಕಾಲದಲ್ಲಿ ಬಣ್ಣದ ಇಟ್ಟಿಗೆಗಳನ್ನು ಬಳಸುತ್ತಿದ್ದರು. ಆಗಲೇ ಜನರು ಅಲಂಕಾರ ಪ್ರಿಯರಾಗಿದ್ದರು. ವೇದದ ಕಾಲದಲ್ಲಿ ಚಿತ್ರಕಾರರು ಹಲವಾರು ಚಿತ್ರಗಳನ್ನು ಬಳಸುತ್ತಿದ್ದದಕ್ಕೆ ಮಾಹಿತಿ ಪ್ರಾಚೀನ ಗ್ರಂಥಗಳಲ್ಲಿ ಕಂಡುಬರುತ್ತದೆ. "ಸೂರ್ಯೋದಯ ಚಿತ್ರ ಬೆಂಕಿ ತಗುಲಿ ಉರಿಯುತ್ತಿರುವ ಪರ್ವತ ಚಿತ್ರಗಳು ಜೈನ ಕಲ್ಪಸೂತ್ರವೆಂಬ ಕರಡು ಪ್ರಾಚೀನ ಸಾಹಿತ್ಯದಲ್ಲಿ ತೋರುತ್ತದೆ. ಅವು ವೇದಕಾಲದ ಪರಂಪರೆಗೆ ಸೇರಿದವು. ವೇದಕಾಲದ ಚಿತ್ರ ಪರಂಪರೆಯನ್ನು ಸಮರ್ಥಿಸುತ್ತವೆ ಎಂಬುದಾಗಿ ಡಾ. ಆನಂದಕುಮಾರಸ್ವಾಮಿಯವರು ಹೇಳಿದ್ದಾರೆ."[೩೭]

ಕಾವ್ಯಪುರಾಣಗಳಲ್ಲಿಯೂ ಸಹ ಚಿತ್ರಕಲೆಯ ವಿವರಣೆಗಳು ಕಾಣೆಸುತ್ತವೆ. ಇವುಗಳಲ್ಲಿ ಕಾಣಸಿಗುವಂತೆ ಉಷೆ ರಾಜಕುಮಾರಿಯ ಆಪ್ತ ಸಖಿಯಾಗಿದ್ದಳು ಚಿತ್ರಲೇಖ. "ಅವಳು ಹೆಸರಿಗೆ ತಕ್ಕಂತೆ ಉತ್ತಮ ಚಿತ್ರಗಾರಳೇ ಆಗಿದ್ದಳು. ನಮಗೆ ತಿಳಿದುಬಂದ ಪ್ರಾಚೀನ ಚಿತ್ರಗಾರರಲ್ಲಿ ಪ್ರಥಮ ಹೆಸರು ಈ ಮಹಿಳೆಯದಾಗಿದೆ."[೩೮] ಇವಳು ಭೂಸಂಚಾರ ಮಾಡಿ ದೇಶದಾದ್ಯಂತ ಇರುವ ಅನೇಕಾನೇಕ ರಾಜಕುಮಾರರ ಚಿತ್ರಗಳನ್ನು ಬರೆಸಿ ರಾಜಕುಮಾರಿ ಉಷೆಗೆ ತೋರಿಸಿದಳು. ಅವಳು ರಚಿಸಿದ ಚಿತ್ರಗಳಲ್ಲಿ ಕೃಷ್ಣನ ಮೊಮ್ಮಗನಾದ ಅನಿರುದ್ಧನ ಚಿತ್ರವನ್ನು ಉಷೆ ರಾಜಕುಮಾರಿಗೆ ತೋರಿಸಿದಳು. ಕನಸಿನಲ್ಲಿ ಕಂಡ ಅನಿರುದ್ಧನನ್ನು ಉಷೆ ನಂತರ ಕಾಲದಲ್ಲಿ ಮದುವೆಯಾದಳು ಎಂದು ಪ್ರಾಚೀನ ಪುರಾಣಗಳಲ್ಲಿ ಉಲ್ಲೇಖಗಳು ಸಿಗುತ್ತವೆ. ಈ ಚಿತ್ರಗುಚ್ಚಗಳೇ ಆ ಕಾಲದಲ್ಲಿ ಪ್ರಮುಖ ಕಲೆ. ಪುರಾಣಗಳ ಪ್ರಕಾರ ರಾಜಕುಮಾರ ರಾಜಕುಮಾರಿಯರ ಚಿತ್ರಗಳನ್ನು ಹಲವು ರಾಜ್ಯಗಳಿಗೆ ಕಳುಹಿಸಿಕೊಡುವ ಪದ್ಧತಿ ಇತ್ತು. ಇದನ್ನು ರಾಜವ್ಯವಸ್ಥೆ ಇದ್ದ ಭಾರತದ ಹಲವು ರಾಜಮನೆತನಗಳ ನಡುವೆ ಮದುವೆಯ ಸಂಬಂಧದ ವಿಷಯವಾಗಿ ರಾಜಕುಮಾರಿ, ರಾಜಕುಮಾರರ ಚಿತ್ರಗಳು ಕಳುಹಿಸಿಕೊಡುವ, ತರಿಸಿಕೊಳ್ಳುವ ಪದ್ಧತಿಯನ್ನು ನೋಡಬಹುದಾಗಿದೆ.

[illegible]

ರಾಮಾಯಣ, ಮಹಾಭಾರತ ಪುರಾಣಗ್ರಂಥಗಳಲ್ಲೂ ಸಹ ಹಲವು ಚಿತ್ರಗಳ ಪ್ರಸ್ತಾಪಗಳಿವೆ. "ಭವಭೂತಿಯ ಉತ್ತರ ರಾಮಚರಿತದಲ್ಲಿ ಲಕ್ಷ್ಮಣನು ರಾಮನನ್ನು ಭಿತ್ತಿ ಚಿತ್ರಗಳನ್ನು ನೋಡೋಣ ಬಾ ಎಂದು ಆಹ್ವಾನಿಸುತ್ತಾನೆ."[೩೯] ಮಹಾಭಾರತದಲ್ಲಿ ಕೂಡ ಚಿತ್ರದ ವಿವರಣೆಯನ್ನು ನೋಡಬಹುದು. ಶಾಕುಂತಲ ನಾಟಕದಲ್ಲಿಯೂ ಕೆಲವು ಚಿತ್ರಗಳು ಸಂದರ್ಭೋಚಿತವಾಗಿ ಇರುವುದನ್ನು ನೋಡುತ್ತೇವೆ. ಅಂತೆಯೇ ಇದೇ ಕಾಳಿದಾಸನ 'ಮಾಳವಿಕಾಗ್ನಿ ಮಿತ್ರ' ನಾಟಕದಲ್ಲಿ ನಾಯಕನು ನಾಯಕಿಯನ್ನು ಪ್ರಥಮ ಬಾರಿಗೆ ಕಂಡದ್ದು ಚಿತ್ರದಲ್ಲಿಯೇ ಆಗಿದೆ. ವಿಕ್ರಮೋರ್ವಶೀಯ ನಾಟಕದಲ್ಲಿ ಪೂರೂರವನ ಮನಸ್ಸು ಊರ್ವಶಿಯ ದರ್ಶನಕ್ಕಾಗಿ ಕಾತುರಗೊಂಡಿತ್ತು. ಆಗ ವಿರೂಪಾಕ್ಷನು ಆಕೆಯ ಚಿತ್ರವನ್ನು ಬರೆದು ಅದನ್ನು ತೋರಿಸಿ ಸಮಾಧಾನ ಪಡುವ ವಿಷಯವನ್ನು ಸೂಚಿಸುತ್ತಾನೆ. ಅದಕ್ಕೆ ರಾಜನು "ಚಿತ್ರ ಬರೆಯಲು ಕುಳಿತರೆ ಕಣ್ಣೀರು ಒಂದೇ ಸಮನೆ ಹರಿದು ಬರುತ್ತದೆ. ಆದ್ದರಿಂದ ಏನೂ ಕಾಣುವುದಿಲ್ಲ. ನಾನು ಚಿತ್ರವನ್ನು ಹೇಗೆ ಮಾಡಲಿ ಎಂದು ಹೇಳುತ್ತಾನೆ."[೪೦] ಹೀಗೆ ಕಾಳಿದಾಸ, ಶ್ರೀಹರ್ಷ, ಭವಭೂತಿ, ಭಾಸ ಮೊದಲಾದವರು ರಚಿಸಿದ ನಾಟಕಗಳಲ್ಲಿ ಚಿತ್ರಕಲೆಯ ಬಗೆಗಿನ ಉಲ್ಲೇಖಗಳಿವೆ.

"ಭಾರತೀಯ ಚಿತ್ರಕಲೆ ಪರಂಪರೆಯಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಈ ಆದರ್ಶವೇ ಬೆಳೆದು ಬಂದಿದೆ. ಆದರೆ ಚಿತ್ರಕಲೆಯ ವಾಸ್ತವತೆಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದೆಯಲ್ಲದೆ ವಾಸ್ತವತೆಯನ್ನು ಅವಲಂಬಿಸಿ ಅದರ ಸಾದೃಶ್ಯದ ಆಧಾರದ ಮೇಲೆ ಅಸದೃಶ್ಯವಾದ ಅನುಭವವನ್ನು ಕಲಾವಿದ, ರೇಖೆಗಳಿಂದ ವರ್ಣಗಳಿಂದ ಕಟ್ಟಿತೋರಿಸುತ್ತಾನೆ. ವರ್ಣಗಳು ಅಲ್ಲಿ ಧ್ವನಿಪೂರ್ಣವಾದ ಕಾವ್ಯದಂತೆ ವಿನ್ಯಾಸಗೊಳ್ಳುತ್ತವೆ."[೪೧] ಪ್ರಾರಂಭದ ಚಿತ್ರಕಲೆಯಾದ ಅಜಂತಾ ಗುಹೆಗಳಲ್ಲಿ ಭಿತ್ತಿ ಚಿತ್ರಗಳು ಕಾಣಸಿಗುತ್ತವೆ. ಈ ಚಿತ್ರಕಲೆಗಳಲ್ಲಿ ಕಾಣಸಿಗುವ ಪ್ರಧಾನ ವಸ್ತು ಬುದ್ಧನ ಚರಿತ್ರೆ, ಅವನ ಪೂರ್ವಜನ್ಮವನ್ನು ಚಿತ್ರಿಸುವ ಜಾತಕ ಕಥೆಗಳು ಚಿತ್ರಗಳು ಕಂಡುಬರುತ್ತವೆ. ಅದರಂತೆಯೇ ಬಾದಾಮಿ, ಎಲ್ಲೋರಗಳ ಗುಹೆಗಳಲ್ಲಿ ಹಿಂದೂ ಧರ್ಮ ಮತ್ತು ಜೈನ ಧರ್ಮಕ್ಕೆ ಸಂಬಂಧಪಟ್ಟಂತ ಚಿತ್ರಗಳು ಕಾಣಿಸುತ್ತೆವೆ. ಈ ಬೌದ್ಧ ಮತ್ತು ಜೈನ ಧರ್ಮಗಳು ಭಾರತದ ಪ್ರಾಚೀನ ಧರ್ಮಗಳಾಗಿದ್ದು ಆ ಕಾಲದ ಗುರುತಾಗಿ ಧರ್ಮ ನೆಲೆಯ ಚಿತ್ರಗಳು ಕಾಣಿಸುತ್ತವೆ. ಇದಕ್ಕೂ ಪೂರ್ವದ ಚಿತ್ರಕಲೆಯ ಪರಂಪರೆಯನ್ನು ಇತಿಹಾಸ ತಜ್ಞರು ಆದಿಮಾನವನ ಚಿತ್ರಕಲೆಯಿಂದ ಗುರುತಿಸಿದ್ದಾರೆ. ಈ ಆದಿಮ ಕಲೆಯ ಬಗ್ಗೆ ಪ್ರೊ. ಅ. ಸುಂದರ ಅವರು ಪ್ರಾಗೈತಿಹಾಸಿಕ ಸಂಸ್ಕೃತಿಯೊಂದಿಗೆ ಕಲೆ, ಚಿತ್ರಕಲೆಯ ನೆಲೆಗಳನ್ನು ಗುರುತಿಸಿದ್ದಾರೆ. ಇವುಗಳಿಗೆ ಸಂಬಂಧಿಸಿದ 'ಕರ್ನಾಟಕ ಪ್ರಾಗಿತಿಹಾಸ ಕಾಲದ ಗತಿ' ಹಾಗೂ 'ಕರ್ನಾಟಕ ಚರಿತ್ರೆ ಸಂಪುಟ-೧' ಕೃತಿಗಳಲ್ಲಿ ಸಮಗ್ರವಾಗಿ ಕೊಡಲಾಗಿದೆ. ಈ ನೆಲೆಗಳು ಮಧ್ಯಪ್ರದೇಶ, ಕೇರಳಾ, ಆಂಧ್ರಪ್ರದೇಶ, ಕರ್ನಾಟಕ, ತಮಿಳುನಾಡು, ರಾಜಸ್ಥಾನ, ಗುಜರಾತ್, ಉತ್ತರ ಪ್ರದೇಶಗಳಲ್ಲಿ ಪ್ರಾಗಿತಿಹಾಸಿಕ ಚಿತ್ರಗಳು ಕಾಣಸಿಗುತ್ತವೆ."[೪೨]

[illegible]

[illegible]

(ii) ಕರ್ನಾಟಕ ಚಿತ್ರಕಲಾ ಪರಂಪರೆ : ಭಾರತೀಯ ಚಿತ್ರಕಲೆ ಪರಂಪರೆಯಂತೆ ಕರ್ನಾಟಕವೂ ತನ್ನದೇ ಆದಂಥ ಚಿತ್ರಕಲೆಯ ಪರಂಪರೆಯನ್ನು ಹೊಂದಿದೆ. ಇಲ್ಲಿಯೂ ಕೂಡಾ ಆದಿಮಾನವನ ಬಂಡೆಯ ಮೇಲಿನ ಚಿತ್ರಗಳು ಮತ್ತು ಗವಿಯ ಚಿತ್ರಗಳು ಕಾಣಿಸುತ್ತವೆ. ಪ್ರಪಂಚದ ಹಲವು ಪ್ರಾಚೀನ ಸಂಸ್ಕೃತಿಗಳಲ್ಲಿ ಕಾಣಸಿಗುವ ಚಿತ್ರಕಲೆಗಳಂತೆ ಕರ್ನಾಟಕದಲ್ಲಿಯೂ ಪ್ರಾಚೀನ ಚಿತ್ರಗಳು ಇವೆ. ಕೆಲವು ಚಿತ್ರಗಳನ್ನು ನೋಡುವುದಾದರೆ ಸೂಕ್ಷ್ಮಶಿಲಾಯುಗ, ಶಿಲಾಯುಗ, ತಾಮ್ರಯುಗ, ಬೃಹತ್ ಶಿಲಾಸಂಸ್ಕೃತಿಯುಗ, ಬೃಹತ್ ಶಿಲಾಸಂಸ್ಕೃತಿಯ ಆದಿಕಾಲ. ಬೃಹತ್ ಶಿಲಾಯುಗ, ಸಂಸ್ಕೃತಿ ಕಾಲ, ಆದಿ ಇತಿಹಾಸ ಕಾಲ ಮುಂತಾದಂತೆ, ಈ ಕಾಲದ ಚಿತ್ರಗಳ ಜೊತೆಗೆ ಬಾದಾಮಿ ಚಾಲುಕ್ಯರ ಆನಂತರ ಕಾಲದ ಚಿತ್ರಗಳು ಸೇರಿ ಆದಿಯಿಂದ ಇಂದಿನವರೆಗೆ, ಆಯಾ ಚಿತ್ರಗಳು ಸಮಕಾಲೀನ ಅಂಶವನ್ನು ಒಳಗೊಂಡಿರುತ್ತವೆ. ಈ ಎಲ್ಲಾ ಯುಗಗಳ ಚಿತ್ರಗಳು ಛಾಯಾಚಿತ್ರಗಳ ಸಮೇತವಾಗಿ ಅ. ಸುಂದರ ಅವರು ಕರ್ನಾಟಕ ಪ್ರಾಗೈತಿಹಾಸ ಕಾಲದ ಚಿತ್ರಕಲೆ ಮತ್ತು ಕರ್ನಾಟಕ ಚರಿತ್ರೆ ಸಂಪುಟ ೧ ರಲ್ಲಿ ಸಮಗ್ರವಾದ ಮಾಹಿತಿಯನ್ನು ಒದಗಿಸಿದ್ದಾರೆ.

ಕರ್ನಾಟಕ ಚಿತ್ರಕಲೆಯ ಹಿನ್ನೋಟವನ್ನು ನೋಡುವಾಗ ಆದಿಯ ಚಿತ್ರಗಳು, ಕಟುಕನಕೇರಿ ವಿವಿಧ ಶೈಲಿಯ ಮನುಷ್ಯನ ಚಿತ್ರಗಳು, ಹಿರಬೆನಕಲ್ ವೆಂಕಟಾಪುರದ ಸಾಲುಕುಣಿಕ ಚಿತ್ರಗಳು, ಮಲ್ಲಾಪುರದ ಚಿತ್ರ, ಹಂಪಿಯ 'ಬರಮದೇವರ' ಗುಂಡಿನ ಮೇಲಿರುವ ಚಿತ್ರ, ಹಂಪಿಯ ಆನೆಗುಂದಿಯ ಚಿತ್ರಗಳು ಕರ್ನಾಟಕದ ಪ್ರಾಚೀನ ಚಿತ್ರಗಳಾಗಿವೆ.

ನಂತರದ ಕಾಲಮಾನದಲ್ಲಿ ಕರ್ನಾಟಕದಲ್ಲಿ ಚಿತ್ರಕಲೆ ಹಲವು ಬಗೆಯಲ್ಲಿ ರೂಪಾಂತರಗೊಂಡಿದೆ. ಅವುಗಳನ್ನು ಆಯಾ ಆಳರಸರ ಆಡಳಿತದಲ್ಲಿ ಗಮನಿಸಬಹುದು. ಕಲಾವಿದರು ರಾಜಾಶ್ರಯದಲ್ಲಿ ಹಾಗೂ ಸ್ವತಂತ್ರವಾಗಿ ಚಿತ್ರ ರಚಿಸಿರುವುದು ಗಮನಾರ್ಹವಾಗಿದೆ. ಈ ಚಿತ್ರಕಲೆ ಕರ್ನಾಟಕದಲ್ಲಿ ಒಂದು ರೂಪವನ್ನು ಪಡೆದುಕೊಂಡಿದ್ದು ರವಿವರ್ಮನ ನಂತರದ ಕಾಲಮಾನದಲ್ಲಿ ಜೊತೆಗೆ ಸಂಪ್ರದಾಯಿಕ ಮತ್ತು ಆಚರಣಾ ಸಂಬಂಧಿ ಚಿತ್ರಗಳು ಸಂಸ್ಕೃತಿಯ ಭಾಗವಾಗಿ ಆಯಾ ಸಮುದಾಯಗಳ ಜೊತೆಯಲ್ಲಿ ಬೆಳೆದುಬಂದವು. ಇವು ಜನಪದರ ಬದುಕಲ್ಲಿ ಬೇರೂರಿದಂಥ ಚಿತ್ರಕಲೆಯಾಗಿತ್ತು. ಇದು ಕಾಲದಿಂದ ಕಾಲಕ್ಕೆ ತಮ್ಮದೇ ಆದಂಥ ಅಸ್ತಿತ್ವವನ್ನು ಪಡೆಯುತ್ತಾ ಬಂದಿರುವುದು ಗಮನಾರ್ಹವಾಗಿದೆ.

ಆಧುನಿಕತೆಯ ಪ್ರಭಾವಾದಂತೆಲ್ಲ ಚಿತ್ರಕಲೆಯ ಕ್ಷೇತ್ರವೂ ಸಾಕಷ್ಟು ಬದಲಾವಣೆಯನ್ನು ಹೊಂದಿತು. ಹೊರರಾಜ್ಯ ಮತ್ತು ವಿದೇಶಿ ಚಿತ್ರಕಲೆಗಳ ಪ್ರಭಾವ ಕರ್ನಾಟಕದ ಚಿತ್ರಕಲೆಯ ಮೇಲೂ ಆಯಿತು. ಪರಿಣಾಮವಾಗಿ ಕರ್ನಾಟಕದಲ್ಲಿ ಆಧುನಿಕ ಚಿತ್ರಕಲೆ ಪ್ರಚಲಿತತೆಯನ್ನು ಹೊಂದಿತು. ಈ ಆಧುನಿಕ ಚಿತ್ರಕಲೆಯ ಬಗ್ಗೆ ಮುಂದಿನ ಭಾಗದಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗುವುದು.


೫ ಆದಿಮ ಚಿತ್ರಕಲೆ

ಆದಿಮ ಚಿತ್ರಕಲೆ ಚಿತ್ರಕಲೆ ಆರಂಭಿಕ ಹಂತದ್ದು. ಆದಿಮಾನವನು ಸಂಪೂರ್ಣವಾಗಿ ಪ್ರಕೃತಿಯೊಂದಿಗೆ ಬದುಕುತ್ತಿದ್ದ. ಜೊತೆಗೆ ನೀರು ಸಿಗುವ ಪ್ರದೇಶ, ಗುಹೆ, ಗುಡ್ಡಗಾಡು ಅವನ ತಂಗುದಾಣ ಆಗಿತ್ತು. "ಚಿತ್ರಕಲೆಯು ನಾಗರಿಕರಿಗೆ ಮಾತ್ರವಲ್ಲ ಕಾಡು ಜನರಿಗೂ ಪ್ರಿಯವಾಗಿತ್ತು. ಶಿಲಾಯುಗದ ಮಾನವ ಕಾಲದಿಂದಲೂ ಕಲೆಗೆ ಸ್ಥಾನವಿತ್ತು. ಆಗ ಬರಹಗಳು ಇರಲಿಲ್ಲ. ಕಲೆಯನ್ನು ಪ್ರಾರಂಭದ ಭಾಷೆ ಎನ್ನಬಹುದು. ಸ್ಪೇನ್ ದೇಶದ ಅಲ್ಟಾಮಯಿರಾ ಮತ್ತು ದಕ್ಷಿಣ ಫ್ರಾನ್ಸ್‌ಗಳಲ್ಲಿ ಐವತ್ತು ಸಾವಿರದಿಂದ ಇಪ್ಪತ್ತೈದು ಸಾವಿರ ವರ್ಷಗಳ ಹಿಂದಿನ ಚಿತ್ರಗಳು ಸಾಮಾನ್ಯವಾಗಿ ನಲವತ್ತು ಗುಹೆಗಳಲ್ಲಿ ಕಂಡುಬಂದಿದೆ. ಅವರು ಗುಹೆಗಳೊಳಗೆ ಮಾತ್ರವಲ್ಲ, ಇತರ ಕಡೆಗಳಲ್ಲೂ ಕಲಾರಚನೆ ಮಾಡಿದ್ದರು. ಅವೆಲ್ಲವೂ ಹಾಳಾಗಿವೆ. ಗುಹೆಗಳ ಅಂತರಾಳದ್ದು ಮಾತ್ರ ಅಲ್ಲಲ್ಲಿ ಉಳಿದುದು ತೋರುತ್ತವೆ."[೪೩] ಈ ಆದಿಮಾನವ ಬಿಸಿಲು ಮಳೆಯಿಂದ ತಪ್ಪಿಸಿಕೊಳ್ಳಲು ಗುಹೆಗಳನ್ನು ಆಶ್ರಯಿಸುತ್ತಿದ್ದ. ಅದು ಅವನಿಗೆ ಅನಿವಾರ್ಯವಾಗಿತ್ತು. ಆಹಾರಕ್ಕೆ ಗೆಡ್ಡೆ ಗೆಣಸುಗಳನ್ನು ಸಂಗ್ರಹಿಸುತ್ತಿದ್ದು, ಬೇಟೆಯಾಡುವುದು ಪ್ರಮುಖ ವೃತ್ತಿಯಾಗಿತ್ತು. ಇವುಗಳನ್ನು ಪೂರೈಕೆ ಮಾಡಿಕೊಳ್ಳುತ್ತಲೇ ಕಾಲವನ್ನು ಕಳೆದ. ಕಾಲ ಕಳೆದಂತೆಲ್ಲಾ ಆಸೆ, ಸಂತೋಷ, ದುಃಖಗಳ ಅರಿವು ಅವನಿಗೆ ಆಯಿತು. ತನ್ನ ಬದುಕಿನ ಪ್ರಕ್ರಿಯೆಯಲ್ಲಿ ಬೌದ್ಧಿಕ ವಿಕಾಸವಾದಂತೆ ಅನುಕೂಲಗಳನ್ನು ಮಾಡಿಕೊಂಡ. ತನ್ನ ಮನಸ್ಸಿನಲ್ಲಿ ಮೂಡಿದ್ದನ್ನು ಗೀಚಿದನು. ಅದು ಅವನಿಗೆ ಯಾವುದೋ ಒಂದು ರೀತಿಯ ಭಾವನೆಯನ್ನು ತಂದಿತು. ಅದೇ ಅವನಿಗೆ ಚಿತ್ರ ರಚನೆಗೆ ಕಾರಣವಾಯಿತು. ತನಗೆ ಸಮೀಪವಿದ್ದ ಪ್ರಾಣಿಗಳ ಚಿತ್ರ ಬೇಟೆಯ ಚಿತ್ರ ತಾನು ಉಪಯೋಗಿಸುತಿದ್ದ ಆಯುಧಗಳನ್ನು ಬರೆಯತೊಡಗಿದ. ಅದು ಸೌಂದರ್ಯವಾಗಿ ಕಾಣತೊಡಗಿತು.

ಆದಿಮಾನವನಿಗೆ ಹೀಗೆ ತನ್ನ ಜ್ಞಾನ ವಿಕಾಸಗೊಂಡಂತೆ ಬೇಟೆಯಾಡುವ ಸಂದರ್ಭದಲ್ಲಿ ಪ್ರಾಣಿಗಳ ರಕ್ತ ಅವನನ್ನು ಮೊದಲು ಆಕರ್ಷಿಸಿತು. ಪ್ರಕೃತಿಯ ವಿವಿಧ ಬಣ್ಣಗಳು ಅವನಲ್ಲಿ ಮೂಡತೊಡಗಿದವು. ಹೀಗೆ ಅವನಲ್ಲಿ ವರ್ಣದ ಪ್ರಜ್ಞೆ ಬೆಳೆಯತೊಡಗಿತು. ಮಣ್ಣು, ಕಲ್ಲುಗಳನ್ನು ಬಣ್ಣಗಳನ್ನಾಗಿ ಬಳಸತೊಡಗಿದ. ಆದಿಮಾನವನ ಚಿತ್ರಗಳಲ್ಲಿ ಅವನ ಜೀವನ ವಿಧಾನವನ್ನು ಮಾನವಶಾಸ್ತ್ರಜ್ಞರು ಗುರುತಿಸುತ್ತಾರೆ. ಈ ಜೀವನದಲ್ಲಿ ಚಿತ್ರಗಳ ಬಣ್ಣಗಳ ಬಗ್ಗೆ ಸಂಶೋಧಕರು ಸಂಶೋಧನೆ ನಡೆಸಿದ್ದಾರೆ. ಅವನ ಪ್ರಾರಂಭಿಕ ಬಣ್ಣಗಳನ್ನು ಗುರುತಿಸಿ ಆಗಿದೆ. "ಅವು ಹೆಚ್ಚಾಗಿ ಕೆಂಪು, ಹಳದಿ, ಕಂದು ಮತ್ತು ಕಪ್ಪುಬಣ್ಣಗಳಿಂದ ಮಾಡಿದ ಅಪರಿಷ್ಕೃತ ಚಿತ್ರಗಳು ಬಣ್ಣಗಳನ್ನು ನಯವಾದ ಕಲ್ಲುಗಳ ಮೇಲೆ ಅರೆದು ತಯಾರಿಸಿಕೊಂಡದುದು ಕಂಡುಬರುತ್ತದೆ. ಬಣ್ಣಗಳೆಂದರೆ ಅಲ್ಲೇ ದೊರೆಯುತ್ತಿದ್ದ ಕಲ್ಲು ಮಣ್ಣುಗಳು ಮತ್ತು ಒಣಗಿದ ಹಣ್ಣುಗಳು, ಕಾಲಕಳೆದಂತೆ ಬಣ್ಣಗಳನ್ನು ಪ್ರಾಣಿಗಳ ಕೊಬ್ಬಿನೊಡನೆ ಮಿಶ್ರಣಮಾಡಿ ಟೊಳ್ಳಾದ ಎಲುಬುಗಳಲ್ಲಿ ಸಂಗ್ರಹಿಸಿ ಇಟ್ಟುಕೊಳ್ಳತೊಡಗಿದ."[೪೪]

[illegible]

ಕರ್ನಾಟಕ ಆದಿಮ ಚಿತ್ರಕಲೆ-1.





ಕರ್ನಾಟಕ ಬುಡಕಟ್ಟು ಚಿತ್ರಕಲೆಯನ್ನು ಹೋಲುವ ಆದಿಮ ಚಿತ್ರಗಳು-2.



1. ಬೆಳೆ ಭಾವಿ : ಸೂರ್ಯ (ಬೃಹತ್ ಶಿಲಾಯುಗ)

2. ಭಿಲ್ಲಮ ರಾಯನ ಗುಡ್ಡ : ಗೂಳಿ.

3. ಗೋವಾ : ಚಕ್ರ ಹುರ (ಅನಿಶ್ಚಿತ ಕಲಾಮಾನ)

4. ಗುಡ್ಡಾಪುರ ನಾಲ್ಕು ಗುಂಟೆನ ಏಕ ರೇಖಾ ಚಿತ್ರ

5. ತಕ್ಕಲ ಕೋಟೆ.

6. ಹಿರೇ ಬೆನಕಲ್ : ಗವಿಚಿತ್ರ.



ಹೀಗೆ ಚಿತ್ರ, ಬಣ್ಣದ ಕಲ್ಪನೆಯನ್ನು ಹೊಂದಿದ ಆದಿಮಾನವ ತಾನು ಹಾಕಿದ ಗೀರುಗಳ ಮೇಲೆ ಬಣ್ಣಗಳನ್ನು ತುಂಬಲು ಪ್ರಯತ್ನಿಸಿದ. ಅವು ಅಂದವಾಗಿ ಕಾಣತೊಡಗಿದವು. "ಈ ಯುಗದ ಮಾನವರು ಚಿತ್ರಿಸಿದ ಕೆತ್ತನೆ ಮಾಡಿದ ಇಲ್ಲವೆ ಕೊರೆತದ ಚಿತ್ರಗಳಲ್ಲಿ ವೈವಿಧ್ಯತೆಯ ವರ್ಣ ರೇಖಾವಿನ್ಯಾಸ ಇಲ್ಲವೆ ತುಂಬ ಚಿತ್ರ (Filled in masses)ಗಳ ಬೆಳವಣಿಗೆಯನ್ನು ಕಾಣಬಹುದು."[೪೫] ಇದು ಆದಿಮಾನವನ ಬೆಳವಣಿಗೆಯಲ್ಲಿ ಕಾಣಬಹುದಾಗಿದೆ. ಇವನ ಈ ಕಾಲವನ್ನು ಸೂಕ್ಷ್ಮ ಶಿಲಾಯುಗ, ನೂತನ ಶಿಲಾಯುಗ ಮತ್ತು ಕಬ್ಬಿಣಯುಗ, ಪ್ರಾಚೀನ ಕಬ್ಬಿಣ ಯುಗಗಳಲ್ಲಿ ಕಂಡುಬರುವ ಚಿತ್ರಗಳನ್ನು ಗುರುತಿಸಲಾಗಿದೆ. ಈ ಯುಗಗಳಲ್ಲಿ ಕಾಣುವ ಗವಿಯ ವರ್ಣ ಚಿತ್ರಗಳನ್ನು ಪ್ರಾಗೈತಿಹಾಸ ಚಿತ್ರಗಳು ಅಥವಾ ಇತಿಹಾಸಪೂರ್ವ ಚಿತ್ರಗಳೆಂದು ಗುರುತಿಸಲಾಗಿದೆ. ಈ ಕಾಲಕ್ಕೆ ಸಂಬಂಧಿಸಿದಂತೆಯೇ ಚಿತ್ರಗಳು ಬಯಲು ಬಂಡೆಗಳ ಮೇಲೆ ಇರುವ ಚಿತ್ರಗಳನ್ನು ಇತಿಹಾಸ ತಜ್ಞರು ಗುರುತಿಸಿ ಅವುಗಳ ಹಿನ್ನೆಲೆಯನ್ನು ಹೇಳಿದ್ದಾರೆ.

ಆದಿಮಾನವನ ಬದುಕು ಮತ್ತು ಜೀವನದ ಬಗ್ಗೆ ಶೋಧನೆ ನಡೆಸುತ್ತಿದ್ದ ಸಂದರ್ಭದಲ್ಲಿ ಹಲವಾರು ಮಾಹಿತಿಗಳು ದೊರೆತಿವೆ. ಈ ಸಂಶೋಧನೆಯಲ್ಲಿ "ಎಷ್ಟೋ ಕಡೆ ನಿಯಂಡರ್‌ಥಾಲ್ ಮನುಷ್ಯನ ಬಳಗ ದೀರ್ಘಕಾಲ ವಾಸಿಸುತ್ತಿದ್ದ ವಸತಿಗಳು, ಅವರ ನೂರಾರು ಅಸ್ತಿಪಂಜರಗಳು ಹಾಗೂ ಸತ್ತವರನ್ನು ಹೂತಿಟ್ಟ ಸ್ಥಳಗಳು ದೊರೆತಿವೆ. ಎಂದೋ ಉರಿಸಿದ್ದ ಬೆಂಕಿಯ ಬೂದಿ ಇದ್ದಿಲುಗಳ ರಾಶಿ ಸಿಕ್ಕಿವೆ. ಅಷ್ಟು ಮಾತ್ರವಲ್ಲದೆ ಕೆಲವು ಗವಿಗಳಲ್ಲಿ ಅವರು ಬರೆದ ನೂರಾರು ಚಿತ್ರಗಳು, ಅವರು ಕಲ್ಲಿನಲ್ಲೂ ಕೊಂಬಿನಲ್ಲೂ ಕೆತ್ತಿ ಮಾಡಿದ ಗೊಂಬೆಗಳು ಸಿಕ್ಕಿವೆ. ಅವರು ಬೇಟೆಗೆ ಬಳಸುತ್ತಿದ್ದ ಹಲವಾರು ಆಯುಧಗಳು ದೊರೆತಿವೆ. ಫ್ರಾನ್ಸಿನಲ್ಲಿ ಬದುಕಿದ್ದ ಪುರಾತನ ಮಾನವರು ಜಿಂಕೆಯ ಕೊಂಬನ್ನು ಕೆತ್ತಿ ನಿರ್ಮಿಸಿರುವ ಕಲಾಕೃತಿಯನ್ನು ನೋಡಬಹುದು. ('ನಾಗರಿಕತೆಯ ಹೊಸ್ತಿಲಲ್ಲಿ' ಎಂಬ ಕೃತಿಯಲ್ಲಿ ಶಿವರಾಮ ಕಾರಂತರು ವಿವರಣೆಯನ್ನು ನೀಡಿದ್ದಾರೆ.) ಈ ಆದಿಮಾನವ ಚಿತ್ರಗಳಲ್ಲಿ ಕಾಡುಕೋಣ ಪ್ರಾಣಿಗಳ ಚಿತ್ರಗಳು ಇವೆ. ಇವರಿಗೆ ಗೂಳಿ ಹಾಗೂ ಕಾಡುಕೋಣ, ಬಹುಮಟ್ಟಿಗೆ ಜಿಂಕೆ ಸಹ ಇವರ ಚಿತ್ರಕ್ಕೆ ಬಹುಪ್ರಿಯವಾದ ವಸ್ತು. ಪ್ರಾಣಿಗಳೊಂದಿಗೆ ಬದುಕುತ್ತಿದ್ದ ಆದಿಮಾನವನಿಗೆ ಅವುಗಳಿಂದ ಭಯ ಒಂದೆಡೆ ಆದರೆ ಅವುಗಳೇ ಅವನಿಗೆ ಆಹಾರವಾಗಿದ್ದು ಹೆಚ್ಚು ಹತ್ತಿರವಾಗಿದ್ದವು. ಹಾಗಾಗಿ ಅವನ ಮನಸ್ಸಿನಲ್ಲಿ ಯಾವಾಗಲೂ ಪ್ರಾಣಿಗಳ ಚಿತ್ರ ಇದ್ದು, ಅವುಗಳನ್ನು ಚಿತ್ರಗಳ ಮೂಲಕ ಹೊರಹೊಮ್ಮಿರುವುದನ್ನು ನೋಡುತ್ತೇವೆ. "ಸ್ಪೇನಿನ ಉತ್ತರ ಭಾಗದಲ್ಲಿ, ಫ್ರಾನ್ಸಿನ ನೈರುತ್ಯದಲ್ಲಿರುವ ಡೋರ್ಡೋನ್ ನದಿ ಕಣಿವೆಯಲ್ಲೂ ಇರುವ ನೂರಾರು ಗುಹೆಗಳಲ್ಲಿ ಹಿಮಯುಗ ಮುಗಿಯುವ ತನಕ ಹಲವಾರು ಆದಿಮಾನವ ಬಳಗಗಳು ವಾಸಿಸಿಕೊಂಡಿದ್ದವು. ಈ ಅವಧಿಯನ್ನು ಶಿಲಾಯುಗ ಎಂದು ಕರೆದಿದ್ದಾರೆ. ಇಂಥ ಜನರು ಬರೆದಿರುವ ಅಸಂಖ್ಯೆ ಭಿತ್ತಿ ಚಿತ್ರಗಳು, ತಮ್ಮ ವಾಸದ ಗುಹೆಗಳಲ್ಲಿರುವುದರ ಬದಲು ಬೆಟ್ಟಗಳಲ್ಲಿ ಇಂಗಿ ಹರಿಯುವ ನೀರು ಕೊರೆದುಂಟಾದ ನೈಸರ್ಗಿಕ ಸುರಂಗದಂತಹ ಗುಹೆಗಳಲ್ಲಿ,

ಬೆಳಕೇ ಹರಿಯದ ತಾವುಗಳಲ್ಲಿ ಕಾಣಸಿಕ್ಕಿವೆ. ಆ ಜನರು ಕೊಬ್ಬಿನ ಹಣತೆ ದೀಪಗಳ ಬೆಳಕಿನಲ್ಲಿ ಉದ್ದೇಶಪಟ್ಟು ಗುಹೆಗಳ ಗೋಡೆಗಳ ಮೇಲೆ ಮುಚ್ಚಿಗೆಗಳ ಮೇಲೆ ಎಲ್ಲಂದರಲ್ಲಿ ತಾವು ಬೇಟೆಯಾಡುವ ಕುದುರೆ, ಹಿಮಸಾರಾಂಗ ಕಾಟೆ (bison) ಸಂತತಿ ನಷ್ಟವಾದ ನೀಳಗೊಂಬಿನ ಎರಳೆ (Ory) ಮೊದಲಾದ ಪಶುಗಳ ಅಸಂಖ್ಯೆ ಚಿತ್ರಗಳನ್ನು ಬರೆದಿದ್ದಾರೆ. ಅಷ್ಟೇ ಅಲ್ಲ ಕ್ರೂರ ಪ್ರಾಣಿಗಳಾದ ಸಿಂಹ, ಕರಡಿ ಮುಂತಾದ ಪ್ರಾಣಿ ಚಿತ್ರಗಳನ್ನು ಸಹ ಬರೆದಿದ್ದಾರೆ. ಕೆಲವು ಕಡೆ ಹಕ್ಕಿ, ಮೀನುಗಳ ಚಿತ್ರಗಳನ್ನು ಬರೆದಿದ್ದಾರೆ."[೪೬] ಆದಿಮಾನವನಿಗೆ ಬದುಕಿನ ಒಡನಾಟದೊಂದಿಗೆ ಬಹಳ ಪ್ರೀತಿ ಇತ್ತು. ಇಲ್ಲಿ ಬದುಕಿನ ಒಡನಾಟ ಮತ್ತು ಅನುಕೂಲ ಮುಖ್ಯವಾಗುತ್ತದೆ. ಇವನು ಅನುಕೂಲವನ್ನು ಪ್ರಕೃತಿಯಿಂದ ಪಡೆಯುತ್ತಾ ಹೋದಂತೆಲ್ಲಾ ಹೆಚ್ಚೆಚ್ಚು ಅವಕಾಶಗಳನ್ನು ಸೃಷ್ಟಿಸಿಕೊಂಡ. ಅನುಕೂಲಕರವಾದ ಬದುಕನ್ನು ನಡೆಸತೊಡಗಿದ ನಂತರ ಬೇಟೆಯ ಸಂಸ್ಕೃತಿಯಿಂದ ಕೃಷಿಯ ಸಂಸ್ಕೃತಿಯ ಕಡೆಗೆ ವಾಲಿದ. ಜೊತೆಗೆ ಬೇಟೆಯ ಸಂಸ್ಕೃತಿಯನ್ನು ಇಟ್ಟುಕೊಂಡು ಕೃಷಿಯಲ್ಲಿ ಆವಿಷ್ಕಾರಗಳನ್ನು ಮಾಡತೊಡಗಿದ. ಪಶುಪಾಲನೆಯನ್ನು ಜೊತೆಗೂಡಿಸಿಕೊಂಡ. ಸಾಧುಪ್ರಾಣಿಗಳು ಇವನಿಗೆ ಹತ್ತಿರವಾದವು. ಅವುಗಳನ್ನು ಪಳಗಿಸಿ ಜೊತೆಯಲ್ಲಿ ಇಟ್ಟುಕೊಂಡ. ವ್ಯವಸ್ಥಿತ ಬದುಕು ಪ್ರಾರಂಭವಾಗುತ್ತಿದ್ದಂತೆ ಭಯ, ದುಃಖ, ನಂಬಿಕೆ, ದೇವರು, ಆಚಾರವಿಚಾರ ಕಟ್ಟುಪಾಡುಗಳಿಗೆ ಬದ್ಧನಾಗಿ ಬದುಕತೊಡಗಿದ. ದೈವಗಳ ಬಗ್ಗೆ ನಂಬಿಕೆ ಮೂಡಿದಂತೆ ನಂಬಿದ ದೈವಗಳ ಮೇಲೆ ಧಾರ್ಮಿಕ ಭಾವನೆ ಅವನಲ್ಲಿ ಬಿತ್ತನೆಯಾದವು. ಅವುಗಳಿಗೆ ತಕ್ಕಂತೆ ಪೋಷಣೆಯನ್ನು ಮಾಡುತ್ತಾ ಜೀವನವನ್ನು ಸಾಗಿಸುತ್ತಾ ಬಂದ.

ಧಾರ್ಮಿಕ ಬದ್ಧತೆಯನ್ನು ಇಂದಿಗೂ ಕೂಡ ಆದಿವಾಸಿ ಸಂಸ್ಕೃತಿಯನ್ನು ಹೊಂದಿರುವ ಬುಡಕಟ್ಟು ಜನಾಂಗಗಳಲ್ಲಿ ನೋಡಬಹುದು. "ಆದಿವಾಸಿಗಳ ಧಾರ್ಮಿಕ ಭಾವನೆಯಲ್ಲಿ 'ಕುಲದೈವ'(Totem)ದ ಪಾತ್ರ ಬಹುಮುಖ್ಯವಾಗಿದೆ. ಇದಕ್ಕೆ ಕಾರಣ ಆ ಜನಗಳಲ್ಲಿ ಕಂಡುಬರುವ ನಂಬಿಕೆಯ ಒಂದು ವಿಶಿಷ್ಟ ಮನೋಭಾವ."[೪೭] ಆದಿವಾಸಿ ಸಮುದಾಯಗಳಲ್ಲಿ ಕುಲದೇವತಾಪದ್ಧತಿ ಹಾಗೆಯೇ 'ಕುಲ' (Clan)ಗಳ ನಡವಳಿಕೆಗೆ ಸಂಬಂಧಪಟ್ಟಂತೆ ನಡೆದುಬಂದಿದೆ. ಇವುಗಳನ್ನು ಆಯಾಸಂಪ್ರದಾಯ ಆಚರಣೆಗಳ ಹಿನ್ನೆಲೆಯಲ್ಲಿ ಇಂದಿಗೂ ನಾವು ಕಾಣಬಹುದಾಗಿದೆ.

ಭಾರತಕ್ಕೆ ಸಂಬಂಧಪಟ್ಟಂತೆ ಆದಿಮಾನವನ ಚಿತ್ರಕಲೆ "ಮಧ್ಯಪ್ರದೇಶದ ರಾಯಘುಡದಲ್ಲಿ ವಿಂದ್ಯಾಪರ್ವತ ಮತ್ತು ಕೈಮಾರ ಶ್ರೇಣೀಯ ಗುಹೆಗಳಲ್ಲೂ ಕಂಡುಬರುತ್ತದೆ. ಭಾರತದಲ್ಲಿ ಮಧ್ಯಪ್ರದೇಶ ರಾಯಘುಡ ಸಂಸ್ಥಾನದ ಮಾಂದ್ ನದಿಯ ಪೂರ್ವಕ್ಕಿರುವ ಸಿಂಗನಪುರವೆಂಬ ಗ್ರಾಮದ ಬಳಿಯ ಬೆಟ್ಟಗಳಲ್ಲಿ ಕೆಲವು ಗುಹೆಗಳಿವೆ. ಅಲ್ಲಿ ಕೆಂಪು ಮತ್ತು ತೆಳು ಹಳದಿ ಬಣ್ಣದ ಚಿತ್ರಗಳಿವೆ. (ಕಾಲ ಕ್ರಿ.ಪೂ. ಹತ್ತು ಸಾವಿರ ವರುಷದೆಂದು ಹೇಳುತ್ತಾರೆ.) ಅವು ಹೆಚ್ಚಿನವುಗಳು ಬೇಟೆಯ ದೃಶ್ಯಗಳು. ಜಿಂಕೆ, ಆನೆ, ಮೊಲ ಮುಂತಾದ ಪ್ರಾಣಿಗಳ ಚಿತ್ರಗಳು ವೈಶಿಷ್ಟಪೂರ್ಣವಾಗಿವೆ."[೪೮] ವಿದ್ವಾಂಸರು ಭಾರತೀಯ

ಚಿತ್ರಕಲೆಯ ಪ್ರಾಚೀನತೆಯನ್ನು ಹೇಳುತ್ತಾ "ಉತ್ತರ ಪ್ರದೇಶದ ಮಿರ್ಜಾಪುರ ಜಿಲ್ಲೆಯ ಕೆಲವು ಗುಹೆಗಳಲ್ಲಿನ ಚಿತ್ರಗಳು ಪುರಾತನವಾದವುಗಳೆಂದು ತೀರ್ಮಾನಿಸಿದ್ದಾರೆ. ಎಲ್ಲವೂ ಕೆಂಪು ವರ್ಣದವುಗಳು. ಜಿಂಕೆ ಖಡ್ಗಮೃಗ ಮೊದಲಾದ ಪ್ರಾಣಿಗಳನ್ನು ಬೆನ್ನಟ್ಟುವಿಕೆಯ ಚಿತ್ರಗಳು ನೈಜವಾಗಿ ಚಿತ್ರಿಸಲ್ಪಟ್ಟಿವೆ"[೧೯] ಎಂದು ಗ್ರಂಥದಲ್ಲಿ ಬಿ.ಪಿ. ಬಾಯಿರಿ ಅವರು ತಮ್ಮ 'ಭಾರತೀಯ ಚಿತ್ರಕಲೆ' ವಿವರಿಸಿದ್ದಾರೆ.

ಕರ್ನಾಟಕ ಚಿತ್ರಕಲೆಯ ಪ್ರಾರಂಭವೂ ಕೂಡ ಆದಿಮಾನವನ ಸಂದರ್ಭದಲ್ಲಿಯೇ ಕಂಡುಬರುತ್ತದೆ. "ಉತ್ತರ ಕರ್ನಾಟಕದ ಬಳ್ಳಾರಿ ಜಿಲ್ಲೆಯ 'ಕಪ್ಪಗಲ್ಲು' ಗ್ರಾಮದ ಗುಡ್ಡಗಳಲ್ಲಿ ದೊಡ್ಡ ಗುಂಡುಕಲ್ಲಿನ ಮೇಲೆ ಬರೆದ ಚಿತ್ರಗಳು, ರಾಯಚೂರು ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಹಿರೇಬೆನಕಲ್ ಗುಡ್ಡಗಳಲ್ಲಿ ಗವಿವರ್ಣ ಚಿತ್ರಗಳು, ಗುಲ್ಬರ್ಗಾ ಜಿಲ್ಲೆಯ ಶಹಾಪುರ ತಾಲ್ಲೂಕಿನ ಬಿಲ್ಲಮರಾಯನ ಗುಡ್ಡದಲ್ಲಿ ಕುಟ್ಟಿದ ಮತ್ತು ಕೊರೆದ ರೇಖಾಚಿತ್ರಗಳು, ಹಾಗೂ ಯಾದಗಿರಿ ತಾಲ್ಲೂಕಿನ 'ಬಲಚಕ್ರ'ದಲ್ಲಿ ವರ್ಣಚಿತ್ರಗಳಿರುವ ಗವಿ, ವಿಜಾಪುರ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಕಲ್ಲಳ್ಳಿಯಿಂದ ಎರಡು ಕಿಲೋಮೀಟರ್ ದೂರದಲ್ಲಿರುವ ಗೊಂಬೆಗುಡ್ಡದಲ್ಲಿ ಕಾಣುವ ಚಿತ್ರಗಳು, ಅಲ್ಚಿನ್ ದಂಪತಿಗಳು ಶೋಧಿಸಿದ ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ 'ಪಿಕ್ಕಿಹಾಳ' ಎಂಬಲ್ಲಿನ ಚಿತ್ರಗಳು, ಹೊಸಪೇಟೆ ತಾಲ್ಲೂಕಿನ ಆನೆಗುಂದಿ ಪ್ರದೇಶದ ವೆಂಕಟಾಪುರದಲ್ಲಿಯ ಬಂಡೆಗಳ ಮೇಲಿನ ಚಿತ್ರಗಳು, "ರಾಯಚೂರು ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಚಿಕ್ಕರಾಮಪುರದಲ್ಲಿಯ ಒಟ್ಟು ನಾಲ್ಕು ಗವಿ ಚಿತ್ರಗಳು"[೨೦] ಹೀಗೆ ಕರ್ನಾಟಕದಲ್ಲಿ ಹಲವು ಆದಿಮ ಚಿತ್ರಗಳು ದೊರೆತಿವೆ. ಇವುಗಳ ಕಾಲವನ್ನು ನಿಖರವಾಗಿ ಹೇಳಲು ಸಾಧ್ಯವಾಗದೇ ಇದ್ದರೂ ಇವು ಪ್ರಾಗೈತಿಹಾಸ ಅಥವಾ ಇತಿಹಾಸಪೂರ್ವ ಕಾಲಕ್ಕೆ ಸಂಬಂಧಿಸಿದ ಚಿತ್ರಗಳೆಂದು ಅಂದಾಜಿಸಲಾಗಿದೆ. ಇವು ಬಹುತೇಕ ಪ್ರಾಣಿ ಮತ್ತು ಮನುಷ್ಯ ಚಿತ್ರಗಳನ್ನು ಒಳಗೊಂಡಿವೆ. ಅದರಲ್ಲೂ ಪ್ರಧಾನವಾಗಿ ಬೇಟೆಗೆ ಸಂಬಂಧಿಸಿದ ಚಿತ್ರಗಳಾಗಿ ಕಾಣಿಸುತ್ತವೆ.

೬ ಜನಪದ ಚಿತ್ರಕಲೆ

ಗ್ರಾಮೀಣ ಪ್ರದೇಶ ಅಥವಾ ಹಳ್ಳಿಗರು ತಮ್ಮ ಮನಃಸ್ಥಿತಿಗೆ ಅಂದ ಚಂದಕ್ಕೆ ಸಂಬಂಧಿಸಿದಂತೆ ಚಿತ್ರಗಳನ್ನು ರಚಿಸಿಕೊಳ್ಳುವುದು ಜನಪದ ಚಿತ್ರಕಲೆಯಾಗಿದೆ. ಜನಪದ ಚಿತ್ರಕಲೆಯಲ್ಲಿ ವಿಶೇಷವಾಗಿ ಕಂಡುಬರುವಂತಹದ್ದು ಸಂಪ್ರದಾಯ ಮತ್ತು ಆಚರಣೆ. ಇವರು ಸಾಂಪ್ರದಾಯಿಕವಾಗಿ ಜನರ ಆಚಾರವಿಚಾರಗಳ ಜೀವನ ವಿಧಾನವನ್ನು ತಮ್ಮದೇ ಆದಂಥ ರೀತಿಯಲ್ಲಿ ಚಿತ್ರಕಲೆಯ ಮೂಲಕ ಅಭಿವ್ಯಕ್ತಿಸುವುದನ್ನು ತಮ್ಮದೇ ಆದಂಥ ರೀತಿಯಲ್ಲಿ ಚಿತ್ರಕಲೆಯ ಮೂಲಕ ಅಭಿವ್ಯಕ್ತಿಸುವುದನ್ನು ಜನಪದ ಚಿತ್ರಕಲೆ ಎಂದು ಹೇಳಬಹುದು. ಜನಪದ ಚಿತ್ರಕಲೆಗಳಲ್ಲಿ ಸಂಸ್ಕೃತಿಯ ವೈಶಿಷ್ಟ್ಯತೆಗಳು ಕಾಣಿಸುತ್ತವೆ. ಇವು ಆಚರಣೆ, ಸಂಪ್ರದಾಯಗಳ ಹಿನ್ನೆಲೆಯನ್ನು ಹೊಂದಿರುತ್ತವೆ. ಜನಪದ ಚಿತ್ರಕಲೆ ಶಿಷ್ಟಪದ ಚಿತ್ರಕಲೆಗಳಂತೆ ಒಂದು ಅಧ್ಯಯನ ಶಿಸ್ತಿಗೆ ಒಳಪಡುವುದಿಲ್ಲ. ಆದರೆ ಇಲ್ಲಿ ಭಾವನೆಗಳಿಗೆ, ಅಭಿರುಚಿಗೆ ತಕ್ಕಂತೆ ಚಿತ್ರಗಳ

ನಿರ್ಮಾಣವಾಗುತ್ತದೆ. ಅವರ ವಾಸ್ತವ ಬದುಕಿನ ಸಂದರ್ಭಗಳೇ ಚಿತ್ರಗಳಾಗಿ ಮೈತಳೆದಿರುತ್ತವೆ. ಈ ಚಿತ್ರಗಳಿಗೆ ಅವರೇ ತಯಾರಿಸಿದ ಬಣ್ಣಗಳನ್ನು ಬಳಸುತ್ತಾರೆ. ಅದರಲ್ಲೂ ಇವರು ಆಕರ್ಷದ ಬಣ್ಣಗಳನ್ನೆ ಹೆಚ್ಚು ಬಳಸುತ್ತಾರೆ. ಈ ಚಿತ್ರಗಳಲ್ಲಿ ಕ್ರಮಬದ್ಧತೆ, ಪ್ರಮಾಣ ಮುಂತಾದ ಶಿಷ್ಟಪದ ಚಿತ್ರಗಳ ಲಕ್ಷಣಗಳನ್ನು ಹೊಂದದೆ ಅನುಭವದ ಆಧಾರದ ಮೇಲೆ ರಚನೆಗೊಳ್ಳುತ್ತವೆ. ಇಲ್ಲಿ ಜನಪದರು ಎಳೆದ ಗೀರುಗಳು ಅಥವಾ ಅವರು ಬಳಸಿದ ಬಣ್ಣಗಳು ಅವರ ಮನಸ್ಸಿಗೆ ಆನಂದವನ್ನು ಉಂಟುಮಾಡುತ್ತವೆ. ಅದನ್ನು ಅವರು ಅನುಭವಿಸುತ್ತಾರೆ. ಮೂಲ ಜನಪದ ಚಿತ್ರಗಳ ನೆಲೆಯಿಂದಲೇ ಶಿಷ್ಟಚಿತ್ರಗಳು ಆಧುನಿಕ ಚಿತ್ರಗಳು ಬೆಳವಣಿಗೆಯನ್ನು ಹೊಂದಿವೆ ಎಂದರೆ ತಪ್ಪಾಗಲಿಕ್ಕಿಲ್ಲ.

೨ ಬುಡಕಟ್ಟು ಚಿತ್ರಕಲೆ


"ನಾಗರಿಕ ಸಮಾಜಗಳಿಂದ ದೂರವಾಗಿ ಅವರಿಗಿಂತ ಭಿನ್ನವಾದ ಪ್ರತ್ಯೇಕವಾದ ಜೀವನಕ್ರಮವನ್ನು ರೂಢಿಸಿಕೊಂಡು ಬದುಕುತ್ತಾ, ತಮ್ಮ ವಿಶಿಷ್ಟವಾದ ಸಾಂಸ್ಕೃತಿಕ ಮೌಲ್ಯಗಳನ್ನು ಇಂದಿನವರೆಗೂ ಜೀವಂತವಾಗಿ ಉಳಿಸಿಕೊಂಡು ಬಂದಿರುವ ಒಂದು ಗುಂಪಿನ ಅಥವಾ ಸಮುದಾಯದ ಜನರನ್ನು 'ಬುಡಕಟ್ಟು' ಎಂದು ಸಾಮಾನ್ಯವಾಗಿ ಗುರುತಿಸಲಾಗಿದೆ."[೫೧] ಈ ಜನ ಸಮುದಾಯದವರು ಬರೆಯುವ, ಬಿಡಿಸುವ, ಹಾಕುವ, ಹೊಯ್ಯುವ ಚಿತ್ರಕಲೆಯನ್ನು 'ಬುಡಕಟ್ಟು ಚಿತ್ರಕಲೆ' ಎಂದು ಕರೆಯಬಹುದು. ಈ ಬುಡಕಟ್ಟು ಚಿತ್ರಕಲೆ ಇತರೆ ಚಿತ್ರಕಲೆಗಿಂತ ಭಿನ್ನವಾಗಿಯೇ ಇರುತ್ತದೆ. ಅವರು ಬರೆಯುವ ಚಿತ್ರ, ಚಿತ್ರ ಬರೆಯಲು ಬಳಸುವ ಸಾಧನ, ಉಪಯೋಗಿಸುವ ಬಣ್ಣಗಳು, ಚಿತ್ರ ಬರೆಯುವ ಸಂದರ್ಭಗಳ ಹಿನ್ನೆಲೆ ಮುಂತಾದವು ಬುಡಕಟ್ಟೇತರ ಚಿತ್ರಕಲೆಗಳಿಗಿಂತ ಭಿನ್ನವಾಗಿ ಇರುತ್ತವೆ.

ಬುಡಕಟ್ಟು ಚಿತ್ರಕಲೆಗಳಲ್ಲಿ ನಿಸರ್ಗದತ್ತವಾಗಿ ಸಿಗುವ ವಸ್ತುಗಳು ಹೆಚ್ಚಾಗಿ ಬಳಕೆಯಾಗುತ್ತವೆ. ಇವುಗಳನ್ನು ಬಳಸಿಕೊಂಡಿಯೇ ಚಿತ್ರಗಳು ನಿರ್ಮಾಣವಾಗುತ್ತವೆ. ಅವುಗಳು ಹಲವು ಬಗೆಯ ಮಣ್ಣು, ಕಲ್ಲು, ಸೇಡಿ, ಹಲವು ಜಾತಿಯ ಮರಗಳ ಕಾಯಿ, ಕಾಡಿನ ಹೂವುಗಳು, ಹಣ್ಣುಗಳು, ಎಲೆಗಳು ಮುಂತಾದ ಹಲವು ಬಗೆಯ ವಸ್ತುಗಳು ಬಣ್ಣಗಳಾಗಿ ಬಳಕೆಗೊಳ್ಳುತ್ತವೆ. ಅಂತೆಯೇ ಇವರ ಚಿತ್ರಗಳೂ ಕೂಡ ಸಮುದಾಯದ ಸಂಕೀರ್ಣ ಬದುಕನ್ನು ಪ್ರತಿನಿಧಿಸುತ್ತವೆ. ಸಮುದಾಯದ ಸಂಪ್ರದಾಯ, ಆಚರಣೆ, ಪದ್ಧತಿ, ನಂಬಿಕೆ ಮುಂತಾದ ರೀತಿ-ನೀತಿ, ನಿಯಮ, ಕಟ್ಟುಪಾಡುಗಳ ಹಿನ್ನೆಲೆಯಲ್ಲಿ ರೂಪಗೊಂಡಿರುತ್ತವೆ. ಪ್ರತಿಯೊಂದು ಬುಡಕಟ್ಟು ಸಮುದಾಯದ ಬಿತ್ತ ಚಿತ್ರಗಳೂ ಕೂಡ ತಮ್ಮದೇ ಆದ ಅರ್ಥಗಳನ್ನು ಹೊಂದಿವೆ.


ಈ ಹಿನ್ನೆಲೆಯಲ್ಲಿ ಮಹಾರಾಷ್ಟ್ರದ ವಾರ್ಲಿ, ಬಿಹಾರದ, ಮದುಬನಿ, ಗುಜರಾತಿನ ಪಿಠೋರ, ಒರಿಸ್ಸಾದ ಸಾರೋಸ್, ಹಿಮಾಚಲಪ್ರದೇಶದ ವಿವಿಧ ಬುಡಕಟ್ಟು ಚಿತ್ರಕಲೆಗಳನ್ನು ನೋಡಬಹುದು. ಈ ಎಲ್ಲಾ ಚಿತ್ರಕಲೆಗಳೂ ಕೂಡ ತಮ್ಮದೇ ಆದಂಥ ಸಾಂಸ್ಕೃತಿಕ ಅನನ್ಯತೆಯನ್ನು ಹೊಂದಿವೆ. ಅಂತೆಯೇ ಕರ್ನಾಟಕ

[illegible]

I.



ಮಹರಾಷ್ಟ್ರ -ವಾರ್ಲೀ ಚಿತ್ರ.



ಸಾರೋಸ್. ಒರಿಸ್ಸಾ.





ಗುಜರಾತ್ - ಗೋಡೆಯ ಮೇಲಿನ ಚಿತ್ರ



ಬಿಲ್ವ, ಸಭರ್ ಕಂಠ. ಗುಜರಾತ್.





ಬಿನಾಪುರ ಹಿಮಾಚಲಪ್ರದೇಶ.



ಬುಡಕಟ್ಟು ಚಿತ್ರಕಲೆ ಕೂಡ ವಿವಿಧ ಸಮುದಾಯಗಳ ಬದುಕಿನ ಹಿನ್ನೆಲೆಯಲ್ಲಿ ತಮ್ಮದೇ ಆದಂಥ ಚಿತ್ರಕಲೆ ವೈಶಿಷ್ಟತೆಗಳನ್ನು ತೋರ್ಪಡಿಸುತ್ತದೆ.

೮ ಶಿಷ್ಟ ಚಿತ್ರಕಲೆ

ಚಿತ್ರಕಲೆಯನ್ನ, ಆದಿಮ, ಜನಪದ, ಶಿಷ್ಟ ಎಂದು ವಿಭಾಗಿಸುವ ಕ್ರಮ ವೈಧಾನಿಕವಾಗಿ ಶುಷ್ಕವಾದದ್ದು. ಚಿತ್ರಕಲೆಯ ಪರಂಪರೆಯೆನ್ನುವುದು, ಮಾನವನ ಬದುಕಿನ ವಿವಿಧ ಘಟ್ಟಗಳಲ್ಲಿ ಕಂಡುಕೊಂಡ ರೂಪಾಂತರಗಳು ಹಲವು. ಈವತ್ತಿನ ಅತ್ಯಂತ ಸಂಕೀರ್ಣವಾದ ಆಧುನಿಕ ಚಿತ್ರಕಲೆಯ ಬೇರುಗಳು ಆದಿಮ ಚಿತ್ರಕಲೆಯಲ್ಲಿವೆ. ಬುಡಕಟ್ಟು ವ್ಯವಸ್ಥೆಯಿಂದ, ಸಾಂಘಿಕ ಬದುಕಿಗೆ ಪ್ರವೇಶಿಸಿದ ಮಾನವನ ಚಿಂತನೆಯಂತೆಯೇ ಅವನ ಅಭಿವ್ಯಕ್ತಿ ಕ್ರಮದಲ್ಲೂ ಹಲವು ಬದಲಾವಣೆಗಳಾದವು. ರಾಜಶಾಹಿ, ಸಾಮಂತಶಾಹಿ ವ್ಯವಸ್ಥೆಯಲ್ಲಿ ಚಿತ್ರಕಲೆಯ ಬೇರೆಯದೇ ಆದ ಆಯಾಮ ಪಡೆದುಕೊಂಡಿತ್ತು. ಇನ್ನು ವಿದೇಶೀ ಆಡಳಿತಗಾರರ ಕಾಲಘಟ್ಟದಲ್ಲಿನ ಚಿತ್ರಕಲೆ ಸ್ಪಷ್ಟವಾಗಿ ಹೊರಗಿನ ಪ್ರಭಾವಗಳಿಂದ ಸಂಕರಗೊಂಡಿತ್ತು ಆಧುನಿಕವೆಂದು ಕರೆಯುವ ಇಂದಿನ ಅಮೂರ್ತ ಚಿತ್ರಕಲೆಯೂ ಸಹ ಈ ಕಾಲಘಟ್ಟ ಮನುಷ್ಯನ ಒಟ್ಟು ಬದುಕಿನ ಸಂಕೀರ್ಣತೆಯಿಂದಲೇ ರೂಪಗೊಂಡಿದೆ. ಹೀಗಾಗಿ ಅದ್ಯಯನದ ಸಲುವಾಗಿ ನಾವು 'ಆದಿಮ ಚಿತ್ರಕಲೆ', 'ಜನಪದ ಚಿತ್ರಕಲೆ' ಮತ್ತು 'ಆಧುನಿಕ ಚಿತ್ರಕಲೆ' ಎಂದು ವಿಭಾಗಿಸಿಕೊಂಡರೂ ಅದು ಅಂತಿಮವಾಗಿ ಕೃತಕ ವಿಂಗಡಣೆಯೇ ಆಗುತ್ತದೆ. ಆದಿಮಾನವನ ಸಾಮಾಜಿಕ ಮತ್ತು ಆರ್ಥಿಕ ರೂಪಾಂತರಗಳಿಗೆ ಅನುಗುಣವಾಗಿ, ಅವನ ಚಿಂತನೆ ಮತ್ತು ಅಭಿವ್ಯಕ್ತಿ ಕ್ರಮಗಳಲ್ಲಿ ಹಂತ ಹಂತವಾಗಿ ಸ್ಥಿತ್ಯಂತರಗಳು ಏರ್ಪಟ್ಟವು.

ಶಿಷ್ಟಪದ ಚಿತ್ರಕಲೆ ಎಂಬುದು ಜನಪದ ಚಿತ್ರಕಲೆ, ಬುಡಕಟ್ಟು ಚಿತ್ರಕಲೆ, ಆದಿಮ ಚಿತ್ರಕಲೆ ಮತ್ತು ಆಧುನಿಕ ಚಿತ್ರಕಲೆಗಳಿಗಿಂತ ಭಿನ್ನವಾದಂತ ಸ್ವರೂಪವನ್ನು ಹೊಂದಿವೆ. "ನಾಗರಿಕ ವರ್ಗದವರ ಪ್ರಮಾಣಬದ್ಧ, ಲಕ್ಷಣಯುಕ್ತ ಚಿತ್ರಕಲೆ ಶಿಷ್ಟಪದ ಚಿತ್ರಕಲೆಯೆನಿಸುವುದು."[೫೨] ಶಿಷ್ಟಪದ ಚಿತ್ರಕಲೆಯಲ್ಲಿ ನಿಯಮಗಳು, ಅಧ್ಯಯನ ಶಿಸ್ತು, ಸಂಬಂಧಿಸಿದ ಚೌಕಟ್ಟು, ಅಳತೆ, ವಿನ್ಯಾಸ ಮುಂತಾದವುಗಳು ಕ್ರಮಬದ್ಧವಾಗಿಯೇ ಇರಬೇಕಾಗುತ್ತದೆ.

ಚಿತ್ರಕಲೆ ಮೊದಲು ಜನಪದವಾಗಿಯೇ ಬೆಳೆದು ಬಂತು. ಅದರಲ್ಲಿ ಸಂಪ್ರದಾಯಗಳು ಆಚರಣೆಗಳು ಸೇರಿಕೊಂಡು ಜನರ ಬದುಕಲ್ಲಿ ಚಿತ್ರಕಲೆ ಚಾಲ್ತಿಯಲ್ಲಿದ್ದು ಸಮುದಾಯಗಳಲ್ಲಿ ಸೇರಿಹೋಗಿತ್ತು. ಹಲವು ಸಮುದಾಯಗಳ ಚಿತ್ರಕಲೆಗಳನ್ನು ಜನಪದ ಚಿತ್ರಕಲೆಯಡಿಯಲ್ಲಿ ನೋಡಲಾಯಿತು. ನಂತರದ ಕಾಲದಲ್ಲಿ ಚಿತ್ರಕಲೆ ಒಂದು ಅಧ್ಯಯನ ಶಿಸ್ತಾಗಿ, ಬೆಳೆದ ಸಂದರ್ಭದಲ್ಲಿ ಅದಕ್ಕೆ ಹಲವು ಅಧ್ಯಯನ ಮಾದರಿಗಳು, ಶಿಸ್ತುಗಳು ಸೇರಿಕೊಂಡವು. ಇದರಿಂದಾಗಿ ಅವುಗಳನ್ನು ಕ್ರಮಬದ್ಧವಾಗಿ ಅಧ್ಯಯನಿಸಲು ಮೇಲಿನಂತೆ ವಿಂಗಡಿಸಿಕೊಳ್ಳಲಾಗಿದೆ. ಇದು ಕೃತಕವಾಗಿದ್ದರೂ ಸಹ ಅಧ್ಯಯನದ ಸಲುವಾಗಿ ಹೀಗೆ ಮಾಡಿಕೊಳ್ಳಲಾಗಿದೆ.

ಈ ಶಿಷ್ಟಪದ ಚಿತ್ರಕಲೆಯನ್ನು "ಶಾಸ್ತ್ರ ಶುದ್ಧವಾಗಿ ಪ್ರಾಚೀನರು ರೂಪಿಸಿಕೊಂಡು ಬಂದ ಶಿಷ್ಟ ಚಿತ್ರಕಲೆಯ ಪಂಗಡಗಳು ಇಂತಿವೆ. ೧. ರೂಪಭೇದ, ೨. ಪ್ರಮಾಣ, ೩. ಭಾವ, ೪. ಲಾವಣ್ಯ ಯೋಜನೆ, ೫. ಸಾದೃಶ್ಯ, ೬. ವರ್ಣಿಕಾಭಂಗ"[೫೩] ಎಂಬ ಅಂಗಗಳನ್ನು ಗುರುತಿಸಿಕೊಂಡು ಶಿಷ್ಟ ಪದ ಚಿತ್ರಕಲೆಗೆ ಒಂದು ಅರ್ಥವನ್ನು ಕೊಡಲಾಯಿತು. ಇವುಗಳ ಮೂಲದಲ್ಲಿ ಜನಪದೀಯ ಅಂಶಗಳು ಕಂಡುಬಂದರೂ ಶಿಷ್ಟಪದ ಚೌಕಟ್ಟಿಗೆ ಈ ಅಂಶಗಳನ್ನು ಗುರುತಿಸಲಾಯಿತು. ಹಾಗಾಗಿ ಶಾಸ್ತ್ರೋಕ್ತವಾಗಿ ಅಧ್ಯಯನಕ್ಕೆ ಮತ್ತು ಕಲಿಕೆಗೆ ಒಳಪಟ್ಟು ಶಿಷ್ಟಪದ ಚಿತ್ರಲೆಯು ತನ್ನದೇ ಆದ ಲಕ್ಷಣಗಳನ್ನು ಹೊಂದಿತು. ಈ ಹಂತದಲ್ಲಿ ಮಾನವ, ಒಂದು ನಿಶ್ಚಿತ ಸಾಮಾಜಿಕ ಮತ್ತು ಆರ್ಥಿಕ ಚೌಕಟ್ಟಿನಲ್ಲಿ ತನ್ನ ಬದುಕನ್ನು ರೂಪಿಸಿಕೊಳ್ಳಲೆತ್ನಿಸುತ್ತಿದ್ದ. ಸಾಮಾಜಿಕ, ಆರ್ಥಿಕ ಬದುಕು ನಿಯಮಕ್ಕೊಳಪಟ್ಟಿತ್ತು. ಒಂದು ನಿಶ್ಚಿತ ಆರ್ಥಿಕ ಮೂಲ ಮತ್ತು ನಿಯಮಬದ್ಧ ಸಾಮಾಜಿಕ ಬದುಕು ಇವನ ಚಿಂತನೆಗಳನ್ನ, ಅಭಿವ್ಯಕ್ತಿ ಕ್ರಮಗಳನ್ನ ನಿಯಂತ್ರಿಸುತ್ತಿದ್ದವು. ಈ ಕಾಲಘಟ್ಟ ಚಿತ್ರಕಲೆಯಲ್ಲಿ, ಆದಿಮ ಚಿತ್ರಕಲೆ ಛಾಯೆ ಇದ್ದರೂ ಬದಲಾವಣೆಗಳಾಗಿದ್ದವು.

ಜನಪದ ಚಿತ್ರಕಲೆ ಬದುಕಿನ ಸಂದರ್ಭದಲ್ಲಿ ಹುಟ್ಟಿದರೆ, ಶಿಷ್ಟಪದ ಚಿತ್ರಕಲೆಯು ಜನಪದ ಚಿತ್ರಕಲೆಯನ್ನೇ ಇಟ್ಟುಕೊಂಡು, ಅವುಗಳಲ್ಲಿನ ಕೆಲವು ಅಂಶಗಳನ್ನು ತೆಗೆದುಕೊಂಡು ಸೃಷ್ಟಿಯಾಯಿತು. ಇಲ್ಲಿ ಕಲಾವಿದ ಸಿದ್ಧಿರೂಪದ ಆಕರ ಸಾಮಗ್ರಿಗಳನ್ನು ತೆಗೆದುಕೊಂಡು ಅದಕ್ಕೆ ಬೇಕಾದ ಚೌಕಟ್ಟನ್ನು ನಿರ್ಮಿಸಿಕೊಂಡು ಚಿತ್ರಗಳನ್ನು ಬರೆಯತೊಡಗಿದ ಹೀಗೆ ಬೆಳೆದ ಶಿಷ್ಟಪದ ಚಿತ್ರಕಲೆಯು ಇಂದು ಚಿತ್ರಕಲೆಯಲ್ಲಿ ತನ್ನದೇ ಆದ ಪ್ರಕಾರವಾಗಿ ಬೆಳೆದಿದೆ.

೯ ಆಧುನಿಕ ಚಿತ್ರಕಲೆ

ಪ್ರಸ್ತುತ ಸಂದರ್ಭದಲ್ಲಿ ಇದು ಸೃಜನಶೀಲ ಕಲೆಯಾಗಿ ಕಂಡುಬರುತ್ತಿದೆ. ಈ ಚಿತ್ರಕಲೆಯಲ್ಲಿ ಕಲಾವಿದನ ಜ್ಞಾನ, ಅನುಭವ, ಅಭಿವ್ಯಕ್ತಿ, ವಿಷಯ ಪ್ರಸ್ತಾಪ ಮುಖ್ಯವಾಗುತ್ತದೆ. "ಕಲಾವಿದ ವಸ್ತುವನ್ನು ಇರುವಂತೆ ಚಿತ್ರಿಸದೆ, ಒಂದು ವಸ್ತುವನ್ನು ನೋಡಿದಾಗ ಅವನ ಮನಸ್ಸಿನ ಮೇಲಾದ ಭಾವನೆಗಳನ್ನು ರಚಿಸವುದು ಆಧುನಿಕ ಕಲೆಯ ಗುಣವಾಗಿದೆ."[೫೪] ಆಧುನಿಕ ಚಿತ್ರಕಲೆ ಪ್ರಾರಂಭವಾದದ್ದು ೧೯ನೇ ಶತಮಾನದಿಂದ ಈಚೆಗೆ. ಇಲ್ಲಿ ಹಲವು ಮಾಧ್ಯಮಗಳನ್ನು ಕಲಾವಿದ ಅಭಿವ್ಯಕ್ತಿಸಲು ತೊಡಗಿದ. ಸಂಬಂಧಿಸಿದ ತಂತ್ರಗಳನ್ನು ಆಧುನಿಕ ಚಿತ್ರಕಲೆಯಲ್ಲಿ ಕಲಾವಿದ ಅಳವಡಿಸಿಕೊಂಡು ತನ್ನ ಪ್ರತಿಭೆಯನ್ನು ವ್ಯಕ್ತಪಡಿಸತೊಡಗಿದ.

"ಪ್ರಥಮವಾಗಿ ಆಧುನಿಕ ಕಲೆಯನ್ನು ತನ್ನ ಚಿತ್ರಗಳಲ್ಲಿ ಅಭಿವ್ಯಕ್ತಿಸಿದವನು ಎಡ್ವರ್ಡ್ ಮಾನೆ. ಅವನು ಪ್ರಕೃತಿ ಚಿತ್ರಗಳನ್ನು, ಸುತ್ತಮುತ್ತಲಿನ ಸನ್ನಿವೇಶಗಳನ್ನು ಚಿತ್ರಿಸಿದ ಹಾಗೂ ಅಂದಿನವರೆಗೂ ಬಳಕೆಯಲ್ಲಿದ್ದ ವಿಧಾನವನ್ನು ಬಿಟ್ಟು ತನ್ನದೇ ಸ್ವಂತ ವಿಧಾನವನ್ನು ರೂಢಿಸಿಕೊಂಡು ಕಲಾಪ್ರಪಂಚದಲ್ಲಿ ಅವನ ಕೃತಿಗಳು, ಅವರ ವಿಚಾರಗಳು ಕೋಲಾಹಲ ಎಬ್ಬಿಸಿದವು."[೫೫] ನಂತರದಲ್ಲಿ ಆಧುನಿಕ ಚಿತ್ರಕಲೆ

ಹಲವು ಬಗೆಯ ಚಿಂತನೆ, ವಿಚಾರಧಾರೆ ಮತ್ತು ಪ್ರಯೋಗಗಳಿಗೆ ಅಡಿಪಾಯವನ್ನು ಹಾಕಿತು. ಇದು ಅನೇಕ ಪಂಥಗಳನ್ನು ಹುಟ್ಟು ಹಾಕಿತು. ಅವುಗಳನ್ನು ಈ ಕೆಲಕಂಡ ರೀತಿಯಲ್ಲಿ ನೋಡಬಹುದಾಗಿದೆ

೧. ಇಂಪ್ರೆಷನಿಸಂ

೨. ಪಾವಿಸಂ

೩. ಕ್ಯೂಬಿಸಂ

೪. ಎಕ್ಸ್‌ಪ್ರೆಷನಿಸಂ

೫. ಪ್ಯೂಚರಿಸಂ

೬. ದಾದಾಯಿಸಂ

೭. ಸರ್ರಿಯಲಿಸಂ ಹೀಗೆ ವಿವಿಧ ಪಂಥಗಳಲ್ಲಿ ಆಧುನಿಕ ಚಿತ್ರಕಲೆ ಹುಟ್ಟಿಕೊಂಡು ಅನೇಕ ಹೊಸ ಪ್ರಯೋಗಗಳಿಗೆ ದಾರಿಯಾಯಿತು.

ಆಧುನಿಕ ಮಾನವನ ಒಟ್ಟು ಅಭಿವ್ಯಕ್ತಿ ಕ್ರಮದಲ್ಲಿ ಇಂದು ಅಗಾಧ ಬೆಳವಣಿಗೆಗಳಾಗಿವೆ. ಪಶ್ಚಿಮದಲ್ಲಿ ವರ್ಷಕ್ಕೊಂದರಂತೆ ಕಲಾಸಿದ್ಧಾಂತಗಳು ಹುಟ್ಟಿಕೊಳ್ಳುವುದನ್ನ ನಾವು ನೋಡುತ್ತೇವೆ. ಇದಕ್ಕೆ ಕಾರಣ, ಮಾನವನ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳಲ್ಲಾಗುತ್ತಿರುವ ತೀವ್ರತರ ಬದಲಾವಣೆಗಳು. ೧೯ನೇ ಶತಮಾನದಲ್ಲಿ ಪಶ್ಚಿಮದಲ್ಲಾದ ಕೈಗಾರಿಕಾಕ್ರಾಂತಿ ಮತ್ತು ಆಧುನಿಕ ತಂತ್ರಜ್ಞಾನಗಳ ಫಲವಾಗಿ ಹೊಸ ಸಮಾಜ ಸೃಷ್ಟಿಯಾಯಿತು. ಸಾಮಾಜಿಕ ಮತ್ತು ಧಾರ್ಮಿಕ ಚೌಕಟ್ಟಿನಲ್ಲಿ ನಿಶ್ಚಿತ ನಿಯಮಗಳ ಮೂಲಕ ನಿಯಂತ್ರಿಸಲ್ಪಡುತ್ತಿದ್ದ ಮನುಷ್ಯನ ಬದುಕು, ಕೈಗಾರಿಕಾಕ್ರಾಂತಿಯ ನಂತರ ಸ್ಫೋಟಸಲ್ಪಟ್ಟಿತು. ಮುಕ್ತ ಆರ್ಥಿಕ ಸ್ವಾತಂತ್ರ್ಯ, ಸಾಮಾಜಿಕ ನಿಯಮಗಳನ್ನ ಉಲ್ಲಂಘಿಸುವಂತೆ ಮನುಷ್ಯನನ್ನು ಪ್ರೇರೇಪಿಸಿತು. ಪಾರಂಪರಿಕ ಉತ್ಪಾದನಾ ಸಂಬಂಧಗಳು ನಾಶವಾದವು. ರೂಢಿಗತ ಅವಲಂಬನೆ ಮತ್ತು ಮಾನವೀಯ ಸಂಬಂಧಗಳಲ್ಲೂ ಅಗಾಧ ಬದಲಾವಣೆಗಳು ಸಂಭವಿಸಿದವು. ಭಾವುಕ ಮಾನವ ಪ್ರೇಮ ಮತ್ತು ಸಂಬಂಧಗಳು ವಿಘಟಿತಗೊಂಡು, ಅರ್ಥಕೇಂದ್ರಿತ ಮತ್ತು ತಂತ್ರಜ್ಞಾನ ಕೇಂದ್ರಿತ ಸಮಾಜ ರೂಪಗೊಳ್ಳತೊಡಗಿತು. ನೈಸರ್ಗಿಕ ಸಂಪನ್ಮೂಲಗಳನ್ನ ಕೊಳ್ಳೆ ಹೊಡೆಯಲೆಂದೇ ರೂಪಿಸಿದ ವಸಾಹತುನೀತಿ, ವಿಕ್ಷಿಪ್ತ ಆರ್ಥಿಕ ಪೈಪೋಟಿಗಳಿಂದ ಸಂಭವಿಸಿದ ಯುದ್ಧಗಳಿಂದಾಗಿ ಮಾನವನ ಬದುಕು ನರಕ ಸಾದೃಶ್ಯವಾಗಿತು. ೧೯-೨೦ನೇ ಶತಮಾನದ ಪಶ್ಚಿಮದ ಲೇಖಕರ ಹಲವು ಕೃತಿಗಳಲ್ಲಿ ಅಂದಿನ ವಿಘಟಿತ ಪಶ್ಚಿಮದ ಚಿತ್ರಣವನ್ನ ನಾವು ನೋಡಬಹುದು. ಮನುಷ್ಯನ ಸಾಮಾಜಿಕ ಮತ್ತು ಆರ್ಥಿಕ ಬದುಕನ್ನು ಯಂತ್ರಗಳು ನಿಯಂತ್ರಿಸತೊಡಗಿದ ಮೇಲೆ, ತಂತ್ರಜ್ಞಾನದ ಮೇಲೆ ಹೆಚ್ಚು ಒತ್ತು ಬಿದ್ದಿತು. ಕೈಗಾರಿಕಾ ಕ್ರಾಂತಿಯಿಂದ ಉಂಟಾದ ಅಸಮಾನ ಆರ್ಥಿಕ ನೆಲೆಗಳು ಮಾನವನನ್ನ ದಿಕ್ಕೆಡಿಸಿದವು. ಮಾಲಿಕ-ಶ್ರಮಿಕ ವರ್ಗ ವ್ಯವಸ್ಥೆ ರೂಪಗೊಂಡಿತು. ಅನೇಕ ಸರ್ವಾಧಿಕಾರಿಗಳು ಹುಟ್ಟಿದ್ದರು. ಜನವಾದ, ವಸಾಹತುಶಾಹಿ ನೀತಿಗಳು ಮನುಷ್ಯನ ಒಟ್ಟು ಇರುವಿಕೆಯನ್ನು ನರಕಸಾದೃಶ್ಯವಾಗಿಸಿದವು. ಈ ಎಲ್ಲ ಅಸಾದೃಶ್ಯ ಎರಿಳಿತಗಳು ಮನುಷ್ಯನ ಚಿಂತನೆಯನ್ನ, ಹೆಚ್ಚು ಜಟಿಲವು, ಸಂಕೀರ್ಣವೂ ಆಗುವಂತೆ ಮಾಡಿದವು. ಆಧುನಿಕ ಮಾನವನ ಅಭಿವ್ಯಕ್ತಿಯ ಮೇಲೆ ಇದು ಅಗಾಧ ಪ್ರಭಾವ ಬೀರಿತು. ಅಭಿವ್ಯಕ್ತಿ ರೂಪಕ

ಮತ್ತು ಪ್ರತಿಮೆಗಳಲ್ಲಿ ವ್ಯಕ್ತವಾಯಿತು. ಕಲೆ ಈ ಕಾರಣಗಳಿಗಾಗಿ ಅಮೂರ್ತವೂ ಆಯಿತು. ಒಟ್ಟಿನಲ್ಲಿ ಆಧುನಿಕ ಜಗತ್ತಿನ ಈ ಬಗೆಯ ಕಲೆಗಳು, ಈ ಕಾಲಘಟ್ಟ ಸಮಾಜಿಕ ಆರ್ಥಿಕ ಬದುಕಿನ ಒಂದು ಭಾಗವಾಗಿಯೇ ರೂಪಗೊಳ್ಳುತ್ತಿವೆ. ಅದು ಯುಗಧರ್ಮವೂ ಹೌದು.

ಅಡಿಟಿಪ್ಪಣಿಗಳು

೦೧. ಮರಿಶಾಮಾಚಾರಿ, ಕಲೆ ಕಲಾಕೋಶ, ಪುಟ: ೮೩

೦೨. ಕಲೆಗಳು ಕಾವ್ಯಮೀಮಾಂಸೆ ಮತ್ತು ಸಾಹಿತ್ಯ ವಿಮರ್ಶೆ, ಪ್ರೊ. ಜಿ. ಅಬ್ದುಲ್ ಬಷೀರ್, ಸಂ, ಪುಟ: ೧೫

೦೩. ಡಾ.ಕೆ.ವಿ. ಪುಟ್ಟಪ್ಪ, ಕಲೆ ಮತ್ತು ಅದರ ಉದ್ದೇಶ ಸೌಂದರ್ಯ ಮತ್ತು ಕಲೆ ಪ್ರ.ಸಂ. ಪುಟ: ೮೫

೦೪. ಕರ್ನಾಟಕ ರತ್ನಕೋಶ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು, ಪುಟ: ೪೭

೦೫. ರವೀಂದ್ರನಾಥ ಠಾಕೂರ, ಅನು: ಎಚ್.ಎಸ್. ಶ್ರೀಮತಿ, , ಪುಟ: ೪

೦೬. ಕಲೆ ಎಂದರೇನು, ಕಲೆ ಮತ್ತು ರಸಸ್ವಾದನೆ, ಪ್ರೊ. ಎಂ.ಎಚ್. ಕೃಷ್ಣಯ್ಯ, ಸಂ. ಚಿ.ಸು ಪುಟ ೭೭, ಕೃಷ್ಣಶೆಟ್ಟಿ

೦೭. ಅದೇ. ಪುಟ: ೨೨

೦೮ ಅದೇ ಪುಟ: ೨೨

೦೯ ಕಲೆ ಮಾಧ್ಯಮ ಮತ್ತು ರಸಾನುಭವ, ಕಲೆ ಮತ್ತು ರಸಾಸ್ವಾದನೆ, ಸಂ ಎಂ.ಎಚ್. ಕೃಷ್ಣಯ್ಯ, ಪುಟ: ೧೭

೧೦. ಅದೇ. ಪುಟ: ೧೭

೧೧. ಕಲೆಯ ಅಮರತ್ವ, ಡಾ.ಕೆ.ವಿ. ಪುಟ್ಟಪ್ಪ, ಸೌಂದರ್ಯ ಮತ್ತು ಕಲೆ, ಪುಟ: ೧೩೬

೧೨. 'ಕಲೆ ಮತ್ತು ಸಾಮಾಜಿಕ ಜೀವನ', ಅನು ಎಚ್.ಕೆ. ರಾಮಚಂದ್ರಶರ್ಮ, ಜಿ.ವಿ ಪ್ಲೇಖನೋವ, ಪುಟ: ೧೧

೧೩. ಅದೇ. ಪುಟ: ೧೧

೧೪. ಮ. ಶ್ರೀಧರಮೂರ್ತಿ, ೬೪ ಕಲೆಗಳು, ಪುಟ: ೧

೧೫. ಅದೇ. ಪುಟ: ೨

೧೬. ಕಲಾಕೋಶ, ಡಾ. ಅ.ಲ. ನರಸಿಂಹನ್, ಪುಟ: ೮೪

೧೭. ಕಲೆಗಳು, ಮ. ಶ್ರೀಧರ ಮೂರ್ತಿ, ಪುಟ: ೫

೧೮. 'ಜೀಶಂಪಾ ಅವರ ಜಾನಪದ ಬರಹಗಳು', ಸಂ. ಕಾಳೇಗೌಡ ನಾಗೇವರ, ಅಂಬಳಿಕೆ ಹಿರಿಯಣ್ಣ, ಪುಟ: ೪೦೦

೧೯. ಡಾ. ಶಿವರಾಮ ಕಾರಂತರ ಲೇಖನಗಳು, ಪುಟ: ೫೧

೨೦. ಕಲೆಯ ಉಗಮ, ಕಲೆಯ ದರ್ಶನ, ಡಾ. ಶಿವರಾಮಕಾರಂತ, ಪುಟ: ೯೭

೨೧. 'ಜೀಶಂಪಾ ಅವರ ಜಾನಪದ ಬರಹಗಳು', ಸಂ. ಕಾಳೇಗೌಡ ನಾಗಾವರ, ಅಂಬಳಿಕೆ ಹಿರಿಯಣ್ಣ, ಪುಟ: ೫೦

೨೨. ಸೃಷ್ಟಿಯ ಪ್ರಕ್ರಿಯೆ, ರಾಮಚಂದ್ರ ಶರ್ಮ, ಸಂ. ಆರ್.ಎಂ. ಹಡಪದ್ ಕಲಾ ವಿಶೇಷೋಪನ್ಯಾಸಗಳು, ಪುಟ: ೫೦

೨೩. ಅದೇ. ಪುಟ: ೫೧

೨೪. ಅದೇ. ಪುಟ: ೫೧

೨೫. ಕರ್ನಾಟಕ ಜನಪದ ಚಿತ್ರಕಲೆ, ಎಸ್.ಸಿ. ಪಾಟೀಲ, ಪುಟ: ೧೭

೨೬. ಸೃಷ್ಟಿಯ ಪ್ರಕ್ರಿಯೆ, ಸಮಕಾಲೀನ ಕಲೆ, ರಾಮಚಂದ್ರಶರ್ಮ, ಪ್ರ.ಸಂ.ಆರ್.ಎಂ.ಹಡಪದ್ ಕಲಾವಿಶೇಷೋಪನ್ಯಾಸಗಳು, ಪುಟ: ೫೧

೨೭. ಕಲಾ ಪ್ರಪಂಚ, ಡಾ. ಶಿವರಾಮಕಾರಂತ, ಭಾರತೀಯ ಕಲೆಗಳು, ಪುಟ: ೪೦೨

[illegible]

೨೮. ಕರ್ನಾಟಕ ಭಿತ್ತಿ ಚಿತ್ರ ಪರಂಪರೆ, ಅ.ಲ. ನರಸಿಂಹನ್, ಪುಟ: ೪೦

೨೯. ಅದೇ. ಪುಟ: ೩೯

೩೦. ಕರ್ನಾಟಕ ಜಾನಪದ ಚಿತ್ರಕಲೆ, ಡಾ. ಎಸ್.ಸಿ. ಪಾಟೀಲ, ಪುಟ: ೧೮

೩೧. ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ರತ್ನಕೋಶ, ಪುಟ: ೮೪

೩೨. ಕಲಾಕೋಶ, ಪಿ.ಆರ್. ತಿಪ್ಪೇಸ್ವಾಮಿ, ಅಲನ ಪ್ರ.ಸ.ಪುಟ: ೧೪೮

೩೩. ಅದೇ. ಪುಟ: ೧೪೮

೩೪. ಅದೇ. ಪುಟ: ೧೪೯

೩೫. ಕರ್ನಾಟಕ ಜನಪದ ಚಿತ್ರಕಲೆ, ಎಸ್.ಸಿ. ಪಾಟೀಲ, ಪುಟ: ೧೯

೩೬. ಭಾರತೀಯ ಚಿತ್ರಕಲೆ, ಬಿ.ಪಿ. ಬಾಯಿರಿ, ಪುಟ: ೮

೩೭. ಅದೇ. ಪುಟ: ೯

೩೮. ಅದೇ. ಪುಟ: ೧೦

೩೯. ಅದೇ. ಪುಟ: ೧೩

೪೦. ಅದೇ. ಪುಟ: ೧೧

೪೧. ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಾ.ಎಚ್. ತಿಪ್ಪೇರುದ್ರಸ್ವಾಮಿ, ಪುಟ: ೭೧೯

೪೨. ಆದಿಮಾನವ ಚಿತ್ರಕಲೆ, ಬಿ.ಪಿ. ಬಾಯರಿ, ಭಾರತೀಯ ಚಿತ್ರಕಲೆ, ಪುಟ: ೧

೪೩. ಅದೇ. ಪುಟ: ೩

೪೪. ಚಿತ್ರಕಲಾ ದರ್ಪಣ, ವಿ.ಟಿ. ಕಾಳೆ, ಪುಟ: ೫

೪೫. ಬಹಳ ಬಹಳ ಹಿಂದೆ, ಡಾ. ಶಿವರಾಮಕಾರಾಂತ, ನಾಗರಿಕತೆಯ ಹೊಸ್ತಿಲಲ್ಲಿ, ಪುಟ: ೪೧

೪೬. ಕರ್ನಾಟಕ ಪ್ರಾಗಿತಿಹಾಸ ಕಾಲದ ಕಲೆ, ಅ. ಸುಂದರ, ಪುಟ: ೪೧

೪೭. 'ಶಿಲಾಯುಗದ ಮಾನವರ ಕಲಾಸಾಧನೆ', ಡಾ. ಶಿವರಾಮಕಾರಂತ, ಕಲಾ ಪ್ರಪಂಚ, ಪುಟ: ೧೦೨-೧೦೩

೪೮. ಆದಿವಾಸಿಗಳಲ್ಲಿ ಕಂಡುಬರುವ ಧರ್ಮನಿಷ್ಠೆ ಅಥವಾ ಧಾರ್ಮಿಕ ಭಾವನೆಗಳು, ದಯಾನಂದ, ಸಾಧನೆ, ಸಂಪುಟ: ೧೦

೪೯. ಆದಿಮಾನವನ ಚಿತ್ರಕಲೆ, ಬಿ.ಪಿ. ಬಾಯಿರಿ, ಭಾರತೀಯ ಚಿತ್ರಕಲೆ, ಪುಟ: ೪

೫೦. ಅದೇ. ಪುಟ: ೪

೫೧. ಹೆಚ್ಚಿನ ವಿವರಗಳಿಗೆ ಅ. ಸುಂದರ ಅವರ ಕರ್ನಾಟಕ ಪ್ರಾಗಿತಿಹಾಸಿಕ ಕಲೆ ಕೃತಿಯನ್ನು ನೋಡಿ

೫೨. ಕರ್ನಾಟಕ ಬುಡಕಟ್ಟುಗಳು, ಡಾ.ಎಚ್.ಜೆ. ಲಕ್ಕಪ್ಪಗೌಡ, ಪ್ರಸ್ತಾವನೆಯಿಂದ, ಸಂಪುಟ: ೧

೫೩. ಕರ್ನಾಟಕ ಜನಪದ ಚಿತ್ರಕಲೆ, ಡಾ.ಎಸ್.ಸಿ. ಪಾಟೀಲ, ಪುಟ: ೨೦

೫೪. ಅದೇ. ಪುಟ: ೨೧

೫೫. ಮರಿಶಾಮಾಚಾರಿ, ಕಲಾಕೋಶ, ಪುಟ: ೩೧

೫೬. ಅದೇ. ಪುಟ: ೩೩

❄❄❄❄❄

ಅಧ್ಯಾಯ ೩

ಅಧ್ಯಯನಕ್ಕೊಳಪಡುವ ಬುಡಕಟ್ಟುಗಳ ಪರಿಚಯ

ಅಧ್ಯಯನಕ್ಕೊಳಪಡುವ ಬುಡಕಟ್ಟುಗಳ ಪರಿಚಯ

ಕರ್ನಾಟಕ ಬುಡಕಟ್ಟುಗಳು ಸಂಪುಟ ಒಂದು ಮತ್ತು ಎರಡರಲ್ಲಿ ನಲವತ್ತು ಬುಡಕಟ್ಟು ಸಮುದಾಯಗಳನ್ನು ಪರಿಚಯಿಸಲಾಗಿದೆ. ವಿವಿಧ ವಿದ್ವಾಂಸರಿಂದ ಬರೆಸಿ ಈ ಕೃತಿಗಳಲ್ಲಿ ಸಂಗ್ರಹಿಸಿರುವ ವಿವಿಧ ಬುಡಕಟ್ಟು ಸಮುದಾಯದವರ ಬದುಕು, ಜೀವನ ವಿಧಾನ, ಆಚರಣೆ, ಸಂಪ್ರದಾಯ, ಕಲೆ, ಸಾಹಿತ್ಯ, ಊಟೋಪಚಾರ, ಉಡುಗೆ-ತೊಡಿಗೆ ಮುಂತಾದವುಗಳ ಬಗ್ಗೆ ಮಾಹಿತಿಯನ್ನು ಒಳಗೊಂಡಿವೆ. ಪ್ರೊ. ಬರಗೂರು ರಾಮಚಂದ್ರಪ್ಪನವರು ವಿವಿಧ ವಿದ್ವಾಂಸರಿಂದ ಸುಮಾರು ನಲವತ್ತು ಸಮುದಾಯಗಳ ಜೀವನ ವಿಧಾನಗಳನ್ನು ಬರೆಯಿಸಿ. ಅವುಗಳನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ವತಿಯಿಂದ ಉಪಸಂಸ್ಕೃತಿ ಮಾಲೆಯಡಿಯಲ್ಲಿ ಪುಸ್ತಕ ರೂಪದಲ್ಲಿ ಹೊರತಂದಿದ್ದಾರೆ. ಈ ಕೃತಿಗಳಲ್ಲಿ "ಊರು ಮತ್ತು ಕಾಡುಗಳ ಚರ್ಚೆಯಲ್ಲಿ ಗಮನಿಸಬೇಕಾದ ಅಂಶ ಕಾಡೊಳಗೆ-ಕಾಡಂಚಲ್ಲಿ, ಊರೊಳಗೆ-ಊರಂಚಲ್ಲಿ ಉಪಸಂಸ್ಕೃತಿಯ ನೆಲೆಗಳು ಇರುತ್ತವೆ ಎಂಬುದು. ಕಾಡಿನಿಂದ ಊರಿಗೆ ಬಂದಾಗಲೂ ಸಂಸ್ಕೃತಿಯ ಮೂಲ ರೂಪಿಕೆಗಳು ಮರೆಯಾಗದಿದ್ದರೆ ಅಂಥವರೂ ಉಪಸಂಸ್ಕೃತಿಯ ಕಕ್ಷೆಗೆ ಬರುತ್ತಾರೆಂಬ ತಿಳುವಳಿಕೆಯಿಂದ ಊರೊಳಗೂ ಉಪಸಂಸ್ಕೃತಿ ಇರುತ್ತವೆಂದು ಅರ್ಥೈಸಿದ್ದಾರೆ. ಈ ದೃಷ್ಟಿಯಿಂದ ನೋಡಿದಾಗ ನಮ್ಮದು ಬಹು ಸಂಸ್ಕೃತಿಗಳ ದೇಶ ಉಪಸಂಸ್ಕೃತಿಗಳ ದೇಶ ಸಂಸ್ಕೃತಿ ಎನ್ನುವುದು ಉಪಸಂಸ್ಕೃತಿಗಳ ಒಂದು ಒಕ್ಕೂಟ."[೧] ಎಂಬ ಅಂಶವನ್ನು ಉಪಸಂಸ್ಕೃತಿ ಮಾಲೆಯಡಿಯಲ್ಲಿ ತಂದ ಪುಸ್ತಕಗಳು ಪ್ರಸ್ತಾವನೆಯಲ್ಲಿ ಬರಗೂರು ರಾಮಚಂದ್ರಪ್ಪನವರು ತಂದ ಪುಸ್ತಕಗಳು ಚರ್ಚಿಸಿದ್ದಾರೆ.

ನನ್ನ ಈ ಅಧ್ಯಯನವು ಕರ್ನಾಟಕ ಭೂಪ್ರದೇಶದಲ್ಲಿರುವ ಕೆಲವು ಬುಡಕಟ್ಟು ಸಮುದಾಯಗಳಿಗೆ ಸೀಮಿತಿಗೊಳಿಸಿಕೊಂಡಿದ್ದೇನೆ. ಹಾಗಾಗಿ ಇಲ್ಲಿ ಕೇವಲ ಹನ್ನೆರಡು ಬುಡಕಟ್ಟು ಸಮುದಾಯಗಳು ಅಧ್ಯಯನಕ್ಕೆ ಒಳಗೊಳ್ಳುತ್ತಿವೆ. ಅವರಲ್ಲಿ ಮುಖ್ಯವಾಗಿ ೧. ಸೋಲಿಗರು, ೨. ಜೇನು ಕುರುಬರು, ೩. ಕಾಡು ಕುರಬರು, ೪.ಯರವರು, ೫. ಪಣಿಯರು, ೬. ಹಸಲರು, ೭. ದೀವರು, ೮. ಗೊಂಡರು, ೯. ಕುಣಬಿಯರು, ೧೦. ಹಾಲಕ್ಕಿ ಒಕ್ಕಲಿಗರು, ೧೧. ಗೌಳಿಗರು, ೧೨. ಸಿದ್ಧಿಯರು ಈ ಬುಡಕಟ್ಟುಗಳ ಪರಿಚಯ ಈ ಕೆಳಗಿನಂತೆ ನೀಡಲಾಗಿದ್ದು, ಅಧ್ಯಯನದ ದೃಷ್ಟಿಯಿಂದ ಇವುಗಳ ಪರಿಚಯವನ್ನು ಸಂಕ್ಷಿಪ್ತವಾಗಿ ಮಾಡಿಕೊಡಲಾಗಿದೆ.



ಸೋಲಿಗರು ವಾಸಮಾಡುವ ಸ್ಥಳಗಳಿಗೆ ಪೋಡು ಎಂದು ಕರೆಯುತ್ತಾರೆ. ಇವರು ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಹೆಚ್ಚಾಗಿ ಕಂಡು ಬರುತ್ತಾರೆ. ಅದರಲ್ಲೂ ಬಿಳಿಗಿರಿ ರಂಗನ ಬೆಟ್ಟ, ಮಲೆಮಾದೇಶ್ವರ ಬೆಟ್ಟಗಳ ಸುತ್ತಮುತ್ತಲಿನ ಕಾಡು ಗಳಲ್ಲಿ ಹಾಗೂ ಯಳಂದೂರು, ಹೆಗ್ಗಡದೇವನಕೋಟೆ, ಹುಣಸೂರು ತಾಲ್ಲೂಕುಗಳಲ್ಲಿ ಇವರ ವಾಸ ಹೆಚ್ಚಾಗಿ ಇರುವುದನ್ನು ನೋಡುತ್ತೇವೆ. ಸೋಲಿಗರು ವಾಸಿಸುವ ಭೂಪ್ರದೇಶ ಸಾಮಾನ್ಯವಾಗಿ ಅರಣ್ಯ ಪ್ರದೇಶವಾಗಿರುತ್ತದೆ. ಕಾಡಿನಲ್ಲಿ ಸಿಗುವ ಆಹಾರ ಸಾಮಗ್ರಿ ಹಾಗೂ ಇತರೆ ವಸ್ತುಗಳನ್ನು ಸಂಗ್ರಹಣೆ ಮಾಡುತ್ತಾ ಕೂಲಿ ಹಾಗೂ ವ್ಯವಸಾಯದ ಜೀವನವನ್ನು ಸಾಗಿಸುತ್ತಾರೆ. ಕಾಡಿನಲ್ಲಿ ಸಿಗುವ ಬೇರು, ತೊಗಟೆ ಮುಂತಾದವುಗಳನ್ನು ಸಂಗ್ರಹಿಸಿ ಸಂಬಂಧಿಸಿದ ಕೇಂದ್ರಗಳಿಗೆ ಕೊಡುತ್ತಾರೆ. ಜೇನು ಬಿಚ್ಚುವುದು, ಮರಗಳ ಪಾಚಿ ತೆಗೆಯುವುದು, ಕಾಡಿನಲ್ಲಿ ಸಿಗುವ ಹಲವು ಬಗೆಯ ಬೀಜಗಳನ್ನು ಸಂಗ್ರಹಿಸುವ ಮೂಲಕ ಬದುಕನ್ನು ಸಾಗಿಸುತ್ತಾ ಜೀವನವನ್ನು ಸಾಗಿಸುತ್ತಿದ್ದಾರೆ.

ಸೋಲಿಗರು ತಮ್ಮ ಹೊಟ್ಟೆಪಾಡಿಗಾಗಿ ಬಿದಿರು, ಬೆತ್ತಗಳಿಂದ ಬುಟ್ಟಿ, ಮೊರ, ಚಾಪೆ ಮುಂತಾದ ಜೀವನಾವಶ್ಯಕ ಸಾಮಗ್ರಿಗಳನ್ನು ತಯಾರುಮಾಡಿ ಸಂತೆ, ಜಾತ್ರೆಗಳಲ್ಲಿ, ದೇವಸ್ಥಾನಗಳ ಹತ್ತಿರ ಇಟ್ಟು ಮಾರಾಟಮಾಡುತ್ತಾರೆ. ಇದು ಸೋಲಿಗರ ಜೀವನ ನಿರ್ವಹಣೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದೆ.

ಪೂಜೆಗೆ ಮತ್ತು ಹಬ್ಬಗಳಿಗೆ ಸಂಬಂಧಿಸಿದಂತೆ ಸೋಲಿಗರು ಪ್ರಕೃತಿ ಪೂಜೆಯನ್ನು ಮಾಡುತ್ತಾರೆ. ಕೃಷಿಗೆ ಸಂಬಂಧಿಸಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಅವುಗಳಲ್ಲಿ ಹೊಸ ರಾಗಿ ಹಬ್ಬ, ರೊಟ್ಟಿ ಹಬ್ಬ, ಮುನಿ ಮಾಡುವುದು, ಸಂಕಮ್ಮನ ಹಬ್ಬ, ದನದ ಹಬ್ಬ, ಮಾರಿ ಹಬ್ಬ ಹೀಗೆ ಮುಂತಾದ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಇವುಗಳನ್ನು ತಮ್ಮ ಸಮುದಾಯಗಳ ಹಿನ್ನೆಲೆಯಲ್ಲಿ ಆಚರಿಸುತ್ತಾರೆ. ಇಲ್ಲಿಯ ಪ್ರಾದೇಶಿಕ ದೇವರುಗಳಾದ ಮಲೆಮಾದೇಶ್ವರ, ಬಿಳಿಗಿರಿರಂಗನಾಥನ ಆರಾಧಕರೂ ಆಗಿದ್ದಾರೆ. ಈ ದೇವರ ಜಾತ್ರೆಗಳಲ್ಲಿ ಇವರ ಪಾತ್ರ ಬಹಳ ಮುಖ್ಯವಾಗಿ ಕಂಡುಬರುತ್ತದೆ.

ಇವರು ವಿವಾಹಕ್ಕೆ ಸಂಬಂಧಿಸಿದಂತೆ ಹಿಂದಿನಿಂದ ನೆಡೆದುಕೊಂಡು ಬಂದಂಥ ಸಂಪ್ರದಾಯವನ್ನು



ಆಚರಿಸಿಕೊಂಡು ಬರುತ್ತಿದ್ದಾರೆ. ಇವರಲ್ಲಿ ಹಲವು ರೀತಿಯ ಮದುವೆಗಳನ್ನು ನೋಡಬಹುದಾಗಿದೆ. ಅವುಗಳಲ್ಲಿ ಅಪಹರಣ ವಿವಾಹವು ಪದ್ಧತಿ ಹೆಚ್ಚಾಗಿ ಪ್ರಚಾರದಲ್ಲಿದೆ. ಈ ಪದ್ಧತಿಯು ಪರಿಸ್ಪರ ಹೊಂದಿಕೊಂಡು ಬದುಕಲು ಸಹಕಾರಿಯಾಗುತ್ತದೆ. ಈ ವಿವಾಹ ಪ್ರಕೃತಿಯಲ್ಲಿ ಬದುಕಲು ಸಹಕಾರಿಯಾಗುತ್ತದೆ. ಹಾಗೆಯೇ ಪ್ರತೀಕವಾಗಿ ಜೀವಿಸಲು ತೊಡಗುವುದು ಆಗಿರುತ್ತದೆ."[೨] ಇದಕ್ಕೆ ಸಂಬಂಧಿಸಿದಂತೆ ಧಾರ್ಮಿಕ ಹಿನ್ನೆಲೆಯನ್ನು ಸೋಲಿಗರು ತಮ್ಮ ಕಥೆಗಳಲ್ಲಿ ನೀಡುತ್ತಾರೆ. ಸೋಲಿಗರಲ್ಲಿ ವಿವಾಹಕ್ಕೆ ಸಂಬಂಧಿಸಿದ ಎಲ್ಲಾ ನಿಯಮಗಳು ತಮ್ಮ ಸಮುದಾಯದ ಸಂಪ್ರದಾಯದಂತೆಯೇ ನಡೆಯುತ್ತವೆ.


050530

ಸೋಲಿಗರ ವಾಸಸ್ಥಳಗಳು ಬಹಳ ವಿಶೇಷವಾಗಿಯೇ ಇರುತ್ತವೆ. ಇವರು ತಮ್ಮ ಸಮುದಾಯಗಳ ಮಾದರಿ ಮನೆಯಂತೆಯೇ ಮನೆಗಳನ್ನು ಕಟ್ಟಿಕೊಳ್ಳುತ್ತಾರೆ. ಈ ಮನೆಗಳು ಅತ್ಯಂತ ಅಗತ್ಯ ವಿಸ್ತೀರ್ಣವನ್ನು ಮಾತ್ರ ಹೊಂದಿರುತ್ತವೆ. ಮನೆಯ ಒಳಗೆ ಸೋಲಿಗರನ್ನು ಬಿಟ್ಟರೆ ಬೇರೆ ಸಮುದಾಯದವರಿಗೆ ಪ್ರವೇಶವನ್ನು ನೀಡುವುದಿಲ್ಲ. ನೀತಿನಿಯಮ, ಕಟ್ಟುಪಾಡು, ಸಂಪ್ರದಾಯಗಳನ್ನು ಜೊತೆಗಿರಿಸಿಕೊಂಡು ಬದುಕನ್ನು ನಡೆಸುತ್ತಾ ಬಂದಿದ್ದಾರೆ. ಇವರ ಮನೆಗಳು ಸಂಪೂರ್ಣವಾಗಿ ಕಟ್ಟಿಗೆಯಿಂದ ಕಟ್ಟಿದ ಮನೆಗಳಾಗಿವೆ. ಈಚೆಗೆ ಸರ್ಕಾರ ಕಟ್ಟಿಕೊಟ್ಟ ಮನೆಗಳು ಸೋಲಿಗರ ಮನೆಯ ಸ್ವರೂಪಕ್ಕಿಂತ ಭಿನ್ನತೆಯನ್ನು ಹೊಂದಿವೆ. ಆದರೂ ಕಾಡಿನ ಒಳಭಾಗದಲ್ಲಿರುವ ಪೋಡುಗಳಿಗೆ ಭೇಟಿ ನೀಡಿದಾಗ ಸೋಲಿಗರ ಮನೆ ಮಾದರಿಗಳು ಅವರ ಸಂಸ್ಕೃತಿ, ಸಂಪ್ರದಾಯ, ಆಚರಣೆ, ಊಟೋಪಚಾರ ಮುಂತಾದವನ್ನು ಭಿನ್ನವಾಗಿ ಪರಿಚಯಿಸುತ್ತವೆ. ಕ್ಷೇತ್ರಕಾರ್ಯಕ್ಕೆ ಸಂಬಂಧಿಸಿದ ಪೋಡುಗಳ ವಿವರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.

ಸೋಲಿಗರು ವ್ಯವಸಾಯವನ್ನು ಮುಖ್ಯ ವೃತ್ತಿಯಾಗಿ ಮಾಡಿಕೊಂಡಿದ್ದಾರೆ. ಈ ವ್ಯವಸಾಯದಿಂದ ವರ್ಷಕ್ಕೆ ಪೂರ್ತಿ ಆಗುವಷ್ಟು ಆಹಾರ ದೊರೆಯುವುದಿಲ್ಲ. ಅಷ್ಟು ಕಡಿಮೆ ವಿಸ್ತೀರ್ಣದ ಭೂಮಿಯನ್ನು ಹೊಂದಿದ್ದು, ಭೂಮಿ ಇಲ್ಲದ ಕೆಲವರು ಕೂಲಿಯನ್ನು ಮಾಡುತ್ತಾರೆ. ಇನ್ನೂ ಕೆಲವರು ಕೆತ್ತನೆ ಕೆಲಸವನ್ನು ಮಾಡುತ್ತಾರೆ. ಸೋಲಿಗರಲ್ಲಿ ತೊಂಬತ್ತು ಭಾಗ ಕುಟುಂಬಗಳು ವ್ಯವಸಾಯವನ್ನು ಮುಖ್ಯವೃತ್ತಿಯನ್ನಾಗಿ ಅವಲಂಬಿಸಿದ್ದಾರೆ. ನೀರಾವರಿಗಿಂತ ಹೆಚ್ಚಾಗಿ ಮಳೆಯನ್ನೇ ಆಶ್ರಯಿಸಿ ನಡೆಯುವ ಇವರ ವ್ಯವಸಾಯಕ್ರಮ ಪರಂಪರಾಗತವಾದುದೇ ಹೊರತು ಆಧುನಿಕವಲ್ಲ. ವ್ಯವಸಾಯದ ಜೊತೆಯಲ್ಲಿ ಬೇಟೆ, ಜೇನು ಕೊಯ್ಯುವುದು, ಗೆಡ್ಡೆ ಗೆಣಸು ಕೀಳುವುದು. ಕಾಡುಮರದ ಹಣ್ಣುಗಳನ್ನು ಕೀಳುವುದು ಮುಂತಾದ ಕೆಲಸಗಳನ್ನು ಮಾಡುತ್ತಾರೆ."[೩] ಅಷ್ಟೇ ಅಲ್ಲ ಕಾಡಿನಲ್ಲಿ ಸಿಗುವ ಇತರೆ ಜೀವನಾವಶ್ಯಕ ಸಂಪನ್ಮೂಲಗಳನ್ನು ಸಂಗ್ರಹಿಸಿ ಜೀವನವನ್ನು ನಡೆಸುತ್ತಾರೆ.

ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕನ್ನಡ ವಿಶ್ವವಿದ್ಯಾಲಯ, ಹಂಪಿ
ಗ್ರಂಥಾಲಯ



ಜೇನುಕುರುಬರು ಪ್ರಮುಖವಾಗಿ ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ, ಹುಣಸೂರು ತಾಲ್ಲೂಕುಗಳಲ್ಲಿ, ಕೊಡಗು ಜಿಲ್ಲೆಯ ಕುಶಾಲನಗರ, ಸೋಮವಾರಪೇಟೆ ಮತ್ತು ಮಡಿಕೇರಿ ತಾಲ್ಲೂಕುಗಳಲ್ಲಿ ಹೆಚ್ಚಾಗಿ ವಾಸಮಾಡುತ್ತಿದ್ದಾರೆ. ಅದರಲ್ಲೂ ಹೆಗ್ಗಡದೇವನಕೋಟೆಯ ರಾಜೀವಗಾಂಧಿ ಉದ್ಯಾನವನ (ಕಾಕನಕೋಟೆ ಕಾಡು), ಹುಣಸೂರು ತಾಲ್ಲೂಕಿನ ನಾಗರಹೊಳೆ ಕಾಡಿನ ಅಂಚಿನಲ್ಲಿ ವಾಸ ಮಾಡುತ್ತಿದ್ದಾರೆ. ಇವರು ಕಾಡಿನಲ್ಲೇ ಅಲೆಮಾರಿಗಳಾಗಿ ವಾಸಮಾಡುತ್ತಿದ್ದರೆಂದು ತಿಳಿದುಬರುತ್ತದೆ. ಅದಕ್ಕೆ ಯಾವ ಭೌಗೋಳಿಕವಾದ ನಿರ್ದಿಷ್ಟ ಮೇರೆ ಇಲ್ಲ. ಇವರು 'ಯಜಮಾನರ' ಕೆಳಗೆ ಬದುಕುತ್ತಾ ಬಂದರೂ ಅವರು ವಾಸಿಸುತ್ತಿದ್ದ ಕಾಡೆಲ್ಲವೂ ತಮ್ಮದೇ ಎಂದು ತಿಳಿದಿದ್ದರು. ಇವರು ಮೂಲತಃ ಅಲೆಮಾರಿಗಳಾಗಿದ್ದು ಕಾಡಿನಲ್ಲಿ ಸ್ಥಳಾಂತರವಾಗುತ್ತಾ ಜೀವನವನ್ನು ಸಾಗಿಸುತ್ತಾ ಬಂದವರು ಆಗಿದ್ದಾರೆ. ಇಂದು ಸರ್ಕಾರದ ಕಾನೂನುಗಳು ಅವರನ್ನು ಕೆಲವು ಕಡೆ ನೆಲೆ ನಿಲ್ಲಿಸಿದೆ.

ಇವರು ಕುಮರಿ ಬೇಸಾಯವನ್ನು ಮಾಡಿಕೊಂಡು ತಮಗೆ ಬೇಕಾದ ರಾಗಿಯನ್ನು ಬೆಳೆದುಕೊಳ್ಳುತ್ತಾರೆ. ಜೊತೆಗೆ ಗೆಣಸುಗಳನ್ನು ಬೆಳೆದುಕೊಳ್ಳುತ್ತಾರೆ. ಕತ್ತರಿಸಿದ (ಸೀಳಿದ) ಬಿದಿರುಗಳಿಂದ ಗುಡಿಸಲುಗಳನ್ನು ಕಟ್ಟಿಕೊಳ್ಳುತ್ತಾರೆ. ಹಾಗೆಯೇ ಸಂಪ್ರದಾಯದಂತೆ ವರ್ಷಕ್ಕೊಮ್ಮೆ ಗುಡಿಸಲುಗಳನ್ನು ಬದಲಿಸುತ್ತಾರೆ. ಇದು ಇವರ ಪದ್ಧತಿಗಳಲ್ಲಿ ಒಂದು. ಇದರಿಂದ ಇವರು ಅಲೆಮಾರಿ ಬುಡಕಟ್ಟು ಎಂಬುದು ಸ್ಪಷ್ಟಗೊಳ್ಳುತ್ತದೆ.

ಜೇನು ಕುರುಬರು ಹೆಚ್ಚು ಶಿಷ್ಟಾಚಾರದ ಜೀವನವನ್ನು ನಡೆಸುತ್ತಿದ್ದು, ಹೊರಗಿನ ಜನರೊಂದಿಗೆ, ಸಮುದಾಯದವರೊಂದಿಗೆ ನಿಕಟ ಸಂಬಂಧವನ್ನು ಇಟ್ಟುಕೊಳ್ಳಲು ಇಷ್ಟಪಡುವುದಿಲ್ಲ. ತಮ್ಮದೇ ಆದ ಕೆಲಸಕಾರ್ಯಗಳಲ್ಲಿ ತೊಡಗಿ ಜೀವನವನ್ನು ಸಾಗಿಸುತ್ತಾರೆ. ಇದು ಹಿಂದಿನಿಂದಲೂ ನಡೆದುಕೊಂಡು ಬಂದ ಪದ್ಧತಿ. ಇವರ ಗುಡಿಸಲುಗಳ ಮುಂದೆ ಬೆಂಕಿಯ ಕುಂಡ ಇರುತ್ತದೆ. ಇದು ಅವರ ಮನೆಗಳು ಇರುವ ಪ್ರದೇಶವೆಂದು ಗೊತ್ತಾಗುತ್ತದೆ. ಇವರು ಒಬ್ಬ ಅನುಭವಸ್ಥ ಹಿರಿಯನನ್ನು ಸಮುದಾಯ ಮುಖ್ಯಸ್ಥನನ್ನಾಗಿ ಮಾಡಿಕೊಂಡಿರುತ್ತಾರೆ. ಈತನ ಮಾತನ್ನು ಎಲ್ಲರೂ ತೀರ್ಮಾನವೇ ಅಂತಿಮವಾಗಿರುತ್ತದೆ. ಅದನ್ನು ಬಹು ಶ್ರದ್ಧೆಯಿಂದ ಪಾಲಿಸುತ್ತಾರೆ.

ಜೇನು ಕುರುಬರ ಬಹುಮುಖ್ಯವಾದ ಕಸುಬು ಜೇನುಬಿಚ್ಚುವುದು. ಇದರಿಂದ ಇವರಿಗೆ ಜೇನು ಕುರುಬರು ಎಂದು ಹೆಸರು ಬಂದಿದೆ. ಜೇನನ್ನು ಬಿಚ್ಚುವಾಗ ಅಥವಾ ಕೊಯ್ಯುವಾಗ ಸಾಮಾನ್ಯವಾಗಿ



ಗುಂಪಾಗಿ ಹೋಗಿ ಜೇನನ್ನು ತರುತ್ತಾರೆ. ಹಣ್ಣುಹಂಪಲು, ಗೆಡ್ಡೆಗೆಣಸುಗಳನ್ನು ಸಂಗ್ರಹಿಸುವಾಗಲು ಸಹ ಈ ಪದ್ಧತಿಯನ್ನು ಅನುಸರಿಸುತ್ತಾರೆ. ಇವರಲ್ಲಿ ಕೊಂತಿ ಪೂಜೆಯು ಬಹಳ ವಿಶಿಷ್ಟವಾದ ಆಚರಣೆ. ಇದು ಸೃಷ್ಟಿ ಶಕ್ತಿಯ ಚಿಹ್ನೆಯ ಆರಾಧನೆಯನ್ನು ಸಂಕೇತಿಸುವ ಹಬ್ಬವಾಗಿದೆ. ಇವರಲ್ಲಿ ದೇವರಗುಡ್ಡಪದ್ಧತಿಯುಂಟು. ದೇವರಗುಡ್ಡನಾದವನು ತಮ್ಮ ಜನಾಂಗದಲ್ಲಿರುವ ನಂಬಿಕೆಗಳನ್ನು ಕ್ರಿಯಾವಿಧಾನಗಳನ್ನು ಮೀರುವಂತಿಲ್ಲ. ದೇವರುಗುಡ್ಡನಾದ ವ್ಯಕ್ತಿ ಮದುವೆಯಾಗಲು ಯಾವುದೇ ನಿರ್ಭಂದವಿರುವುದಿಲ್ಲ. ದೇವರುಗುಡ್ಡನಾಗಲು ಕನಿಷ್ಟ ಹದಿನೈದು ವರ್ಷದ ಮೇಲಾಗಿರಬೇಕು. ಈ ಗುಡ್ಡದ ಕೆಲಸಗಳಲ್ಲಿ ಗಾಳಿ ಕರೆಯುವ ಪದ್ಧತಿಯುಂಟು. ಇದನ್ನು ಬುಂಡೆ ಕರೆಯುವುದು ಎಂದು ಕರೆಯುತ್ತಾರೆ. ಅಮವಾಸ್ಯೆ ಅಥವಾ ಪೂರ್ಣಿಮೆಯಂದು ಪೂಜೆಯನ್ನು ಮಾಡಿ ಬುಂಡೆಯನ್ನು ಕರೆಯುತ್ತಾರೆ. ಈ ಬುಂಡೆಯಲ್ಲಿ ತಮ್ಮ ಆದಿ ಅಯ್ಯನನ್ನು ಬಂದಿಸಿಟ್ಟು ಅವನ ಆತ್ಮವನ್ನು ಕಲೆಯುವುದೇ ಆಗಿರುತ್ತದೆ. ತಮ್ಮ ಕಷ್ಟಗಳ ಕಾಲದಲ್ಲಿ ಈ ಕ್ರಿಯೆಯನ್ನು ಮಾಡುತ್ತಾರೆ. ಇದು ಜೇನುಕುರುಬರ ಸಮುದಾಯದ ಸಾಮೂಹಿಕ ಕ್ರಿಯೆ ಆಗಿರುತ್ತದೆ ಇಲ್ಲವೆ ಕೆಲವೊಮ್ಮೆ ವ್ಯಕ್ತಿಗೆ ಸಂಬಧಿಸಿದ ಕ್ರಿಯೆಯೂ ಆಗಿರುತ್ತದೆ.

ಜೇನುಕುರುಬರು ತಮ್ಮದೇ ಆದಂತ ವೈದ್ಯ ಪದ್ಧತಿಯನ್ನು ಕಂಡುಕೊಂಡಿದ್ದಾರೆ. ಜೊತೆಗೆ ಮಾವ, ಪೂಜೆ ಇತ್ಯಾದಿ ನಂಬಿಕೆಗಳನ್ನು ಇಟ್ಟುಕೊಂಡು ತಮ್ಮ ಸಾಮಾಜಿಕ ಬದುಕನ್ನು ನಡೆಸುತ್ತಿದ್ದಾರೆ. ಇವರ ಸಣ್ಣ ಮನೆಗಳು, ಮನೆಗಳ ಮೇಲಿನ ಚಿತ್ರಗಳು ತಮ್ಮದೇ ಆದಂತ ಸಮುದಾಯಿಕ ವೈಶಿಷ್ಟ್ಯತೆಯನ್ನು ಹೊಂದಿವೆ.

೩. ಕಾಡು ಕುರುಬರು



ಕಾಡುಕುರುಬರೂ ಕೂಡ ಇಲ್ಲಿಯ ಇತರೆ ಬುಡಕಟ್ಟು ಸಮುದಾಯದವರಂತೆ ದಟ್ಟವಾದ ಕಾಡಿನಲ್ಲಿ ಇರುವಂತವರು. ಇವರ ಹೆಸರೇ ಸೂಚಿಸುವಂತೆ ಇವರು ಕಾಡಿನಲ್ಲಿ ಇರುವಂತವರು. ಇವರು ಮೈಸೂರು ಜಿಲ್ಲೆ ಚಾಮರಾಜನಗರ ಮತ್ತು ಮಡಿಕೇರಿ ಜಿಲ್ಲೆಗಳಲ್ಲಿ ಕಾಣಸಿಗುತ್ತಾರೆ. ಇವರು ಹೆಗ್ಗಡದೇವನ ಕೋಟೆ, ಕೊಳ್ಳೇಗಾಲ, ಹುಣಸೂರು ತಲ್ಲೂಕಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಹಾಗೆಯೇ ಚಾಮರಾಜನಗರ, ಯಳಂದೂರು, ಗುಂಡ್ಲಪೇಟೆ, ನಂಜನಗೂಡು ಮತ್ತು ಪಿರಿಯಾಪಟ್ಟಣ ತಾಲ್ಲೂಕುಗಳಲ್ಲಿ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಇವರು ಒಂದೆಡೆ ನಿಂತು ಜೀವಿಸುವ ಜನರಲ್ಲ. ಕಾಡಲ್ಲೇ ಒಂದೆಡೆಯಿಂದ ಇನ್ನೊಂದೆಡೆಗೆ ಹೋಗಿ ಜೀವನ ನಡೆಸುವಂತವರು. ಇವರು ಅಲೆಮಾರಿಗಳಾಗಿದ್ದಾರೆ. ಇದಕ್ಕೆ ಆಹಾರ ಸಂಗ್ರಹಣೆಯೇ ಕಾರಣ. "ಈ ಕಾಡುಕುರುಬರು ಹಾಗೂ



ಜೇನುಕುರಬರು ಕೇರಾಳದ ವೈನಾಡಿನ ಮುಳ್ಳುಕುರುಂಬ ಹಾಗೂ ತಮಿಳುನಾಡಿನ ನೀಲಗರಿಯ ಕುರುಂಬ ಬುಡಕಟ್ಟು ಜನರೊಂದಿಗೆ ನೇರಸಂಪರ್ಕವನ್ನು ಬೆಳೆಸಿಕೊಂಡು ಪ್ರತ್ಯೇಕ ಅವಲೋಕನಾ ವಿಧಾನವನ್ನು ಅನುಸರಿಸಿ ಸಂಶೋಧನೆ ನಡೆಸಿದ ಪಿ.ಕಿ. ಮಿಶ್ರ ಅವರು, ಸಾಂಸ್ಕೃತಿಕವಾಗಿ ನೋಡಿದರೆ ಮೈಸೂರಿನ ಜೇನುಕುರುಬ ಮತ್ತು ನೀಲಗಿರಿಯ ಕುರುಬ ಜನರ ನಡುವೆ ಗಮನಾರ್ಹವಾದ ಸಾದೃಶ್ಯಗಳಿರುವುದನ್ನು ಕಾಣಬಹುದು. ಈ ಎರಡೂ ಆಹಾರ ಸಂಗ್ರಹಣೆಯ ಬುಡಕಟ್ಟುಗಳು”[೫] ಅವರ ಹತ್ತಿರ ಬೇಟೆಗೆ ಸಂಬಂಧಿಸಿದ ಸಾಮಗ್ರಿಗಳಿರುವುದನ್ನು ನೋಡಬಹುದು. “ಕಾಡು ಜೀವಿಗಳಾಗಿರುವ ಕುರುಬರಲ್ಲಿ ಬೆಟ್ಟ ಅಥವಾ ಬೆತ್ತ (ಕಾಡು) ಕುರುಬ, ಜೇನುಕುರುಬ, ಮುಳ್ಳುಕುರುಬ ಮುಂತಾದ ವೃತ್ತಿ ಹಾಗೂ ವರ್ಗ ಸೂಚಕ ಪ್ರಬೇಧಗಳನ್ನು ನೋಡಬಹುದು. ಗಿರಿವಾಸಿಗಳಾಗಿರುವ ಇವರು ಬೆತ್ತ ಅಥವಾ ಬಿದಿರನ್ನು ಬಳಸಿ ಮೊರ, ಬುಟ್ಟಿ ಇತ್ಯಾದಿಗಳನ್ನು ತಯಾರಿಸುವ ಬುಡಕಟ್ಟಿನ ಜನರನ್ನು ಬೆಟ್ಟ ಅಥವಾ ಬೆತ್ತ ಅಥವಾ ಕಾಡುಕುರುಬರೆಂದು ಕರೆಯಲಾಗುತ್ತಿದೆ. ಕಾಡಿನೊಂದಿಗೆ ನಿಕಟ ಸಂಬಂಧವನ್ನು ಹೊಂದಿರುವ ಇವರನ್ನು ಕಾಡುಕುರುಬರೆಂದು ಕರೆಯಲಾಗುತ್ತಿದೆ.”[೬] ಇವರು ಹಿಂದೆ ಅಲೆಮಾರಿಗಳಾಗಿ ಬದುಕನ್ನು ನಡೆಸುತ್ತಿದ್ದರು. ಇಂದು ಹಲವು ಕಾರಣಗಳಿಂದ ನೆಲೆ ನಿಂತು ಬದುಕನ್ನು ನಡೆಸುತ್ತಿದ್ದಾರೆ.

ಕಾಡುಕುರುಬ ಬುಡಕಟ್ಟು ಸಮುದಾಯಗಳಲ್ಲಿ ಕಂಡುಬರುವ ವಿಭಿನ್ನ ಲಕ್ಷಣ ಹೊಂದಿರುವಂತೆ ಇವರ ದೈಹಿಕ ಲಕ್ಷಣವೂ ಕೂಡ ವಿಶಿಷ್ಟತೆಯನ್ನು ಹೊಂದಿರುವುದು ಕಾಣಸಿಗುತ್ತದೆ. ಅಂತೆಯೇ ಇವರ ಉಡುಪುಗಳೂ ಕೂಡ ವಿಶೇಷವಾಗಿ ಇರುವುದನ್ನು ನೋಡಬಹುದಾಗಿದೆ. ಜನಸಾಮಾನ್ಯರ ಉಡುಪಿಗಿಂತ ಭಿನ್ನವಾಗಿ ಇರುವುದನ್ನು ನಾವು ನೋಡುತ್ತೇವೆ. “ಪುರುಷರು ಲಂಗೋಟಿಯನ್ನು ಧರಿಸುತ್ತಾರೆ. ಅಥವಾ ಒಂದು ತುಂಡು ಪಂಚೆಯನ್ನು ಸೊಂಟಕ್ಕೆ ಕಟ್ಟಿ ಮಂಡಿಯವರೆಗೆ ಬರುವವರೆಗೆ ಉಡುತ್ತಾರೆ. ಕೆಲವರು ಅರೆ ತೋಳಿನ ಅಂಗಿಯನ್ನು ಹಾಕಿಕೊಳ್ಳುತ್ತಾರೆ. ಬನಿಯನ್ ತೊಟ್ಟಿರುತ್ತಾರೆ. ಸ್ತ್ರೀಯರು ಸುಮಾರು ನಾಲ್ಕು ಗಜದ ಸೀರೆಯನ್ನು ಬಹು ಸರಳ ರೀತಿಯಲ್ಲಿ ಉಡುತ್ತಾರೆ. ಕಾಡುಕುರುಬ ಮಹಿಳೆ ಎನ್ನುವಷ್ಟರ ಮಟ್ಟಿಗೆ ಸೀರೆ ಧರಿಸುವ ವಿನ್ಯಾಸವಿರುತ್ತದೆ. ಅಂದರೆ ಈ ಹೆಂಗಸರು ಬುಜಗಳಿಂದ ಕೆಳಗೆ ಎರಡು ಕಂಕುಳಿಂದ ಮಂಡಿಯವರೆಗೆ ಬರುವ ರೀತಿಯಲ್ಲಿ ಸೀರೆಯನ್ನು ಸುತ್ತಿ ಬೆನ್ನಿನ ಹಿಂದಕ್ಕೆ ತಂದು ಬಿಗಿದು ಕಟ್ಟಿಕೊಳ್ಳುತ್ತಾರೆ. ಇವರು ರವಿಕೆ ಹಾಕುವುದಿಲ್ಲ. ಆದರೆ ಇತ್ತೀಚಿಗೆ ಕಿರಿಯ ವಯಸ್ಸಿನ ಮಹಿಳೆಯರು ಸಾಮಾನ್ಯವಾಗಿ ರವಿಕೆಯನ್ನು ಹಾಕಿಕೊಂಡಿರುತ್ತಾರೆ.”[೭] ಇವರ ಉಡುಪುಗಳು ತಮ್ಮದೇ ಆದಂಥ ಸಂಸ್ಕೃತಿಯ ಹಿನ್ನೆಲೆಯನ್ನು ರೂಪುಗೊಂಡವಾಗಿರುತ್ತವೆ.


ಕಾಡುಕುರುಬರು ದಿನನಿತ್ಯದ ರಾಗಿಯನ್ನು ಮುಖ್ಯವಾಗಿ ಬಳಸುತ್ತಾರೆ. ರಾಗಿಮುದ್ದೆ, ಸೊಪ್ಪಿನ ಸಾರು ಇವರಿಗೆ ಇಷ್ಟವಾದ ಆಹಾರ. ಕಾಡಿನಲ್ಲಿ ಸಿಗುವ ಗೆಡ್ಡೆಗೆಣಸು, ಬಿದಿರ ಕಳಲೆ, ಇತ್ಯಾದಿಗಳನ್ನು ಬಳಸುತ್ತಾರೆ. ಇತ್ತೀಚಿಗೆ ಅಕ್ಕಿಯನ್ನು ಬಳಸುತ್ತಾರೆ. ತಮ್ಮದೇ ಆದ ಸಂಪ್ರದಾಯದ ಹಿನ್ನೆಲೆಯಲ್ಲಿ ಇವರ ಕುಟುಂಬ ವ್ಯವಸ್ಥೆ ಇರುತ್ತದೆ. ಇದಕ್ಕೆ ಸಂಬಂಧಸಿದ ಕಾರ್ಯಗಳು ಆಯಾ ವಿಧಿವಿಧಾನಗಳ

[illegible]

[illegible]

ಹಿನ್ನೆಲೆಯಲ್ಲಿ ನಡೆಯುತ್ತವೆ. ಇವರಲ್ಲಿ ಸಂಪ್ರದಾಯಿಕ ಕಲೆಗಳಂತೆ ಕೆಲವು ವೃತ್ತಿ ಕಲೆಗಳನ್ನು ಮಾಡುತ್ತಾರೆ. ವೃತ್ತಿ ಕಲೆಯಲ್ಲಿ ಬಿದಿರು ಬೆತ್ತಗಳಿಂದ ವಸ್ತುಗಳನ್ನು ತಯಾರು ಮಾಡುತ್ತಾರೆ. ಇವರು ಮಾಂಸಹಾರಿಗಳೂ ಹೌದು, ಸಸ್ಯಹಾರಿಗಳೂ ಹೌದು.

೪ ಯರವರು



ಯರವರು ಕರ್ನಾಟಕ ಕೇರಳ ಗಡಿಭಾಗದಲ್ಲಿ ಕಾಣಸುತ್ತಾರೆ. ಇವರು ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಮತ್ತು ದಕ್ಷಿಣಕೊಡಗಿನಲ್ಲಿ ಕಾಣಸುತ್ತಾರೆ. ಇವರು ಕರ್ನಾಟಕಕ್ಕೆ ಕೇರಳಾದ ಮೈನಾಡಿನಿಂದ ವಲಸೆ ಬಂದವರು ಎಂಬ ಮಾಹಿತಿಯನ್ನು ಕೆಲವು ವಿದ್ವಾಂಸರು ಸೂಚಿಸುತ್ತಾರೆ. "ಇತ್ತೀಚಿಗೆ ಕೆಲವು ಸಂಶೋಧಕರು ಇವರನ್ನು ಕೊಡಗಿನ ಮೂಲನಿವಾಸಿಗಳು ಎಂದು ಗುರುತಿಸುತ್ತಾರೆ. ಕೃಷ್ಣಯ್ಯ (೧೯೭೪) ಅವರು ಕ್ರಿ.ಶಕೆಯ ಪ್ರಾರಂಭಕ್ಕೆ ಮುಂಚೆಯೇ ಯರವರು ಮೈನಾಡಿನಿಂದ ಕೊಡಗಿಗೆ ಬಂದಿರಬಹುದೆಂದೂ, ಸುಬ್ಬಯ್ಯ, (೧೮೭೮) ಅವರು ಪಣಿಯ, ಯರವರು ಹದಿನೇಳನೇ ಶತಮಾನದ ಮಧ್ಯಭಾಗದಲ್ಲಿ ಬಡವಯರವ ಮತ್ತು ಪಂಜಿ ಯರವರು ಮೈಸೂರು ಮತ್ತಿತರ ಜಿಲ್ಲೆಗಳಿಂದ ಕೊಡಗಿಗೆ ಬಂದಿರಬೇಕೆಂದು ಊಹಿಸುತ್ತಾರೆ."[೮]

ಕೊಡಗಿನಲ್ಲಿ ವಾಸಿಸುತ್ತಿರುವ ಇವರು ಶ್ರಮಜೀವಿಗಳು "ಕೊಡವ ಭಾಷೆಯಲ್ಲಿ 'ಎರ' ಎಂದರೆ ಬೇಡು ಎಂದರ್ಥ. 'ಎರವ' ಎಂದರೆ 'ಬೇಡುವವನು' ಎಂಬ ಅರ್ಥ ಬರುತ್ತದೆ. ಆದ್ದರಿಂದ ಈ ಜನಾಂಗವನ್ನು ಕೊಡವರು ಯರವರು ಎಂದು ಕರೆದಿರಬೇಕು. ಕೊಡಗಿನಲ್ಲಿ ಗುಲಾಮರಾಗಿದ್ದವರು ಸಾಮಾನ್ಯವಾಗಿ ಯರವರು ಎಂದು ಗುರುತಿಸಲ್ಪಡುತ್ತಾರೆಂದು ಕೊನ್ನೂರ್ (೧೮೭೦) ಹೇಳುತ್ತಾರೆ."[೯] ಯರವರ ಮನೆಗಳೂ ಕೂಡ ಇತರ ಬುಡಕಟ್ಟು ಸಮುದಾಯಗಳ ಮನೆಗಳಂತೆ ವಿಶೇಷವನ್ನು ಹೊಂದಿರುತ್ತವೆ. ಗಳುಗಳನ್ನು ನೆಟ್ಟು ಅವುಗಳಿಗೆ ಬಿದಿರ ತಡಿಕೆಗಳನ್ನು ಹೆಣೆದು ಮನೆಮಾಡಿಕೊಂಡಿರುತ್ತಾರೆ. ಅದಕ್ಕೆ ಹದವಾದ ಮಣ್ಣನ್ನು ಹಾಕಿ ಸಾರಿಸುತ್ತಾರೆ. ಇವರ ಮನೆಗಳು ಅವರ ಅಗತ್ಯಗೆ ತಕ್ಕಂತೆ ನಿರ್ಮಿಸಿಕೊಂಡಿರುತ್ತಾರೆ.

ಇತರೆ ಬುಡಕಟ್ಟು ಸಮುದಾಯದವರಂತೆ ಯರವರು ಕೂಡ ತಮ್ಮದೇ ಆದಂತ ಶಾರೀರಿಕ ಲಕ್ಷಣವನ್ನು ಹೊಂದಿರುತ್ತಾರೆ. ಯರವರು ಸಾಮಾನ್ಯವಾಗಿ ಕಪ್ಪುಬಣ್ಣವನ್ನು ಹೊಂದಿದ್ದು, ಗುಂಗುರು ಕೂದಲನ್ನು ಹೊಂದಿರುತ್ತಾರೆ. ದಪ್ಪ ತುಟಿ, ಗಿಡ್ಡವಾದ ಮೈಕಟ್ಟನ್ನು ಹೊಂದಿದ್ದು ಸ್ವಲ್ಪ ಮಂಡ ಮೂಗನ್ನು ಹೊಂದಿರುತ್ತಾರೆ. ಇವರು ಆಡುವ ಭಾಷೆ ಕನ್ನಡ ಮಿಶ್ರಿತ ಮಲಯಾಳಿ.



ಹಬ್ಬಗಳ ಆಚರಣೆಯಲ್ಲಿ ವಿಶೇಷವಾಗಿ ವೋಣಂ ಹಬ್ಬವನ್ನು ಆಚರಿಸುತ್ತಾರೆ. ಈ ಹಬ್ಬದಲ್ಲಿ ಹೂವಿನ ಬಿತ್ತಾರ ವಿಶೇಷ ಬಗೆಯದಾಗಿರುತ್ತವೆ. ಇವರು ಇತ್ತೀಚಿಗೆ ಕೃಷಿಯನ್ನು ಮಾಡುತ್ತಾ ಬಂದಿದ್ದಾರೆ. ಕೆತ್ತನೆ ಬೇಸಾಯ ಮಾಡುತ್ತಿದ್ದ ಇವರು ಈಚಿನ ದಿನಗಳಲ್ಲಿ ದನಗಳನ್ನು ಬಳಸಿ ಉಳುಮೆಯನ್ನು ಮಾಡುತ್ತಿದ್ದಾರೆ.

ಕಲೆಗೆ ಸಂಬಂಧಿಸಿದಂತೆ ಯರವರು ತಮ್ಮದೇ ಆದಂತ ಕಲೆಯನ್ನು ಹೊಂದಿದ್ದಾರೆ. ಹಬ್ಬ ಹಾಗೂ ಸುಗ್ಗಿ ಸಂದರ್ಭದಲ್ಲಿ ಸಮುದಾಯದವರೆಲ್ಲಾ ಸೇರಿ ಕುಣಿಯುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ವಾದ್ಯ ಸಲಕರಣೆಗಳನ್ನು ತಾವೇ ತಯಾರುಮಾಡಿಕೊಳ್ಳುತ್ತಾರೆ. ಇದರಲ್ಲಿ 'ದುಡಿ' ಮತ್ತು 'ಚೀನಿ' ಬಹು ಮುಖ್ಯವಾದ ವಾದ್ಯ ಪರಿಕರಗಳು. ಬಿಡುವಿನ ಸಂದರ್ಭದಲ್ಲಿ ಅದರಲ್ಲೂ ರಾತ್ರಿ ಊಟವಾದ ಮೇಲೆ ತಮ್ಮ ಹಾಡಿಯ ಮುಂದಿನ ಅಂಗಳದಲ್ಲಿ ಬೆಂಕಿಯನ್ನು ಹಾಕಿಕೊಂಡು ವಾದ್ಯಗಳ ನಾದಕ್ಕೆ ಸಂಗೀತ ಭಾಗವಹಿಸುತ್ತಾರೆ. ನೃತ್ಯವನ್ನು ಮಾಡುತ್ತಾರೆ. ಈ ನೃತ್ಯದಲ್ಲಿ ಹುಡುಗರ ಮತ್ತು ಹುಡುಗಿಯರು ಭಾಗವಹಿಸುತ್ತಾರೆ. ಇವರು ಬೇರೆ ಬೇರೆಯೇ ನೃತ್ಯವನ್ನು ಮಾಡುತ್ತಾರೆ. ಹಬ್ಬ ಹರಿದಿನಗಳಲ್ಲಿ ಹಿರಿಯರೆಲ್ಲರೂ ಕೂಡಿ ಸಂತೋಷದಿಂದ ಕುಣಿಯುತ್ತಾರೆ. ಹೀಗೆ ತಮ್ಮದೇ ಆದ ಸಂಸ್ಕೃತಿಯ ಹಿನ್ನೆಲೆಯಲ್ಲಿ ಯರವರ ಬದುಕನ್ನು ನಡೆಸುತ್ತಿದ್ದಾರೆ.

೫ ಪಣಿಯರು




ಕರ್ನಾಟಕ ಬುಡಕಟ್ಟು ಸಮುದಾಯಗಳಲ್ಲಿ ಪಣಿಯರು ಒಬ್ಬರು. ಇವರು ಕೊಡಗು ಮತ್ತು ಮೈಸೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ನೆಲೆನಿಂತಿದ್ದಾರೆ. ಯರವರಂತೆ ಇವರೂ ಸಹ ಕೇರಳದ ಮೂಲದಿಂದ ಬಂದವರು. ಕರ್ನಾಟಕದ ಇಂದಿನ ಬುಡಕಟ್ಟುಗಳನ್ನು ನೋಡಿದಾಗ ಅವರು ಹೊರರಾಜ್ಯಗಳಿಂದ ಬಂದವರು ಎಂಬುದನ್ನು ಗುರುತಿಸಬಹುದು. ಏಕೆಂದರೆ ಈಗಿನ ಕರ್ನಾಟಕದಂತೆ ಹಿಂದಿನ ಕರ್ನಾಟಕ ನಕ್ಷೆ ಇರಲಿಲ್ಲ. ಆಗ ಅಲೆಮಾರಿ ಬದುಕನ್ನು ಹೊಂದಿದ್ದ ಈ ಬುಡಕಟ್ಟು ಸಮುದಾಯಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ಬದುಕು ನಡೆಸುತ್ತಿದ್ದರು. ಹಾಗೆಯೇ ಈ ಪಣಿಯರೂ ಕೂಡ ಅಲೆಮಾರಿ ಬುಡಕಟ್ಟು ಸಮುದಾಯವೇ. "ಪಣಿಯರು ಮೂಲತಃ ಕೇರಳಾದವರು. ಅವರ ಮೂಲವನ್ನು ಕೇಳಿದಾಗ ಇಪ್ಪಿಮಲೈ ಎಂದು ಹೇಳುತ್ತಾರೆ. ಇಪ್ಪಿಮಲೈ ಅಂಜಲಕಾವು ಎಂಬ ಪ್ರದೇಶದವರೆಂದೂ ಮೂಲ ವ್ಯಕ್ತಿಗಳು ಅಂಜಲತಪ್ಪೆ ಮತ್ತು ಅಂಜಲತಮ್ಮೆ ಎಂದು ಹೇಳುತ್ತಾರೆ. ಬುಡಕಟ್ಟು ಲಕ್ಷಣಗಳನ್ನೊಳಗೊಂಡ ಇವರು ಮೂಲತಃ ಅಲೆಮಾರಿಗಳು ನಿರ್ವಹಣೆಗಾಗಿ ಹಾಗಾಗಿ ಜೀವನ ಕೇರಳಾದಿಂದ ವಲಸೆ ಬಂದು ತಮಿಳುನಾಡು ಕರ್ನಾಟಕ ಗಡಿ



ಪ್ರದೇಶಗಳಲ್ಲಿ ನೆಲೆಸಿದ್ದಾರೆ. ಕೇರಳಾ ಮತ್ತು ಕರ್ನಾಟಕ ಗಡಿನಾಡುಗಳು ಕುಟ್ಟಾ ಹಾಗೂ ಮೈನಾಡು ಆಗಿರುವುದರಿಂದ ಆ ಪ್ರದೇಶದಲ್ಲಿ ಹೆಚ್ಚಾಗಿ ಪಣಿಯರು ವಾಸಿಸುತ್ತಾರೆ."[೧೦] ಇವರು ಕೃಷಿಯ ಮೂಲದವರೆ ಈಗಲೂ ಸಹ ಸಣ್ಣ ಸಣ್ಣ ಭೂಹಿಡುವಳಿಗಳನ್ನು ಹೊಂದಿರುವುದು ಕಂಡುಬರುತ್ತದೆ. ಹಾಗಾಗಿ ಕೃಷಿಯ ಜೊತೆಗೆ ಭೂಮಾಲಿಕರ ಮನೆಯ ಕೃಷಿಕೂಲಿ ಕಾರ್ಮಿಕರಾಗಿ ಬದುಕನ್ನು ನಡೆಸುತ್ತಿದ್ದಾರೆ. ಪಣಿಯ ಎಂಬ ಪದವನ್ನು ಥರ್ಸ್ಟನ್ 'ಕೂಲಿಕಾರ್ಮಿಕ' ಎಂಬ ಪದದಿಂದ ಗುರುತಿಸುತ್ತಾರೆ. ಕಿಟಲ್ ಅವರು ಪಣೆ ಎಂಬ ಅರ್ಥಕ್ಕೆ 'A Haunt or lair of wild beasts and litter or straw laid for animals"[೧೧] ಎಂಬ ಅರ್ಥವನ್ನು ಕೊಡುತ್ತಾರೆ. ಈ ಹಿನ್ನೆಲೆಯಲ್ಲಿ ಗುಮನಿಸಿದಾಗ ಇವರು ಕಾಡಿನಲ್ಲಿ ವಾಸಮಾಡುವ ಜನ ಎಂಬ ಅರ್ಥವನ್ನು ಕೊಡುತ್ತದೆ. ಕಾಡಿನ ಬದುಕಿಗೆ ಅಂಟಿಕೊಂಡಿರುವ ಇವರು ಕಾಡಿನ ಮಧ್ಯದಲ್ಲಿ ಜೀವಿಸುತ್ತಾ, ಅಲ್ಲಿ ಸಿಗುವ ಗೆಡ್ಡೆಗೆಣಸುಗಳನ್ನು ತಿನ್ನುತ್ತಾ ಸ್ಥಳೀಯ ಭೂಮಾಲಿಕರ ಮನೆಯಲ್ಲಿ ಕೆಲಸ ಮಾಡುತ್ತಾ ಬಂದಿದ್ದಾರೆ.

ಪಣಿಯರು ಕಪ್ಪಗಿನ ಮೈಬಣ್ಣವನ್ನು ಹೊಂದಿದ್ದು, ಸಾಧಾರಣ ಎತ್ತರವುಳ್ಳ ಇವರು ದಟ್ಟಗೆ ಒರಟಾದ ಕೂದಲನ್ನು ಹೊಂದಿದ್ದಾರೆ. ಇವರ ಮೂಗು ಮೊಂಡವಾಗಿದ್ದು, ಮಿತವಾದ ಉಡುಗೆಯನ್ನು ಉಡುತ್ತಾರೆ. ಗಂಡಸರು ಸೊಂಟಕ್ಕೆ ಮತ್ತು ತಲೆಗೊಂದು ಬಟ್ಟೆಯನ್ನು ಸುತ್ತಿಕೊಂಡರೆ ಹೆಂಗಸರು ಉದ್ದನೆಯ ಬಟ್ಟೆಯೊಂದನ್ನು ಸೊಂಟಕ್ಕೆ ಸುತ್ತಿಕೊಂಡು ಅದನ್ನು ಮೇಲ್ಭಾಗಕ್ಕೆ ತಂದು ಎದೆಯ ಸುತ್ತಾಸುತ್ತಿ ಹಿಂಬದಿಯಿಂದ ಮುಂಬದಿಗೆ ಗಂಟು ಹಾಕುತ್ತಾರೆ. ಈ ರೀತಿಯ ಹೋಲಿಕೆಯನ್ನು ಕಾಡುಕುರುಬ, ಯರವರ ಹೆಂಗಸರಲ್ಲಿಯೂ ಸಹ ಕಾಣಬಹುದು.

೬ ಹಸಲರು



ಹಸಲರು ಶಿರಸಿ, ಸಿದ್ಧಾಪುರ, ಹೊನ್ನಾವರ ಮತ್ತು ಸಾಗರ ತಾಲ್ಲೂಕಿನಲ್ಲಿ ಕಂಡುಬರುತ್ತಾರೆ. ಅಧ್ಯಯನಕ್ಕೆ ಸಂಬಂಧಪಟ್ಟಂತೆ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ತಾಳಗುಪ್ಪ ಸುತ್ತಮುತ್ತಲಿನ ಹಸಲರ ಮನೆಗಳಿಗೆ ಭೇಟಿ ನೀಡಿ ಕ್ಷೇತ್ರಕಾರ್ಯವನ್ನು ಮಾಡಿದ್ದೇನೆ. ಜೊತೆಗೆ ಇದೇ ತಾಲ್ಲೂಕಿನ ಹಿರೆಮನೆ, ಅರೆಗದ್ದೆ, ಹೊಸಗದ್ದೆ, ಸಸರವಳ್ಳಿ, ಬೇಳೂರು ಮುಂತಾದ ಹಸಲರ ನೆಲೆಗಳಿಗೆ ಭೇಟಿ ನೀಡಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ. "ಹಸಲರು ತಮ್ಮನ್ನು ಅಗ್ನಿ ಹೊನ್ನಯ್ಯನ ಮತದವರೆಂದು ಕರೆದುಕೊಳ್ಳುತ್ತಾರೆ. ಇವರ ಮೂಲಪುರುಷ ಹೊನ್ನಪ್ಪ, ಈತ ವೀರಶೈವ ಸಂತ. ಇವನು ಚಲವಾದಿ ಚೆನ್ನಯ್ಯ, ಮಡಿವಾಳ ಮಾಚಯ್ಯ, ಮಾದಾರ ಹರಳಯ್ಯ, ಕುಂಬಾರ ಗುಂಡಪ್ಪ ಮುಂತಾದ ಶರಣರ ಸಮಕಾಲೀನರೆಂದು ಹೇಳುತ್ತಾರೆ. ಮೇದಾರರು ತಮ್ಮ ಹತ್ತಿರದ ಸಂಬಂಧಿಕರೆಂದು ಹಸಲರು ಹೇಳಿಕೊಳ್ಳುತ್ತಾರೆ."[೧೨] ಇತರ ಬುಡಕಟ್ಟುಗಳಲ್ಲಿ ಒಳಪಂಗಡಗಳು ಇರುವಂತೆ ಹಸಲರಲ್ಲಿಯೂ ಒಳಪಂಗಡಗಳು ಇವೆ.



ಹಸಲರು ಮನೆಗಳು ಗುಡ್ಡಬೆಟ್ಟಗಳ ತಪ್ಪಲಿನಲ್ಲಿ, ಒಡೆಯರಮನೆಯ ಅಡಿಕೆ ತೋಟಗಳಲ್ಲಿ ಗುಡಿಸಲನ್ನು ಹಾಕಿಕೊಂಡು ಜೀವನವನ್ನು ಸಾಗಿಸುತ್ತಿದ್ದಾರೆ. ಇವರ ಮನೆಗೆ ಅಡಿಕೆ ದಬ್ಬೆಯಿಂದ ಕಟ್ಟಿಕೊಂಡು ಅದರ ಮೇಲೆ ಅಡಿಕೆ ಸೋಗೆ, ಬತ್ತದ ಹುಲ್ಲನ್ನು ಹೊದಿಸಿದ ಗುಡಿಸಲುಗಳು ಇವರ ಮನೆಗಳಾಗಿರುತ್ತವೆ. ಇವರು ಒಡೆಯರ ಮನೆಯ ತೋಟ ತುಡಿಕೆಗಳ ಕೆಲಸವನ್ನು ಮಾಡುತ್ತಾ ಅಡಿಕೆ ಮರಗಳನ್ನು ಹತ್ತಿ ಮರದಿಂದ ಮರಕ್ಕೆ ಜಿಗಿದು ಅಡಿಕೆಯ ಗೊನೆಗಳನ್ನು ಕೊಯ್ಯುತ್ತಾ ಅವುಗಳಿಗೆ ರೋಗಬಂದಂತೆ ಔಷಧಿಗಳನ್ನು ಸಿಂಪಡಿಸುವುದು, ಅವುಗಳನ್ನು ಬೆಳೆಸುವುದು ಇವರ ಕೆಲಸ. ಇವರ ಮನೆಗಳು ಇತರೆ ಮನೆಗಳಿಗಿಂತ ಸ್ವಲ್ಪ ಭಿನ್ನವಾಗಿಯೇ ಇರುತ್ತವೆ. ಆದರೆ ಸರ್ಕಾರ ಕಟ್ಟಿಕೊಟ್ಟ ಮನೆಗಳು ಕೆಲವು ಮಾದರಿಯಲ್ಲಿವೆ. ಇವರು ಬೇಟೆಯನ್ನು ಚೆನ್ನಾಗಿ ಬಲ್ಲವರಾಗಿದ್ದು, ಅದಕ್ಕೆ ಬೇಕಾದ ಬಿಲ್ಲು ಮತ್ತಿತರ ಸಲಕರಣೆಗಳನ್ನು ಇವರೇ ತಯಾರು ಮಾಡಿಕೊಳ್ಳುತ್ತಾರೆ. ಹಿಂದೆ ಆಹಾರಕ್ಕಾಗಿ ಬೇಟೆಯಾಡುತ್ತಿದ್ದ ಇವರಿಗೆ ಇಂದು ಸರ್ಕಾರದ ಕಾಯ್ದೆಯಿಂದ ಬೇಟೆಯಾಡುವುದು ಸಹ ನಿಂತಿದೆ.

ಮದುವೆ ಮತ್ತಿತರ ಸಂಪ್ರದಾಯಗಳಲ್ಲಿ ಇವರು ತಮ್ಮದೇ ಆದಂಥ ರೀತಿಯಲ್ಲಿ ಸಂಪ್ರದಾಯವನ್ನು ಅನುಸರಿಸುತ್ತಾರೆ. ಈ ಸಂದರ್ಭದಲ್ಲಿ ನಡೆಯಲಾಗುವ ಎಲ್ಲಾ ಶಾಸ್ತ್ರಗಳನ್ನು ಹಿಂದಿನಿಂದ-ಇಂದಿನವರೆಗೂ ಮುಂದುವರೆಸಿಕೊಂಡು ಬಂದಿರುವುದನ್ನು ಈಗಲೂ ನೋಡಬಹುದು. ಈ ಸಂದರ್ಭದಲ್ಲಿ ಬರೆಯುವ ಹಲವು ಬಗೆಯ ಹಸೆಯ, ಮತ್ತಿತರ ಚಿತ್ತಾರಗಳನ್ನು ನೋಡಬಹುದು. ಹಾಗೆಯೇ ಕೃಷಿಗೆ ಸಂಬಂಧಪಟ್ಟಂತೆ ಹಲವು ರೀತಿಯ ಆಚರಣೆಗಳನ್ನು ಇವರು ಆಚರಿಸುತ್ತಾರೆ. ತಾವು ಸಾಕುವ ದನಗಳ ಪೂಜೆಯನ್ನು ವಿಶೇಷವಾಗಿ ಆಚರಿಸುತ್ತಾರೆ. ಮಳೆಗೆ ಸಂಬಂಧಿಸಿದಂತೆ ಇವರು ಆರಿದ್ರ ಮಳೆಯ ಹಬ್ಬವನ್ನು ವಿಶೇಷವಾಗಿ ಆಚರಿಸುತ್ತಾರೆ. ಹೀಗೆ ಹಿಂದೂಗಳು ಆಚರಿಸುವ ಹಬ್ಬಗಳನ್ನು ಆಚರಿಸುತ್ತಾರೆ. ಜೊತೆಗೆ ಮಲೆನಾಡಿನ ಜನಪದ ಗೀತೆ ಸಂಪ್ರದಾಯದ ಅಂಟಿಗೆ ಪಂಟಿಗೆಯ ಕಲೆಯನ್ನು ಹಾಡುತ್ತಾರೆ. ಇದು ದೀಪವನ್ನು (ಜ್ಯೋತಿಯನ್ನು) ನೀಡುವ ವಿಶೇಷ ಸಂಪ್ರದಾಯ, ಇದು ದೀಪಾವಳಿಯ ಪಾಡ್ಯದಿಂದ ಪ್ರಾರಂಭವಾಗಿ ಒಂದು ವಾರದ ತನಕ ನಡೆಯುತ್ತದೆ. ತಮ್ಮದೇ ಆದಂತ ಆಚಾರ-ವಿಚಾರ, ಸಂಪ್ರದಾಯಗಳನ್ನು ಉಳಿಸಿಕೊಂಡು ಬದಕುನ್ನು ಸಾಗಿಸುತ್ತಾ ಇದ್ದಾರೆ.

೭ ದೀವರು



ದೀವರು ಶಿವಮೊಗ್ಗ ಜಿಲ್ಲೆಯ ಸಾಗರ, ಸೊರಬ ತಾಲ್ಲೂಕಿನಲ್ಲಿ, ಉತ್ತರಕನ್ನಡ ಜಿಲ್ಲೆಯ ಶರಸಿ ಸಿದ್ದಾಪುರ ತಾಲ್ಲೂಕುಗಳಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಇವರನ್ನು ನಾಯಕ, ಈಡಿಗ, ದೀವರು ಎಂದು ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ಇವರು ಸಂಪೂರ್ಣವಾಗಿ ಮಲೆನಾಡಿನ ಬದುಕನ್ನು ಹೊಂದಿದವರು. ಇವರು ತಮ್ಮ



ಹಿನ್ನೆಲೆಯನ್ನು ವಿವರಿಸುವಾಗ ತಾವು ಬುಡಕಟ್ಟು ಸಂಪ್ರದಾಯದವರು ಮತ್ತು ಸಂಸ್ಕೃತಿಯಿಂದ ಬಂದವರು, ಜೊತೆಗೆ ಕೃಷಿಯನ್ನು ಮಾಡಿಕೊಂಡು ಜೀವನ ಸಾಗಿಸುತ್ತಿರುವವರು ಎಂದು ಹೇಳಿಕೊಳ್ಳುತ್ತಾರೆ. ಕಾಡು ಮತ್ತು ಇವರ ನಡುವಿನ ಸಂಬಂಧವನ್ನು ತಮ್ಮದೇ ಆದ ಹಿನ್ನೆಲೆಯ ಆತ್ಮೀಯತೆಯಿಂದ ಇವರು ಗುರುತಿಸಿಕೊಳ್ಳುತ್ತಾರೆ."[೧೩] ದೀವರು ತಮ್ಮ ಅನುಕೂಲಕ್ಕೆ ತಕ್ಕಂತೆ ಮನೆಗಳನ್ನು ಕಟ್ಟಿಕೊಳ್ಳುತ್ತಾರೆ. ಇವರ ಮನೆ ಮುಂಭಾಗದಲ್ಲಿ ಮನೆಗೆ ಹೊಂದಿಕೊಂಡಂತೆ ಜಗಲಿ ಇರುತ್ತದೆ. ಹಾಗೆಯೆ ಮನೆಯ ಮುಂದೆ ವಿಶಾಲವಾದ ಕಣವನ್ನು ನಿರ್ಮಿಸಿಕೊಂಡಿರುತ್ತಾರೆ.

ದೀವರು ಮೂಲತಃ ಕೃಷಿಕರು, ಕೃಷಿಗೆ ಸಂಬಂಧಿಸಿದ ಆಚರಣೆಗಳನ್ನು ಬಹಳ ಸಮೃದ್ಧಿಯಾಗಿ ಮಾಡುತ್ತಾರೆ. ಅಂತೆಯೇ ಮದುವೆ ಮತ್ತಿತರ ಮನೆಗೆ ಸಂಬಂಧಪಟ್ಟ ಕಾರ್ಯಗಳನ್ನು, ಅವುಗಳ ವಿಧಿವಿಧಾನವನ್ನು ಅನುಸರಿಸುತ್ತಾರೆ. ವಿವಿಧ ಸಂದರ್ಭಗಳಲ್ಲಿ ಹಾಕುವ ವಿವಿಧ ರೀತಿಯ ಚಿತ್ತಾರಗಳನ್ನು ನೋಡಬಹುದು. ಅವು ತಮ್ಮ ಸಮುದಾಯಗಳ ಹಿನ್ನೆಲೆಯಿಂದ ಬಂದಂತವು ಆಗಿವೆ. ಈ ರೀತಿಯ ಚಿತ್ತಾರಗಳು ಹಸಲರಲ್ಲೂ ಸಹ ಕಂಡುಬರುತ್ತವೆ. ಇವರ ಚಿತ್ತಾರಗಳಲ್ಲಿ ಪ್ರಮುಖವಾದವೆಂದರೆ ಮದುವೆಯ ಸಂದರ್ಭದಲ್ಲಿ ಬರೆಯುವ ಹಸೆಯ ಚಿತ್ತಾರ, ಇತರೆ ಚಿತ್ತಾರಗಳು ಮತ್ತು ಭೂಮಿಹುಣ್ಣಿಮೆ ಹಬ್ಬದಲ್ಲಿ ಬರೆಯುವ ಭೂಮಿಣಿ ಬುಟ್ಟಿಯಲ್ಲಿನ ಚಿತ್ತಾರಗಳು ವಿಶೇಷವಾಗಿರುತ್ತವೆ. ಇವನ್ನು ಮನೆಯ ಗೋಡೆಗಳ ಮೇಲೆ, ನೆಲದ ಮೇಲೆ ಬರೆಯುತ್ತಾರೆ. ವಿವಿಧ ಚಿತ್ತಾರಗಳಿಗೆ ಬೇಕಾಗುವ ಬಣ್ಣವನ್ನು ಪ್ರಾಕೃತಿಕ ವಸ್ತುಗಳನ್ನು ಬಳಸಿ ತಯಾರು ಮಾಡಿಕೊಂಡು ಇವರೇ ಬರೆಯುತ್ತಾರೆ. ಅಂತೆಯೇ ಇವರಲ್ಲಿ ಕರಕುಶಲಕಲೆ ವಿಶೇಷವಾಗಿ ಇರುವುದನ್ನು ನೋಡಬಹುದಾಗಿದೆ.

೮ ಗೊಂಡರು



"ಸಹ್ಯಾದ್ರಿ ಶ್ರೇಣಿಯ ಪಶ್ಚಿಮ ತೊಪ್ಪಲುಗಳಲ್ಲಿನ ನಿಬಿಡಾರಣ್ಯಗಳಲ್ಲಿ ವಾಸವಾಗಿರುವ ಗೊಂಡರು ತಮ್ಮ ವಿಶಿಷ್ಟ ಜೀವನಕ್ಕೆ ಹೆಸರಾದವರು. ಮೂಲತಃ ಕೃಷಿಯ ಬುಡಕಟ್ಟುಗಳಾದ ಇವರು ಇಂದಿಗೂ ಅದೇ ವೃತ್ತಿಯನ್ನು ಆಧರಿಸಿ ಬದುಕುತ್ತಿದ್ದರೂ ಭೂಮಿಯ ಕೊರತೆಯಿಂದಾಗಿ ಒಂದೇ ವೃತ್ತಿಗೆ ಅಂಟಿಕೊಳ್ಳುವ ಸ್ಥಿತಿಯಲ್ಲಂತೂ ಇಲ್ಲ."[೧೪] ಕರ್ನಾಟಕದ ಯಾವುದೇ ಬುಡಕಟ್ಟು ಸಮುದಾಯದವರಿಗೂ ಸಮೃದ್ಧಿಯಾದ ಭೂಮಿ ಇಲ್ಲ. ಆದರೆ ಇವರ ಮೂಲವೃತ್ತಿ ಕೃಷಿಯೇ ಆಗಿರುತ್ತದೆ.



ಕೃಷಿಯ ಬದುಕಲ್ಲೇ ಜೀವನವನ್ನು ನಡೆಸಲು ಆಗದೆ ಕೂಲಿ, ಜೀತವನ್ನು ಮಾಡುತ್ತಾ ಜೀವನವನ್ನು ಸಾಗಿಸುತ್ತಾ ಬಂದಿದ್ದಾರೆ. ಇದಕ್ಕೆ ಹಲವು ಕಾರಣಗಳು ಸಿಗುತ್ತವೆ. ಅವುಗಳಲ್ಲಿ ಸ್ಥಳೀಯರ ಭೂಮಾಲೀಕರು ಮತ್ತು ಸರ್ಕಾರದ ಅರಣ್ಯ ಇಲಾಖೆಯ ನಿಯಮಾವಳಿಗಳು ಇವರ ಬದುಕನ್ನು ತಲ್ಲಣಗೊಳಿಸಿವೆ.

ಗೊಂಡರು ಉತ್ತರ ಕನ್ನಡ ಜಿಲ್ಲೆ (ಬಟ್ಕಳ ತಾಲ್ಲೂಕು), ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ ಜಿಲ್ಲೆ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಹೆಚ್ಚು ವಾಸಿಸುತ್ತಿರುವುದು ಕಂಡುಬರುತ್ತದೆ. ಬಟ್ಕಳ ತಾಲ್ಲೂಕಿನ ನಾಗುವಳ್ಳಿ, ಹಾಡುವಳ್ಳಿ, ಅರ್ಕಳ, ಹಲ್ಯಾಣಿ, ಕುಂಟವಾಣಿ, ಹೆಬ್ಬಳೆ, ಕಿತ್ರೆ, ಬೆಳ್ಕೆ, ಕೊಟಕಂಡ ಮುಂತಾದ ದಟ್ಟವಾದ ಕಾಡಿನಲ್ಲಿನ ಇವರ ವಾಸದ ನೆಲೆಗಳನ್ನು ನೋಡಬಹುದು. ಈ ಕಾಡಿನ ತಪ್ಪಲುಗಳ ಹಚ್ಚ ಹಸರಿನ್ನು ಮೈಗೂಡಿಸಿಕೊಂಡು ಕೃಷಿಯ ಬದುಕನ್ನು ನಡೆಸುತ್ತಾ ಬದುಕು ಸಾಗಿಸುತ್ತಿದ್ದಾರೆ. "ಹಚ್ಚ ಹಸಿರಿನ ಬತ್ತದ ಪೈರನ್ನು ಬೆಳೆಯುವುದರೊಂದಿಗೆ ಅಡಿಕೆ ತೆಂಗುಗಳನ್ನೊಳಗೊಂಡ ಅರಣ್ಯಗಳಲ್ಲಿ ಇವರ ಮನೆಗಳು ಸೇರಿಕೊಂಡಿವೆ. ಮನೆಯೆಂದರೆ, ಮನೆಯ ಮುಂದೆ ಒಂದು ಕಣದಲ್ಲಿ ಬಿಸಿಲು ತಡೆಯಲು ಅಥವಾ ತಮ್ಮ ಅನುಕೂಲಕ್ಕೆ ಚಪ್ಪರ ಇರುತ್ತದೆ. ಈ ಕಣದ ಮಧ್ಯದಲ್ಲಿ ಮೇಟಿ ಕಂಬವಿದ್ದು ಅಂಗಳದ ಬಲಭಾಗದಲ್ಲಿ ತುಳಸಿಕಟ್ಟೆ ಪ್ರತಿಯೊಬ್ಬರ ಮನೆಯ ಮುಂದೆಯೂ ಇರುತ್ತದೆ. ಈ ಕಣವನ್ನು ನೀಟಾಗಿ ಸಾರಿಸಿ ಕಣದ ತುಂಬಾ ರಂಗೋಲಿಯ ಬಿತ್ತಾರಗಳು ಕಂಗೊಳಿಸುತ್ತವೆ. ಈ ಮನೆಗಳು ಅದೆಷ್ಟು ಸುಂದರವಾಗಿರುತ್ತವೆಯೆಂದರೆ ಅಚ್ಚುಕಟ್ಟುತನಕ್ಕೆ ಮತ್ತೊಂದು ಹೆಸರು ಗೊಂಡರು."[೧೫] ಮನೆಯಂಗಳ ದರ ಈ ರಂಗೋಲಿಯ ಚಿತ್ತಾರಗಳು ನೋಡುಗರ ಮನಸ್ಸನ್ನು ಉಲ್ಲಾಸಗೊಳಿಸುತ್ತವೆ. ಇವರ ಮನೆಗಳೂ ಸಹ ಇತರ ಬುಡಕಟ್ಟಿನ ಮನೆಗಳಂತೆ ಬಿದಿರಿನಿಂದ ಕಟ್ಟಿದ ಮನೆಗಳು ಆಗಿರುತ್ತವೆ. ಹಾಗೆಯೇ ಕೆಲವು ಮಣ್ಣಿನಿಂದ ಕಟ್ಟಿದ ಮನೆಗಳು ಇವೆ. ಅನುಕೂಲಸ್ಥರು ಕರಾವಳಿ ಪ್ರದೇಶದಲ್ಲಿ ಸಿಗುವ ಜಂಬಿಟ್ಟಂಗಿ ಕಲ್ಲು ಅಥವಾ ಲೇಟ್‌ರೈಟ್ ಕಲ್ಲುಗಳಿಂದ ಮನೆಗಳನ್ನು ಕಟ್ಟಿಕೊಂಡಿದ್ದಾರೆ.

ಗೊಂಡರೂ ಕೂಡ ತಮ್ಮದೇ ಆದಂತ ಸಂಪ್ರದಾಯ ಆಚರಣೆಗಳನ್ನು ಹೊಂದಿದ್ದಾರೆ. ಜೊತೆಗೆ ಸಂಘಟಿತ ಬದುಕನ್ನು ಬದುಕುತ್ತಿದ್ದಾರೆ. ಇದು ಎಲ್ಲಾ ಬುಡಕಟ್ಟು ಸಮುದಾಯಗಳಲ್ಲಿ ಸಾಮಾನ್ಯವಾಗಿ ಕಂಡುಬರುವಂತಹದ್ದೇ ಆಗಿದೆ. ಇವರಲ್ಲಿ ಕಾಣುವ ಆಚರಣಾತ್ಮಕ ಹಬ್ಬ-ಹರಿದಿನಗಳಲ್ಲಿ ತಮ್ಮ ಸಮುದಾಯದ ಸಂಕುಲವೇ ನೆರೆದಿರುತ್ತದೆ. ಯಾವುದೇ ಬುಡಕಟ್ಟಿನಲ್ಲಿ ನಡೆಯುವ ಹಬ್ಬಗಳು ತಮ್ಮ ಸಮುದಾಯಗಳ ಸ್ವತಂತ್ರ ಹಬ್ಬಗಳಾಗಿರುತ್ತವೆಯೇ ಹೊರತು ಪ್ರತ್ಯೇಕ ಹಬ್ಬಗಳಾಗಿರುವುದಿಲ್ಲ. ಅವು ಸುಗ್ಗಿ ಹಬ್ಬ, ಕಾಮನಹಬ್ಬ, ಮಾರಿಹಬ್ಬ, ಗಡಿಹಬ್ಬ, ತುಳಸಿಹಬ್ಬ, ಗಂಟಿಹಬ್ಬ ಮುಂತಾದ ಹಬ್ಬಗಳಾಗಿರುವುದನ್ನು ಕಾಣುತ್ತೇವೆ. ಹಾಗೆಯೇ ಜೊತೆಗೆ ವಿಶೇಷ ಕಾರ್ಯಕ್ರಮಗಳು ಕಾಣಸಿಗುತ್ತವೆ. ಚಕ್ರಕಟ್ಟುವುದು, ಮುಡಿಪ್ಪ ಕಟ್ಟುವುದು, 'ಹರಿದಿನ' (ಹರಿಸೇವೆ) ಮಾಡುವುದು ವಿಶೇಷವಾಗಿ ಕಂಡುಬರುತ್ತದೆ. ಹರಿಸೇವೆ ಕಾರ್ಯವು ಇವರಲ್ಲಿ ನಡೆಯುವ ದೊಡ್ಡ ಪ್ರಮಾಣದ ದೇವತಾಕಾರ್ಯ. ಈ ಕಾರ್ಯದಲ್ಲಿ ತಮ್ಮ ಸಮುದಾಯದ ಜನರನ್ನು ಒಂದೆಡೆ ಸೇರಿಸಿ ಕಾರ್ಯವನ್ನು ನಡೆಸುತ್ತಾರೆ.

[illegible]

ಹಬ್ಬ ಹರಿದಿನಗಳ ಸಂದರ್ಭಗಳಲ್ಲಿ ಇಲ್ಲವೆ ಇನ್ನಿತರ ಕಾರ್ಯಕ್ರಮಗಳಲ್ಲಿ ಇವರು ತಮ್ಮ ಸಮುದಾಯದ ಕುಣಿತವನ್ನು ಮಾಡುತ್ತಾರೆ. ಅವುಗಳಲ್ಲಿ ಮಂಡಲಕುಣಿತ, ಹರಿಸೇವೆ ಕುಣಿತ, ಸುಗ್ಗಿ ಕುಣಿತ, ಕಾಮನವೇಷ ಮತ್ತು ಮಾರಿಕುಣಿತ ಹೀಗೆ ವಿವಿಧ ಸಂದರ್ಭಗಳಲ್ಲಿ ನಡೆಯುವ ಈ ಕುಣಿತಗಳು ಗೊಂಡರಲ್ಲಿ ವಿಶೇಷವಾಗಿ ಕಂಡುಬರುತ್ತವೆ. ಗೊಂಡರು ತಿರುಪತಿ ತಿಮ್ಮಪ್ಪನ ಆರಾಧಕರು, ತಿರುಪತಿಗೆ ಹೋಗಿಬಂದರೆ ಮೋಕ್ಷ ಸಿಗುತ್ತದೆ ಎಂಬ ನಂಬಿಕೆ ಇವರಲ್ಲಿ ಗಾಢವಾಗಿ ಇದೆ.

೯ ಕುಣಬಿಯರು



ಕುಣಬಿಯರು ಕೂಡ ಹಾಲಕ್ಕಿ ಒಕ್ಕಲಿಗರ ಗೊಂಡರ ಹಾಗೆ ಅರಬ್ಬ ಸಮುದ್ರಗಳಿಗೆ ಅಂಟಿಕೊಂಡಂತೆ ಇರುವ ಪಶ್ಚಿಮ ಘಟ್ಟದ ದಟ್ಟವಾದ ಕಾಡುಗಳ ನಡುವೆ ಪ್ರಾಕೃತಿಕ ಬುದಕನ್ನು ನಡೆಸುತ್ತಿದ್ದಾರೆ. "ಥರ್ಸ್ಟನ್ (೧೯೦೯) ಕುಣಬಿಯರನ್ನು ಬುಡಕಟ್ಟೆಂದು ಮೊಟ್ಟಮೊದಲು ಗುರುತಿಸಿ ತನ್ನ ಕೃತಿಯಲ್ಲಿ ದಾಖಲಿಸಿದ್ದಾನೆ. ಸುಮಾರು ಒಂದು ನೂರು ವರ್ಷಗಳ ಹಿಂದೆ ಕುಣಬಿಯರ ವಿವಿಧ ಆಚರಣೆಗಳು ಮತ್ತು ವಿಧಿವಿಧಾನಗಳ ಪರಿಚಯವನ್ನು ಥರ್ಸ್ಟನ್ ಮಾಡಿಕೊಡುತ್ತಾನೆ. ಇದೇ ರೀತಿ ಸ್ಟರಕ್ ರೂನ್ಯಡ (೧೯೮೪) "Forest and Hills Tribes" ಎಂಬ ಅಧ್ಯಯನದಲ್ಲಿ ಕುಣಬಿಯರ ಪರಿಚಯವನ್ನು ಮಾಡಿಕೊಡುತ್ತಾರೆ."[೧೬] ಕುಣಬಿಯರನ್ನು ಬಹುತೇಕ ವಿದ್ವಾಂಸರು ಗೋವಾದಿಂದ ವಲಸೆ ಬಂದವರು ಎಂಬ ಅಭಿಪ್ರಾಯವನ್ನು ನೀಡುತ್ತಾರೆ. ಇದಕ್ಕೆ ಹಲವಾರು ಕಾರಣಗಳನ್ನು ಕೊಡುತ್ತಾರೆ. ಜೊತೆಗೆ ಇವರು ಗೋವಾದಿಂದ ಕರ್ನಾಟಕಕ್ಕೆ ಬಂದು ಪಶ್ಚಿಮ ಘಟ್ಟಗಳ ಕಾಡುಗಳಲ್ಲಿ ಸೇರಿದಕ್ಕೆ ಹಲವಾರು ಕತೆಗಳನ್ನು ಸಹ ಹೇಳುತ್ತಾರೆ. ಮತ್ತೆ ಕೆಲವು ಸಂಶೋಧಕರು ಇವರನ್ನು ಬೇಟೆ ಮತ್ತು ಆಹಾರ ಸಂಗ್ರಹಣೆಯ ಅಲೆಮಾರಿ ಬುಡಕಟ್ಟು ಸಮುದಾಯದವರು ಎಂದು ಗುರುತಿಸುತ್ತಾರೆ. ಇವರ ಭಾಷೆಯನ್ನು ಗಮನಿಸಿದರೆ ಸ್ಥಳೀಯ ತುಳು ಭಾಷೆಯ ಪ್ರಭಾವವು ಕಾಣಸಿಗುತ್ತದೆ. ಹಾಗೆಯೇ ಇವರು ಉಡುಪಿ, ಕುಂದಾಪುರ ಕನ್ನಡವನ್ನು, ದಕ್ಷಿಣ ಕನ್ನಡದ ತುಳುವನ್ನು ಚೆನ್ನಾಗಿ ಬಲ್ಲವರಾಗಿದ್ದಾರೆ. ಇವರು ವ್ಯವಹರಿಸುವ ಭಾಷೆ ತುಳು ಹಾಗೂ ಕನ್ನಡ ಆಗಿದೆ.

ಇವರೂ ಕೂಡ ಕೃಷಿಯನ್ನು ಅವಲಂಬಿಸಿ ಬದುಕನ್ನು ಸಾಗಿಸುತ್ತಿದ್ದಾರೆ. ಇವರು ಧರಿಸುವ ಬಟ್ಟೆಗಳು



ಸಾಮಾನ್ಯವಾಗಿದ್ದು, ಗಂಡಸರು ಸೊಂಟಕ್ಕೆ ಒಂದು ತುಂಡು ಬಟ್ಟೆಯನ್ನು ಕಟ್ಟಿಕೊಂಡರೆ, ಹೆಂಗಸರು ರವಿಕೆಗಳಿಲ್ಲದೆ ಸೀರೆಯನ್ನು ಎದೆಯವರೆಗೆ ಸುತ್ತಿ ಗಂಟು ಹಾಕುವ ಪದ್ಧತಿಯನ್ನು ಕಾಣುತ್ತೇವೆ. ಆದರೆ ಈಗಿನ ಹೆಂಗಸರು ಬದಲಾವಣೆಯಾದಂತೆ ಸೀರೆ ರವಿಕೆಯನ್ನು ಹಾಕುತ್ತಾರೆ. ಗಂಡಸರು ಬಿಳಿಪಂಜೆ, ಬಣ್ಣದ ಲುಂಗಿ ಮತ್ತು ಅಂಗಿಯನ್ನು ತೊಡುತ್ತಾರೆ. ಹೆಂಗಸರು ಸೀರೆಯನ್ನು ಮಂಡಿಯವರಿಗೆ ಉಡುತ್ತಾರೆ. ಇದು ಕಾಡಿನಲ್ಲಿ ತಾವು ಗದ್ದೆ ಬದುಗಳಲ್ಲಿ ಓಡಾಡಲು ಮಾಡಿಕೊಂಡ ಅನುಕೂಲವಾಗಿರುತ್ತದೆ.

ಇವರು ಕಾಡಿನಲ್ಲಿ ಸ್ವತಂತ್ರವಾಗಿ ಬದುಕುತ್ತಾ ತಮ್ಮದೇ ಆದ ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ಬದುಕು ನಡೆಸುತ್ತಿದ್ದಾರೆ. ಇವರು ಕಾಡಿನ ಪ್ರೀಯರು ಕಾಡಿನ ಪ್ರಾಶಾಂತತೆಗೆ ಮೈಕೊಟ್ಟು ನೈಸರ್ಗಿಕ ಸಂಪನ್ಮೂಲಗಳನ್ನು ಅನುಭವಿಸುತ್ತಾ ಬದುಕುತ್ತಿರುವವರು.

ಇವರ ಮನೆಯ ಮುಂದಿನ ಅಂಗಳದಲ್ಲಿ ಹಾಲಕ್ಕಿ ಒಕ್ಕಲಿಗರಂತೆ, ಗೊಂಡರಂತೆ ತುಳಸಿಕಟ್ಟೆಯನ್ನು ಕಟ್ಟಿಕೊಂಡು ಅದಕ್ಕೆ ನಿತ್ಯ ಪೂಜೆಯನ್ನು ಮಾಡುತ್ತಾರೆ. ಈ ಪೂಜೆಗೆ ಸಂಬಂಧಿಸಿದಂತೆ ಮನೆಯ ಯಜಮಾನ ಮುಖ್ಯಸ್ಥನಾಗಿರುತ್ತಾನೆ. ಇವರಲ್ಲೂ ಕೂಡ ಇತರ ಬುಡಕಟ್ಟು ಸಮುದಾಯಗಳಂತೆ ಶಿಷ್ಟಾಚಾರಗಳನ್ನು ಇಟ್ಟುಕೊಂಡಿರುವುದು ಕಂಡುಬರುತ್ತದೆ. ಅಪರಿಚತರಿಗೆ, ಅನ್ಯ ಸಮುದಾಯದವರಿಗೆ ಇವರ ಮನೆಯಲ್ಲಿ ಪ್ರವೇಶವನ್ನು ನಿಷೇಧಿಸಲಾಗಿದೆ.

ಇವರು ಆಚರಣೆಗಳಲ್ಲಿ ತಮ್ಮದೇ ಆದಂಥ ಆರಾಧನಾ ಪದ್ಧತಿಯನ್ನು ಹೊಂದಿದ್ದಾರೆ. ಸಾಮಾನ್ಯವಾಗಿ ತುಳಸಿಪೂಜೆ, ಕುಲ ಆರಾಧನೆ, ಗಡಿಕಾಯಿ ಒಡೆಯುವುದು, ಹೋಳಿ ಆಚರಣೆ ಇವರಲ್ಲಿ ಇದೆ. ಹೋಳಿ ಆಚರಣೆಯಲ್ಲಿ ಹೋಳಿಕುಣಿತವನ್ನು ಇವರು ವಿಶೇಷವಾಗಿ ಆಚರಿಸುತ್ತಾರೆ. ಹಬ್ಬ, ಹುಣ್ಣಿಮೆ, ಮದುವೆ ಮತ್ತಿತರ ಮುಂತಾದ ಆಚರಣಾ ಸಂದರ್ಭಗಳಲ್ಲಿ ವಿಶೇಷವಾಗಿ ಚಿತ್ತಾರಗಳನ್ನು ಬರೆಯುತ್ತಾರೆ.

೧೦ ಹಾಲಕ್ಕಿ ಒಕ್ಕಲಿಗರು



ಹಾಲಕ್ಕಿ ಒಕ್ಕಲಿಗರು ಉತ್ತರ ಕನ್ನಡ ಜಿಲ್ಲೆಯ ಕಡಲುಕಾಡುಗಳ ಜೊತೆಯಲ್ಲಿ ಬದುಕುತ್ತಿರುವ ಒಂದು ಬುಡಕಟ್ಟು ಸಮುದಾಯ ಹಾಲಕ್ಕಿ ಒಕ್ಕಲಿಗರು. ಈ ಪಶ್ಚಿಮ ಘಟ್ಟಗಳ ದಟ್ಟ ಅರಣ್ಯಗಳ ಮಡಿಲಲ್ಲಿ ಹಾಲಕ್ಕಿಗಳಂತೆಯೇ ಮುಗಿಲು ಮುಟ್ಟುವ ಮಲೆಗಳ ನಡುವೆ ಸಿದ್ದಿಯರು, ಹಸಲರು, ಗೊಂಡರು, ಕುಣಬಿಯರು, ಗೌಳಿಗರನ್ನು ನೋಡಬಹುದು. ಹಾಲಕ್ಕಿ ಒಕ್ಕಲಿಗರು ಈ ಉತ್ತರ ಕನ್ನಡ ಜಿಲ್ಲೆಯ ಅಂಕೋಲ, ಕಾರವಾರ, ಹೊನ್ನಾವರ, ಕುಮುಟ ಮುಂತಾದ ತಾಲ್ಲೂಕುಗಳಲ್ಲಿ ಹೇರಳವಾಗಿ

[illegible]

[illegible]

[illegible]

[illegible]

[illegible]

[illegible]

ಕಾಣಿಸುತ್ತಾರೆ. ದಟ್ಟವಾದ ಸಂಸ್ಕೃತಿಯೊಂದಿಗೆ ಬದುಕುತ್ತಿರುವ ಇವರು ತಮ್ಮದೇ ಆದಂಥ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿದ್ದಾರೆ. ಇವರ ಸಂಸ್ಕೃತಿಯ ಹಲವು ಮೊಗ್ಗಲುಗಳು ಇಂದಿನ ಬಿನ್ನನೆಲೆಯ ಅಧ್ಯಯನಕ್ಕೆ ಆಹಾರವಾಗಿ ನಮ್ಮ ಮುಂದೆ ಇವೆ.

ಇವರು ವಾಸಮಾಡುವ ಊರನ್ನು ಅಥವಾ ಇವರ ಗುಡಿಸಲುಗಳ ಗುಂಪನ್ನು 'ಹಾಡಿ' ಅಥವಾ 'ಕೊಪ್ಪ' ಎಂದು ಕರೆಯುತ್ತಾರೆ. ಇವರ ಮನೆಗಳ ಅಂಗಳದ ಸೊಬಗು ಬಹಳ ವಿಶೇಷವಾಗಿ ಇರುತ್ತವೆ. ಯಾವಾಗಲೂ ಸ್ವಚ್ಛವಾಗಿ ಮನೆಯಂಗಳವನ್ನು ಇಟ್ಟುಕೊಂಡಿರುತ್ತಾರೆ. "ಪ್ರತಿ ಮನೆಯ ಹೊರ ಅಂಗಳವನ್ನು ಸಾರಿಸಿ ರಂಗವಲ್ಲಿ ಬಿಟ್ಟು ಕನ್ನಡಿಯಷ್ಟು ಸ್ವಚ್ಛವಾಗಿ ಇಟ್ಟಿರುತ್ತಾರೆ. ಅಂಗಳದಲ್ಲಿ ತುಳಸಿಕಟ್ಟೆ, ತುಳಸಿಕಟ್ಟೆಯ ಜೊತೆಗೆ ತಿರುಪತಿ ವೆಂಕಟರಮಣನ ಪುಟ್ಟ ವಿಗ್ರಹ ಸುಲಿಯದ ತೆಂಗಿನಕಾಯೊಂದು ಯಾವಾಗಲೂ ಅಲ್ಲಿರುತ್ತದೆ. ತುಳಸಿಕಟ್ಟೆಯ ಸುತ್ತಲೂ ಬಹುವರ್ಣದ ಹೂವುಗಳು, ಅಂಗಳದ ಒಂದು ಮೂಲೆಯಲ್ಲಿ ಬತ್ತ ಕುಟ್ಟುವ ಒರಳು ನಾಲ್ಕಾರು ಹೆಂಗಸರು ಒಂದೇ ಒರಳನಲ್ಲಿ ಏಕಕಾಲಕ್ಕೆ ಬತ್ತ ಕಟ್ಟುವುದು ಸೋಜಗವೇ ಸರಿ.

ಹಾಲಕ್ಕಿ ಒಕ್ಕಲಿಗರ ಮನೆಗಳ ವಿನ್ಯಾಸ ಕರಾವಳಿಯ ಮಳೆಗಾಲವನ್ನು ಲಕ್ಷ್ಯದಲ್ಲಿಟ್ಟುಕೊಂಡೇ ಮಾಡಿದ್ದು, ನಾಲ್ಕು ಗೋಡೆಗಳ ಮೇಲೆ ತ್ರಿಕೋನಾಕಾರವಾಗಿ ಮುಗಿಲಿಗೆ ಮುಖಮಾಡಿದ ಎತ್ತರದ ಸೂರು. ಬಿದ್ದಪ್ರತಿ ಹನಿಯೂ ಕ್ಷಣದಲ್ಲಿ ಕೆಳಗುರುಳುವ ರೀತಿಯಲ್ಲಿಯೇ ಹುಲ್ಲು ಹೊದಿಸಿ ಮಾಡಿದ ಎತ್ತರದ ಮಾಡು."[೧೭] ಕೃಷಿಯ ಬದುಕನ್ನು ಹೊಂದಿರುವ ಹಾಲಕ್ಕಿಗಳು ಕೃಷಿಯ ಸಾಮಾನು ಸರಂಜಾಮುಗಳನ್ನು ಇಡಲು ಉಪ್ಪರಿಗೆಯ ಮನೆಯನ್ನು ಮಾಡಿಕೊಂಡಿದ್ದಾರೆ. ಇದು ಅವರವರ ಅಗತ್ಯತೆಗೆ ತಕ್ಕಂತೆ ಮನೆಯ ನಿರ್ಮಾಣವನ್ನು ಮಾಡಿಕೊಂಡಿರುತ್ತಾರೆ. ಇದು ಭೂಮಿಯ ಮನೆಯನ್ನು ಮಾಡಿಕೊಂಡಿದ್ದಾರೆ. ಇದು ಅವರವರ ಅಗತ್ಯತೆಗೆ ತಕ್ಕಂತೆ ಮನೆಯ ನಿರ್ಮಾಣವನ್ನು ಮಾಡಿಕೊಂಡಿವುದಾಗಿರುತ್ತದೆ. ಇದು ಭೂಮಿಯ ಒಡೆತನಕ್ಕೆ ಸಂಬಂಧಪಟ್ಟಿರುವುದು ಆಗಿರುತ್ತದೆ. "ಇವರ ಮನೆಗಳ ಹೊರಗೋಡೆಗಳು ವಿವಿಧ ಚಿತ್ತಾರಗಳಿಂದ ಕಂಗೊಳಿಸುತ್ತವೆ. ಪ್ರಾಣಿಪಕ್ಷಿಗಳ ಮತ್ತು ಸಸ್ಯಗಳ ಸಂಕೇತವೆನ್ನಬಹುದಾದ ಬಹು ಸುಂದರ ಚಿತ್ತಾರಗಳಿವು. ಅವು ಕೇವಲ ಚಿತ್ತಾರಗಳಾಗಿರದೆ ಅವರ ಬದುಕನ್ನು ಹೇಳುವ ಸೂಕ್ಷ್ಮ ಸಂಜ್ಞೆಗಳಾಗಿರುತ್ತವೆ."[೧೮] ಹಾಗೆಯೇ ಅವರ ಉಡುಪುಗಳೂ ಕೂಡ ವಿಶೇಷವಾಗಿ ಇರುತ್ತವೆ. ಈ ಉಡುಪುಗಳು ಅದರಲ್ಲೂ ಹೆಂಗಸರ ಉಡುಪು. ಅನ್ಯ ಸಮುದಾಯಗಳ ಜನರ ಉಡುಪಿಗಿಂತ ವಿಶೇಷವಾಗಿ ಕಾಣುತ್ತವೆ.

ಇವರಲ್ಲಿ ಕೃಷಿಗೆ ಸಂಬಂಧಿಸಿದ ಹಬ್ಬಗಳು ವಿಶೇಷವಾಗಿ ಕಂಡುಬರುತ್ತವೆ. ಸುಗ್ಗಿ ಹಬ್ಬ, ಮತ್ತು ಹಗರಣ, ಕಿರಿ ಸುಗ್ಗಿ ಹಬ್ಬ, ಗದ್ದೆ ಗಂಡನ ಹಬ್ಬ, ಹೊಸತನ ಹಬ್ಬ ಕೃಷಿಗೆ ಸಂಬಂಧಿಸಿದವುಗಳಾದರೆ ಈ ಹಬ್ಬಗಳಲ್ಲಿ ವಿಶೇಷವಾದಂತ ವಾದ್ಯಾ ಪರಿಕರಗಳನ್ನು ಬಡಿಯುತ್ತಾ, ಹಾಡುತ್ತಾ, ಕುಣಿಯುತ್ತಾರೆ. ಅದರಲ್ಲಿ ಗುಮಟೆ ಕುಣಿತ ಮತ್ತು ಬೆದ್ರಂಡೆ ಕುಣಿತ ವಿಶೇಷವಾಗಿ ಕಾಣಸಿಗುತ್ತವೆ.

೧೧ ಗೌಳಿಗರು



ಕರ್ನಾಟಕ ಬುಡಕಟ್ಟು ಬದುಕಲ್ಲಿ ಕಂಡುಬರುವ 'ಗೌಳಿಗರು' ತಮ್ಮದೇ ಆದಂಥ ಸಾಂಸ್ಕೃತಿಕ ಅನನ್ಯತೆಯನ್ನು ಹೊಂದಿದ್ದಾರೆ. ಇದನ್ನು ಇವರ ಬದುಕಿನ ಹಿನ್ನೆಲೆಯ ಭಾಷೆ, ವೃತ್ತಿ, ಜೀವನ ಕ್ರಮಗಳಿಂದ ನೋಡಬಹುದು. ಈ ಗೌಳಿಗರು ಉತ್ತರ ಕನ್ನಡದ ಯಲ್ಲಾಪುರ, ಹಳಿಯಾಳ, ಮುಂಡಗೋಡು, ದಾಂಡೇಲಿಯ ಸುತ್ತಮುತ್ತಲಿನ ಊರುಗಳಲ್ಲಿ ಹೆಚ್ಚಾಗಿ ವಾಸಿಸುತ್ತಿದ್ದಾರೆ. ಹಾಗೆಯೇ ಧಾರವಾಡ, ಚಿಕ್ಕಮಗಳೂರು ಶಿವಮೊಗ್ಗ ಜಿಲ್ಲೆಯ ಕೆಲವು ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಇವರು ಕೃಷಿಯನ್ನು ಮುಖ್ಯ ವೃತ್ತಿಯನ್ನಾಗಿ ಅವಲಂಬಿಸಿದ್ದಾರೆ. ಸದಾ ಹಸಿರಿರುವ ಬೆಟ್ಟ ಗುಡ್ಡಗಳಿರುವ ಅರಣ್ಯ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಇವರೇ ಹೇಳಿಕೊಳ್ಳುವಂತೆ ತಾವು ಮಹಾರಾಷ್ಟ್ರ, ಗೋವಾ ಪ್ರಾಂತ್ಯಗಳಿಂದ ಕರ್ನಾಟಕಕ್ಕೆ ಎಮ್ಮೆ ಹಸುಗಳೊಂದಿಗೆ ವಲಸೆ ಬಂದೆವು ಎಂದು ಹೇಳುತ್ತಾರೆ. ಇವರ ವಲಸೆಗೆ ವೃತ್ತಿಯೊಂದೇ ಕಾರಣವೆಂದು ಹೇಳುತ್ತಾರೆ. ಇವರು ಪಶುಪಾಲನೆಯನ್ನು ಮಾಡಿಕೊಂಡು ಬದುಕುತ್ತಿದ್ದ ಜನರು ಇವರು ದನ ಎಮ್ಮೆಗಳಿಗೆ ಹುಲ್ಲು ನೀರು ಸಮೃದ್ಧವಾಗಿರುವ ಪ್ರದೇಶಗಳಿಗೆ ಸಂಚಾರ ಮಾಡುತ್ತಾ ಬಂದ ಜನಾಂಗ. ಈಗ ಅರೆಅಲೆಮಾರಿಗಳಾಗಿದ್ದು ಇವರು ತಮ್ಮದೇ ಆದಂಥ ಊರುಗಳನ್ನು ನಿರ್ಮಿಸಿಕೊಂಡಿದ್ದಾರೆ. ಹೈನುಗಾರಿಕೆ ಮೂಲ ಕಸುಬನ್ನಾಗಿ ಹೊಂದಿದ ಇವರು ಇದರಿಂದಲೇ ಜೀವನ ನಡೆಸುವುದು ಕಷ್ಟಕರ ಪರಿಸ್ಥಿತಿ ಬಂದೊದಗಿದಾಗ ಜೀವನಕ್ಕೆ ಕೃಷಿಯ ಮೂಲವನ್ನು ಅಳವಡಿಸಿಕೊಂಡರು. ಇವರು ನೆಲೆನಿಂತ ಊರುಗಳಿಗೆ 'ದೊಡ್ಡಿ' ಅಥವಾ 'ವಾಡ' ಎಂದು ಕರೆಯಲಾಗಿದೆ. ಇವರು ಗುಂಪಾಗಿ ವಲಸೆ ಬಂದವರು. ಗುಂಪಾಗಿಯೇ ನೆಲೆ ನಿಂತವರು. ತಮ್ಮ ನೆಲೆಗಳನ್ನು 'ದೊಡ್ಡಿ' ಅಥವಾ 'ವಾದ' ಎಂದು ಕರೆದುಕೊಳ್ಳುತ್ತಾರೆ. ಏಕೆಂದರೆ ಊರುಗಳಿಗೆ ಮಹಾರಾಷ್ಟ್ರದಲ್ಲಿ 'ವಾಡ' ಎಂದು ಕರೆಯುವುದು ಹೆಚ್ಚು.

ದೈಹಿಕ ಲಕ್ಷಣಗಳಲ್ಲಿ ಇವರು "ದೃಢಕಾಯರೂ ಆರೋಗ್ಯಶಾಲಿಗಳಾಗಿಯೂ ಕಂಡುಬರುತ್ತಾರೆ. ಇವರಲ್ಲಿ ಕೆಲವರು ಬೇಟೆಯಾಡಿಯೇ ಜೀವನ ನಡೆಸುವ ಸಾಮರ್ಥ್ಯ ಹೊಂದಿದ್ದಾರೆ. ಕಪಟವರಿಯದ ಮುಗ್ಧರು, ತಮ್ಮದೇ ಆದ ಒಂದು ವಿಶಿಷ್ಟ ಸಾಂಸ್ಕೃತಿಕ ಆವರಣದಲ್ಲಿ ಸಾಂಪ್ರದಾಯಿಕ ರೀತಿಯಲ್ಲಿ ಬದುಕು ನಡೆಸುವ ಇವರು ನಾಗರಿಕ ಪ್ರಭಾವದಿಂದ ಮುಕ್ತರಾದಂತೆ ಕಾಣುತ್ತಾರೆ. ಕಾಡುಮೇಡುಗಳಲ್ಲಿ ನೆಲಸಿ ಸ್ವತಂತ್ರ ಜೀವನ ನಡೆಸುತ್ತಿರುವುದರಿಂದ ಇವರ ಸಾಂಸ್ಕೃತಿಕ ಮೂಲ ಸ್ವರೂಪವಲ್ಲಿಯೇ



ಉಳಿದುಕೊಂಡು ಬರಲು ಸಾಧ್ಯವಾಗಿದೆ.''[೧೯] ಇವರನ್ನು ಇವರ ವಾಡಗಳನ್ನು ಗಮನಿಸಿದಾಗ ನಮಗೆ ಈ ಅಂಶಗಳು ಕಾಣಸಿಗುತ್ತವೆ.

ಇವರು ಹಿಂದೂಧರ್ಮದ ನಿಯಮಗಳಂತೆ ಎಲ್ಲಾ ಹಿಂದೂ ಹಬ್ಬಗಳನ್ನು ಆಚರಿಸುತ್ತಾರೆ. ಅದರಲ್ಲೂ ದೀಪಾವಳಿ ಹಬ್ಬವನ್ನು ಇವರು ಬಹಳ ವಿಶಿಷ್ಟವಾಗಿ ಆಚರಿಸುತ್ತಾರೆ. ಇದು ಇವರಿಗೆ ದೊಡ್ಡ ಹಬ್ಬ. ಇವರ ಕಲ್ಪನೆಯಲ್ಲಿ ಅಂಧಕಾರವನ್ನು ದೂರಮಾಡಿ ಬೆಳಕನ್ನು ನೀಡುವ ಹಬ್ಬ. ಈ ಹಬ್ಬದ ಮೊದಲ ದಿನ ಮನೆಗೆ ಸಂಬಂಧಿಸಿದ ಹಬ್ಬವನ್ನು ಆಚರಿಸಿದರೆ ಎರಡನೇ ದಿನ ತಮ್ಮೊಂದಿಗೆ ಬದುಕುತ್ತಿರುವ ಎಮ್ಮೆ, ದನಗಳ ಹಬ್ಬವಾಗಿ ಆಚರಿಸುತ್ತಾರೆ. ಹಾಗೆಯೇ ಕಾಮನ ಹಬ್ಬವನ್ನು ಸಂಭ್ರಮದಿಂದ ಆಚರಿಸುತ್ತಾರೆ. ಹೋಳಿ ಹುಣ್ಣಿಮೆ ಇವರಲ್ಲಿ ಪ್ರಮುಖವಾದ ಹಬ್ಬ. ಈ ಹಬ್ಬಗಳು ಒಂದು ದಿನ ನಡೆಯದೆ ಹಲವು ದಿನ ತಮ್ಮದೇ ಆದಂತ ಬುಡಕಟ್ಟಿನ ಮಾದರಿಯಲ್ಲಿ ಜರಗುತ್ತವೆ. ಈ ಹಬ್ಬಗಳಲ್ಲಿ ಗೌಳಿಗರ ಹೆಣ್ಣುಮಕ್ಕಳು ಮನೆಯನ್ನು ಸ್ವಚ್ಛವಾಗಿ ಸಾರಿಸಿ ಚಿತ್ತಾರಗಳನ್ನು ಬರೆಯುತ್ತಾರೆ. ಕಾಮನಹಬ್ಬದಲ್ಲಿ ಕಾಮನನ್ನು ಸುಡುವಾಗ ವಾಡದ ಜನರೆಲ್ಲಾ ಸೇರಿ ಕುಣಿತವನ್ನು ಮಾಡುತ್ತಾರೆ. ಜಗಾ ಕುಣಿತ, ಪುಗಡಿ ಕುಣಿತವನ್ನು ಕುಣಿ-ಕುಣಿಯುತ್ತಲೇ ಕಾಮನ ದಹನವನ್ನು ಮಾಡುತ್ತಾರೆ. ಹೀಗೆ ಹಲವಾರು ಆಚರಣೆ ಸಂಪ್ರದಾಯಗಳನ್ನು ಹೊಂದಿರುವ ಗೌಳಿಗರು ಅವುಗಳಲ್ಲಿ ತಮ್ಮ ಕಲೆಯನ್ನು ಬಿಂಬಿಸುತ್ತಾರೆ.

೧೨ ಸಿದ್ಧಿಯರು



ಸಿದ್ಧಿಯರು ಉತ್ತರ ಕನ್ನಡದ ಯಲ್ಲಾಪುರ, ಸಿರಸಿ, ಸಿದ್ದಾಪುರ, ಹಳಿಯಾಳ, ಸೂಪ, ಅಂಕೋಲ, ಮುಂಡಗೋಡು ತಾಲ್ಲೂಕುಗಳಲ್ಲಿ ಕಾಣಸಿಗುತ್ತಾರೆ. ಇವರು ಕರ್ನಾಟಕದ ಜನರಿಗಿಂತ ಸಂಪೂರ್ಣವಾಗಿ ಭಿನ್ನ ಮುಖ ಲಕ್ಷಣ, ಶಾರೀರಿಕ ಲಕ್ಷಣಗಳನ್ನು ಹೊಂದಿದ್ದಾರೆ. ಇವರ ಮೂಲವನ್ನು ಸಂಶೋಧಕರು ದಕ್ಷಿಣ ಆಫ್ರಿಕ ಎಂದು ಹೇಳುತ್ತಾರೆ. ಗುಂಗುರು ಕೂದಲು, ದಪ್ಪ ತುಟಿ, ಕಪ್ಪಗಿನ ಮೈಬಣ್ಣ, ಎತ್ತರ ಮತ್ತು ದಷ್ಟಪುಷ್ಟತೆಯನ್ನು ಹೊಂದಿದ ದೇಹ, ಮಡ್ಡ ಮೂಗು ಇವರ ಶಾರೀರಿಕ ಲಕ್ಷಣಗಳು. ಇವರನ್ನು ಪೋರ್ಚುಗೀಸರು ಗುಲಾಮರನ್ನಾಗಿ ಗೋವಾಕ್ಕೆ ಕರೆದುಕೊಂಡು ಬಂದರು. ಗೋವಾದಲ್ಲಿ ಪ್ರಬಲವಾಗಿದ್ದ ಕ್ರೈಸ್ತಧರ್ಮ ಮತ್ತು ಇಸ್ಲಾಂ ಧರ್ಮಗಳಿಗೆ ಇವರು ಪ್ರಭಾವಿಸಲ್ಪಟ್ಟರು. ಕಾಲಾನಂತರ ಗೋವಾದಿಂದ ಕಾರವಾರದ ಮೂಲಕ ಉತ್ತರ ಕನ್ನಡ ಜಿಲ್ಲೆಗೆ ಬಂದು ದಟ್ಟವಾದ ಕಾಡೊಳಗೆ ಸೇರಿಕೊಂಡು ಮರೆಯ ಬದುಕ ಅನುಭವಿಸುತ್ತಾ ಕಾಲವನ್ನು ಕಳೆದವರು. ಇಂದು ಅಲ್ಲಲ್ಲಿ ನೆಲೆಗೊಂಡಿರುವುದನ್ನು ಕಾಣಬಹುದು. ಉತ್ತರಕನ್ನಡ ಜಿಲ್ಲೆಗೆ ಬರುವುದಕ್ಕೆ ಗೋವಾದಲ್ಲಿ ಇವರಿಗೆ ಭೂಮಾಲಿಕರ, ಆರ್ಥಿಕ ಪ್ರಬಲರ



ಶೋಷಣೆಯೇ ಕಾರಣವಾಗಿ ಅಲ್ಲಿಂದ ತಪ್ಪಿಸಿಕೊಂಡು ಚದುರಿಹೋದ ಜನರು ಇವರು. ಇವರು ಇಂದು ಹಿಂಧೂಧರ್ಮದ ಆರಾಧಕರಾಗಿ ಬದುಕು ನಡೆಸುತ್ತಾ ಬಂದಿದ್ದಾರೆ.

ಸಿದ್ಧಿಯರು ಇಂದು ಕ್ರೈಸ್ತಧರ್ಮ ಮತ್ತು ಮುಸ್ಲಿಂಧರ್ಮಗಳ ಮತಾವಲಂಬಿಗಳೂ ಆಗಿದ್ದಾರೆ. ಇವರು ಹಿಂದೂ, ಕ್ರೈಸ್ತ, ಮುಸ್ಲಿಂ ಮೂರು ಧರ್ಮಗಳ ಆರಾಧಕರಾಗಿ ಬದುಕು ನಡೆಸುತ್ತಿದ್ದಾರೆ. ಆದರೂ ಆಚರಣೆಗೆ ಸಂಬಂಧಪಟ್ಟಂತೆ ಎಲ್ಲರೂ ಒಟ್ಟಿಗೆ ಸೇರುತ್ತಾರೆ. ಸಾಮಾನ್ಯವಾಗಿ ಈ ಸಮುದಾಯದವರೆಲ್ಲಾ ಒಟ್ಟಿಗೆ ಸೇರಿ ನೃತ್ಯವನ್ನು ಮಾಡುತ್ತಾರೆ. ಇದಕ್ಕೆ ಪುಗಡಿಕುಣಿತವೆಂದು ಹೆಸರು. ಈ ಕುಣಿತದಲ್ಲಿ ತಮ್ಮದೇ ಆದಂಥ ವಿಶಿಷ್ಟತೆ ಎದ್ದುಕಾಣುತ್ತದೆ.

ಸಿದ್ಧಿಯರು ವಾಸಿಸುವ ಭೂಪ್ರದೇಶಗಳಲ್ಲಿ ಹೆಚ್ಚಾಗಿ ಅಡಿಕೆ ತೆಂಗು ತೋಟಗಳು ಇವೆ. ಹಾಗೆಯೇ ಭತ್ತ ಮತ್ತು ಇತರೆ ಬೆಳೆಯನ್ನು ಬೆಳೆಯುತ್ತಾರೆ. ಇಲ್ಲಿಯ ಭೂಮಿಗಳ ಒಡೆಯರು ಹವ್ಯಕ ಬ್ರಾಹ್ಮಣರು. ಈ ಬ್ರಾಹ್ಮಣರ ಮನೆಗಳಲ್ಲಿ, ಅವರ ತೋಟ ತುಡಿಕೆಗಳಲ್ಲಿ ಕೂಲಿಗಳಾಗಿ ಕೆಲಸಮಾಡುತ್ತಾ ಜೀವನವನ್ನು ಸಾಗಿಸುತ್ತಾ ಬದುಕುತ್ತಿದ್ದಾರೆ. ಸಿದ್ಧಿಯರಿಗೆ ಇಲ್ಲಿಯ ಭೂಮಾಲಿಕರ ಮನೆಯನ್ನು ಬಿಟ್ಟರೆ ಬೇರೆ ಜೀವನೋಪಾಯ ಮಾರ್ಗವೇ ಇಲ್ಲದ ಸ್ಥಿತಿ ಇದೆ. ಇತ್ತೀಚಿನ ದಿನಗಳಲ್ಲಿ ಅರಣ್ಯಗಳಲ್ಲಿ ಕೂಲಿ ಕೆಲಸ ಮಾಡುತ್ತಾರೆ.

ಸಿದ್ಧಿಯರು ಮಾಂಸಹಾರಿಗಳು ಹಾಗೆಯೇ ವಿಶೇಷವಾಗಿ ಕೆಂಪು ಇರುವೆಯ ಚಟ್ನಿಯನ್ನು ತಿನ್ನುತ್ತಾರೆ. ಇದು ಬಾಣಂತಿಯರಿಗೆ ಹಾಗೂ ನಂಜು ಹತ್ತಿದ ವ್ಯಕ್ತಿಗಳಿಗೆ ತಿನ್ನಿಸಿದರೆ ಒಳ್ಳೆಯದು ಎಂಬ ನಂಬಿಕೆ ಇವರಲ್ಲಿದೆ. ಕಾಡಿನಲ್ಲಿ ಸಿಗುವ ಹಲವು ಬಗೆಯ ಗೆಡ್ಡೆ ಗೆಣಸುಗಳನ್ನು ಇವರು ತಿನ್ನುತ್ತಾರೆ. ಹಾಗೆಯೇ ಅಲ್ಲೇ ಸಿಗುವ ಹಲವು ಬಗೆಯ ಸೊಪ್ಪುಗಳನ್ನು ಆಹಾರಕ್ಕೆ ಬಳಸುತ್ತಾರೆ. ಗಿಡಮೂಲಿಕೆಗೆ ಕಾಡಿನಲ್ಲಿ ಸಿಗುವ ಹಲವು ಮರಗಳ ತೊಗಟೆಗಳನ್ನು, ಬೇರುಗಳನ್ನು ಬಳಸುತ್ತಾರೆ. ಇವನ್ನು ತಮ್ಮದೇ ಆದಂತ ರೀತಿಯಲ್ಲಿ ಔಷಧಿಯನ್ನು ತಯಾರಿಸಿಕೊಂಡು ಉಪಯೋಗಿಸುತ್ತಾರೆ. ಇದು ಅವರ ವೈಧ್ಯ ಜ್ಞಾನಕ್ಕೆ ಹಿಡಿದ ಕನ್ನಡಿಯಾಗಿದೆ.

ಅಡಿಟಿಪ್ಪಣೆಗಳು

೧. ಪ್ರೊ. ಬರಗೂರು ರಾಮಚಂದ್ರಪ್ಪ, ಉಪಸಂಸ್ಕೃತಿ ಮಾಲೆಯಡಿಯಲ್ಲಿ ತಂದ, ಪ್ರಸ್ತಾವನೆಯಿಂದ ಪುಟ: ೩೨

೨. ಕರ್ನಾಟಕ ಬುಡಕಟ್ಟುಗಳು, ಸಂಪುಟ ೧, ಪುಟ: ೩೨೮

೩. ಡಾ. ಚಂದ್ರು ಕಾಳೇನಹಳ್ಳಿ, ಸೋಲಿಗರು, ಕರ್ನಾಟಕ ಬುಡಕಟ್ಟುಗಳು, ಸಂ.೧, ಪುಟ: ೩೪೧

೪. ಕಿಕ್ಕೇರಿ ನಾರಾಯಣ, ಜೇನುಕುರುಬರು, ಕರ್ನಾಟಕ ಬುಡಕಟ್ಟುಗಳು, ಸಂ:೧, ಪುಟ: ೭೧೦

೫. ಡಾ.ಎಂ.ಬಿ. ರಾಜಮಣಿ, ಕಾಡು ಕುರುಬರು, ಕರ್ನಾಟಕ ಬುಡಕಟ್ಟುಗಳು, ಸಂ: ೧, ಪುಟ: ೭೪೫

೬. ಅದೇ. ಪುಟ: ೭೪೬

[illegible]

[illegible]

[illegible]

[illegible]

[illegible]

[illegible]

೭. ಅದೇ. ಪುಟ: ೭೫೦

೮. ದಾ.ಭ. ಮಲ್ಲಿಕಾರ್ಜುನ, ಯರವರು, ಪುಟ: ೬೨೫

೯. ಅದೇ. ಪುಟ: ೬೨೬

೧೦. ಆರ್. ನಾಗೇಶ್ ಬೆಣಗಾಲು, ಕೊಡಗಿನ ಪಣಿಯರು, ಪುಟ: ೬೯೭

೧೧. ಅದೇ. ಪುಟ: ೯೯೭

೧೨. ಹುಚ್ಚಪ್ಪ ಮಾಸ್ತರು, ಹಸಲರು, ಪುಟ: ೭

೧೩. ಕ್ಷೇತ್ರಕಾರ್ಯ ಸಂದರ್ಭದಲ್ಲಿ ಹಿರೆಮನೆಯ ದೀವರಾದ ಹುಚ್ಚಪ್ಪ ಮಾಸ್ತರ್ ಮತ್ತು ದೀವರ ಚಿತ್ತಾರಗಳನ್ನು ಪ್ರದರ್ಶಿಸಿ ರಾಷ್ಟ್ರೀಯ ಕರಕುಶಲ ಕಲೆಗಳ ಪ್ರಶಸ್ತಿಯನ್ನು ಪಡೆದ ಈಶ್ವರ ನಾಯಕ ಅವರು ವಿವರಿಸಿದ ಮಾತುಗಳು.

೧೪. ಪ್ರೊ. ಹಿ.ಚಿ. ಬೋರಲಿಂಗಯ್ಯ, ಬುಡಕಟ್ಟು ರಾಮಾಯಣದ ಸುತ್ತ ಮುತ್ತ ಗಿರಿಜನ ಸಂಸ್ಕೃತಿ, ಪುಟ: ೧೫೩

೧೫. ಅದೇ. ಪುಟ: ೧೫೪

೧೬. ಡಾ. ಅಭಯ್ ಕುಮಾರ್ ಕಾಕ್ರಾಡಿ, ಕುಣಬಿಯರು, ಕರ್ನಾಟಕ ಬುಡಕಟ್ಟುಗಳು ಸಂಪುಟ ೧, ಪುಟ:೨೪೦

೧೭. ಪ್ರೊ. ಹಿ.ಚಿ. ಬೋರಲಿಂಗಯ್ಯ, ಹಾಲಕ್ಕಿ ಒಕ್ಕಲಿಗರು, ಕರ್ನಾಟಕ ಬುಡಕಟ್ಟುಗಳು ಸಂ: ೧, ಪುಟ: ೩೮೯

೧೮. ಅದೇ. ಪುಟ: ೩೮೬

೧೯. ಡಾ. ಅಂಬಳಿಕೆ ಹಿರಿಯಣ್ಣ, ಕಚ್ಚೆಗೌಳಿಗರ ಸಂಸ್ಕೃತಿ, ಪುಟ: ೧೭-೧೮

❄❄❄❄❄

ಅಧ್ಯಾಯ ೪

ಬುಡಕಟ್ಟು ಸಮುದಾಯ ಮತ್ತು ಚಿತ್ರಕಲೆ

[illegible]

[illegible]

ಬುಡಕಟ್ಟು ಸಮುದಾಯಗಳ ಚಿತ್ರಗಳು

ಬುಡಕಟ್ಟು ಸಮುದಾಯಗಳ ಚಿತ್ರಗಳನ್ನು ಅಧ್ಯಯನ ದೃಷ್ಟಿಯಿಂದ ಈ ಕೆಳಗಿನಂತೆ ವಿಂಗಡಿಸಲಾಗಿದೆ.

೧. ಸಾಂಪ್ರದಾಯಿಕ ಚಿತ್ರಗಳು

೨. ಆಚರಣಾ ಸಂಬಂಧಿ ಚಿತ್ರಗಳು

೩. ಸಾಮಾನ್ಯ ಚಿತ್ರಗಳು

೪. ಶರೀರದ ಮೇಲಿನ ಚಿತ್ರಗಳು

೫. ಹಚ್ಚೆಯ ಚಿತ್ರಗಳು ಮತ್ತು ಆಭರಣಗಳು ಹೀಗೆ ಐದು ವಿಭಾಗಗಳಾಗಿ ಮಾಡಿಕೊಂಡು ಅವುಗಳನ್ನ ಈ ಅಧ್ಯಾಯದಲ್ಲಿ ಚರ್ಚಿಸಲಾಗುವುದು.

೧. ಸಾಂಪ್ರದಾಯಿಕ ಚಿತ್ರಗಳು, ಆಚರಣಾ ಸಂಬಂಧಿ ಚಿತ್ರಗಳು ಮತ್ತು ಸಾಮಾನ್ಯ ಚಿತ್ರಗಳು: ಪ್ರತಿಯೊಂದು ಜನಸಮುದಾಯಗಳು ಸಂಪ್ರದಾಯ, ಆಚರಣೆಗಳನ್ನು ಒಳಗೊಂಡಿರುತ್ತವೆ. ಅಂತೆಯೇ ಬುಡಕಟ್ಟು ಸಮುದಾಯಗಳೂ ಕೂಡ ತಮ್ಮದೇ ಆದ ಕಟ್ಟುಪಾಡು, ನೀತಿ-ನಿಯಮ, ನಂಬಿಕೆ ನಿಷೇಧಗಳು, ಮದುವೆ, ಉಡುಗೆ-ತೊಡುಗೆ, ಊಟೋಪಚಾರ ಮುಂತಾದವುಗಳ ಹಿನ್ನೆಲೆಯಲ್ಲಿ ವಿಶಿಷ್ಟ ಜೀವನ ಪದ್ಧತಿಯನ್ನ ರೂಪಿಸಿಕೊಂಡಿರುತ್ತವೆ. ಹೀಗೆ ಪ್ರತಿಯೊಂದು ಬುಡಕಟ್ಟುಗಳು ಪರಂಪರೆಯಿಂದ ನಂಬಿಕೊಂಡು ಬಂದ ಜೀವನ ಮೌಲ್ಯಗಳನ್ನು ಅಲ್ಪಸ್ವಲ್ಪ ವ್ಯತ್ಯಾಸಗಳೊಂದಿಗೆ ಉಳಿಸಿಕೊಂಡು ಬಂದಿರುತ್ತವೆ.

ಕರ್ನಾಟಕದ ಬುಡಕಟ್ಟುಗಳಲ್ಲಿ ಹಲವು ಬಗೆಯ ಚಿತ್ತಾರಗಳು ಕಾಣಸಿಗುತ್ತವೆ. ಈ ಚಿತ್ತಾರಗಳಲ್ಲಿ ಆಚರಣಾ ಸಂಬಂಧಿ, ಸಂಪ್ರದಾಯ ಸಂಬಂಧಿ ಮತ್ತು ಸಾಮಾನ್ಯ ಚಿತ್ರಗಳು ಸಹ ಒಳಗೊಂಡಿರುತ್ತವೆ. "ಭಾರತೀಯರ ಬದುಕು ದೇವರ ಸ್ತುತಿಯೊಂದಿಗೆ ಪ್ರಾರಂಭವಾಗುತ್ತದೆ. ಜನನದಿಂದ ಮರಣದವರೆಗೆ ಪ್ರತಿಯೊಂದು ಕ್ರಿಯೆ ಹೆಚ್ಚಾಗಿ ದೇವರ ಸಂಬಂಧವನ್ನು ಪಡೆದೇ ನಡೆಯುತ್ತದೆ."[೧] ಈ ಕ್ರಿಯೆ ಪ್ರತಿದಿನವೂ ಧರ್ಮದ ಹಿನ್ನೆಲೆಯಲ್ಲಿ ಭಕ್ತಿಯ ನೆಲೆಯಲ್ಲಿ ಒಂದು ಸಂಪ್ರದಾಯವಾಗಿ ನಡೆದು ಬಂದಿರುತ್ತದೆ. ಆಚರಣೆಗಳಾದ ಹಬ್ಬ-ಹರಿದಿನ, ಜಾತ್ರೆ, ಉತ್ಸವ, ಪೂಜೆ ಮುಂತಾದ ಸಂದರ್ಭಗಳು ಭಕ್ತಿಯ ನೆಲೆಯಲ್ಲಿ ನಡೆಯುತ್ತವೆ. ಹಲವು ಮತಧರ್ಮಗಳ ಪ್ರಭಾವಗಳನ್ನ ಅರಗಿಸಿಕೊಂಡೂ ಇನ್ನೂ ತಮ್ಮ ಅನನ್ಯತೆಯನ್ನ ಉಳಿಸಿಕೊಂಡಿವೆ. ಕಾಡಿನಲ್ಲಿದ್ದರೂ ಯಾವ ಆದಿವಾಸಿ ಸಮುದಾಯವೂ ನಾಡಿನ ರಾಜಕೀಯ ಪ್ರಭುತ್ವ ಮತ್ತು ಧಾರ್ಮಿಕ ಪ್ರಭುತ್ವಗಳ ಆಳ್ವಿಕೆಗಳನ್ನ ತಪ್ಪಿಸಿಕೊಳ್ಳಲಾಗಿಲ್ಲ. ಇದರೆ ಉದಾಹರಣೆ ಹಾಲಕ್ಕಿಗಳು.

“ಒಕ್ಕಲು ಬುಡಕಟ್ಟಿನವರೆಲ್ಲಾ ಇಂದು ವೈಷ್ಣವ ಮತಾವಲಂಬಿಗಳು. ಹಾಲಕ್ಕಿ ಒಕ್ಕಲಿಗರು ಮಾತ್ರ ಕೆಲಕಾಲ ವೀರಶೈವ ಪ್ರಭಾವಕ್ಕೊಳಗಾಗಿ ವೀರಶೈವ ಮತಕ್ಕಂಟಿಕೊಂಡಿದ್ದರೂ, ಸುಗ್ಗಿಯ ಕೋಲಾಟದ ಕಾಲಕ್ಕೆ ಇವರು ಸುಗ್ಗಿಯ ಕರಿಕಳದಲ್ಲಿ ಮಾದೇವರಾಯ ಮತ್ತು ಬಸವೇಶ್ವರ ರಾಯರಿಗೆ ನೀಡುವ ಆದ್ಯತೆ ಮತ್ತು ವೀರಶೈವ ಜಂಗಮರಿಗೆ ಕೊಡುವ ಮರ್ಯಾದೆಗಳು ಇವರ ಶೈವನಿಷ್ಠೆಗೆ ನಿದರ್ಶನಗಳು. ವೀರಶೈವ ಮತದ ಪ್ರಭಾವ ಕರಾವಳಿಯಲ್ಲಿ ಕಡಿಮೆಯಾದ ಮೇಲೆ, ಇವರು ಆ ಮತವನ್ನು ತ್ಯಜಿಸಿ ವೈಷ್ಣವ ಮತದೆಡೆಗೆ ವಾಲಿದರು. ಇದು ಒಕ್ಕಲುತನದ ಬುಡಕಟ್ಟಿನವರೆಲ್ಲರ ಮನೆಯ ಮುಂದೆ ತುಳಸಿಕಟ್ಟೆಗಳಿವೆ. ಇವರ ಕುಲದೇವರು ತಿರುಪತಿಗೆ ತಮ್ಮ ಬದುಕಿನ ಪರಮಾರ್ಥತೆಯನ್ನು ತಿರುಪತಿ ವೆಂಕಟಯಾತ್ರೆಯಲ್ಲಿ ಯಾತ್ರೆಮಾಡಿ ಬಂದವನಿಗೆ ದಾಸನೆಂದು ಕರೆದು ಅವನಿಗೆ ವಿಶೇಷ ಮರ್ಯಾದೆಯನ್ನು ಸಲ್ಲಿಸುತ್ತಾರೆ.”[೨] ಈ ಪದ್ಧತಿ ಈಗಲೂ ರೂಢಿಯಲ್ಲಿದೆ.

ಬುಡಕಟ್ಟು ಸಮುದಾಯಗಳು ವಾಸಿಸಲು ಯೋಗ್ಯವಾದ ಪ್ರದೇಶಗಳನ್ನೇ ಆಯ್ಕೆಮಾಡಿಕೊಂಡಿರುತ್ತಾರೆ. ಪ್ರತ್ಯೇಕವಾಗಿ ಗುಡಿಸಲುಗಳನ್ನು ಕಟ್ಟಿಕೊಂಡು ಜೀವನ ನಡೆಸುತ್ತಾರೆ. “ಇವರ ಮನೆಯ ಮುಂಭಾಗಕ್ಕೆ ವಿಶಾಲವಾದ ಕಣ, ಕಣದ ಮಧ್ಯದಲ್ಲಿ ಮೇಟಿಕಂಬ, ಬಲತುದಿಗೆ ತುಳಸಿಕಟ್ಟೆ, ಹಸನಾದ ಕಣದ ತುಂಬ ರಂಗೋಲಿಯ ಚಿತ್ತಾರಗಳು, ಆಸುಪಾಸಿನಲ್ಲಿ ನಳನಳಿಸುವ ಹೂವಿನ ಗಿಡಗಳು ಅಚ್ಚುಕಟ್ಟುತನಕ್ಕೆ ಇನ್ನೊಂದು ಹೆಸರು ಗೊಂಡರು. ಹೀಗೆ ಇವರ ಬದುಕು ಅತ್ಯಂತ ಶಿಸ್ತಿನಿಂದ ಕೂಡಿರುತ್ತದೆ. ಈ ರೀತಿಯ ಲಕ್ಷಣಗಳು ಸಾಮಾನ್ಯವಾಗಿ ಉತ್ತರ ಕನ್ನಡ ಜಿಲ್ಲೆಯ ಬುಡಕಟ್ಟು ಜನಾಂಗಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಸಾಮಾನ್ಯವಾಗಿ ಹಾಲಕ್ಕಿ ಒಕ್ಕಲಿಗರ, ಕುಣಬಿಯರ, ಸಿದ್ಧಿಯರ ಮನೆಯ ಮುಂದೆ ವಿಶಾಲವಾದ ಕಣವನ್ನು ನೋಡಬಹುದು. ಈ ಕಣಕ್ಕೆ ವಿಶೇಷವಾದ ಪೂಜ್ಯಸ್ಥಾನವಿದೆ. ದೇವತಾಕಾರ್ಯಗಳನ್ನೆಲ್ಲವೂ ಇದೇ ಸ್ಥಳದಲ್ಲಿ ನಡೆಯುತ್ತವೆ. ಪ್ರತಿಯೊಂದು ಕಾರ್ಯಗಳನ್ನು ಎಲ್ಲರೂ ಕೂಡಿಯೇ ನೆರವೇರಿಸುತ್ತಾರೆ.

ಕರಾವಳಿ ತೀರದಲ್ಲಿರುವ ಬಹುತೇಕ ಬುಡಕಟ್ಟು ಜನಾಂಗಗಳ ಮನೆಯ ಮುಂದೆ ಅದರಲ್ಲೂ ಉತ್ತರ ಕನ್ನಡ ಜಿಲ್ಲೆಯ ಬುಡಕಟ್ಟು ಜನಾಂಗಗಳ ಮನೆಯ ಮುಂದೆ ತುಳಸಿಕಟ್ಟೆ ಇರುತ್ತದೆ. ಈ ತುಳಸಿಕಟ್ಟೆಗೆ ವಿಶೇಷವಾಗಿ ಮಹತ್ವವನ್ನು ಕೊಡುತ್ತಾರೆ. “ತುಳಸಿಕಟ್ಟೆಗೆ ದಿನನಿತ್ಯ ಪೂಜೆಯನ್ನು ಹೊರತುಪಡಿಸಿಯೇ ಹಬ್ಬ-ಹರಿದಿನ, ಮದುವೆ ಮುಂತಾದ ಧಾರ್ಮಿಕ ಸಂದರ್ಭಗಳಲ್ಲಿ ತುಳಸಿಯನ್ನು ಮೊಟ್ಟಮೊದಲು ನೆನೆದು, ತುಳಸಿ ಬುಡದಲ್ಲಿ ಎಲೆ ಅಡಿಕೆ ಇಟ್ಟು ಅರಿಕೆಮಾಡಿ ಮುಂದಿನ ಕೆಲಸ ಕೈಗೊಳ್ಳುತ್ತಾರೆ. ತುಳಸಿಯ ಸಮ್ಮುಖದಲ್ಲೇ ಧಾರ್ಮಿಕ ಕಾರ್ಯಗಳು ನಡೆಯುತ್ತವೆ. ಕೆಲವು ಕಡೆ ತುಳಸಿಕಟ್ಟೆಯ ಮೇಲೆ ವೆಂಕಟರಮಣ ದೇವರ ಮರದ ಮೂರ್ತಿ ಹೆಚ್ಚಾಗಿ ಹಾಗೂ ಕಂಚಿನ ಗಂಟೆ, ಅರತಿ, ಹರಿವಾಣಗಳಿರುತ್ತವೆ.”[೪] ಇವು ಉತ್ತರಕನ್ನಡ ಜಿಲ್ಲೆಯಲ್ಲಿ ಕಂಡುಬರುತ್ತವೆ. ಪೂಜೆಗೆ ಸಂಬಂಧಿಸಿದ ಹಕ್ಕುಗಳನ್ನು ಮನೆಯ ಯಜಮಾನ ಹೊಂದಿರುತ್ತಾನೆ. ಯಾವುದೇ ಒಬ್ಬ ವ್ಯಕ್ತಿ ತಂದೆತಾಯಿಗಳಿಂದ

ಬೇರ್ಪಟ್ಟು ಬೇರೊಂದು ಮನೆಯನ್ನು ಕಟ್ಟಿಕೊಂಡು ವಾಸಿಸುತ್ತಿದ್ದರೆ, ಅಂತವರು ತುಳಸಿಕಟ್ಟೆಯನ್ನು ತಮ್ಮ ಮನೆಯ ಮುಂದೆ ಕಟ್ಟಿಕೊಳ್ಳುವಂತಿಲ್ಲ. ತುಳಸಿಕಟ್ಟೆಯನ್ನು ಕಟ್ಟಿಕೊಳ್ಳುವ ಹಕ್ಕು ಆ ಮನೆಯ ಹಿರಿಯನಿಗೆ ಮಾತ್ರ ಇರುತ್ತದೆ. ಹಾಗಾಗಿ ಹಿರಿಯರಾದವರು ತುಳಸಿಕಟ್ಟೆಯನ್ನು ಉಳಿಸಿಕೊಳ್ಳುವುದು ತಲೆ, ತಲೆಮಾರುಗಳಿಂದ ನಡೆದುಕೊಂಡು ಬಂದಂತಹ ಪದ್ಧತಿಯಾಗಿದೆ. ಹಾಗಾಗಿ ಈ ಹಿರಿತನಕ್ಕೆ ನಡೆದುಕೊಳ್ಳುತ್ತಾರೆ. ಇದು ತಲೆತಲೆಮಾರುಗಳಿಂದ ನಡೆದುಕೊಂಡು ಬಂದಂತಹ ಪದ್ಧತಿಯಾಗಿದೆ. ಹಾಗಾಗಿ ಪೂಜೆಗೆ ಸಂಬಂಧಿಸಿದ ಎಲ್ಲಾ ಕಾರ್ಯಗಳನ್ನು ಯಜಮಾನ ತನ್ನ ಸಂಬಂಧಿಕರಿಗೆ ಪೂರೈಸಿಕೊಡಬೇಕಾಗುತ್ತದೆ. ಈತನಿಗೆ ಕುಟುಂಬದಲ್ಲಿ ತುಂಬಾ ಗೌರವಸ್ಥಾನವನ್ನು ನೀಡುತ್ತಾರೆ.

ಈ ಎಲ್ಲಾ ಆಚರಣಾಪದ್ಧತಿಯನ್ನು ಕೃಷಿಗೆ ಸಂಬಂಧಪಟ್ಟ ಬುಡಕಟ್ಟುಗಳಲ್ಲಿ ನೋಡಬಹುದಾಗಿದೆ. ತಂದೆತಾಯಿಗಳಿಂದ ಬೇರ್ಪಟ್ಟ ಅಣ್ಣತಮ್ಮಂದಿರು ತುಳಸಿಕಟ್ಟೆಯನ್ನು ಕಟ್ಟುವಂತಿಲ್ಲವೆ ಅದಕ್ಕೆ ಬದಲಾಗಿ ಅವರು ತಮ್ಮ ಮನೆಯ ಮುಂದೆ ತುಳಸಿಕಟ್ಟೆಯ ಸೇಡಿ ಚಿತ್ತಾರಗಳನ್ನು ಬರೆದು ಆ ಚಿತ್ರದ ಮೇಲೆ ಸಿಪ್ಪೆ ಸುಲಿಯದ ತೆಂಗಿನ ಕಾಯನ್ನು ಇಟ್ಟು ಪೂಜೆಯನ್ನು ಮಾಡುತ್ತಾರೆ. ಈ ತರಹದ ಚಿತ್ತಾರಗಳನ್ನು ಹಾಲಕ್ಕಿ ಒಕ್ಕಲಿಗರ, ಗೊಂಡರ, ಕುಣಬಿಯರ, ಮನೆಗಳ ಮುಂದೆ ನೋಡಬಹುದು. ಈ ರೀತಿ ತುಳಸಿಕಟ್ಟೆಯ ಚಿತ್ತಾರಗಳನ್ನು ಮದುವೆ ಮತ್ತು ಇತರೆ ದೇವರ ಕಾರ್ಯಗಳ ಸಂದರ್ಭದಲ್ಲಿ ಬರೆಯುವುದು ವಾಡಿಕೆಯಾಗಿದೆ. ಅಂತೆಯೇ ತುಳಸಿ ಹಬ್ಬವನ್ನು ಸಹ ಮಾಡುತ್ತಾರೆ. ಈ ಹಬ್ಬದಲ್ಲಿ ಕಣದ ಸುತ್ತಾ ಹಲವು ಬಗೆಯ ಚಿತ್ತಾರಗಳು ಸುಗ್ಗಿಯಲ್ಲೊಮ್ಮೆ ಕಂಗೊಳಿಸುತ್ತವೆ. ಧಾರ್ಮಿಕ ಹಿನ್ನೆಲೆಯಲ್ಲಿ ರೂಪಗೊಂಡ ಇಂತಹ ಚಿತ್ರಗಳನ್ನು ಶ್ರದ್ಧೆ ಮತ್ತು ಭಕ್ತಿಯಿಂದ ನೋಡುತ್ತಾರೆ.

ಯಾವುದೇ ಪೂಜೆ ಮಾಡಲಿ ಮೊದಲು ಸಗಣಿಯಿಂದ ಸಾರಿಸಿ ಅದರ ಮೇಲೆ ಸೇಡಿ ಚಿತ್ತಾರಗಳನ್ನು ಬರೆದು ಆನಂತರ ಪೂಜಾಕಾರ್ಯದಲ್ಲಿ ತೊಡಗಿಸುತ್ತಾರೆ. ಸಗಣಿಯಿಂದ ಸಾರಿಸದೆ ಹೋದರೆ ಅಥವಾ ಸೇಡಿಯ ಚಿತ್ತಾರಗಳನ್ನು ಬರೆಯದೇ ಹೋದರೆ ಪೂಜೆಯ ಕಾರ್ಯ ನಡೆಯುವುದೇ ಇಲ್ಲ. ಹಾಗಾಗಿ ಬುಡಕಟ್ಟು ಬದುಕಿನಲ್ಲಿ ಚಿತ್ತಾರಗಳು ಬಹುಮುಖ್ಯ ಪಾತ್ರವನ್ನು ವಹಿಸುತ್ತವೆ. ಗೊಂಡರು ಹಬ್ಬವನ್ನು "ಕೋಡಿ ತಿಂಗಳ ಹುಣ್ಣಿಮೆಯ ದಿನ ಆಚರಿಸುತ್ತಾರೆ. ತುಳಸಿ ಕಟ್ಟೆಯನ್ನು ಸಾರಿಸಿ ತುಳಸಿಕಟ್ಟೆಯ ಎಲ್ಲಾ ದಿಕ್ಕುಗಳ ಗೋಡೆಗಳಿಗೂ ಸೇಡಿಯಿಂದ ದೊಡ್ಡ ಚಿತ್ತಾರಗಳನ್ನು ಬರೆಯುತ್ತಾರೆ. ಇದರ ನಾಲ್ಕು ಮೂಲೆಗಳಿಗೆ ಕಂಬ ನಿಲ್ಲಿಸಿ, ತುಳಸಿಕಟ್ಟೆಯನ್ನು ಅನೇಕ ಕಾಡಿನ ಹೂವುಗಳಿಂದ ಸಿಂಗರಿಸುತ್ತಾರೆ. ಸಮುದಾಯ ಎಲ್ಲರೂ ಕೂಡಿ ಸಂಜೆ ಪೂಜೆ ಮಾಡುತ್ತಾರೆ. ನಂತರ ಗೋವಿಂದನನ್ನು ನೆನೆಯುತ್ತಾ ತುಳಸಿ ಕಟ್ಟೆಯನ್ನು ಸುತ್ತುತ್ತಾರೆ."[೨] ಹೀಗೆ ಧಾರ್ಮಿಕ ಹಿನ್ನೆಲೆಯಲ್ಲಿಯೂ ಸಹ ವಿವಿಧ ರೀತಿಯ ಚಿತ್ತಾರಗಳು ರೂಪಗೊಂಡ ಅಭಿವ್ಯಕ್ತವಾಗಿರುತ್ತವೆ. ಇವು ಅವರ ಕಲಾಪ್ರಜ್ಞೆಗೆ ಹಿಡಿದ ಕನ್ನಡಿಯಾಗಿವೆ.

ಕೃಷಿಕರಾದ ಇವರ ಬದುಕಲ್ಲಿ ಸಂಪ್ರದಾಯ ಮತ್ತು ಆಚರಣೆಗಳು ಹಲವು ರೀತಿಯಲ್ಲಿ ಬೆಸೆದುಕೊಂಡಿವೆ. ಇವುಗಳಲ್ಲಿಯೇ ಬದುಕನ್ನು ಸಾಗಿಸುತ್ತಾ ತಮ್ಮದೇ ಆದಂತ ಕಟ್ಟುಪಾಡುಗಳಲ್ಲಿ

ಬದುಕುತ್ತಿದ್ದಾರೆ. ತಮ್ಮ ಜಗತ್ತೇ ಶ್ರೇಷ್ಟ. ಇವರು ಹಾಕುವ ಗೆರೆ ಅಥವಾ ಚಿತ್ರ ಹಲವಾರು ಕಲ್ಪನೆಯನ್ನು ಹೊಂದಿರುತ್ತವೆ. ಒಂದು ಸೊನ್ನೆಯನ್ನು ಸುತ್ತಿದರೆ ಅದನ್ನೇ ಭೂಮಿ ಅಂತಲೂ ಅಥವಾ ಸೂರ್ಯ ಅಂತಲೂ ಒಂದು ಚುಕ್ಕೆಯನ್ನು ನೆಲದಲ್ಲಿ ಅಥವಾ ಗೋಡೆಯಲ್ಲಿ ಇಟ್ಟರೆ ಅದನ್ನು ನಕ್ಷತ್ರ ಅಂತಲೂ ಹೀಗೆ ತಮ್ಮ ಸೃಜನಶೀಲತೆಗೆ ತಕ್ಕಂತೆ ರೂಪಗೊಂಡ ಚಿತ್ರಗಳಿಗೆ ಅವರದೇ ಆದ ಅರ್ಥಗಳನ್ನು ಕಲ್ಪಿಸಿಕೊಂಡಿದ್ದಾರೆ.

ಇಂದು ಬಹುತೇಕ ಬುಡಕಟ್ಟುಗಳು ಕೃಷಿಯನ್ನೇ ಅವಲಂಬಿಸಿವೆ. ಇವರಿಗೆ ಕಾಡೇ ತಮ್ಮ ಪ್ರಪಂಚವಾಗಿದ್ದು, ಈ ಕಾಡಿನಲ್ಲಿ ಸ್ವತಂತ್ರವಾಗಿ ಬದುಕನ್ನು ನಡೆಸುತ್ತಿದ್ದರು. ಇಂದಿನ ಸರ್ಕಾರದ ಮತ್ತು ಭೂಮಾಲಿಕರ ಪ್ರಭಾವದಿಂದ ಒಂದೆಡೆ ನೆಲಯೂರುವ ಪರಿಸ್ಥಿತಿ ಬಂದು ಕೃಷಿಗೆ ಅವಲಂಬಿತರಾಗಿ ಬದುಕು ನಡೆಸುತ್ತಿದ್ದಾರೆ. ಅಂತೆಯೇ ಕೂಲಿಯ ಬದುಕು ಇವರದಾಗಿದೆ. ಕೃಷಿಯ ಒಡನಾಟ ಮತ್ತು ಪ್ರಾಣಿಗಳೊಂದಿಗಿನ ಬಾಳ್ವೆಯಲ್ಲಿ ಹಲವು ಹಬ್ಬಗಳನ್ನು ಮಾಡುತ್ತಾರೆ. ರಾಸುಗಳಿಗೆ ಸಂಬಂಧಿಸಿದಂತೆ ಪ್ರತಿ ಬುಡಕಟ್ಟಿನಲ್ಲೂ ಹಬ್ಬಗಳನ್ನು ಆಚರಿಸುತ್ತಾರೆ. "ದೀಪಾವಳಿಯ ಹಬ್ಬದ ಅನಂತರ ಕೋಡಿ ತಿಂಗಳಲ್ಲಿ ಬರುವ ಹುಣ್ಣಿಮೆಯ ದಿನ ತುಳಸಿ ಪೂಜೆಯ ಮರುದಿನ ಬರುವುದೇ ಕೋಡಿ ಹಬ್ಬ. ಈದಿನ ಕೊಟ್ಟಿಗೆಯ ಬಾಗಿಲು ಸ್ವಚ್ಛಮಾಡಿ ಶೇಡಿ ಬರೆಯುತ್ತಾರೆ. ಗಂಟಿಹಬ್ಬದ ಹೊತ್ತಿಗೆ ಊರುಕೇರಿಯಲ್ಲಿ ಚಂದ್ರಕಾಯಿಯೆಂಬ ಗಿಡ ಸಾವಿರಗಟ್ಟಲೆ ಕಾಯಿ ಬಿಟ್ಟಿರುತ್ತದೆ. ಕೆಂಪು ಬಣ್ಣ ತುಂಬಿಕೊಂಡಿರುವ ಈ ಕಾಯಿಗಳನ್ನು ಹಿಂಡಿ ಬಟ್ಟಲಲ್ಲಿ ಬಣ್ಣವನ್ನು ಶೇಖರಿಸುತ್ತಾರೆ. ಹಳ್ಳದಂಚಿಗೆ ಸಿಗುವ ಕೆಂಪುಕಲ್ಲನ್ನು ಅರೆದು ಕೆಂಪು ಬಣ್ಣವನ್ನು ಪಡೆಯುವುದುಂಟು. ಸಮೀಪದಲ್ಲಿ ಸಿಗುವ ಬಿಳಿಬಣ್ಣದ ಸೇಡಿಯನ್ನು ಕದಡಿ ಕಲಕಿ, ಇನ್ನೊಂದು ಬಟ್ಟಲಲ್ಲಿಡುತ್ತಾರೆ. ಈ ಬಣ್ಣಗಳನ್ನು ಮುಂಜಾನೆ ಕೊಟ್ಟಿಗೆಯ ದನಗಳ ಮೈಯಿಗೆ ಬಿಳಿ, ಕೆಂಪು ಬಣ್ಣದ ಅಚ್ಚು ಹಾಕುತ್ತಾರೆ."[೬] ಇವು ಗಂಟಿ ಹಬ್ಬದಲ್ಲಿ ಬರೆಯುವ ಚಿತ್ರಗಳು. ಇದನ್ನು ಗೊಂಡರಲ್ಲಿ ಕಾಣುತ್ತೇವೆ. ಸಾಮಾನ್ಯವಾಗಿ ಪ್ರಕೃತಿ ದತ್ತವಾಗಿ ಸಿಗುವ ಬಣ್ಣಗಳನ್ನೇ ಹೆಚ್ಚಾಗಿ ಬಳಸುತ್ತಾರೆ. ಅದನ್ನು ತಮ್ಮದೇ ಆದಂತ ರೀತಿಯಲ್ಲಿ ತಯಾರುಮಾಡಲು ಕಂಡುಕೊಂಡಿದ್ದಾರೆ.

ಕರ್ನಾಟಕ ಬುಡಕಟ್ಟು ಸಮುದಾಯಗಳಲ್ಲಿ ಕೆಲವು ಆಚರಣೆಗಳನ್ನು ನೋಡುವುದಾರೆ ಅವು ಅವರವರು ನಂಬಿಕೊಂಡು ಬಂದಂಥ ಧಾರ್ಮಿಕತೆಯ ಮೇಲೆ ನಿಂತಿರುತ್ತವೆ. ಅವುಗಳಲ್ಲಿ ಚಕ್ರ ಕಟ್ಟುವುದು, ಮುಡುಪು ಕಟ್ಟುವುದು, ಹರಿದಿನ ಮಾಡುವುದು, ತುಳಸಿಹಬ್ಬ, ಬಲೀಂದ್ರನಹಬ್ಬ, ದೀಪಾವಳಿ, ಗದ್ದೆ ಗಂಡನ ಹಬ್ಬ, ಹೊಸತು, ಹೊಸಕ್ಕಿಹಬ್ಬ, ಸುಗ್ಗಿಹಬ್ಬ, ವೃಕ್ಷದೇವತೆಗಳಹಬ್ಬ, ಪ್ರಾಣಿದೇವತೆಗಳಹಬ್ಬ, ನಾಗರಹಬ್ಬ, ಗಂಟಿಹಬ್ಬ, ಅಜ್ಜಿ ಕಳಿಸುವ ಹಬ್ಬ, ಈ ಮುಂತಾದ ಹಬ್ಬಗಳನ್ನು ಹಾಲಕ್ಕಿ, ಗೊಂಡ, ಕುಣಬಿ, ಸಿದ್ಧಿ ಮತ್ತಿತರರು ಆಚರಿಸುತ್ತಾರೆ. ಹೊಸರಾಗಿ ಹಬ್ಬ, ರೊಟ್ಟಿಹಬ್ಬ, ಮುನಿಮಾಡುವುದು, ಸಂಕಮ್ಮನ ಹಬ್ಬ, ದನಗಳಹಬ್ಬ, ಕರುವಾಡು, ಮಾರಿಹಬ್ಬ, ಪ್ರಕೃತಿಪೂಜೆ ಮುಂತಾದವುಗಳನ್ನು ಸೋಲಿಗರಲ್ಲಿ ಕಾಣಬಹುದು. ಕೊಂತಿ ಪೂಜೆ, ಗಾಳಿಕರೆಯುವುದು ಇವು ಜೇನುಕುರುಬರ ವಿಶೇಷ ಆಚರಣೆ.

[illegible]

[illegible]

[illegible]

ಹಿರಿಯರ ಪೂಜೆ (ಪಿತೃಪಕ್ಷ ಹಬ್ಬ), ಮಳೆ ಹಬ್ಬ, ಬಲೀಂದ್ರನ ಹಬ್ಬ, ಗೋವಿನಹೆಜ್ಜೆ ಮುಂತಾದ ಹಬ್ಬಗಳನ್ನು ಹಸರಲ್ಲಿ ಮತ್ತು ದೀವರಲ್ಲಿ ಕಾಣುತ್ತೇವೆ. ಚೌತಿಹಬ್ಬ, ನಾಗರ ಪಂಚಮಿ, ಕಡೇ ಅಮವಾಸೆ, ಮಹಾನವಮಿ, ಗಣೇಶನಹಬ್ಬ, ಶಿವರಾತ್ರಿ, ದೀಪಾವಳಿ ಹಬ್ಬಗಳನ್ನು ವಿಶೇಷವಾಗಿ ಸಿದ್ದಿಯರು ಆಚರಿಸುತ್ತಾರೆ.

ಗೌಳಿಗರು 'ಭೂಮಿಪೂಜಾ', ಮಹಾನವಮಿ, ದೀಪಾವಳಿ ಹಬ್ಬವನ್ನು ಮಾಡುತ್ತಾರೆ. ಈ 'ಭೂಮಿ ಹುಣ್ಣಿಮೆ'ಯನ್ನು ಹಸಲರು, ದೀವರು ವಿಶೇಷವಾಗಿ ಆಚರಿಸುತ್ತಾರೆ. ಇದೇ ಸಮಯದಲ್ಲಿ ಸೋಲಿಗರು ಗದ್ದೆಹಬ್ಬ ಅಂತ ಆಚರಿಸಿದರೆ ಗೊಂಡರು ಗದ್ದೆಗಂಡನ ಹಬ್ಬಗಳನ್ನು ಆಚರಿಸುತ್ತಾರೆ. ಇವೆಲ್ಲವೂ ಭೂಮಿಗೆ ಸಂಬಂಧಪಟ್ಟಂತ ಹಬ್ಬಗಳೇ ಗೌಳಿಗರಲ್ಲಿ ವಿಶೇಷವಾಗಿ ಹೋಳಿ ಹಬ್ಬವನ್ನು ಆಚರಿಸುತ್ತಾರೆ. ಇದನ್ನು 'ಹೋಳಿಹುಣ್ಣಿಮೆ' ಅಥವಾ 'ಕಾಮನಹಬ್ಬ' ಎಂದು ಕರೆಯುತ್ತಾರೆ. ಗೌಳಿಗರು ವರ್ಕೂತ ಹಬ್ಬವನ್ನು ವಿಶೇಷವಾಗಿ ಆಚರಿಸುತ್ತಾರೆ. ಇದು ಇವರ ಮನೆದೇವರಿಗೆ ಪೂಜೆ ಸಲ್ಲಿಸುವ ಹಬ್ಬವಾಗಿದೆ. ಜೊತೆಗೆ ಮಹಾನವಮಿ, ಹಿರಿಯರ ಹಬ್ಬವನ್ನು ಸಹ ಆಚರಿಸುತ್ತಾರೆ. ಬುಡಕಟ್ಟು ಸಮುದಾಯಗಳಲ್ಲಿ ಹಿರಿಯರ ಹಬ್ಬವನ್ನು ವಿಶೇಷವಾಗಿ ಆಚರಿಸುತ್ತಾರೆ. ಈ ಹಬ್ಬವನ್ನು ದೀಪಾವಳಿಗೆ ಮುಂಚೆ ಮಾಡುತ್ತಾರೆ. ಇದು ಅಮವಾಸೆಯ ದಿನ ನಡೆಯುತ್ತದೆ. ಕೆಲವರು ಈ ಹಬ್ಬವನ್ನು ಅಮವಾಸೆಯ ಮುಂದಿನ ಅಥವಾ ಹಿಂದಿನ ದಿನಗಳಲ್ಲಿ ಆಚರಿಸುತ್ತಾರೆ. ಹೀಗೆ ಬುಡಕಟ್ಟುಗಳು ಆಚರಿಸುವ ಹಬ್ಬಗಳು ಅವರವರ ಪರಿಸರಕ್ಕೆ ತಕ್ಕಂತೆ ನಂಬಿಕೊಂಡು ಬಂದಂತಹ ಜೀವನಮೌಲ್ಯಗಳಿಗೆ ತಕ್ಕಂತೆ ರೂಪಗೊಂಡಿರುತ್ತವೆ.

ಹಬ್ಬಗಳನ್ನು ಆಚರಿಸುವುದರ ಜೊತೆಗೆ ತಮ್ಮದೇ ಆದಂತ ರೀತಿಯಲ್ಲಿ ಮಾಟ, ಮಂತ್ರ, ಪೂಜಾವಿಧಾನಗಳನ್ನು ಮಾಡುತ್ತಾರೆ. ಅವುಗಳಿಗೆ ಸಂಬಂಧಿಸಿದಂತೆ ಕಾರ್ಯಗಳನ್ನು ನಡೆಸುತ್ತಾರೆ. ಈ ಸಂದರ್ಭಗಳಲ್ಲಿ ಮಂತ್ರವಾದಿ ಕೆಲವು ಚಿತ್ರಗಳನ್ನು ಬರೆಯುತ್ತಾನೆ. ಇದಕ್ಕೆ ಕೆಲವರು ಮಂಡಲ ಬರೆಯುವುದು ಎನ್ನುತ್ತಾರೆ. ಇಂತಹ ಚಿತ್ರಗಳು ಮನಸ್ಸಿನಲ್ಲಿ ಉಳಿದು ನಂತರದಲ್ಲಿ ಯಾವುದೋ ಸಂದರ್ಭದಲ್ಲಿ ಚಿತ್ರಗಳಾಗಿ, ಕಲಾಕೃತಿಯಾಗಿ ಹೊರಹೊಮ್ಮುತ್ತವೆ. ಅದನ್ನು ಈ ರೀತಿಯಲ್ಲಿ ಹೇಳಬಹುದು. ಸಮಸ್ಯೆಯನ್ನು ಹೊಂದಿರುವ ಒಬ್ಬ ವ್ಯಕ್ತಿ, ಮಂತ್ರವಾದಿಯ ಹತ್ತಿರ ಹೋಗುತ್ತಾನೆ. ಅವನ ಸಮಸ್ಯೆಗಳನ್ನು ಅರಿತ ಮಂತ್ರವಾದಿ ಚಿತ್ರಗಳನ್ನೊ, ಮಣ್ಣಿನ ಗೊಂಬೆಗಳನ್ನೋ ಅಥವಾ ಇನ್ನಾವುದೋ ರೀತಿಯ ರಂಗಗಳನ್ನು ಬರೆಯುತ್ತಾನೆ. ಸಮಸ್ಯೆಯಲ್ಲಿ ಸಿಕ್ಕಿಕೊಂಡ ವ್ಯಕ್ತಿಯನ್ನು ಅಲ್ಲಿ ಕೂರಿಸಿ ಅದಕ್ಕೆ ಪರಿಹಾರಾರ್ಥವಾಗಿ ಕೆಲವು ತಂತ್ರಗಳನ್ನು ಬಳಸುತ್ತಾನೆ. ಸಮಸ್ಯೆಯಲ್ಲಿರುವವನ ಮನಸ್ಥಿತಿ ಕಳಚಿ ಬಿದ್ದು ಸಹಜಸ್ಥಿತಿಗೆ ಬರುತ್ತಾನೆ. ಈ ಸಂದರ್ಭದಲ್ಲಿ ಕಂಡ ಚಿತ್ರಗಳು ಕಲಾಕೃತಿಗಳು ಬೇರೆ ಬೇರೆ ರೂಪವನ್ನು ಪಡೆದು ಅವನಿಂದ ಅಭಿವ್ಯಕ್ತಿಗೊಳ್ಳಬಹುದು. ಈ ಮಾಟ, ಮಂತ್ರಗಳು ಗೌಪ್ಯ ಜಾಗಗಳಲ್ಲಿ ಮಾತ್ರ ನಡೆಯುತ್ತವೆ.

[illegible]

ಬಾಲ್ಯವಿವಾಹ, ಮರಣಗಳಿಗೆ ಸಂಬಂಧಿಸಿದಂತೆ ಕೆಲವು ಆಚರಣೆಗಳಿರುತ್ತವೆ. ತೊಟ್ಟಿಲು ಶಾಸ್ತ್ರ (ನಾಮಕರಣ)ದಲ್ಲಿ ಆಯಾ ಬುಡಕಟ್ಟು ಸಮುದಾಯಗಳು ಹುಟ್ಟಿದ ಮುಗುವಿಗೆ, ಬಣ್ಣಗಳ ಓಕಳಿ ಮಾಡಿ ದೃಷ್ಟಿ ತೆಗೆಯುವುದು, ಕುಲದೇವರ ಹೆಸರಿನಲ್ಲಿ ಆರತಿ ಮಾಡುವುದು, ಮುತ್ತೈದೆಯರ ಮಡಿಲಿಗೆ ಮಕ್ಕಳನ್ನು ಹಾಕುವುದು. ಅದಕ್ಕೆ ಯಾವುದೇ ರೀತಿಯಲ್ಲಿ ತೊಂದರೆಯಾಗದಂತೆ ಪೂಜೆ ಸಲ್ಲಿಸುವುದು ನಡೆಯುತ್ತದೆ. ಇದರಲ್ಲಿ ಹೆಣ್ಣುಮಕ್ಕಳು ಹುಟ್ಟಿದರೆ ಅದರ ಜವಬ್ಧಾರಿಯನ್ನು ಹಡೆದ ತಾಯಿಯ ಮನೆಯವರು ಅಂದರೆ ಸೋದರ ಮಾವಂದಿರು ಜೋಪಾನ ಮಾಡುತ್ತಾರೆ. ಈ ಸಂದರ್ಭಗಳಲ್ಲಿ ತಾವು ಬಿಡುವ ಸೇಡಿಯ ಚಿತ್ತಾರಗಳಿಂದ ಹಾಗೂ ಬಣ್ಣ ಬಣ್ಣಗಳ ಹೂವುಗಳಿಂದ ಮನೆಯನ್ನು ಸಿಂಗರಿಸಲಾಗುತ್ತದೆ.

ಎಲ್ಲಾ ಹೆಣ್ಣು ಋತುಮತಿಯಾದ ಸಂದರ್ಭದಲ್ಲಿ ಈ ರೀತಿಯ ಸಂಪ್ರದಾಯಗಳು ಬಹುತೇಕ ಬುಡಕಟ್ಟುಗಳಲ್ಲಿ ಕಾಣಬರುತ್ತವೆ. ಮಡಿ, ಮೈಲಿಗೆ ಮುಂತಾದ ಆಚರಣೆಗಳನ್ನು ಇಟ್ಟುಕೊಂಡಿದ್ದು, ಇವರು ವೈಷ್ಣವ ಧರ್ಮದ ಪ್ರಭಾವದಿಂದ ಈ ರೀತಿಯ ಅನುಸರಣಾ ಕ್ರಮವನ್ನು ಇಟ್ಟುಕೊಂಡಿರುವುದನ್ನು ನಾವು ನೋಡಬಹುದಾಗಿದೆ. ಶಿಷ್ಟತೆಯನ್ನು ಎಲ್ಲಾ ಬುಡಕಟ್ಟುಗಳು ಕಾಪಾಡಿಕೊಂಡು ಬಂದಿವೆ. "ಹುಡುಗಿ ಇನ್ನೇನು ಮೈನೆರೆಯುತ್ತಾಳೆ ಅನ್ನುವ ಕೆಲವು ತಿಂಗಳುಗಳ ಮೊದಲು ಈ ಆಚರಣೆ ನಡೆಯುತ್ತದೆ. ಅವಳ ಮುಖದ ಬಣ್ಣ ಬದಲಾಗುವ, ಮೈಕೈಯಿನ ಬದಲಾವಣೆಗಳಿಂದ ಸಂದರ್ಭವನ್ನು ಊಹಿಸುತ್ತಾರೆ. ಅಂತ ಸಂದರ್ಭದಲ್ಲಿ ಊರ ಹೆಂಗಸರೆಲ್ಲಾ ಸೇರಿ, ಹುಡುಗಿಗೆ ಸ್ನಾನಮಾಡಿಸಿ, ತುಳಸಿ ಪೂಜೆಯ ನಂತರ ಅವಳನ್ನು ಅಲಂಕರಿಸಿ ದೇವರ ಎದುರಿಗೆ ಕೂರಿಸುತ್ತಾರೆ. ಅಲ್ಲಿಯವರಿಗೆ ಲಂಗ, ದಾವಣಿ ಅಥವಾ ಇನ್ನಾವುದೇ ಉಡಗೆ ಉಡುತ್ತಿದ್ದ ಹುಡುಗಿಗೆ ಅದೇ ಮೊದಲ ಬಾರಿಗೆ ಸಾಂಪ್ರದಾಯಿಕ ಉಡುಗೆ, ಕುಪ್ಪಸವಿಲ್ಲದೆ ಕತ್ತಿಗೆ ಗಂಟುಹಾಕಿ ಉಡಿಸುವ ಈ ಸೀರೆಗೆ ಗೇಟಿ ಕಟ್ಟುವುದು ಎನ್ನುತ್ತಾರೆ."[೭] ಈ ಸಂದರ್ಭದಲ್ಲಿ ಆಯಾ ಬುಡಕಟ್ಟಿಗೆ ಸಂಬಂಧಿಸಿದಂತೆ ಹಲವು ಸರಗಳು ಕೊರಳನ್ನು ಸೇರುವಂತೆ ಸಂಪ್ರದಾಯಗಳು ಮನಸ್ಸನ್ನು ಸೇರುತ್ತದೆ. ಮೂಗಿಗೆ ಮೂಗುತಿ, ಕಿವಿಗೆ ಓಲೆಯಂತಹ ಆಭರಣಗಳು, ಮುಖ, ಮೈಯಿ ಕೈಕಾಲಿಗೆ ಹಚ್ಚೆಯ ಚಿತ್ತಾರಗಳನ್ನು ಹಾಕುತ್ತಾರೆ. ಮೈನೆರೆಯುವುದಕ್ಕಿಂತ ಮುಂಚೆ ಯಾವುದೇ ಹೆಣ್ಣು ಮಕ್ಕಳಿಗೆ ಕಿವಿಯನ್ನು, ಮೂಗನ್ನು ಅಥವಾ ಹಚ್ಚೆಯನ್ನು ಹಾಕಿಸುವುದಿಲ್ಲ. ಈ ಎಲ್ಲಾ ಸಂಪ್ರದಾಯಗಳು ಬುಡಕಟ್ಟು ಸಮುದಾಯಗಳಲ್ಲಿ ಕಂಡುಬರುವ ವಿಶೇಷತೆಗಳಾಗಿವೆ. ಹಾಗಾಗಿ ಅವುಗಳ ಬಗ್ಗೆ ನಂಬಿಕೆ ಮತ್ತು ಉಳಿವು ಇರುತ್ತದೆ. ಈ ಚಿತ್ರಗಳು ಅನಾದಿಕಾಲದ ವಿನ್ಯಾಸಗಳನ್ನು ಹೊಂದಿರುತ್ತವೆ. ಆ ತಂತ್ರಗಳನ್ನು ಈಗಲೂ ಮಾಟಮಂತ್ರಗಳ ಸಂದರ್ಭದಲ್ಲಿ ಬಳಸುತ್ತಾರೆ. ಈ ಕ್ರಮಗಳನ್ನು ತಮ್ಮದೇ ಆದಂತ ರೀತಿಯಲ್ಲಿ ಬುಡಕಟ್ಟು ಸಮುದಾಯದವರು ಬಳಸುತ್ತಾರೆ.

ಈ ಆಚರಣೆಗೆ ಸಂಬಂಧಿಸಿದಂತೆ ಆಯಾ ಸಂದರ್ಭಕ್ಕೆ ತಕ್ಕಂತೆ ಬುಡಕಟ್ಟುಗಳಲ್ಲಿ ಕುಣಿತಗಳನ್ನು ನೋಡಬಹುದು. ಇವು ಆಚರಣೆಯ ಹಿನ್ನೆಲೆಯಲ್ಲಿ ಬಂದಂತವು. ಹರಿದಿನ, ಪೂಜಾಕುಣಿತ, ಹಗರಣ, ಗುಮಟೆ ಕುಣಿತ, ತಾರ್ತಿಕುಣಿತ, ಬೆವುಂಡೆಕುಣಿತ, ಮಂಡಲ ಪೂಜಾಕುಣಿತ, ಸುಗ್ಗಿಯ ಕುಣಿತ

ಮುಂತಾದವು ಹಾಲಕ್ಕಿ ಒಕ್ಕಲಿಗರಲ್ಲಿ ಕಾಣಬಹುದು. ಅಂತೆಯೇ ಗೌಳಿಗರಲ್ಲಿ ಹೋಳಿ ಕುಣಿತವು ವಿಶೇಷವಾದುದು. ಹೋಳಿ ಹುಣ್ಣಿಮೆಯ ಸಂದರ್ಭದಲ್ಲಿ ಕುಣಿಯುತ್ತಾರೆ. ಸಿದ್ದಿಯರು ಪುಗಡಿ ಕುಣಿತವನ್ನು ಕುಣಿಯುತ್ತಾರೆ. ಕುಣಬಿಯರೂ ಸಹ ಹೋಳಿಹುಣ್ಣಿಮೆಯ ಸಂದರ್ಭದಲ್ಲಿ ಗುಮಟೆಯ ವಾದ್ಯಕ್ಕೆ ಹೋಳಿ ಕುಣಿತವನ್ನು ಕುಣಿಯುತ್ತಾರೆ. ಸೋಲಿಗರು ವಿಶೇಷವಾಗಿ ಸುಗ್ಗಿ ಕುಣಿತವನ್ನು ಕುಣಿಯುತ್ತಾರೆ. ಇವರು ಮಲೆಮಾದೇಶ್ವರ ಮತ್ತು ಬಿಳಿಗಿರಿರಂಗನಾಥನ ಜಾತ್ರೆಯಲ್ಲಿ ತಮ್ಮದೇ ಆದಂಥ ವಾದ್ಯಪರಿಕರಗಳನ್ನು ಬಡಿಯುತ್ತಾ ಕುಣಿಯುತ್ತಾರೆ. ಯರವರು ದುಡಿ ಮತ್ತು ಚೀನಿ ಸಂಗೀತಕ್ಕೆ ನೃತ್ಯವನ್ನು ಮಾಡುತ್ತಾರೆ. ಈ ನೃತ್ಯವು ಅವರವರ ಹಬ್ಬ, ವಿಶೇಷ ಕಾರ್ಯಕ್ರಮಗಳ ದಿನದಂದು ನಡೆಯುತ್ತವೆ. ಈ ಬುಡಕಟ್ಟು ಸಮುದಾಯಗಳ ಕುಣಿತ ಮತ್ತು ಅವರ ವಾದ್ಯ ಪರಿಕರಗಳೆಲ್ಲವೂ ತಮ್ಮ ಬದುಕಿನಲ್ಲಿ ಅವಿಬಾಜ್ಯ ಅಂಗವಾಗಿ ಬೆಳೆದುಬಂದಿವೆ. ಬುಡಕಟ್ಟು ಚಿತ್ರಕಲೆ ಆಯಾ ಸಮುದಾಯದ ಸಂಪ್ರದಾಯ ಆಚರಣೆ, ಕಲೆ ಮತ್ತು ಅವರ ಬದುಕು ಕ್ರಿಯಾವಿಧಾನಗಳಲ್ಲಿ ಬೆರೆತು ಹೋಗಿರುತ್ತವೆ. ಈ ಮೇಲೆ ಸೂಚಿಸಿದ ಆಚರಣೆಗಳಲ್ಲಿ ಹಬ್ಬಗಳಲ್ಲಿ ಅವರ ಚಿತ್ರಕಲೆ ಸೇರಿಕೊಂಡಿದೆ. ಈ ಎಲ್ಲಾ ಹಬ್ಬ ಆಚರಣೆಗಳಲ್ಲಿ ಅವರದೇ ಆದಂಥ ಚಿತ್ರಕಲೆಯನ್ನು ನೋಡಬಹುದು. ಇವುಗಳಲ್ಲಿ ಭಿತ್ತಿ ಚಿತ್ರಗಳು ನೆಲದ ಮೇಲಿನ ಚಿತ್ರಗಳನ್ನು ನೋಡಬಹುದಾಗಿದೆ.

ಪ್ರತಿಯೊಂದು ಬುಡಕಟ್ಟು ಸಮುದಾಯಗಳು ಹುಟ್ಟಿನಿಂದ ಸಾಯುವ ತನಕ ಹಲವು ರೀತಿಯ ಸಂಪ್ರದಾಯಗಳನ್ನು ಆಚರಿಸುತ್ತಾರೆ. ಈ ರೀತಿ ಆಚರಣಾ ಸಂದರ್ಭಗಳಲ್ಲಿ ಆಯಾ ಸಮುದಾಯಕ್ಕೆ ತಕ್ಕಂತೆ ಚಿತ್ರಗಳು ಕಾಣುತ್ತವೆ. ಸಂಪ್ರದಾಯಗಳ ಒಳಗೆ ಕೆಲವು ನಂಬಿಕೆಗಳು ಅಡಗಿರುತ್ತವೆ. ಕೆಲವು ನಂಬಿಕೆಗಳು ಸಾರ್ವತ್ರಿಕವಾಗಿದ್ದರೆ ಮತ್ತೆ ಕೆಲವು ಸಂಪ್ರದಾಯಕ್ಕೆ ಸಂಬಂಧಪಟ್ಟಿರುತ್ತವೆ.

ಮದುವೆಯ ಸಂದರ್ಭದಲ್ಲಿ ಹಲವು ರೀತಿಯ ಸಾಂಪ್ರದಾಯಿಕ ಚಿತ್ರಗಳನ್ನು ನೋಡುತ್ತೇವೆ. ಇವು ಹಸೆಯ ಚಿತ್ತಾರಗಳಾಗಿ ಕಾಣಿಸುತ್ತವೆ. ಅವು ಹಲವು ರೀತಿಯಲ್ಲಿ ಇರುವುದನ್ನು ನೋಡಬಹುದು. ಹಸೆಯ ಚಿತ್ತಾರಗಳನ್ನು ವಿಶೇಷವಾಗಿ ಹಸಲರು, ದೀವರು, ಗೊಂಡರು, ಹಾಲಕ್ಕಿ ಒಕ್ಕಲಿಗರು, ಗೌಳಿಗರು, ಸಿದ್ಧಿಯರು, ಕುಣಬಿಯರು, ಪಣಿಯರಲ್ಲಿ ಇನ್ನೂ ಮದುವೆಯ ಸಂದರ್ಭಗಳಲ್ಲಿ ಹೆಚ್ಚಾಗಿ ಕಾಣಸಿಗುತ್ತವೆ. ಪ್ರತಿಯೊಂದು ಬುಡಕಟ್ಟುಗಳ ಹಸೆ ಚಿತ್ತಾರಗಳೂ ಭಿನ್ನ ರೀತಿಯಲ್ಲೇ ಇರುತ್ತವೆ. ಕೆಲವರು ಗೋಡೆಯ ಮೇಲೆ ಹಸೆಯ ಚಿತ್ತಾರಗಳನ್ನು ಬರೆದರೆ ಸೋಲಿಗರು, ಕಾಡುಕುರುಬ, ಜೇನುಕುರುಬ, ಯರವ ಮುಂತಾದವರು ನೆಲದ ಮೇಲೆ ಹಸೆಯ ಚಿತ್ತಾರಗಳನ್ನು ಬರೆಯುತ್ತಾರೆ.

ಗೊಂಡರು, ಹಸಲರು, ದೀವರು, ಗೌಳಿಗರು, ಕುಣಬಿಯರು, ಸಿದ್ದಿಯರ ಮದುವೆಗಳಲ್ಲಿ ಹಸೆಯ ಚಿತ್ತಾರಗಳು ವೈಶಿಷ್ಟ್ಯ ಸ್ಥಾನವನ್ನು ಪಡೆದಿರುತ್ತವೆ. ಹಸೆಯ ಚಿತ್ತಾರಗಳನ್ನು ಮದುವೆ ಸಂದರ್ಭದಲ್ಲಿ ಗೋಡೆಯ ಮೇಲೆ ಬರೆಯುವುದು ವಿಶೇಷ. ಇವನ್ನು ಮದುವೆಯಾಗುವ ಸಂದರ್ಭದಲ್ಲೇ ಬರೆಯಲಾಗುತ್ತದೆ. ಮದುವೆಯ ಗಂಡು ಹೆಣ್ಣಿನ ಇಬ್ಬರ ಮನೆಯಲ್ಲೂ ಹಸೆಯ ಚಿತ್ತಾರಗಳನ್ನು ಬರೆಯುತ್ತಾರೆ. ಮದುವೆಯ

ಹಿಂದಿನ ದಿನ ಮತ್ತು ಮದುವೆಯ ನಂತರದ ದಿನದಂದು ಗೋಡೆ ಮೇಲೆ ಬಿಡಿಸಿದ ಹಸೆ ಚಿತ್ತಾರಗಳ ಮುಂದೆ ಹಸೆ ಚಿತ್ತಾರಗಳನ್ನೊಳಗಂಡ ಹಸೆಮಣೆಯ ಮೇಲೆ ವಧುವರರನ್ನು ಕೂಡಿಸುತ್ತಾರೆ. ಮದುವೆಯು ಸಾಮಾನ್ಯವಾಗಿ ಹೆಣ್ಣಿನ ಮನೆಯಲ್ಲಿ ನಡೆಯುತ್ತದೆ. ಹಸೆಯ ಚಿತ್ತಾರಗಳನ್ನು ಮದುವೆಯ ಹಿಂದಿನ ದಿನ ನಡೆಯುವ ದೇವತಾಕಾರ್ಯ ಸಂದರ್ಭದಲ್ಲಿಯೂ ಸಹ ಬರೆಯಲಾಗುತ್ತದೆ. ತಾಳಿ ಕಟ್ಟಿದ ನಂತರ ಹೆಣ್ಣಿನ ಮನೆಯಲ್ಲಿ ಬರೆದ ಹಸೆಯ ಚಿತ್ತದೆದುರು ಹಸೆ ಮಣೆಯನ್ನು ಹಾಕಿದರೆ ನಂತರ ಗಂಡಿನ ಮನೆಗೆ ಹೆಣ್ಣನ್ನು ಕರೆದುಕೊಂಡು ಬಂದು ಆತನ ಮನೆಯ ಗೋಡೆಯ ಮೇಲೆ ಬರೆದ ಹಸೆಯ ಚಿತ್ತಾರದೆದುರು ಹಸೆಯನ್ನು ಹಾಕುತ್ತಾರೆ. ಹೀಗೆ ಹಸೆಯ ಚಿತ್ತಾರಗಳನ್ನು ನವದಂಪತಿಗಳಿಗೆ ಯಾವುದೇ ರೀತಿಯ ತೊಂದರೆಗಳು ಬರುವುದಿಲ್ಲ ಎಂಬ ನಂಬಿಕೆ ಇವರಲ್ಲಿದೆ.

ಹಸೆಯ ಚಿತ್ತಾರಗಳನ್ನು ಸಾಮಾನ್ಯವಾಗಿ ಮದುವೆಯ ಮನೆಯಲ್ಲಿ ಪೂರ್ವ ದಿಕ್ಕಿಗೆ ಅಭಿಮುಖವಾಗಿ ಇರುವ ಗೋಡೆಗೆ ಬರೆಯಲಾಗುತ್ತದೆ. ಇವುಗಳನ್ನು ಹಲವು ಶಾಸ್ತ್ರ ಮತ್ತು ಸಂಪ್ರದಾಯದ ಚೌಕಟ್ಟಿನೊಳಗೆ ಬರೆಯಲಾಗುತ್ತದೆ. ಸಾಮಾನ್ಯವಾಗಿ ಇವುಗಳನ್ನು ಮುತ್ತೈದೆಯರು, ಮದುವೆಯಾಗದ ಹೆಣ್ಣು ಮಕ್ಕಳು ಬರೆಯುತ್ತಾರೆ. ಹಸೆ ಚಿತ್ರವನ್ನು ಬರೆಯುವವರಿಗೆ ಸಂಭಾವನೆಯಿದ್ದು, ಇಂತಿಷ್ಟೇ ಕೊಡಬೇಕೆಂಬ ನಿಯಮವಿಲ್ಲ. ಎಲೆ ಅಡಿಕೆಯ ಜೊತೆಗೆ ತಮ್ಮ ಮನಸ್ಸಿಗೆ ಬಂದಷ್ಟು ಸಂಭಾವನೆ ಕೊಡಬಹುದು. ಸಾಮಾನ್ಯವಾಗಿ ಯಾರಿಗೆ ಹಸೆ ಚಿತ್ತಾರಗಳನ್ನು ಬರೆಯುವ ಕಲೆ ಇರುತ್ತದೆಯೋ ಅವರಿಂದಲೇ ಚಿತ್ತಾರಗಳನ್ನು ಬರೆಸಲಾಗುತ್ತದೆ.

ಹಸೆಯ ಚಿತ್ತಾರಗಳ ಗೋಡೆಗಳನ್ನು ಸಿಂಗರಿಸಿವೆ ಎಂದರೆ, ಆ ಮನೆಯಲ್ಲಿ ಮದುವೆಯ ಕಾರ್ಯ ನಡೆದಿದೆ ಎಂದು ಅರ್ಥ. ಈ ಚಿತ್ರಗಳು ಆಕರ್ಷಣೀಯವಾಗಿದ್ದು ಮದುವೆಯಾದ ಒಂದು ವರ್ಷದ ತನಕವೂ ಈ ಚಿತ್ರ ಇರುತ್ತದೆ. ಕೆಲವರು ಹಲವು ವರ್ಷಗಳ ತನಕ ಹಾಗೆಯೇ ಇಟ್ಟುಕೊಳ್ಳುತ್ತಾರೆ. ಈ ಚಿತ್ರಗಳು ಬುಡಕಟ್ಟುಗಳ ಪ್ರಾದೇಶಿಕ ಅನನ್ಯತೆಯನ್ನು ಹೊಂದಿರುತ್ತವೆ. ಕೆಲವು ಚಿತ್ರಗಳಲ್ಲಿ ಸಾಕಷ್ಟು ಹೋಲಿಕೆಗಳಿದ್ದು ತಮ್ಮದೇ ಆದಂತ ಅನನ್ಯತೆಯನ್ನು ಬಿಂಬಿಸುತ್ತವೆ. ಈ ಚಿತ್ರಗಳು ಆದಿಮ ಚಿತ್ರಗಳನ್ನು ಹೋಲುತ್ತಿದ್ದು, ಅವುಗಳು ಜಾಮಿತಿ ಆಕಾರದ ರೂಪಗಳನ್ನು ಹೋಲುವಂತಿರುತ್ತವೆ. ಈ ಚಿತ್ರಗಳು ಸರ್ವಸಾಮಾನ್ಯವಾಗಿ ಆದಿವಾಸಿಗಳ ಹಸೆಯಲ್ಲಿ ಕಾಣುತ್ತೇವೆ. ಇದರ ಚೌಕಟ್ಟು ಪ್ರದೇಶಿಕವಾಗಿ ಅವರು ಬಳಸುವಂತಹ ಹೂವು ಬಳ್ಳಿ, ಗೆಜ್ಜೆಸಾಲು, ಪೊಪ್ಪಿಸಾಲು, ಮದನ ಕೈಗಳನ್ನು, ಕೋಳಿಗಳ ಚಿತ್ರಗಳನ್ನು ಸಂಕೇತವಾಗಿ ಬಳಸುತ್ತಾರೆ.

ಹಸೆ ಚಿತ್ರಗಳ ಮಧ್ಯಭಾಗದಲ್ಲಿ ಒಂಟಿ ಮದುವೆಗಳಾಗಿದ್ದರೆ ಒಂಟಿ ಗಂಡು ಹೆಣ್ಣಿನ ಚಿತ್ತಾರಗಳನ್ನು ಜೋಡಿ ಮದುವೆಯಾಗಿದ್ದರೆ ಜೋಡಿ ಗಂಡುಹೆಣ್ಣುಗಳ ಚಿತ್ರಗಳನ್ನು ಈ ಚಿತ್ತಾರಗಳು ನೋಡುಗರಿ ಅರ್ಥವಾಗುವಂತೆ ಇರುತ್ತವೆ. ಕೆಲವು ಚಿತ್ತಾರಗಳು ಮನೆಯ ಗೋಡೆಯ ಹೊರಭಾಗದಲ್ಲಿ ಸಾಂಕೇತಿಕವಾಗಿ ಬಳ್ಳಿಬರೆಯುವುದು ಎಂದು ಹೇಳುತ್ತಾರೆ (ಪಣಿಯರು). ಗೋಡೆಗಳ ಮೇಲೆ ಕಾಡು ಅರಿಷಿಣ ಅರೆದು

[illegible]

[illegible]

[illegible]

[illegible]

[illegible]

ಬೊಟ್ಟು ಇಡುತ್ತಾರೆ. ಈ ರೀತಿಯಲ್ಲಿ ಗೋಡೆಗೆ ಚಿತ್ತಾರಗಳ ಸಂಕೇತಗಳನ್ನು ಹಾಕಿದರೆ ಹಾಕಿದ ಮನೆಯಲ್ಲಿ ಮದುವೆ ಕಾರ್ಯ ನಡೆದಿದೆ ಎಂದು ತಿಳಿದುಕೊಳ್ಳಬಹುದು. ಈ ರೀತಿಯ ತಿಲಕವನ್ನು ಯರವರಲ್ಲಿ ಮದುವೆಯ ಗಂಡಿಗೂ, ಹೆಣ್ಣಿಗೂ, ಹಣೆಯ ಮೇಲೆ ಅರಿಶಿಣದಿಂದ ಚಿತ್ರವನ್ನು ಬರೆಯಲಾಗುತ್ತದೆ. ಅರಿಶಿಣವನ್ನು ಕಲ್ಲಮೇಲೆ ತೇದು ಅದಕ್ಕೆ ಸುಣ್ಣವನ್ನು ಮಿಶ್ರಣ ಮಾಡಿಕೊಂಡು ಚಿತ್ರವನ್ನು ಗೋಡೆಗಳ ಮೇಲೆ ಮದುವೆ ಗಂಡುಹೆಣ್ಣಿನ ಹಣೆಯ ಮೇಲೆ ಬರೆಯಲಾಗುತ್ತದೆ. ಅರಿಶಿಣಕ್ಕೆ ಸುಣ್ಣವನ್ನು ಸೇರಿಸುವುದರಿಂದ ಅದು ಕೆಂಪಗೆ ಕಾಣುತ್ತದೆ.

ಹಸೆಯ ಚಿತ್ತಾರಗಳನ್ನು ಬರೆಯುವಾಗ ಆಯಾ ಟಿಪ್ಪಣಿಗಳಿಗೆ ಸಂಬಂಧಿಸಿದ ಕೆಲವು ಹಾಡುಗಳನ್ನು ಹಾಡುತ್ತಾರೆ.

ನಮ್ಮ ತಮ್ಮ ಕಾಣೆ
ಚಿನ್ನಾದ ಗಿರಿಕಾಣೆ
ನಮ್ಮ ನಾದನಿಗೆ ವರಕಾಣೆ/ಕೆಳದೀಯ
ಚಿನ್ನಾದ ಚಾವಡಿಗೆ ದೊರೆಕಾಣೆ

ಕಲ್ಲ ಇಟ್ಟರ ಮನೆಗೆ
ಎಲ್ಲಾ ಭಾಗ್ಯವು ಬರಲಿ
ಪಲ್ಲಕ್ಕಿ ಮೇಲೆ ಮಗ ಬರಲಿ/ಈ ಮನೆಗೆ
ಮಲ್ಲಿಗೆ ಹೂವು ಮುಡಿವ ಸೊಸೆ ಬರಲಿ

ಇದು ದೀವರ, ಹಸಲರ, ಹಸೆಯ ಚಿತ್ತಾರಗಳಲ್ಲಿ ಬರುವ ಪಲ್ಲಕ್ಕಿ ಚಿತ್ತಾರಗಳನ್ನು ವರ್ಣಿಸುವ ಹಾಡುಗಳು. ಇವು ಹಸೆಯ ಹಾಡುಗಳಲ್ಲಿ ಕಂಡುಬರುತ್ತವೆ. ಇವು ಹಲವು ರೀತಿಯ ಚಿತ್ರಗಳನ್ನು ಒಳಗೊಂಡು ಹಸೆ ಚಿತ್ರಗಳಾಗಿವೆ. ಈ ಚಿತ್ರಗಳು ಈ ರೀತಿ ಇವೆ. ಪೊಪ್ಪಳಿ, ಸೀತೆ ಮುಡಿ, ನಿಳ್ಳಿ(ಲ್ಲಿ) ಬಾಸಿಂಗದ ನಿಲ್ಲ, ಮನುಷ್ಯ, ಜೋಗಿಜಡೆ, ರಾಮನ ಮುಡಿ, ಪಲ್ಲಕ್ಕಿ ಮುಂತಾದ ಬಿಡಿ ಬಿಡಿ ಚಿತ್ರಗಳನ್ನು ನೋಡಬಹುದಾಗಿದೆ. ಇದರಲ್ಲಿ ಒಂಟಿ ಪಲ್ಲಕ್ಕಿ ಚಿತ್ರದ ಮೇಲೆ ಒಂಟಿ ಜೋಡಿಗಳಿದ್ದರೆ ಅದು ಒಂಟಿ ಮದುವೆ ಎಂದು ಅರ್ಥ. ಜೋಡಿ ಪಲ್ಲಕ್ಕಿಯ ಮೇಲೆ ಜೋಡಿ ಚಿತ್ತಾರಗಳು ಇದ್ದರೆ ಜೋಡಿ ಮದುವೆ ಎಂದು ಅರ್ಥವನ್ನು ತಿಳಿಯಬಹುದು. ಬುಡಕಟ್ಟಿನಲ್ಲಿ ಜೋಡಿ ಮದುವೆಗಳು, ಅಥವಾ ಗುಂಪು ಮದುವೆಗಳು ನಡೆದಿವೆ ಎಂಬುದಕ್ಕೆ ಈ ಚಿತ್ರಗಳೇ ಸಾಕ್ಷಿ.

ಇವರು ಚಿತ್ತಾರಗಳ ಬಗ್ಗೆ ವಿವರಣೆಯನ್ನು ಕೊಡುತ್ತಾ ಪ್ರತಿಯೊಂದು ಗೆರೆಗೂ ಒಂದೊಂದು ಅರ್ಥವನ್ನು ಕೊಡುತ್ತಾರೆ. ಅವುಗಳು ಈ ರೀತಿಯಲ್ಲಿ ಇವೆ. ಬಾಸಿಂಗದ ನಿಲಿ, ಪೊಪ್ಪಳಿ ಚಿತ್ತಾರ ಎಂದು ಕರೆಯುತ್ತಾರೆ. ಮದುವೆ ನಡೆದಾಗ ಎರಡು ಜೋಡಿಗಳನ್ನು ಬರೆಯುತ್ತಾರೆ. ಎರಡು ಮದುವೆ ನಡೆದಾಗ ಎರಡು ಪಲ್ಲಕ್ಕಿಗಳನ್ನು, ಎರಡು ಜೋಡಿ ಚಿತ್ರಗಳನ್ನು ನಾಲ್ಕು ಮದನಕೈಗಳನ್ನು ಬರೆಯುತ್ತಾರೆ. ಮದನ ಕೈಗಳು ಅಂದರೆ ಕಾಮದೇವನ ಹಸ್ತುಗಳು. ಪೀಟಿ ಅಂದರೆ ಪತಂಗದ ಸಾಲು ಎಂದು ಇದು

[illegible]

[illegible]

[illegible]

ಪ್ರಕೃತಿಯ ಜೀವಿಗಳನ್ನು ಪ್ರತಿಬಿಂಬಿಸುತ್ತದೆ. ಪಂಕಗಳು ಎಂದರೆ ಬೀಸಣಿಗೆ, ಹಸೆಯ ಚಿತ್ತಾರಗಳಲ್ಲಿ ಪೊಪ್ಪಳ್ಳಿ ಕಣ್ಣುಗಳೇ ಮಹತ್ವವಾದವು. ಆದ್ದರಿಂದ ಇದನ್ನು ಪೊಪ್ಪಳಿ ಹಸೆ ಚಿತ್ರಗಳು ಎಂದೂ ಕರೆಯುತ್ತಾರೆ. ಇದರಲ್ಲಿನ ಗರಗಸ ಸಾಲನ್ನು ಮಾವಿನ ಎಲೆಗಳ ಸಂಕೇತವಾಗಿ ಬಳಸುತ್ತಾರೆ. ಅದರಂತೆಯೇ ಬೆಂಡಿನ ಬಾಸಿಂಗದ ಮೇಲೆ ನಿಲಿಗಳ ಸಾಲನ್ನು ಬಳಸುತ್ತಾರೆ. ಗಂಡಿನ ಹಾಗೂ ಹೆಣ್ಣಿನ ಬಾಸಿಂಗಗಳ ಬೇರೆ ಬೇರೆಯಾಗಿರುತ್ತವೆ. ಗೊಂಬೆ ಸಾಲನ್ನು ಮುಂದಿನ ಪೀಳಿಗೆಯನ್ನು ಹೇಳಲು ಬಳಸುತ್ತಾರೆ. ಇದರಲ್ಲಿ ಮದುವೆ ದಿಬ್ಬಣಕ್ಕೆ ಬರುವ ಜನರನ್ನು ಸಾಂಕೇತಿಕವಾಗಿ ಹೇಳಲಾಗುತ್ತದೆ.

ಹಸೆಯ ಚಿತ್ತಾರವೆಂದರೆ ಅದು ಬರೀ ಸಾಮಾನ್ಯ ಚಿತ್ರವಾಗಿರದೆ ಹಲವು ಅಂಶಗಳನ್ನು ಒಳಗೊಂಡಿರುತ್ತದೆ. ಬುಡಕಟ್ಟುಗಳಲ್ಲಿ ಇವು ಹಲವು ಕಟ್ಟುಪಾಡುಗಳನ್ನು ಸಂಸ್ಕೃತಿಯ ವೈವಿಧ್ಯತೆಯನ್ನು ಹೇಳುವ ಚಿತ್ರಗಳಾಗಿರುತ್ತವೆ.

ಹಸೆಯ ಚಿತ್ತಾರಗಳು ಪರಂಪರೆಗೆ, ಕುಟುಂಬಕ್ಕೆ ಅವುಗಳ ಹಿನ್ನೆಲೆಗೆ ಸಂಬಂಧಪಟ್ಟಂತೆ ಇರುತ್ತವೆ. ಅವುಗಳನ್ನ ಹೀಗೆಯೇ ಬರೆಯಬೇಕು ಎಂಬ ನಿಯಮವಿರುತ್ತದೆ.

ಅಕ್ಕಿಯ ಚಿತ್ತಾರ = ಅಕ್ಕಿಯನ್ನು ನೆನಸಿ ರುಬ್ಬಿ ಬರೆಯುವ ಚಿತ್ತಾರ

ಕಪ್ಪಿನ ಚಿತ್ತಾರ = ಅಕ್ಕಿಯನ್ನು ಕಪ್ಪಗೆ ಹುರಿದು ರುಬ್ಬಿ ಬರೆಯುವ ಚಿತ್ತಾರ


ಕೆಮ್ಮಣ್ಣಿನ ಚಿತ್ತಾರ = ಕೆಮ್ಮಣ್ಣಿನಿಂದ ಬರೆಯುವ ಚಿತ್ತಾರ

ಹಳದಿ ಚಿತ್ತಾರ = ಗುರಿಗೆ ಕಾಯಿಯ ಸಿಪ್ಪೆಯಿಂದ ಬಣ್ಣಮಾಡಿಕೊಂಡು ಬರೆದ ಚಿತ್ತಾರ

ಹೀಗೆ ವಿವಿಧ ಬಣ್ಣಗಳನ್ನು ಪ್ರಧಾನವಾಗಿಟ್ಟುಕೊಂಡು ಹಸೆಯ ಚಿತ್ತಾರಗಳನ್ನು ಬರೆಯುವರು. ಇವು ಆಯಾ ಸಮುದಾಯದ ಹಿನ್ನೆಲೆಗೆ ಸಂಬಂಧಿಸಿದಂತೆ ರಚನೆಗೊಂಡಿರುತ್ತವೆ. ಒಂದೇ ಸಮುದಾಯದ ವಿವಿಧ ಕುಟುಂಬಗಳು ವಿವಿಧ ರೀತಿಯ ಚಿತ್ತಾರಗಳನ್ನು ಬರೆಯುತ್ತಾರೆ. ಅದರಲ್ಲಿ ಕಪ್ಪು ಚಿತ್ತಾರಗಳನ್ನು ಬರೆಯುವವರು ಸಂಪ್ರದಾಯದಂತೆ ಕಠಾರಿಯನ್ನು ಹಿಡಿಯುವ ಚಿತ್ತಾರ ಬರೆಯುತ್ತಾರೆ. ಬಿಳಿ ಚಿತ್ತಾರಗಳನ್ನು ಬರೆಯುವವರು ಬಾಸಿಂಗವನ್ನು ಹಸೆಯಲ್ಲಿ ಬರೆಯುತ್ತಾರೆ.

ತೇರಿನ ಚಿತ್ತಾರ : ತಿರುಪತಿ ತಿಮ್ಮಪ್ಪನ ಒಕ್ಕಲಾದ ದೀವರು ಹಬ್ಬ ಹರಿದಿನಗಳಲ್ಲಿ ತೇರಿನ ಚಿತ್ತಾರಗಳನ್ನು ಬರೆಯುತ್ತಾರೆ. ಇವರು ತಿರುಪತಿ ತಿಮ್ಮಪ್ಪನ ತೇರನ್ನು ಮುಟ್ಟದಿದ್ದರೆ ತೇರು ಮುಂದಕ್ಕೆ ಹರಿಯುವುದಿಲ್ಲವೆಂಬ ನಂಬಿಕೆಯನ್ನು ಇಟ್ಟುಕೊಂಡಿದ್ದಾರೆ. ಹಾಗಾಗಿ ತೇರಿನ ಚಿತ್ರದಲ್ಲಿ ತೇರನ್ನು ಎಳೆಯುತ್ತಿರುವ ಜನಗಳು ತೇರಿನ ಗೋಪುರ, ಮದನಕೈಗಳು, ನಾಲ್ಕು ಚಕ್ರ, ತೆರಿನ ಮೇಲೆ ಗಿಳಿಗಳ ಸಾಲನ್ನು ಬರೆಯುತ್ತಾರೆ. ಈ ತೇರಿನ ಚಿತ್ರಗಳನ್ನು ಮದುವೆಗೂ ಮುಂಚೆ ಮದುವೆಯ ಸಂದರ್ಭದಲ್ಲಿ ಬರೆಯುತ್ತಿರುವುದು ಕಂಡುಬರುತ್ತದೆ.


[illegible]




1. ಹಾಲಕ್ಕಿಗಳು



2. ಗೌಳಿಗರು



,3. ಕುಣಬಿಯರು



,4. ಸಿದ್ದಿಯರು ,




5.ಗೊಂಡರು.



6 ಸೋಲಿಗರು.





7. ಯರವರು.
8. ದೀವರು.
9. ಹಸಲರು.
10. ಕಾಡು ಕುರುಬರು.
11. ಜೇನುಕುರುಬರು.
12 ಫಣಿಯರು.

ಮುಂಡಿಗೆ ಚಿತ್ತಾರ : ಇದೂ ಕೂಡ ಮತ್ತೊಂದು ಬಗೆಯ ಹಸೆಯ ಚಿತ್ತಾರ. ಇದನ್ನು ಮನೆಯ ಗೋಡೆಗಳ ಮೇಲೆ ಬರೆಯುತ್ತಾರೆ. ಹಸೆಯ ಚಿತ್ತಾರಗಳು ಎರಡು ರೀತಿಯಲ್ಲಿ ಇರುತ್ತವೆ. ಮುಂಡಿಗೆ ಚಿತ್ತಾರ ಒಂದು ಬಗೆಯಾದರೆ ಪೊಪ್ಪಳ ಚಿತ್ತಾರ ಮತ್ತೊಂದು ಬಗೆಯದು. ಮುಂಡಿಗೆ ಚಿತ್ತಾರದಲ್ಲಿ ಗೂಡಿನ ಹಕ್ಕಿಯ ಚಿತ್ರಗಳನ್ನು ನೋಡಬಹುದು. ಹಿಂದೆ ಇವರವು ಹುಲ್ಲಿನ ಮನೆಗಳು ಇದ್ದವು. ಈ ಮನೆಗಳಿಗೆ ಹಕ್ಕಿಗಳು ಬಂದು ಹೋಗುತ್ತಿದ್ದವು. ಹಾಗಾಗಿ ಹಕ್ಕಿಗಳ ಜೊತೆ ಇದ್ದ ಒಡನಾಟದಿಂದ ಹಸೆಯ ಚಿತ್ತಾರಗಳಲ್ಲಿ ಹಕ್ಕಿಗಳ ಗೂಡನ್ನು ಸಂಕೇತಿಕವಾಗಿ ಬಳಸಲಾಗುತ್ತದೆ.

ಹಸೆಯ ಚಿತ್ತಾರಗಳಲ್ಲಿ ಕಂಡುಬರುವ 'ಸೀತೆಯ ಮುಡಿ' ಚಿತ್ರಗಳನ್ನು ಕಸೂತಿ ಮತ್ತು ಹಚ್ಚೆಯಲ್ಲಿಯೂ ಕಾಣುತ್ತೇವೆ. 'ಕೋಳಿ' ಸಾಂಕೇತಿಕ ಚಿತ್ರವಾಗಿ ಹಸೆ ಚಿತ್ರದಲ್ಲಿ ಕಂಡುಬರುತ್ತದೆ. ಇಲ್ಲಿ ಗಂಡುಹೆಣ್ಣುಗಳು ಇರುತ್ತವೆ. ಇವು ಬುಡಕಟ್ಟಿನಲ್ಲಿ ಬಿಡಿಸಲಾರದಂತ ಸಂಬಂಧವನ್ನು ಹೊಂದಿವೆ. ಇಲ್ಲಿ 'ಏಣಿ' ಚಿತ್ರ ಬರುತ್ತದೆ. ಇದರ ಅರ್ಥ ಗಂಡು ಹೆಣ್ಣುಗಳು ಜೀವನದಲ್ಲಿ ಸಮನಾಂತರವಾಗಿ ಹೊಂದಿಕೊಂಡು ಬರುವುದು ಜೊತೆಯಲ್ಲಿ ಜೀವನದ ಏಣಿಯನ್ನು ಹತ್ತುವುದು ಎಂಬುದು ಆಗಿರುತ್ತದೆ. ಈ ಚಿತ್ರದಲ್ಲಿ ಅರಳಿ ಎಲೆಗೆ ಪ್ರಮುಖ ಸ್ಥಾನವನ್ನು ಕೊಡುತ್ತಾರೆ. ಈ ಅರಳಿ ಮರದ ಚಿತ್ತಾರಗಳು ಹಾಲಕ್ಕಿ ಮತ್ತು ಗೌಳಿಗರಲ್ಲಿ ಹೆಚ್ಚಾಗಿ ಕಾಣಿಸುತ್ತವೆ.

ಹಸೆ ಚಿತ್ತಾರಗಳನ್ನು ಬರೆಯುವುದು ಗೊಂಡರಲ್ಲಿ ಒಂದು ಸಂಪ್ರದಾಯವಾಗಿ ಬೆಳೆದುಬಂದಿದೆ. "ಹೆಣ್ಣೊಪ್ಪುವ ಆಚರಣೆ ನಡೆದ ಬಳಿಕ ಎರಡೂ ಮನೆಗಳಲ್ಲಿ 'ಹಸಗರ' (ಹಸೆಯ ಚಿತ್ತಾರಗಳನ್ನು ಬರೆಯಲಾಗುತ್ತದೆ. ಹಸೆಯೆಂದರೆ ಹಸೆ (ರಂಗೋಲಿಯಿಂದ) ರಚಿಸಿದ ಗೋಡೆ. ಇದನ್ನು 'ಹಸಗರ'ವೆಂದೂ ಅನ್ನುವರು ಹೆಣ್ಣೆಪ್ಪುವ ಆಚರಣೆ ನಡೆದ ಮೇಲೆ ತಮ್ಮ ಕೇರಿಯ ಹಸೆ ಬರೆಯ ಬಲ್ಲವಳಿಗೆ ಎಲೆಅಡಿಕೆ ಪಟ್ಟಿ (ವೀಳ್ಯ) ಕೊಟ್ಟು ಹಸೆ ಬರೆಯಲು ಕರೆಯುತ್ತಾರೆ. ಇವಳು ಜವಳಿ ಹೊರೆ ಬರುವವರೆಗೆ ಹಸೆ ಬರೆದು ಪೂರೈಸುತ್ತಾಳೆ. ಮದುವೆಯ ಕಾರ್ಯಕ್ರಮಗಳಲ್ಲಿ ಹೆಚ್ಚಿನವು ಈ ಗೋಡೆಯ ಬಳಿ ನಡೆಯುತ್ತವೆ."[೧೦] ಗೊಂಡರಂತೆ ಹಾಲಕ್ಕಿಗಳಲ್ಲಿಯೂ ಹಸೆಯ ಚಿತ್ತಾರಗಳು ವಿಶೇಷವಾಗಿ ಕಾಣಿಸುತ್ತವೆ. ಇವೂ ಕೂಡ ಗೋಡೆಯ ಮೇಲೆ ಬರೆಯುವ ಚಿತ್ರಗಳೇ. ಇವರು ಹಸೆಯ ಚಿತ್ತಾರಗಳನ್ನು ಅರಿಶಿಣ, ಕುಂಕುಮಗಳಲ್ಲಿ ಬರೆಯುತ್ತಾರೆ. ಇದೂ ಕೂಡ ಸಾಮಾನ್ಯವಾಗಿ ಪೂರ್ವಕ್ಕೆ ಅಭಿಮುಖವಾಗಿರುತ್ತವೆ. ಈ ಚಿತ್ರಗಳಲ್ಲಿ ಹಸೆಮಣೆಗಳು, ತುಳಸಿಗಿಡ, ಗೊಂಬೆ, ಮನುಷ್ಯ, ಕಳಸ ಮುಂತಾದ ಚಿತ್ರಗಳನ್ನು ಸಂಕೇತವಾಗಿ ಬರೆಯುತ್ತಾರೆ. ಈ ಚಿತ್ರಗಳೆಲ್ಲವು ಅವರ ಬದುಕಿನ ಒಡನಾಟದಿಂದ ಬಂದಂತ ಚಿತ್ರಗಳಾಗಿವೆ. ಮನೆಯ ಹೊರಗೋಡೆಯಲ್ಲಿ ತುಳಸಿ ಗಿಡವನ್ನು ಸಾಂಕೇತಿಕವಾಗಿ ಬರೆಯುತ್ತಾರೆ. ಈ ರೀತಿಯ ಸಾಂಕೇತಿಕ ತುಳಸಿ ಗಿಡದ ಚಿತ್ರವನ್ನು ಕೆಲವರು ಸೇಡಿಯಿಂದ ಬರೆದರೆ ಮತ್ತೆ ಕೆಲವರು ಅರಿಶಿಣ ಕುಂಕುಮದಿಂದ ಬರೆಯುತ್ತಾರೆ.

ಸಿದ್ಧಿಯರಲ್ಲಿಯೂ ಹಸೆಯ ಚಿತ್ತಾರಗಳು ವಿಶೇಷವಾಗಿ ಇರುವುದನ್ನು ನೋಡುತ್ತೇವೆ. ಇವು ಜಾಮಿತಿಯ ಆಕಾರದಲ್ಲಿ ಸುತ್ತುವರೆದು ಅದರ ಒಳಗೆ ಗಂಡುಹೆಣ್ಣಿನ ಚಿತ್ರವನ್ನು ಬರೆದಿರುತ್ತಾರೆ.

ಗಂಡುಹೆಣ್ಣಿನ ಚಿತ್ರಗಳಲ್ಲಿ ವಿಶೇಷವಾಗಿ ಬಾಸಿಂಗವನ್ನು ಹೊಂದಿದ ಮದುಮಕ್ಕಳ ಚಿತ್ರಗಳು ಇರುತ್ತವೆ. ಜೊತೆಗೆ ಎರಡು ಕಡೆಯ ದಿಬ್ಬಣದ ಜನರು ಚಿತ್ರಗಳನ್ನು ಬರೆಯುತ್ತಾರೆ. ಈ ಚಿತ್ತಾರಗಳ ಸುತ್ತಾ ತೋರಣಗಳ ಸಾಲು ಹಸೆ ಚಿತ್ತಾರಗಳ ಸುತ್ತಾ ಇರುತ್ತವೆ. ಈ ರೀತಿಯ ಹಸೆಯ ಚಿತ್ತಾರಗಳು ಗೌಳಿಗರಲ್ಲೂ ಕಾಣುತ್ತವೆ. ಮದುವೆಯ ಹಿಂದಿನ ದಿನದ ಶಾಸ್ತ್ರದಲ್ಲಿ ಅದಕ್ಕೆ ಸಂಬಂಧಿಸಿದವರು ಚಿತ್ತಾರಗಳನ್ನು ಬರೆಯುತ್ತಾರೆ. ಇವರಲ್ಲೂ ಕೂಡ ಈ ಚಿತ್ತಾರಗಳಿಲ್ಲದೆ ಮದುವೆ ನಡೆಯುವುದಿಲ್ಲ. ಗೋಡೆಯ ಮೇಲೆ ಚಿತ್ರವನ್ನು ಬರೆಯುವಾಗ ತಾವೇ ತಯಾರಿಸಿದ ಬಣ್ಣವೊಂದನ್ನು ಹಿಂಬಣ್ಣವನ್ನು ಬಳಸುತ್ತಾರೆ.

ಕುಣಬಿಯರೂ ಕೂಡ ಹಸೆಯ ಚಿತ್ತಾರಗಳನ್ನು ಗೋಡೆಯ ಮೇಲೆ ಬರೆಯುವುದನ್ನು ನೋಡಬಹುದು. ಇವರು ಅರಿಶಿಣ ಕುಂಕುಮ, ಕಾಡಿನ ಹೂವುಗಳ, ಎಲೆಗಳ ರಸದಿಂದ ಹಸೆಯ ಚಿತ್ತಾರಗಳನ್ನು ಬರೆಯುತ್ತಾರೆ. ಎಲ್ಲಾ ಬುಡಕಟ್ಟು ಸಮುದಾಯಗಳಲ್ಲೂ ಅರಳೀ ಮರಗಳ ಚಿತ್ರಗಳನ್ನು ಬರೆಯುವುದು ಸಾಮಾನ್ಯ. ಅರಳಿಮರ ಫಲವಂತಿಕೆಯ ಸಂಕೇತವಾಗಿರುವುದರಿಂದ ಎಲ್ಲರ ಮೇಲು ಸಾಕಷ್ಟು ಪ್ರಭಾವಿಸಿದೆ. ಅಂತೆಯೇ ಇವರಿಗೆ ತುಳಸೀ ಗಿಡವು ಸಾಕಷ್ಟು ಪ್ರಭಾವವು ಬೀರಿದೆ. ಇವು ಅವರ ಧಾರ್ಮಿಕ ಹಿನ್ನೆಲೆಯಲ್ಲಿ ಪೂಜೆಗೆ ಒಳಪಟ್ಟಿರುತ್ತವೆ. ಪ್ರಕೃತಿಯೊಂದಿಗೆ ಬದುಕುತ್ತಿರುವ ಇವರಿಗೆ ಮರಗಿಡಗಳು ಸಾಕಷ್ಟು ಪ್ರಭಾವಿಸಿವೆ.

ಹೀಗೆ ತಮ್ಮದೇ ಆದಂಥ ಸಂಪ್ರದಾಯ, ಆಚರಣೆಗಳನ್ನು ಒಳಗೊಂಡಂತೆ ಗೋಡೆಗಳ ಮೇಲೆ, ನೆಲದ ಮೇಲೆ, ಮಡಿಕೆ ಕುಡಿಕೆಗಳ ಮೇಲೆ, ಪೂಜಾ ಸ್ಥಳಗಳಲ್ಲಿ ಗೃಹೋಪಯೋಗಿ ವಸ್ತುಗಳ ಮೇಲೆ, ಮುಂತಾದ ಕರಕುಶಲ ಕಲೆಗಳಲ್ಲಿ, ಬಾಗಿಲ ಸುತ್ತಾ ಗೋಡೆಗೆ ಚಿತ್ತಾರಗಳನ್ನು ಬರೆಯುವುದನ್ನು ನಾವು ಕಾಣುತ್ತೇವೆ. ಈ ಎಲ್ಲಾ ಚಿತ್ತಾರಗಳು ಸಮುದಾಯದಿಂದ ಸಮುದಾಯಗಳಿಗೆ ಭಿನ್ನವಾಗಿದ್ದು, ಕೆಲವೊಂದು ಹೋಲಿಕೆಯನ್ನು ಹೊಂದಿವೆ. ಜೊತೆಗೆ ಇವು ತಮ್ಮದೇ ಆದಂಥ ವೈಶಿಷ್ಟತೆಯನ್ನು ಹೊಂದಿವೆ.



ಮದುವೆಯಲ್ಲಿ ಸಿದ್ಧಿಯರು ಬರೆಯುವ ಹಸೆ ಚಿತ್ತಾರ

[illegible]

[illegible]

[illegible]



ಹಚ್ಚೆ (ಶರೀರದ ಮೇಲಿನ ಚಿತ್ರಗಳು)


ಗೌಳಿಗರ ಕೈಮೇಲಿನ ಚಿತ್ತಾರಗಳು

ಹಚ್ಚೆಯ ಚಿತ್ರಗಳು ಜಗತ್ತಿನಾದ್ಯಂತ ಇವೆ. ಈ ಕಲೆ ದೇಶದಿಂದ ದೇಶಕ್ಕೆ, ಪ್ರದೇಶದಿಂದ ಪ್ರದೇಶಕ್ಕೆ, ಸಮುದಾಯದಿಂದ ಸಮುದಾಯಕ್ಕೆ ಭಿನ್ನತೆಯನ್ನು ಹೊಂದಿವೆ. ಇದೊಂದು ಜನಪದ ಕಲೆ. ಇದರ ಮೂಲವನ್ನು ಆದಿಮಾನವ ನಿಂದಲೂ ಗುರುತಿಸಲಾಗಿದೆ. ಆದಿ ಮಾನವ ಪ್ರಕೃತಿಯ ಜೀವರಾಶಿಗಳ ಜೊತೆ ಬದುಕುತ್ತಿದ್ದ. "ಜಿಂಕೆ, ಚಿರತೆ, ಹುಲಿಗಳ ಮೈಮೇಲಿನ ಸುಂದರ ಬಣ್ಣಗಳನ್ನು ಕಂಡು ತಾನು ಹಾಗೆಯೇ ಕಾಣಬೇಕೆಂಬ ಆಸೆ ಅವನಲ್ಲಿ ಮೊಳಕೆಯೊಡೆಯಿತು. ಮೊದಲು ದೇಹಕ್ಕೆ ತಾತ್ಕಾಲಿಕ ಬಣ್ಣಗಳನ್ನು ಲೇಪನ ಮಾಡಿ ಕೊಳ್ಳುವುದಕ್ಕೆ ಪ್ರಾರಂಭಿಸಿದ. ಈಗಲೂ ರಾಜಸ್ಥಾನಿಗಳು ಈಗಲೂ ಹಾಗೂ ಇತರರು ಅಂಗೈ ಹಾಗೂ ಮುಂಗೈಗೆ ಮಂದರಂಗಿ ಮುಂತಾದ ಬಣ್ಣಗಳನ್ನು ಲೇಪನ ಮಾಡಿಕೊಂಡಿರುವುದನ್ನು ನೋಡಬಹುದು. ಮನುಷ್ಯನಿಗೆ ತಾತ್ಕಾಲಿಕ ಬಣ್ಣದಿಂದ ತೃಪ್ತಿಯಾದಂತೆ ಕಾಣಲಿಲ್ಲ. ಆದ್ದರಿಂದಲೇ ಶಾಶ್ವತ ಬಣ್ಣವನ್ನು ಕಂಡು ಹಿಡಿದ, ಈ ಹಿನ್ನೆಲೆಯಲ್ಲಿ ಹಚ್ಚೆ ಶಾಶ್ವತ ಬಣ್ಣದ ಕಲೆಯಾಗಿ ಉಗಮವಾಯಿತು."[೧೧] ಈ ಹಚ್ಚೆಯನ್ನು ಪ್ರಾದೇಶಿಕವಾಗಿ ಬೇರೆ ಬೇರೆಯ ರೀತಿಯಲ್ಲಿ ಕರೆಯುತ್ತಾರೆ. ಹಚ್ಚೆ, ಅಚ್ಚೆ, ಹಂಚೆ, ಅಣಚೆ, ಹಣಚೆ ಎಂಬ ಪದಗಳಿಂದ ಬಳಕೆಯಾಗುತ್ತಿದೆ. ಬುಡಕಟ್ಟು ಸಮುದಾಯಗಳಲ್ಲಿ ಇದನ್ನು ಹಸಿರು ಹಾಕಿಸುವುದು ಎಂದು ಕರೆಯುತ್ತಾರೆ.

ಪ್ರತಿ ಬುಡಕಟ್ಟುಗಳಲ್ಲಿ ಹಚ್ಚೆಯನ್ನು ಹಾಕಿಸಿಕೊಳ್ಳುವ ಪದ್ಧತಿಯುಂಟು. ಇದಕ್ಕೆ ಹಾಲಕ್ಕಿ ಒಕ್ಕಲಿಗರು 'ಬೊಟ್ಟು ಇಡುವುದು' ಎಂದು ಕರೆದರೆ, ಸೋಲಿಗರಲ್ಲಿ 'ಹಸಿರು ಹಾಕಿಸುವುದು' ಎಂದು ಕರೆಯುತ್ತಾರೆ. ಹಾಗೆಯೇ ಪ್ರತಿಯೊಂದು ಬುಡಕಟ್ಟು ಕೂಡ ಹಚ್ಚೆ ಹಾಕಿಸುವುದನ್ನು ತಮ್ಮದೇ ಆದಂತ ಅರ್ಥದಲ್ಲಿ ಬಳಸುತ್ತಾರೆ. ಇದು ಒಂದು ಸಂಪ್ರದಾಯವಾಗಿ ನಡೆದು ಬಂದಿದೆ. "ಹಾಲಕ್ಕಿ ಹೆಣ್ಣುಮಕ್ಕಳು ಸೌಂದರ್ಯಕ್ಕೆ



ಹೆಚ್ಚು ಗಮನಕೊಡುತ್ತಾರೆ. ಹೆಣ್ಣುಮಕ್ಕಳಿಗೆ ಹತ್ತುವರ್ಷವಾಗುವ ಮೊದಲೇ ಬೊಟ್ಟು ಇಡುವ ಸಂಪ್ರದಾಯವಿದೆ. ಅಂದರೆ ಅಳಿಸಲಾಗದ ಶಾಶ್ವತ ಬೊಟ್ಟನ್ನು ಹಣೆಗೆ ಇಡುವುದು. ದೀಪಾವಳಿ ಪಾಡ್ಯದ ದಿನ ಕೊಪ್ಪದ ಹೆಂಗಸರು ಮನೆ ಮನೆಗೆ ಹೋಗಿ ಹರೆಯದ ಹುಡುಗಿಯರ ಹಣೆಗೆ ಒಂದು ವಿಧವಾದ ವಿಷವಿಲ್ಲದ ಮುಳ್ಳಿನಿಂದ ಚುಚ್ಚಿ ಸಣ್ಣಗೆ ರಕ್ತ ಬರುವ ಹಾಗೆ ಮಾಡುತ್ತಾರೆ. ರಕ್ತ ಬರುವ ಜಾಗಕ್ಕೆ ಕಪ್ಪು ಕಾಡಿಗೆ ಹಚ್ಚಿ ರಕ್ತ ನಿಲ್ಲುವಂತೆ ಮಾಡುತ್ತಾರೆ. ಇದಕ್ಕೆ ಬೊಟ್ಟು ಕಟ್ಟುವುದು ಅಥವಾ ಇಡುವುದು ಎಂದು ಹೇಳಲಾಗುತ್ತದೆ."[೧೨] ಹೀಗೆ ತಮ್ಮದೇ ಆದಂತ ರೀತಿಯಲ್ಲಿ ಹಚ್ಚೆ ಹಾಕಿಕೊಳ್ಳುವ ಪದ್ಧತಿಯನ್ನು ಬುಡಕಟ್ಟುಗಳಲ್ಲಿ ನೋಡಬಹುದು. ಇದು ದೇಹದೊಂದಿಗೆ, ದೇಹದ ಮೇಲೆ ಶಾಶ್ವತವಾಗಿ ಇರುವಂತಹ ಕಲೆ. ರಕ್ತದೊಂದಿಗೆ ಬೆರೆತು ಚಿತ್ರವಾಗುವಂತಹ ಕಲೆ ಇದಾಗಿದೆ. ಮಾನವನಿಗೆ ಚಿತ್ರ ಎಷ್ಟು ಕಾಡುತ್ತದೆ ಎಂದರೆ ಅದನ್ನು ತನ್ನ ದೇಹಕ್ಕೆ ಮೂಡಿಸಿಕೊಳ್ಳುವ ಮಟ್ಟಕ್ಕೆ ಬರುತ್ತದೆ. "ಚರ್ಮದ ಮೇಲೆ ಶಾಶ್ವತವಾಗಿ ಇರಬಲ್ಲ ಹಸಿರು ಬಣ್ಣದ ಗುರುತೇ ಹಚ್ಚೆಯಾಗಿದೆ. ಕಿಟಲ್ ಕೋಶದಲ್ಲಿ ಹಚ್ಚೆಗೆ ಅಚ್ಚೆ, ಪಚ್ಚೆ, ಹಚ್ಚೆ ಎಂಬ ಅರ್ಥಗಳು ಇವೆ. ಮಲಯಾಳಂನಲ್ಲಿ ಹಚ್ಚೆಗೆ 'ಪಚ್ಚ ಕುತ್ತುಗ' (ಹಚ್ಚೆ ಕುಕ್ಕುವುದು) ಎನ್ನುತ್ತಾರೆ. ತಮಿಳಿನಲ್ಲಿ ಪಚ, ಪಚ್ಚೆ ಎಂಬ ರೂಪಗಳಿವೆ. ಇಂಗ್ಲೀಷ್‌ನಲ್ಲಿ Totoo ಎಂದು ಕರೆಯುತ್ತಾರೆ. ಮರಾಠಿಯಲ್ಲಿ ಗೊಂದನ್, ತೆಲುಗಿನಲ್ಲಿ ಮುಚ್ಚಾ, ತಮಿಳಿನಲ್ಲಿ ಕೈಕಾ ಪಾಡ್ಲಾ ಕೊಂಕಣಿಯಲ್ಲಿ ಹಚ್ಚಿ ಬೊಟ್ಲಾ, ಹಿಂದಿ ಮತ್ತು ಉರ್ದುವಿನಲ್ಲಿ ಗೋದನ್ ಎಂದು ಕರೆಯಲಾಗುತ್ತಿದೆ."[೧೩] ಈ ಕೃತಿಯಲ್ಲಿ ಹಚ್ಚೆಯ ಪ್ರಾಚೀನತೆಯನ್ನು "ಕ್ರಿ.ಪೂ. ೪೫೦ ಎಂದು ಉಲ್ಲೇಖಿಸುತ್ತಾ ಕ್ರಿ.ಪೂ. ೨೦೦೦ ಕ್ಕೆ ಸೇರಿದ ಈಜಿಪ್ಟ್‌ನ ಮಮ್ಮಿ (ರಕ್ಷಿತಶವ) ಯೊಂದರ ಮೇಲೆ ಹಚ್ಚೆಯು ಇದ್ದುದರ ಕುರುಹು ಕಂಡುಬಂದಿದೆ. ಪ್ರಾಚೀನ ಎಲ್ಲಾ ಬುಡಕಟ್ಟುಗಳಲ್ಲಿಯೂ ಹಚ್ಚೆ ಹಾಕಿಸಿಕೊಂಡ ಜನಾಂಗಗಳಿದ್ದುದಾಗಿ ತಿಳಿದು ಬರುತ್ತದೆ. ಭಾರತದಲ್ಲಿ ಹಚ್ಚೆಯ ಕುರುಹುಗಳು ಶುಂಗ ಅರಸರ ಕಾಲದ ಶಿಲ್ಪಿಗಳಲ್ಲಿ ಮತ್ತು ಮಧ್ಯಪ್ರದೇಶದ ಮಾಳವ ಗಿರಿಜನವಾಸಿಗಳ ನಾಣ್ಯಗಳಲ್ಲಿ ಕಂಡುಬಂದಿದೆ."[೧೪]

ಹಚ್ಚೆಯನ್ನು ಹಾಕಿಸುವುದು ಕೆಲವು ಸಂದರ್ಭಗಳಲ್ಲಿ ಮಾತ್ರ. ಅದರಲ್ಲೂ ಜಾತ್ರೆ, ಉತ್ಸವ ಮದುವೆ ಮತ್ತು ಕೆಲವು ಧಾರ್ಮಿಕ ಸಂದರ್ಭದಲ್ಲಿ ಇಲ್ಲವೆ ಹಚ್ಚೆಯನ್ನು ಹಾಕುವವರು ಊರಲ್ಲಿ ಬಂದಾಗ ಹಾಕಿಸಿಕೊಳ್ಳುತ್ತಾರೆ. "ಗ್ರಾಮೀಣ ಬದುಕಿನಲ್ಲಿ ಹಚ್ಚೆ ಹೂಯ್ಸಿಸುವ ಪದ್ಧತಿ ಹಿಂದಿನಿಂದಲೂ ರೂಢಿಯಲ್ಲಿದೆ. ಅಪ್ತರು ತಮಗೆ ಬೇಕಾದವರಿಗೆ ವಿಶ್ವಾಸ, ಪ್ರೀತಿಯ ಸಂಕೇತವಾಗಿ ಹಚ್ಚೆಯನ್ನು ಹಾಕಿಸುವುದು ಉಂಟು. ಹಚ್ಚೆ ಹಾಕುವ ಕಲೆ ಕೆಲವೇ



ಹಚ್ಚೆ ಹಾಕುವ ವಿಧಾನ



ಜನಾಂಗಗಳಲ್ಲಿ ಉಳಿದಿದೆ. ಸಾಮಾನ್ಯವಾಗಿ ಬುಂಡೇ ಬೆಸ್ತರು ಅಥವಾ ಕೊರಮ ಶಟ್ಟರ ವನಿತೆಯರು ಹಚ್ಚೆ ಹೊಯ್ಯುವ ಕಲೆಯಲ್ಲಿ ಹೆಸರುಗಳಿಸಿದ ಜನಾಂಗ.''[೧೫] ಇವರು ಹಚ್ಚೆ ಹೊಯ್ಯುವ ವೃತ್ತಿಯನ್ನು ಮಾಡಿಕೊಂಡು ಬಂದವರಾಗಿದ್ದಾರೆ. ಹಲವು ಬಗೆಯ ಚಿತ್ತಾರಗಳು ಇವರ ಜ್ಞಾನದಲ್ಲಿ ಇರುತ್ತವೆ. ಹಚ್ಚೆಯನ್ನು ಹಾಕಿಸಿಕೊಳ್ಳುವವರು ಹಾಕಿಸುವವರು ಯಾವ ಚಿತ್ರವನ್ನು ಅಪೇಕ್ಷೆ ಪಟ್ಟು ಹೇಳುತ್ತಾರೋ ಆ ಚಿತ್ರವನ್ನೇ ಹಾಕುತ್ತಾರೆ. ಆವರು ಪ್ರಾದೇಶಿಕತೆಗೆ ಸಂಬಂಧಪಟ್ಟಂತೆಯೇ ಚಿತ್ರವನ್ನು ಹೊಯ್ಯುತ್ತಾರೆ. ಬುಡಕಟ್ಟು ಜನರ ಮೈಮೇಲಿನ ಹಚ್ಚೆ ಚಿತ್ರ ಮತ್ತು ಜಾನಪದರ ಮೈಮೇಲಿನ ಹಚ್ಚೆ ಚಿತ್ರಗಳನ್ನು ನೋಡಿದಾಗ ಅದರ ವ್ಯತ್ಯಾಸಗಳು ಕಾಣಿಸುತ್ತವೆ. ನೋಟಕ್ಕೆ ಎಲ್ಲಾ ಚಿತ್ರಗಳೂ ಒಂದೇ ತೆರನಾಗಿ ಕಂಡರೂ ಬುಡಕಟ್ಟು ಹಚ್ಚೆಯ ಚಿತ್ರಗಳಲ್ಲಿ ಬುಡಕಟ್ಟು ಚಿತ್ರಗಳ ರೂಪಗಳು ಕಂಡುಬರುತ್ತವೆ. ಇವರ ಹಚ್ಚೆ ಚಿತ್ರಗಳಲ್ಲಿ ಹೆಚ್ಚಾಗಿ ಬಳ್ಳಿಗಳು, ಹೂವುಗಳು, ಗೆರೆಗಳು, ಪ್ರಾಕೃತಿಕ ಚಿತ್ರಗಳು ಕಾಣಿಸುತ್ತವೆ. ಜೊತೆಗೆ ಹಚ್ಚೆಯ ಸಾಮಾನ್ಯ ಚಿತ್ರಗಳೂ ಇವರಲ್ಲಿ ಕಂಡುಬರುತ್ತವೆ. ಇವುಗಳು ಕರ್ನಾಟಕದ ಎಲ್ಲಾ ಬುಡಕಟ್ಟಿನ ಹಚ್ಚೆ ಚಿತ್ರಗಳಲ್ಲೂ ನೋಡಬಹುದು.

ಈ 'ಹಚ್ಚೆ'ಯನ್ನು ಬುಡಕಟ್ಟಿನವರು ಹಾಕಿಸಿಕೊಳ್ಳುವ ಪದ್ಧತಿಯು ಜನಪದರ ರೀತಿಯಲ್ಲಿಯೇ ಇದ್ದು, ಅವು ನಂಬಿಕೆ ಮತ್ತು ನೆನಪಿನ ಚಿತ್ರಗಳಾಗಿರುತ್ತವೆ. "ಬಲವಾದ ಧಾರ್ಮಿಕ ನಂಬಿಕೆಯೇ ಹಚ್ಚೆ ಹಾಕಿಸಿಕೊಳ್ಳಲು ಕಾರಣವೆನ್ನಬಹುದು. 'ಸತ್ತಾಗ ನಮ್ಮ ಕೂಟೆ ಮತ್ತೇನು ಬರಬಹುದು ಹಚ್ಚೆಯ ಬೊಟ್ಟು, ಹಣೆಬೊಟ್ಟು, ಸುಲಿಹಲ್ಲು ಕಟ್ಟಿರೋ ತುರುಬ' ಎಂದು ನಂಬಿರುವ ಜನಪದರಿಗೆ ಹಚ್ಚೆಯ ಬಗ್ಗೆ ಅಪಾರವಾದ ಪವಿತ್ರ ಭಾವನೆ ಇದೆ.''[೧೬] ಹೀಗೆ ಹಣೆಗೆ ವಿವಿಧ ರೀತಿಯ ವಿನ್ಯಾಸಗಳ ಹಚ್ಚೆ ಬೊಟ್ಟು ಚಿತ್ರಗಳನ್ನು ಹಾಕಿಸಿಕೊಳ್ಳುತಿರುವುದು ನೋಡಬಹುದು. ಇಂತಹ ಹಣೆಬೊಟ್ಟಿನ ಚಿತ್ರಗಳು ವಿಶೇಷವಾಗಿ ಗೌಳಿಗರಲ್ಲಿ, ಕುಣಬಿಯರಲ್ಲಿ, ಹಾಲಕ್ಕಿಗಳಲ್ಲಿಯ ಹೆಂಗಳೆಯರಲ್ಲಿ ನೋಡಬಹುದಾಗಿದೆ. ಇದು ಹೆಣ್ಣಿಗೆ ಶ್ರೇಷ್ಠವಾದದ್ದು ಎಂದು ಹೇಳುತ್ತಾರೆ. ಈ ರೀತಿಯ ಹಚ್ಚೆಯ ತಿಲಕ ಸಹ ಅಳಿಸುವಂತಿಲ್ಲ. ಅಳಿಸಲು ಬರುವಂತಿಲ್ಲ. ಹಾಗಾಗಿ ಇದು ಶಾಶ್ವತವಾಗಿರಲಿ ಎಂಬ ಉದ್ದೇಶದಿಂದ ಹಣೆಗೆ ಹಚ್ಚೆಯನ್ನು ಹಾಕಿಸಿಕೊಳ್ಳುತ್ತಾರೆ. (ಈ ತರಹದ ಹಲವು ಮಾದರಿಯ ತಿಲಕಗಳನ್ನು (ಹಣೆಬಟ್ಟು) ಇಂದು ಆಧುನಿಕ ರೀತಿಯಲ್ಲಿ ತಯಾರುಮಾಡಲಾಗುತ್ತಿದೆ. ಹಣೆಗೆ ಹಾಕುವ ತಿಲಕಗಳ ಹಚ್ಚೆಯ ವಿವಿಧ ವಿನ್ಯಾಸಗಳನ್ನು ಚಿತ್ರದಲ್ಲಿ ಕೊಡಲಾಗಿದೆ.)

ಹಚ್ಚೆಯನ್ನು ಹಾಕಿಸಿಕೊಳ್ಳುವುದರ ಹಿನ್ನೆಲೆಯಲ್ಲಿ ಹಲವಾರು ನಂಬಿಕೆಗಳು ಬೆರೆತು ಹೋಗಿವೆ. ಅವು ಗರ್ಭಪಾತ ತಡೆಗಟ್ಟಲು, ಚೇಳು ಹಾವುಗಳಂತ ವಿಷಜಂತುಗಳು ಕಡಿದರೆ ವಿಷವೇರದಂತೆ, ಹೆಣ್ಣಿಗೆ ಸಮೃದ್ಧಿಯ ಸಂಕೇತವಾಗಿ, ಮುತ್ತೈದೆತನದ ಸಂಕೇತಕ್ಕಾಗಿ. ದೃಷ್ಟಿ ತಾಗದಿರಲೆಂದು ಹೀಗೆ ಹಲವಾರು ಬಗೆಯಲ್ಲಿನ ನಂಬಿಕೆಯಿಂದಾಗಿ ಹಚ್ಚೆಯನ್ನು ಹಾಕಿಸಿಕೊಳ್ಳುತ್ತಾರೆ. ಇದು ನಂಬಿಕೆಯ ಜೊತೆಗೆ ಒಂದು ಕಲೆಯಾಗಿಯೂ ಸಹ ಬೆಳೆದುಬಂದಿದೆ. ಇದು ಒಂದು ಜನಾಂಗದಿಂದ ಇನ್ನೊಂದು ಜನಾಂಗಕ್ಕೆ ಒಂದು

ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಹರಡುತ್ತಾ ನಂಬಿಕೆ ನಿಷೇಧಗಳ ಹಿನ್ನೆಲೆಯಲ್ಲಿ ಒಂದು ಕಲೆಯಾಗಿ ಇಂದಿಗೂ ಸಹ ಬೆಳೆದುಬಂದಿದೆ.

ಹಚ್ಚೆಯನ್ನು ದೇಹದ ಹಲವಾರು ಭಾಗಗಳಿಗೆ ಹಾಕಿಸಿಕೊಳ್ಳುತ್ತಾರೆ. ಅವು ಅಲ್ಲಿಯ ನಂಬಿಕೆಗಳಿಗೆ ಸಂಬಂಧಪಟ್ಟಿರುತ್ತವೆ. ಹಚ್ಚೆಯನ್ನು ಹಣೆಯ ಮೇಲೆ, ಗಲ್ಲದ ಮೇಲೆ, ಕೆನ್ನೆಯ ಮೇಲೆ, ಕೈಯಿಕಾಲುಗಳ ಮೇಲೆ, ಹೊಕ್ಕುಳದ ಸುತ್ತಾ, ಸ್ತನಗಳ ಮೇಲೆ, ಯೋನಿಯ ಮೇಲೆ, ಶಿಶ್ನದ ಮೇಲೆ ನಿತಂಬಗಳ ಮೇಲೆ ಹೀಗೆ ದೇಹದ ಹಲವಾರು ಭಾಗಗಳಿಗೆ ಹಚ್ಚೆ ಹಾಕಿಸಿಕೊಂಡಿರುವುದು ಕಾಣುತ್ತದೆ. "ಯೋನಿಯ ಮೇಲೆ ಚೇಳು, ಸಿಂಹ, ಹುಲಿಯ ಚಿತ್ರಗಳ ಹಚ್ಚೆಯನ್ನು ನ್ಯೂಗಿನಿಯ ದೇಶದ ಜನರು ಹಾಕಿಸಿಕೊಳ್ಳುತ್ತಾರೆ. ಯೋನಿಯ ಮೇಲೆ ಇಂತಹ ಚಿತ್ರಗಳಿದ್ದರೆ. ದುಷ್ಟ ಶಕ್ತಿಗಳಿಂದ ಯಾವುದೇ ತೊಂದರೆಯಾಗುವುದಿಲ್ಲ ಎಂಬ ನಂಬಿಕೆ ಅವರಿಗೆ. ಜಪಾನಿ ಸ್ತ್ರೀಯರು ನಿತಂಬಿಗಳ ಮೇಲೆ ಹಾಗೂ ಯೋನಿಗಳ ಮೇಲೆ ಡ್ರಾಗನ್ ಸರ್ಪದ ಚಿತ್ರವನ್ನು ಹಾಕಿಸಿಕೊಳ್ಳುತ್ತಾರೆ. ಈ ರೀತಿಯ ಚಿತ್ರವಿದ್ದ ಸ್ತ್ರೀಯರ ಮೇಲೆ ಯಾರೂ ಕಾಮದೃಷ್ಟಿಯನ್ನು ಬೀರುವುದಿಲ್ಲ ಎಂಬ ನಂಬಿಕೆ ಅವರಿಗಿದೆ."[೧೭] ಕರ್ನಾಟಕದ ಬುಡಕಟ್ಟುಗಳ ಹೆಣ್ಣುಮಕ್ಕಳು ಋತುಮತಿಯಾಗುವ ಮೊದಲು ಹಚ್ಚೆಯನ್ನು ಹಾಕಿಸಿಕೊಳ್ಳಬೇಕು ಎಂಬ ನಂಬಿಕೆ ಇದೆ. ಹಚ್ಚೆಯನ್ನು ಹಾಕಿಸಿಕೊಳ್ಳುವವರಲ್ಲಿ ಹೆಂಗಸರೇ ಹೆಚ್ಚು. ಗಂಡಸರೂ ಹಚ್ಚೆಯನ್ನು ಹಾಕಿಸಿಕೊಳ್ಳುತ್ತಾರೆ.

ಹಚ್ಚೆಯ ಮಸಿ : ಹಚ್ಚೆಯನ್ನು ಹಾಕುವವರೇ ಹಚ್ಚೆ ಮಸಿಯನ್ನು ತಯಾರುಮಾಡಿಕೊಳ್ಳುತ್ತಾರೆ. ಈ ಮಸಿಯನ್ನು ಹಲವು ರೀತಿಯಲ್ಲಿ ತಯಾರುಮಾಡಿಕೊಳ್ಳುತ್ತಾರೆ. "ಗೇರು ಬೀಜದ ಮಸಿಯನ್ನು ಸೀಮೆಎಣ್ಣೆ ದೀಪದ ಕಾಡಿಗೆಯಲ್ಲಿ ಕಲಸಿ ಚಿತ್ತಾರ ರಚಿಸಲು ಸಿದ್ದಮಾಡಿಕೊಳ್ಳುವುದು ಒಂದು ರೀತಿ. ಉರಿಯುವ ಸೀಮೆ ಎಣ್ಣೆ ಬುಡ್ಡಿಯಿಂದ ಬರುವ ಮಸಿಯನ್ನು ಅರೆದು ಎದೆಹಾಲಿನಲ್ಲಿ ಕಲಸಿ ಹಚ್ಚೆಮಸಿ ಮಾಡಿಕೊಳ್ಳುವುದು ಮತ್ತೊಂದು ವಿಧಾನ."[೧೮] ಈ ಮಸಿಯನ್ನು ಮಣ್ಣಿನ ಕುಡಿಕೆಯಲ್ಲಿ ತುಂಬಿ ಇಟ್ಟುಕೊಳ್ಳುತ್ತಾರೆ. ಚಿತ್ರ ಬರೆಯಲು ತಾಳೀಮರದ ತೆಳ್ಳಗಿನ ಕಡ್ಡಿಯನ್ನು ಬಳಸುತ್ತಾರೆ. ಇಲ್ಲವೆ ಬೇವಿನಕಡ್ಡಿಯನ್ನು ಬಳಸುತ್ತಾರೆ. ಈ ಕಡ್ಡಿಯಿಂದ ಚಿತ್ರಬರೆದು ಆನಂತರ ಬರೆದ ಚಿತ್ರದ ಮೇಲೆ ಹಚ್ಚೆ ಹೊಯ್ಯುವ ಸೂಜಿಯಿಂದ ಚುಚ್ಚುತ್ತಾರೆ.

ಮತ್ತೆ ಕೆಲವು ಕಡೆ ಆಯಾ ಪ್ರದೇಶದಲ್ಲಿ ಸಿಗುವ ಗಿಡಮೂಲಿಕೆಗಳನ್ನು ಹಚ್ಚೆಯ ಮಸಿಯಾಗಿ ತಯಾರಿಸಿ ಬಳಸುತ್ತಾರೆ. "ಅರಿಶಿಣ ಔಡಲೆಣ್ಣೆಯನ್ನು ಬಳಸಿ ಕೆಲವು ಹಳದಿ ಮಿಶ್ರಿತ ಬಣ್ಣವನ್ನು ತಯಾರುಮಾಡಿಕೊಳ್ಳುತ್ತಾರೆ. ಇನ್ನೂ ಕೆಲವರು ಬಳ್ಳಿಕಾಯಿ, ಎಲೆಯ ರಸ ಮತ್ತು ಬೇರಿನ ರಸಗಳಿಂದ ಬಣ್ಣ ತಯಾರಿಸುತ್ತಾರೆ. ಈ ಬಣ್ಣಗಳಲ್ಲಿ ಎರಡು ರೀತಿಯ ಬಣ್ಣಗಳು ಪ್ರಚಲಿತದಲ್ಲಿದೆ. ೧. ಹಸಿರು ಮಿಶ್ರಿತ ಹಳದಿ ಬಣ, ೨. ನೀಲಿ ಮಿಶ್ರಿತ ಕಪ್ಪುಬಣ್ಣ."[೧೯] ಈ ಬಣ್ಣಗಳನ್ನು ಸಾರ್ವತ್ರಿಕವಾಗಿ ಹಚ್ಚೆಯಲ್ಲಿ ಕಾಣಬಹುದು. ಹೀಗೆ ನಾನಾ ರೀತಿಯಲ್ಲಿ ಹಚ್ಚೆಯ ಬಣ್ಣವನ್ನು ತಯಾರು ಮಾಡಿಕೊಳ್ಳುತ್ತಾರೆ. ಕರ್ನಾಟಕದ ಕೆಲವು ಭಾಗಗಳಲ್ಲಿ ಹಚ್ಚೆಯ ಮಸಿಯನ್ನು ತಯಾರಿಕೆಯನ್ನು ನೋಡುವುದಾದರೆ ಬೆಳಗಾವಿ

[illegible]

ಜಿಲ್ಲೆಯಲ್ಲಿ ಬರಗ, ರಾಗ, ಹೊನಗನ್ನೆ, ಎದೆಹಾಲು, ಮರವರಿಕೆ, ಮಣೀ ಅವರೆ, ತುಂಬೆ, ಹಾಗಲಕಾಯಿ ಎಲೆರಸ, ಚಪ್ಪರದ ಅವರೆ ರಸ, ಕಿರುಗೋಣಿ ಸೊಪ್ಪು, ಹಚ್ಚೆಗಿಡದ ಸೊಪ್ಪು ಇತ್ಯಾದಿ ವಸ್ತುಗಳಿಂದ ಕಪ್ಪನ್ನು ತಯಾರಿಸುತ್ತಾರೆ. ವಿಜಾಪುರ, ಕಲಬುರ್ಗಿ, ಬೀದರ ಭಾಗಗಳಲ್ಲಿ ಮಾಗಿದ ಜೋಳದ ತೆನೆಯಲ್ಲಿರುವ ಕಾಡಿಗೆಯ ಪುಡಿಯನ್ನು ಸಂಗ್ರಹಿಸಿ ಅದರ ನೀರನ್ನು ಕೂಡಿಸಿ ಹಚ್ಚೆಗೆ ಉಪಯೋಗಿಸುತ್ತಾರೆ. ದಕ್ಷಿಣ ಕರ್ನಾಟಕದ ಭಾಗದಲ್ಲಿ ಹೆಚ್ಚು ಕಡಿಮೆ ಬೆಳಗಾವಿ ಭಾಗದಂತೆಯೇ ಹಚ್ಚೆಮಸಿ ತಯಾರಿಸುತ್ತಾರೆ. ಅಲ್ಲದೆ ವೀಳ್ಯದೆಲೆ ರಸದಿಂದಲೂ ಹಚ್ಚೆಯ ಮಾಡುವುದುಂಟು. ಆದರೆ ಇದಕ್ಕೆ ಸಗಣಿಯನ್ನು ಸೇರಿಸಿ ಕಪ್ಪನ್ನು ಪಡೆಯಲು ಹರಳೆಣ್ಣೆ ದೀಪವನ್ನು ಬಳಸಬೇಕು. ಹಚ್ಚೆ ಸೊಪ್ಪೆಂದೇ ಒಂದು ಬಗೆಯ ಸೊಪ್ಪಿದೆ. ಅದರ ರಸಕ್ಕೆ ಸ್ವಲ್ಪ ಇದ್ದಿಲು ಪುಡಿಯನ್ನು ಬೆರಸಿದರೆ ಆಯಿತು.''[೨೦] ಹೀಗೆ ಹಲವು ರೀತಿಯಲ್ಲಿ ಹಚ್ಚೆಯ ಮಸಿಯನ್ನು ತಯಾರುಮಾಡಿಕೊಳ್ಳುತ್ತಾರೆ. ಇದು ಅವರವರು ಮುಂದುವರೆಸಿಕೊಂಡು ಬಂದಂತ ಹಚ್ಚೆ ಮಸಿಯ ತಯಾರಿಕಾ ಪದ್ಧತಿ. ಇದು ತಲೆತಲಾಂತರದಿಂದ ಬಂದಂತ ಕಲೆ. ಹಚ್ಚೆಯನ್ನು ಹಾಕುವವರು ತಾವೇ ತಯಾರುಮಾಡಿಕೊಂಡ ಮಸಿಯನ್ನು ಹಚ್ಚೆ ಹಾಕಲು ಬಳಸುತ್ತಾರೆ. ಬೇರೆಯವರು ತಯಾರುಮಾಡಿದಂತ ಮಸಿಯನ್ನು ಹಚ್ಚೆ ಹಾಕುವವರು ಬಳಸುವುದಿಲ್ಲ.

ಪ್ರತಿಯೊಂದು ಬುಡಕಟ್ಟು ಜನಾಂಗಗಳಲ್ಲಿಯೂ ಹಚ್ಚೆಯ ಚಿತ್ತಾರಗಳನ್ನು ನೋಡಬಹುದು. ಗೌಳಿಗರಿಗೆ ಸಂಬಂಧಿಸಿದಂತೆ ಹಚ್ಚೆಯು ``ಇತರ ಬುಡಕಟ್ಟು ಜನರಂತೆ ಇವರನ್ನು ಘಾಡವಾಗಿ ಆಕರ್ಶಿಸಿದೆ. ಹೆಂಗಸರು ತೋಳುಗಳುದ್ದಕ್ಕೂ ಹಚ್ಚೆ ಹುಯ್ಯಿಸಿಕೊಳ್ಳುವುದು ಅಡುಗೆ ಮಾಡುವವರಿಗೆ ಶ್ರೇಯಸ್ಕವೆಂಬ ಸೌಂದರ್ಯ ವರ್ಧನೆಯ ಆಕಾಂಕ್ಷೆಯನ್ನು ಹೊಂದಿರುವುದರ ಜೊತೆಗೆ, ಅದನ್ನು ಮೀರಿದ ಚಿಂತನೆಯೂ ಆ ಬಗೆಗೆ ಇರುವುದರ ನಿದರ್ಶನ. ಸ್ತ್ರೀಯರ ಕೆನ್ನೆಯ ಮೇಲೆ ಮತ್ತು ಕೆಳದುಟಿಯ ಅಡಿಭಾಗದಲ್ಲಿಯೂ ಹಚ್ಚೆ ಹುಯ್ಯಿಸಿಕೊಳ್ಳುವುದುಂಟು. ನಾನಾ ವಿನ್ಯಾಸದ ಹಚ್ಚೆಗಳನ್ನು ಹುಯ್ಯಿಸಿಕೊಂಡಾಗಲೂ ಚಿತ್ರಗಳ ಆಯ್ಕೆಯು ಅವುಗಳ ಸೌಂದರ್ಯ ಮತ್ತು ಧಾರ್ಮಿಕತೆಯ ಸಮನ್ವಯದ್ದು ಎಂಬುದೇ ಸ್ಪಷ್ಟಪಡಿಸುತ್ತವೆ.''[೨೧] ಇವರ ಚಿತ್ತಾರಗಳು ಹಲವು ಬಗೆಯಲ್ಲಿ ಇರುವುದನ್ನು ನೋಡಬಹುದು. ``ಗೌಳಿಗರ ಹೆಂಗಸರು ತೊಳುದ್ದಕ್ಕೂ ಹಚ್ಚೆ ಹೊಯ್ಯಿಸಿಕೊಳ್ಳುವುದು ಪದ್ಧತಿ. ಕೆಲವರು ಕೆನ್ನೆಯ ಮೇಲೆ ಮತ್ತು ಕೆಳದುಟಿಯ ಅಡಿಭಾಗದಲ್ಲೂ ಹಚ್ಚೆ ಹುಯಿಸಿಕೊಳ್ಳುವುದುಂಟು. ಬಳ್ಳಿಯ ಚಿತ್ರ, ಹಾವಿನ ಚಿತ್ರ, ದೇವರ ಗುಡಿಯ ಚಿತ್ರಗಳನ್ನು ಹುಯಿಸಿಕೊಳ್ಳುವುದು ಹೆಚ್ಚು. ಮಕ್ಕಳಿಗೂ ಹಚ್ಚೆ ಹೊಯ್ಯಿಸುವುದುಂಟು. ಆದರೆ ಗೌಳಿಗರ ಹೆಂಗಸರ ಬದಲಾಗಿ ತಮ್ಮ ಎಡಗೈಯನ್ನು ಬಟ್ಟೆಯಿಂದ ಸುಟ್ಟುಕೊಳ್ಳುವ ಒಂದು ವಿಚಿತ್ರ ಪದ್ಧತಿಯನ್ನು ರೂಢಿಸಿಕೊಂಡಿದ್ದಾರೆ.''[೨೨] ಇದರಿಂದ ಗಂಡಸರಿಗೆ ಮತ್ತು ಹೆಂಗಸರಿಗೆ ಸ್ವರ್ಗ ಸಿಗುವುದೆಂಬ ನಂಬಿಕೆ ಅವರಲ್ಲಿ ತುಂಬಿಕೊಂಡಿದೆ.

ಕಾಡುಕುರುಬರಲ್ಲಿ ಹಚ್ಚೆ ಹಾಕುವುದನ್ನು `ಪಚ್ಚೆ ಕುತ್ತುಕ' ಎಂದು ಕರೆಯುತ್ತಾರೆ. ಇವರೂ ಕೂಡ ಅವರದೇ ಆದ ನಂಬಿಕೆಯ ಹಿನ್ನೆಲೆಯಲ್ಲಿ ಮತ್ತು ಸೌಂದರ್ಯದ ಕಲ್ಪನೆಯಲ್ಲಿ ಹಚ್ಚೆಯನ್ನು ಹಾಕಿಸುತ್ತಾರೆ.

[illegible]

[illegible]

[illegible]

ಇದರಲ್ಲಿ ಬರೀ ಚಿತ್ರಗಳು ಇರದೆ ವ್ಯಕ್ತಿಗಳ ನೆನಪು ಇರುತ್ತದೆ ಎಂಬುದು ಅವರ ಅಭಿಪ್ರಾಯ. ಇವರ ಹಚ್ಚೆಯ ಚಿತ್ರಗಳಲ್ಲಿ ರಾಮನ ತೊಟ್ಟಿಲು, ಸೀತೆಯ ಜಡೆ, ಹೂವು, ಬಾಳೆಗಿಡ, ದುಂಬಿಸಾಲು, ಗೋಣಬೆ, ರಂಗೋಲಿ ಅರಳೀಮರ, ಮರಗಳ ಬಳ್ಳಿ ಮುಂತಾದ ಚಿತ್ರಗಳು ಕಾಣಿಸುತ್ತವೆ.

ಹಚ್ಚೆಯ ಚಿತ್ರಗಳು ಸೋಲಿಗರಲ್ಲಿಯೂ ವಿಶೇಷವಾಗಿ ಕಾಣಿಸುತ್ತದೆ. ಇವರು ಬಿಳಿಗಿರಿ ರಂಗನಾಥನಬೆಟ್ಟ, ಮಲೆಮಾದೇಶ್ವರ ಬೆಟ್ಟದಲ್ಲಿ ನಡೆಯುವ ಜಾತ್ರೆಯ ಸಂದರ್ಭದಲ್ಲಿ ಹಚ್ಚೆಯನ್ನು ಹಾಕಿಸಿಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ಹಚ್ಚೆ ಹಾಕುವವರು ಜಾತ್ರೆಗೆ ಬರುತ್ತಾರೆ. ಇವರಲ್ಲೂ ಕೂಡೂ ನಂಬಿಕೆ ಹಾಗೂ ಸಂಪ್ರದಾಯದ ಹಿನ್ನೆಲೆಯಲ್ಲಿ ಹಾಕಿಸಿಕೊಂಡ ಹಚ್ಚೆ ಚಿತ್ರಗಳು ಕಾಣಿಸುತ್ತವೆ. ಈ ಹಚ್ಚೆಯ ಚಿತ್ತಾರಗಳಲ್ಲಿ ಹುಲಿಉಗುರು, ಒಲೆಗುಂಡು, ನಿಂಬೆ, ಹೂವು, ಬಾಳೆಗೊನೆ, ಮಲ್ಲಿಗೆ ಸರ, ಹಣೆಗೆ ಹರೆ, ಮಾವಿನ ತೋರಣ, ಹೀಗೆ ಹಲವಾರು ಚಿತ್ರಗಳನ್ನು ಇವರು ಹಾಕಿಸುತ್ತಾರೆ."[೨೪] ಬುಡಕಟ್ಟುಗಳ ಹಚ್ಚೆಯ ಚಿತ್ತಾರಗಳಲ್ಲಿ ವಿಶೇಷವಾಗಿ ಕಾಡಿನ ಗಿಡಗಳ ಬಳ್ಳಿಗಳ, ಕಾಡುಪ್ರಾಣಿಗಳ, ಪರಿಚಿತ ಹೂವುಗಳ ಮುಂತಾದ ಚಿತ್ರಗಳನ್ನು ಹಚ್ಚೆ ಹಾಕುವವರಿಗೆ ಹೇಳಿ ಹಾಕಿಸುತ್ತಾರೆ. ಈ ಹಚ್ಚೆಯ ಚಿತ್ರಗಳು ಸಂಪೂರ್ಣವಾಗಿ ಸಾಂಕೇತಿಕ ಚಿತ್ರಗಳಾಗಿದ್ದ ಅವರ ಕಲ್ಪನೆಯಲ್ಲಿ ಅವುಗಳ ಅರ್ಥವನ್ನು ಹೊಂದಿರುತ್ತವೆ. ಇಂತಹ ಇನ್ನು ಅನೇಕ ಬಗೆಯ ಹಚ್ಚೆ ಚಿತ್ರಗಳು ಬುಡಕಟ್ಟು ಸಮುದಾಯಗಳಲ್ಲಿ ಬಳಕೆಯಲ್ಲಿವೆ ಅಂತಹ ಕೆಲವು ಹಚ್ಚೆ ಚಿತ್ರಗಳ ಹೆಸರುಗಳನ್ನು ಈ ಕೆಳಗೆ ಕೊಡಲಾಗಿದೆ. ಈ ಹೆಸರುಗಳನ್ನು ಸಂಬಂಧಿಸಿದ ಚಿತ್ರಗಳನ್ನು ಕೊಡಲಾಗಿದೆ.

ಹಚ್ಚೆ ಚಿತ್ರಗಳ ವಿಧಗಳು

೧. ಹಣೆಹಚ್ಚೆ, ೨. ಹಣೆಹಚ್ಚೆ, ೩. ಹಣೆಹಚ್ಚೆ, ೪. ಹಣೆಹಚ್ಚೆ, ೫. ಹಣೆಹಚ್ಚೆ, ೬. ಗದೆ, ೭. ಬಾವಿ ಮೆಟ್ಟಿಲ, ೮. ಜರಡಿ, ೯. ಜರಡಿ, ೧೦. ಸೋದರನ ನೆರಳು, ೧೧. ಮಾಲೆ, ೧೨. ಆಕಳು, ೧೩. ಜೇಡ, ೧೪. ಸೀತೆಯ ಹಸ್ತ, ೧೫. ತಾಯಿಯ ಮನೆಗೆದಾರಿ, ೧೬. ಹದ್ದಿನ ಚಿತ್ರ, ೧೭. ರಾಮಲಕ್ಷ್ಮಣರು, ೧೮. ರಾಮಲಕ್ಷ್ಮಣರು, ೧೯. ಹುಲಿ ಉಗುರು, ೨೦. ಉಗುರು, ೨೧. ರೆಕ್ಕೆಗಳು, ೨೨. ಏಣಿ, ೨೩. ಮಂಚ, ೨೪. ಕಠಾರಿ, ೨೫. ವಾಲಿಗುಪ್ಪೆ, ೨೬. ತ್ರಿಶೂಲ, ೨೭. ಹಣೆಹಚ್ಚೆ, ೨೮. ಹಣೆಹಚ್ಚೆ (ಚೇಳು), ೨೯. ಹಣೆಹಚ್ಚೆ (ಬಾಳೆಗಿಡ), ೩೦. ನತ್ತು, ೩೧. ಹದ್ದಿನ ಚಿತ್ರ, ೩೨. ಹಣೆಹಚ್ಚೆ (ಚಂದ್ರ), ೩೩. ಹಣೆಹಚ್ಚೆ (ಹುಂಜ), ೩೪. ನಾಗಪ್ಪ, ೩೫. ಹಣೆ ಹಚ್ಚೆ (ರೆಕ್ಕೆಗಳು), ೩೬. ಸೀತೆಯ ತುಳಸಿಗಿಡ, ೩೭. ಮರ, ೩೮. ಜಿಂಕೆ, ೩೯. ಹೂವು, ೪೦. ಸೂರ್ಯ, ೪೧. ಚಂದಪ್ಪ, ೪೨. ರಾಮನ ತೊಟ್ಟಿಲು, ೪೩. ತಾವರೆ ಹೂವು, ೪೪. ತಾವೆ ಹೂವು, ೪೫. ಹೊನ್ನೆ ಮರ, ೪೬. ಗೌರಿ ಗದ್ದಿಗೆ, ೪೭. ಮುತ್ತಿನ ಆರತಿ, ೪೮. ಮುತ್ತಿನ ಆರತಿ, ೪೯. ಹನುಮಪ್ಪನ ತೇರು, ೫೦. ನವಿಲುಗಳು, ೫೧. ಗೌರಿ ಗಿಡ, ೫೨. ಗೌರಿ ಕಣ್ಣು, ೫೩. ತೇರು, ೫೪. ಶಿವನ ಬಾಸಿಂಗ, ೫೫. ತೇರು, ೫೬. ರಾಮನ ತೊಟ್ಟಿಲು, ೫೭. ತೇರು, ೫೮. ಸೀತೆ ಸೆರಗು, ೫೯. ರಾಮನ ತೊಟ್ಟಿಲು, ೬೦. ತೇರು, ೬೧. ತೇರು,


[illegible]

[illegible]


ಹಚ್ಚೆ ಚಿತ್ರಗಳು I




೧
೨
೩
೪
೫
೬
೭
೮
೯
೧೦
೧೧
೧೨
೧೩
೧೪
೧೫
೧೬
೧೭
೧೮
೧೯
೨೦
೨೧
೨೨
೨೩
೨೪
೨೫
೨೬
೨೭
೨೮
೨೯
೩೦
೩೧
೩೨
೩೩
೩೪
೩೫
೩೬
೩೭
೩೮
೩೯
೪೦




ಹಚ್ಚೆ ಚಿತ್ರಗಳು II






53.
54.
55.
56.
57.
58.
59.
60.
61.
62.
63.
64
65.




66.
67.
68.
69
71.
72.
73.
74.
70.
75.
76.
77.
78.
79.
80
81.
82.
83.
84.



೬೨. ತೇರು, ೬೩. ತಳಕಿ ಹಾವುಗಳು, ೬೪. ತೇರು, ೬೫. ಬಾಳೇಗಿಡ, ೬೬. ಜೋಗಿ ಜಡೆ, ೬೭. ಜೋಗಿ ಜಡೆ, ೬೮. ಜೋಗಿ ಜಡೆ, ೬೯. ತೇರು, ೭೦. ತೊಂಡೆ ಚಪ್ಪರ, ೭೧. ಎಲೆ ಬಳ್ಳಿ, ೭೨. ಬಳ್ಳಿ, ೭೩. ಬಳ್ಳಿ ೭೪. ತೇರು, ೭೫. ಗೌರಿ ಕಣ್ಣು, ೭೬. ಕಾಡಿನ ಹೂವು, ೭೭. ಹೂವು, ೭೮. ನಿಂಬೇ ಹೂವು, ೭೯. ನಂಜಲ ಹೂವುಗಳು, ೮೦. ನಾಗರಹಾವು, ೮೧. ಹೊಗೆಗಾಡಿ (ವಾಹನ), ೮೨. ಮುತ್ತೈದೆಯರು, ೮೩. ಕೋಳಿಗಳು, ೮೪. ಹನುಮಂತ.

ಆಭರಣಗಳು



ಆಭರಣಗಳನ್ನು ಧರಿಸಿರುವ ಆದಿವಾಸಿ

ಆಭರಣಗಳು ಸೌಂದರ್ಯ ಮೂಲದಿಂದ ಕೂಡಿರುವ ವಸ್ತುಗಳು. ಮಾನವ ತಾನು ಸುಂದರವಾಗಿ ಕಾಣಲು ವಿವಿಧ ಮಾದರಿಯ ಆಭರಣಗಳನ್ನು ತೊಡುತ್ತಿದ್ದಾನೆ. 'ಆಭರಣ' ಅಂದರೆ ಕನ್ನಡ ರತ್ನಕೋಶದಲ್ಲಿ 'ಒಡವೆ'[25] ಎಂಬ ಅರ್ಥವಿದೆ. ಹಾಗೆಯೇ ಕರಕುಶಲ ಕಲೆಗಳು (ಕ.ವಿ.ಹಂ.) ಕೋಶದಲ್ಲಿ ಒಡವೆ ಎಂಬುದಕ್ಕೆ ದಾಗೀನು"[26] ಎಂಬ ಹೆಸರು ಇದೆ. ಆದಿಮಾನವನು ಆಭರಣಗಳನ್ನು ತನ್ನ ರಕ್ಷಣೆಗೆ ಬಳಸುತ್ತಿದ್ದ. ಆನಂತರ ತನ್ನ ಶೋಭೆಯನ್ನು ಸೌಂದರ್ಯವನ್ನು ಹೆಚ್ಚಿಸಿಕೊಳ್ಳಲು ಬಳಸುತ್ತಿರುವುದು ಕಾಣಬಹುದು. "ಶಿಲಾಯುಗದ ಮಾನವ ಕಲ್ಲಿನಲ್ಲಿ ಸರಗಳನ್ನು ಧರಿಸಿದರೆ, ಲೋಹಯುಗದವರು ಚಿನ್ನ, ಬೆಳ್ಳಿ, ಹಿತ್ತಾಳೆಗಳನ್ನು ಒಡವೆ ವಸ್ತುಗಳನ್ನು ಬಳಸಿದರು. ಮನುಷ್ಯನ ಬದುಕಿನಲ್ಲಿ ಆದ ಸಾಂಸ್ಕೃತಿಕ, ಸಾರ್ವಜನಿಕ, ಬದಲಾವಣೆ ವಿಕಾಸಗಳು, ಒಡವೆ ತಯಾರಿಕೆ ಹಾಗೂ ಧರಿಸುವಿಕೆಯೊಂದಿಗೆ ನಿರಂತರ ಸಂಬಂಧ ಹೊಂದಿವೆ."[27] ಆಭರಣಗಳ ಪ್ರಾಚೀನತೆಯನ್ನು ನೋಡುವಾಗ ಆದಿಮಾನವನ ಪ್ರಕೃತಿಯ ವಿಕೋಪಗಳಿಗೆ ಹೆದರಿ ದೇಹದ ಮೇಲೆ ಹಲವು ವಸ್ತುಗಳನ್ನು ಬಳಸಲು ತೊಡಗಿದ. ಇವು ನಂತರದಲ್ಲಿ ಸುಂದರವಾಗಿ ಕಾಣಿಸಿದ್ದರಿಂದ ಮತ್ತು ಅವುಗಳ ನಂಬಿಕೆಯಲ್ಲಿ ಒಳಿತು ಆದುದ್ದರಿಂದ ಹಲವು ರೀತಿಯ ಆಭರಣಗಳನ್ನು ತೊಡಲು ಪ್ರಾರಂಭಿಸಿದ. ತನ್ನ ಕಲ್ಪನೆಗೆ ತಕ್ಕಂತೆ ಅವುಗಳನ್ನು ಸೃಷ್ಟಿಸಿಕೊಂಡ. ಅವುಗಳ ಬೆಳವಣಿಗೆಯ ಬದಲಾವಣೆಯನ್ನು ಇಂದಿನ ಮಾನವನ ಬಳಸುತ್ತಿರುವ ವಿಭಿನ್ನ ಆಭರಣಗಳಲ್ಲಿ ನೋಡಬಹುದಾಗಿದೆ.

ಆದಿಮಾನವನ ಆಭರಣಗಳ ಬಳಕೆಯ ಪ್ರಾರಂಭಿಕೆಯು ಭಯದಿಂದ ಪ್ರಾರಂಭವಾಗಿದೆ. ಅವನೊಂದಿಗೆ



ಬದುಕುತ್ತಿದ್ದ ಬೇರೆ, ಬೇರೆ ಜೀವರಾಶಿಗಳ ಬುದ್ದಿಗಿಂತ ಮಾನವನ ಬುದ್ದಿ ಬೆಳವಣಿಗೆ ಮಿಂಚಿನ ವೇಗದಲ್ಲಿ ಬೆಳೆದು ಬಂದಿದೆ. ಇದರಿಂದ ತನ್ನನ್ನು ರಕ್ಷಿಸಿಕೊಳ್ಳಲು ತೊಡಗಿದ. "ಪ್ರವಾಹ, ಸಿಡಿಲು, ಭೂಕಂಪಗಳಿಂದ ರಕ್ಷಣೆ ಹೊಂದಲು ತಾವೀಜು (ತಾಯಿತ) ಹುಲಿಯುಗುರು, ರುಂಡಮಾಲೆ, ಕವಡೆ ಹಾರಗಳನ್ನು ಬಳಸತೊಡಗಿದ. ಮೊದಲಿಗೆ ಒರಟು ಸ್ವರೂಪದಲ್ಲಿದ್ದ ಇವು ಕ್ರಮೇಣ ಪರಿಷ್ಕರಣಗೊಂಡವು."[೨೮] ಹೀಗೆ ಭಯದ ಮೂಲದಿಂದ ಆಭರಣಗಳು ಮೈಯೇರಿದಂತೆ ಸೌಂದರ್ಯದ ಕಲ್ಪನೆ ಆದಿಮಾನವನಿಗೆ ಮೂಡತೊಡಗಿತು. ಅದೇ ಅವನು ಸಾಕುವ ಪ್ರಾಣಿಗಳ, ಅವನು ಬೇಟೆಯಾಡುತ್ತಿದ್ದ ಪಕ್ಷಿಪ್ರಾಣಿಗಳ ಗರಿಗಳನ್ನು, ತೊಗಲುಗಳನ್ನು ಧರಿಸಲು ತೊಡಗಿದ. ಇವು ಇವನಿಗೆ ಅನುಕೂಲವನ್ನು ಒದಗಿಸುತ್ತಾ ಆಕರ್ಷಣೆಯಾಗತೊಡಗಿದವು. ಸೌಂದರ್ಯಪ್ರಜ್ಞೆ ಪುರುಷ ಸ್ತ್ರೀಯರಲ್ಲಿ ಪ್ರೇಮಕಾಮಗಳ ಪ್ರಚೋದನೆಗೆ ಕಾರಣವಾಗುವಂತ ಭಾವನೆ ಮನಸ್ಸಲ್ಲಿ ಮೂಡತೊಡಗಿತು.

ಆಭರಣಗಳ ಹಿನ್ನೆಲೆಯು ಶಿಲಾಯುಗದ ತನಕ ಓಡುತ್ತದೆ. ಆದಿಮಾನವನಿಗೆ "ಭಯವೇ ಮೂಲವಾದಾಗ ಆತನಿಗೆ ಪ್ರಾಣಿಗಳ ಮೈಕೂದಲು, ಉಗುರುಗಳು, ಕೂದಲುಗಳ ಗುಂಪು ಇವು ಧರಿಸುವ ಸಾಧನಗಳಾಗಿದ್ದವು. ವೃಕ್ಷದ ಬೀಜಗಳೂ ಬಳಕೆಗೊಂಡವು. ನವಶಿಲಾಯುಗದಲ್ಲಿ ಸುಟ್ಟ ಮಣ್ಣಿನ ಧಾರಣೆ ಪ್ರಾರಂಭವಾಯಿತು. ಶಂಕ ಹಾಗೂ ಕಪ್ಪೆಚಿಪ್ಪುಗಳನ್ನು ಸಹ ಆಧ್ಯಾತ್ಮಿಕತೆ ದೃಷ್ಟಿಯಿಂದ ಬಳಸುತ್ತಿದ್ದರು. ಜೇಡಿಮಣ್ಣಿನ ಮಣಿಮಾಲೆಗಳು ಉತ್ಖನನದಲ್ಲಿ ದೊರೆತಿವೆ ಎಂದು ವಿದ್ವಾಂಸರು ಉಲ್ಲೇಖಿಸುತ್ತಾರೆ. ಮೃತ ವ್ಯಕ್ತಿಗೆ ಪ್ರಿಯವಾದ ವಸ್ತುಗಳನ್ನು ಹೂಳುವುದು ಈಜಿಪ್ಟ್, ಮೆಸಪಟೋಮಿಯಾ, ಹರಪ್ಪ ಮಹೆಂಜದಾರೋ ಸಂಸ್ಕೃತಿಗಳ ಕಾಲದಲ್ಲೂ ರೂಢಿಯಲ್ಲಿತ್ತು."[೨೯] ಹಾಗೆಯೇ ಲೋಹಯುಗದಲ್ಲಿ ತಾಮ್ರ, ಕಂಚು, ಕಬ್ಬಿಣ, ಬಂಗಾರ, ಬೆಳ್ಳಿಗಳ ಆಭರಣಗಳು ಮತ್ತು ಆಭರಣಗಳ ಕುಸರಿ ಕೆತ್ತನೆ ಕೆಲಸಗಳು ಇದ್ದವೆಂದು ಸಂಶೋಧಕರು ಹೇಳುತ್ತಾರೆ.

ಪೂರ್ವ ಇತಿಹಾಸಕಾಲದ ಸಂಸ್ಕೃತಿಯಲ್ಲಿ ಅಲಂಕಾರದ ಸಾಧನಗಳು ಕಂಡುಬರುತ್ತವೆ. ಇವು ವಿಭಿನ್ನ ಮತ್ತು ವಿಶೇಷತೆಯನ್ನು ಹೊಂದುವಂತಹ ಆಭರಣಗಳಾಗಿ ಕಾಣಿಸುತ್ತವೆ. ಇವು "ಸರಳ ಮಾದರಿಯ ಮಣಿಗಳು ಮತ್ತು ಬಳೆಗಳು ಜನರ ಮುಖಾಲಂಕಾರಿಕ ಆಭರಣಗಳಾಗಿದ್ದವು. ಅಗೇಟ್, ಚಾಲ್ಸಿಡಾನಿ, ಕಾರ್ನೀಲಿಯ, ಶಂಖ ಸುಟ್ಟಮಣ್ಣಿನ ಗೋಲಾಕಾರದ ಸಾಮಾನ್ಯ ಚಂದೋಳಿ ಶಿಲಾ ತಾಮ್ರಯುಗದ ಒಂದು ಶವಗುಣಿಯಲ್ಲಿ ಒಂದು ಮಗುವಿನ ಅಸ್ತಿಪಂಜರದ ಕತ್ತಿನಲ್ಲಿ ಸಿಲ್ಕ್‌ದಾರದಲ್ಲಿ ಪೋಣಿಸಿದ ತಾಮ್ರದ ಮಣಿಗಳ ಸರವಿದ್ದಿತು. ತಾಮ್ರದ ದಪ್ಪ ತಂತಿಯಲ್ಲಿ ಮಾಡಿದ ತುದಿಯಲ್ಲಿ ಸೇರಿಸಿದ ಬಳಿಗಳು ಸರ್ವೇಸಾಮಾನ್ಯ ಬ್ರಹ್ಮಗಿರಿ ಮತ್ತು ತೇರದಾಳಿಗಳಲ್ಲಿ ಇಂಥ ಬಳೆಗಳು ದೊರೆತಿವೆ. ಅಪರೂಪವಾಗಿ ಎದುರುಬದರು ದಿಕ್ಕಿನಲ್ಲಿ ಮುಂಚಾಚಿದ ತುದಿಗಳ್ಳುಳ್ಳ ಸರಳ ಸುತ್ತೋಲೆಯು ಕಿವಿಯ ಆಭರಣವಾಗಿತ್ತೆಂದು ತೋರುತ್ತದೆ."[೩೦] ಈ ಕಾಲದಲ್ಲಿ ಶಂಖದಿಂದ, ಮಣ್ಣಿನಿಂದ, ಅಪರೂಪಕ್ಕೆ ಚಿನ್ನದಿಂದಲೂ ಮಾಡಿದ ಆಭರಣಗಳನ್ನು ಧರಿಸುತ್ತಿದ್ದುದು ಕಂಡುಬರುತ್ತದೆ. ಕೆಲವು ಕೆಮ್ಮಣ್ಣಿನ ಆಭರಣಗಳನ್ನು ಪ್ರಾಚೀನ

ರೇಖಾಚಿತ್ರಗಳಲ್ಲಿ ನೋಡಬಹುದು. "ಹಿರೇಬೆನಕಲ್, ಮಲ್ಲಾಪುರ, ಹದ ಹತ್ತಿರ ಒಂದು ಗವಿಯಲ್ಲಿ ಹಾಗೂ ನಾರಾಯಣಪುರ (ಗಂಗಾವತಿ ತಾಲ್ಲೂಕು) ಮತ್ತು ಹಂಪಿ (ಸುಗ್ರೀವ ಗುಹೆ ಹತ್ತಿರ) ಇವೆ. ಒಟ್ಟಿನಲ್ಲಿ ಹಿಂದಿನ ಶಿಲಾ, ತಾಮ್ರ ಸಂಸ್ಕೃತಿಯ ಜನರಿಗಿಂತ ಈ ಜನರ ಅಲಂಕರಣ ಆಭರಣಗಳು ಸ್ವಲ್ಪ ಹೆಚ್ಚು ವೈವಿದ್ಯಮಯವಾಗಿಯೂ ತಾಂತ್ರಿಕವಾಗಿಯೂ ಸುಧಾರಣೆಯಾಗಿದ್ದವು ಎಂದು ಹೇಳಲು ಅಡ್ಡಿ ಇಲ್ಲ."[೨೧] ಆಭರಣಗಳ ಹಿನ್ನೆಲೆಗೆ ಇತಿಹಾಸಪೂರ್ವ ರೇಖಾಚಿತ್ರಗಳಲ್ಲಿ ದೊರೆತಂತೆ, ಮಹಾಕಾವ್ಯಗಳಲ್ಲಿಯೂ, ಧಾರ್ಮಿಕ ಆಚರಣೆಗಳಲ್ಲೂ, ನಂಬಿಕೆಗಳಲ್ಲೂ ಚರಿತ್ರೆಯ ಪುಟಗಳಲ್ಲೂ ಆಭರಣಗಳ ವಿವರಣೆಯನ್ನು ನೋಡಬಹುದು.

ಭಾರತ ದೇಶ ಆಭರಣಗಳ ವಿಷಯದಲ್ಲಿ ಉತ್ತಮ ವಿನ್ಯಾಸ ಹಾಗೂ ಲೋಹಗಳನ್ನು ಉಪಯೋಗಿಸುವುದರಲ್ಲಿ ಹೆಚ್ಚಿನ ಮಹತ್ವ ಪಡೆದಿರುವುದಕ್ಕೆ ಸಾಕಷ್ಟು ಸಾಕ್ಷಿ ಆಧಾರಗಳು ದೊರೆಯುತ್ತವೆ. ಇದು ಹರಪ್ಪಾ ಮಹೆಂಜದಾರೋ ಮತ್ತು ವೇದಗಳ ಕಾಲದಿಂದಲೇ ಪ್ರಚಲಿತದಲ್ಲಿದೆ. "ಮಹರ್ಷಿ ಕರ್ಕಿವರ್ತನ ಪ್ರಕಾರ ಋಗ್ವೇದದ ಪ್ರಯಾಸಗಳಲ್ಲಿ ಆತನು ಈ ರೀತಿ ಹೇಳುತ್ತಾನೆ. ಅವನಿಗೆ ಬಂಗಾರದ ಕಿವಿ ಓಲೆಗಳು ಕಂಠಹಾರವಿತ್ತೆಂದು ಹೇಳುತ್ತಾನೆ."[೨೨] ಋಗ್ವೇದದಲ್ಲಿ ಕೇವಲ ಆಭರಣಗಳನ್ನು ತಿಳಿಸುವುದಲ್ಲದೆ ಅವುಗಳಿಗಿದ್ದ ಬೇರೆ ಬೇರೆ ಹೆಸರುಗಳನ್ನು ತಿಳಿಸುತ್ತದೆ. ಈ ಹೆಸರುಗಳು ನಂತರದ ಕಾಲದಲ್ಲಿ ಬಳಕೆಯಾದವು ಎಂಬುದು ಗೊತ್ತಾಗುತ್ತದೆ.

ಆದಿ ಧರ್ಮಗ್ರಂಥಗಳಾದ ರಾಮಾಯಣ, ಮಹಾಭಾರತ ಕಾವ್ಯಗಳಲ್ಲೂ ಆಭರಣಗಳ ಬಗ್ಗೆ ಮಾಹಿತಿ ಸಿಗುತ್ತವೆ. ಸೀತಾದೇವಿಯ ಮದುವೆಯ ವಿವರಣೆಯಲ್ಲಿ ಆಭರಣಗಳು ಇದ್ದವು ಎಂಬುದು ತಿಳಿದು ಬರುತ್ತದೆ. ಅವಳ ಕಿವಿಗಳು ಮತ್ತು ಮೂಗು ಬಂಗಾರದ ಆಭರಣಗಳಿಂದ ಶೋಭಿಸುತ್ತಿರುವುದು ತಿಳಿದುಬರುತ್ತದೆ. ಅವಳ ಮುಂಗೈ, ತೋಳು, ಸೊಂಟದಲ್ಲಿ ಆಭರಣಗಳು ಇದ್ದವು ಎಂಬುದು, ಕಾಲಲ್ಲಿ ಬಂಗಾರದ ಗೆಜ್ಜೆಗಳಿದ್ದವು. ಹೀಗೆ ಹಲವು ರೀತಿ ಆಭರಣಗಳ ವಿವರಣೆ ಕಂಡುಬರುತ್ತವೆ.

ಆಭರಣಗಳ ಹಿನ್ನೆಲೆಯನ್ನು ಕರ್ನಾಟಕದ ಸಂದರ್ಭದಲ್ಲಿ ನೋಡುವಾಗ "ಚಿತ್ರದುರ್ಗ ಪರಿಸರದ ಚಂದ್ರವಳ್ಳಿಯಲ್ಲಿ ವಿವಿಧ ಒಡವೆ ವಸ್ತುಗಳು ದೊರೆತಿವೆ. ತಾಮ್ರದ ಉಂಗುರ, ಪಂಚಲೋಹದ ಹಾಗೂ ಕಬ್ಬಿಣದ ಉಂಗುರುಗಳು, ಎಲುಬಿನಲ್ಲಿ ಕೊರೆದು ಮಾಡಿದ ಸರ ಇತ್ಯಾದಿಗಳು ಸಿಕ್ಕಿವೆ. ಬಹಶಃ ಇವು ಮಾಂತ್ರಿಕ ಮೂಲವಾಗಿರಬೇಕು."[೨೩] ಹೀಗೆ ಆಭರಣಗಳು ಪುರಾತನ ಚಿತ್ರಕಲೆ, ಶಾಸನ ಹಾಗೂ ವೇದಗಳಿಂದ ಇಂದಿನ ಆಧುನಿಕ ಯುಗದವರೆಗೆ ವಿವಿಧ ರೀತಿಯ ಆಭರಣಗಳನ್ನು ನೋಡಬಹುದಾಗಿದೆ.

ಆಭರಣಗಳನ್ನು ಮನುಷ್ಯರು ಹೇಗೆ ಧರಿಸಿ ಸಿಂಗಾರ ಮಾಡಿಕೊಳ್ಳುತ್ತಾರೋ ಹಾಗೆಯೇ ದೇವತೆಗಳಿಗೂ ಭಕ್ತಿಯ ನೆಲೆಯಲ್ಲಿ ಆಭರಣಗಳನ್ನು ಧರಿಸಲಾಗುತ್ತದೆ. ಇದು ಸಮೃದ್ಧಿಯ ಸಂಕೇತವಾಗಿ ಇರುತ್ತದೆ. ಇವನ್ನು ಊರು ಮತ್ತು ಗ್ರಾಮಗಳ ದೇವತೆಗಳಲ್ಲಿ ನೋಡಬಹುದು. ಈ ದೇವತೆಗಳಿಗೆ ಸಂಬಂಧಿಸಿದ ಆಭರಣಗಳನ್ನೇ ಧರಿಸುತ್ತಾರೆ. ಅಂದರೆ ಲಕ್ಷ್ಮಿ, ಪಾರ್ವತಿ, ಸರಸ್ವತಿ ಮುಂತಾದ ದೇವತೆಗಳ ಆಭರಣಕ್ಕೂ

ಮಾರಮ್ಮ, ಗಾಳಮ್ಮ, ಹುಲಿಗಮ್ಮ, ಮಳಿಯಮ್ಮ ಮುಂತಾದ ಗ್ರಾಮೀಣ ದೇವತೆಗಳ ಆಭರಣಕ್ಕೂ ಸಾಕಷ್ಟು ಭಿನ್ನತೆ ಹಾಗೂ ವ್ಯತ್ಯಾಸಗಳನ್ನು ಕಾಣುತ್ತೇವೆ. ಇವು ಆಯಾ ಸಾಂಸ್ಕೃತಿಯ ಹಿನ್ನೆಲೆಯಲ್ಲಿ ರೂಪಗೊಂಡವಾಗಿರುತ್ತವೆ. ಅದಕ್ಕೆ ತಕ್ಕಂತೆ ಆಭರಣಗಳನ್ನು ಧರಿಸುತ್ತಾರೆ. ಈ ಆಭರಣಗಳನ್ನು "ಲೋಹದಲ್ಲಿ ಅಕ್ಕಸಾಲಿಗ ಮಾಡಿಕೊಡುತ್ತಾನೆ. ಚಕ್ರಸರ, ಗಿಳಿ ಹಚ್ಚಿದ ಮುಳ್ಳು ಕಂಕಣ, ನತ್ತು, ಚೋಡೇ ಜೋಡು, ಹರಡೇ ಜೋಡು, ಕೊಪ್ಪಜೋಡು, ಬಂದಿಸರಿಗೆ, ಗೆಜ್ಜೆ ಟೀಕೆ, ಕರ್ಣಪೂವು, ನೆಲ್ಲಿಕಾಯಿಸರ, ನಾಗಭೂಷಣ, ಪುತ್ಲಿಸರ, ಸವರನ್‌ಸರ, ನಾಗಸಂಪಿಗೆ ಸರ, ಜೋಮಾಲೆ ಸರ, ಮುತ್ತಿನ ಕಂಠಿ, ಕಠಾಣಿಸರ, ಶೃಂಗಾರ ಮಣಿಸರ, ಗಿಜಿಬಿಜಿ ಸರ, ಛತ್ರಿ, ಚಾಮರ, ಪ್ರಭಾವಳಿ ಇವೆಲ್ಲವೂ ದೇವರುಗಳಿಗೆ ಧರಿಸುವ ವಸ್ತುಗಳು ಇವು ಬೆಳ್ಳಿ ಬಂಗಾರ ಹಿತ್ತಾಳೆ ಲೋಹದಿಂದ ರಚನೆ ಮಾಡುತ್ತಾನೆ."[೩೪] ಇದು ಭಕ್ತರು ದೇವರಿಗೆ ತೊಡಿಸುವ ಆಭರಣಗಳಾಗಿರುತ್ತವೆ. ಒಂದೊಂದು ಆಭರಣಗಳೂ ದೇವರಿಗೆ ಸಂಬಂಧಿಸಿದ ಭಾಗಕ್ಕೆ ಧರಿಸಲಾಗುತ್ತದೆ. ಸರ್ವ ರೀತಿಯಲ್ಲೂ ಒಳಿತನ್ನು ಮಾಡುವ ದೇವರು ಸದಾ ಆಭರಣಾಲಂಕೃತವಾಗಿರಬೇಕು ಎಂಬುದು ಜನರಿಗಿರುವ ದೈವನಂಬಿಕೆ. ಹಾಗೆಯೇ ಹಲವು ವಿಭಿನ್ನ ರೀತಿಯಲ್ಲಿ ಆಭರಣಗಳನ್ನು ತಯಾರುಮಾಡಿಸಿ ಧರಿಸುವುದನ್ನು ನೋಡುತ್ತೇವೆ. ಮತ್ತೆ ಕೆಲವು ವಿಭಿನ್ನ ಆಭರಣಗಳು ಈ ರೀತಿ ಇರುತ್ತವೆ. "ತಲೆ ಮುಳ್ಳು, ತಿರುಪಿನ ಹೂ, ಕಟ್ಟಣೆ ಸರ, ಕೊತುಂಬರಿ ಸರ, ಮಂಗಳಗೌರಿಸರ, ನೆಲ್ಲಿಕಾಯಿಸರ, ಕಾಫಿಬೀಜದ ಸರ, ಗೆಜ್ಜೆಸರ, ಪುತ್ತಳಿಸರ, ಗೆಜ್ಜಿಸರ ಮುಂತಾದವುಗಳನ್ನು ಮಲೆನಾಡಿನ ಜನರಲ್ಲಿ ನೋಡಿದರೆ ಕೆನ್ನೆಸರ, ಪದಕ, ಚಿಂತಾಕ, ಗೆಜ್ಜೆಚೈನು, ಕಾಲಂದಿಗೆ, ಗೆಜ್ಜೆಡಾಬು, ಗಂಡಿನಸರ, ಜಡೆಬಲ್ಲೆ, ಕಡಗ, ಕಾಸಿನ ಸರ, ಅವಲಕ್ಕಿ ಸರ, ಮುಂತಾದವುಗಳನ್ನು ಕೊರಳಲ್ಲಿ ಧರಿಸುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನತ್ತು ಬೊಟ್ಟು, ವಂಕಿ ಉಂಗುರ, ಕಮಲದ ಓಲೆ, ಜೋಮಾಲೆ ಸರ, ಪುತ್ಲಿಸರ, ಗಿಳಿಓಲೆ, ಬಿಂದಿಗೆ, ಮಾಗಿಗೆ ಕೊಪ್ಪಕಿವಿಗೆ ಒಂಟಿ ಮುಂತಾದ



ಆದಿವಾಸಿಗಳ ವೈವಿಧ್ಯಮಯ ಆಭರಣಗಳು



ಸರಗಳನ್ನು ಧರಿಸುತ್ತಾರೆ. ಉತ್ತರ ಕರ್ನಾಟಕದಲ್ಲಿ ಗೊಣಸಿನ ಉಡುದಾರ, ಏಣಿನೂಲು ಚೌಕ, ಕಿವಿಯ ಕಾನ್‌ಬಾವಲಿ, ಮೀನ್‌ಬಾವಲಿ, ಗಮರಿ ಬಾವಲಿ ಜಮಕಿ ಗಂಟೆ, ಮುತ್ತಿನ ಮೂಗುತಿ, ಮುತ್ತಿನ ಬುಗುಡಿ, ನಾಗರಹಾವು, ಹರಳಿನ ಪದಕದಹಾರ ಮುಂತಾದ ಆಭರಣಗಳನ್ನು ಬಳಸುತ್ತಾರೆ.''[೩೫] ಈ ರೀತಿಯಲ್ಲಿ ಆಯಾ ಪ್ರಾದೇಶಿಕ ಹಿನ್ನೆಲೆಗೆ ಸಂಬಂಧಪಟ್ಟಂತೆ ಆಭರಣಗಳು ವ್ಯಕ್ತಿಗಳ ದೇಹದ ಮೇಲೆ ಏರುವುದನ್ನು ನೋಡುತ್ತೇವೆ. ಆ ಆಭರಣಗಳ ಚಿತ್ರವಿನ್ಯಾಸಗಳು ಪ್ರಾದೇಶಿಕತೆಗೆ ಸಂಬಂಧಪಟ್ಟಿರುತ್ತವೆ.

ಕಾಡು ಮತ್ತು ಕೃಷಿ ಸಂಸ್ಕೃತಿಯನ್ನು ಹೊಂದಿರುವ ಬುಡಕಟ್ಟುಗಳಲ್ಲಿ ಆಭರಣಗಳನ್ನು ವಿಶೇಷವಾಗಿ ನೋಡಬಹುದು. ಇವರು ಇತರೆ ಸಂಸ್ಕೃತಿಗಳಿಗಿಂತ ಭಿನ್ನವಾದಂಥ ಆಭರಣಗಳನ್ನು ಹೊಂದಿರುವುದನ್ನು ಕಾಣಬಹುದು. ಅವುಗಳಿಗೆ ಅವರದೇ ಆದ ಸಾಂಸ್ಕೃತಿಕ ಹಿನ್ನಲೆಯುಂಟು ``ಗೌಳಿಗರು ಬಹು ಆಭರಣ ಪ್ರಿಯರು ಅವರು ಕಿವಿಗೆ ಕಾಪು, ಮೇಲ್ಗಿವಿಗೆ ಬುಗುಡಿ, ಮೂಗಿಗೆ ಮೂಗುತಿ, ತೋಳಿಗೆ ತೋಳವತ್, ತೋಳಬಂದಿ, ಕಾಲಿಗೆ ಕಡಗದ ರೀತಿಯ 'ಸಕಳ'ವನ್ನು ತೊಡುವುದು ಸಾಮಾನ್ಯ, ಕೈತುಂಬ ಬಣ್ಣಬಣ್ಣದ ಗಾಜಿನ ಬಳೆ, ಬಳ್ಳಿಯ ಪಾಟ್ಲ ಧರಿಸಿದರೆ ವಿವಾಹಿತರು ಬಳ್ಳಿಯ ತೋಳ್ಮನೆ (ಹಾವಿನಾಕೃತಿಯ ಆಭರಣ ತೋಳಿನಲ್ಲಿ ಧರಿಸುವುದು) ಮತ್ತು ಮಣಿ ಸರಗಳನ್ನು ಧರಿಸುವುದು ರೂಢಿ. ಕಾಲುಗಳಿಗೆ ಕಾಲುಂಗರ ಧರಿಸುವ ಪದ್ಧತಿಯೂ ಇವರಲ್ಲಿ ಜನಪ್ರಿಯವಾಗಿದೆ. ಮಂಗಳ ಕಾರ್ಯಗಳ ಸಂದರ್ಭದಲ್ಲಿ ಮಾತ್ರ ಮೇಲ್ಗಿವಿಗೆ 'ಬಾಳೆ' ಕೆಳಗಿವಿಗೆ ಮುರಿ ಮತ್ತು ಕೆನ್ನೆ ಸರಪಳಿಗಳನ್ನು ಧರಿಸುವುದು ವಿಶೇಷ. ಯಾವ ಸಂದರ್ಭದಲ್ಲಿ ಮೂಗಿಗೆ ಮೂಗುತಿ ತೋಳಿಗೆ ವಂಕಿ ಕಾಲಿಗೆ ಕಾಡಗ ಹಾಕದೆ ಇರುವುದಿಲ್ಲ.''[೩೬] ಇವರಲ್ಲಿ ಸಾಯುವತನಕವೂ ಕೆಲವು ಸಂಬಂಧಿಸಿದ ಆಭರಣಗಳನ್ನು ತೆಗೆಯುವ ಹಾಗಿಲ್ಲ. ಅಂದರೆ ಗಂಡ ಸತ್ತ ನಂತರವೂ ಆಭರಣಗಳನ್ನು ಹಾಕಬಹುದು. ಅಲೆಮಾರಿ ಬದುಕು ನಡೆಸುತ್ತಾ ಇಂದು ನೆಲೆಗೊಂಡಿರುವ ಈ ಗೌಳಿಗರ ಹೆಂಗಸರಲ್ಲಿ ಆಭರಣಗಳು ತಮ್ಮ ಸಂಸ್ಕೃತಿಯ ಪ್ರತೀಕವೆಂಬಂತೆ ಎದ್ದು ಕಾಣುತ್ತವೆ. ಅಂತೆಯೇ ಚಿಕ್ಕ ಮಕ್ಕಳಿಗೆ ಬಣ್ಣ ಬಣ್ಣದ ದೃಷ್ಟಿಗಳನ್ನು ಕೊರಳಿಗೆ, ಸೊಂಟಕ್ಕೆ, ಕೈಗೆ ಕಟ್ಟುತ್ತಾರೆ. ಗಂಡಸರೂ ಸಹ ಕೈಯಿಗೆ ಕಡಗ, ಕೊರಳಿಗೆ ಮಣಿಹಾರಗಳನ್ನು ಹಾಕುತ್ತಾರೆ. ಗೌಳಿಗರ ಆಭರಣಗಳು ತಮ್ಮ ಪರಿಸರದ ಚಿತ್ರಗಳನ್ನೊಳಗೊಂಡಿರುತ್ತವೆ.

ಕಡಲು ಕಾಡಿನ ಜೊತೆಯಲ್ಲಿ ಬದುಕುತ್ತಿರುವ ಹಾಲಕ್ಕಿ ಒಕ್ಕಲಿಗರ ಹೆಂಗಸರು ಆಭರಣಗಳೇ ಅಂಗ ರಕ್ಷಕವೆಂಬಂತೆ ತೊಡುತ್ತಾರೆ. ಇದು ಇವರ ಸಂಸ್ಕೃತಿಯಲ್ಲಿ ಕಂಡುಬರುವ ವಿಶೇಷತೆ. ಇವರು ಧರಿಸುವ ಆಭರಣಗಳಲ್ಲಿ ಮಣಿಸರಗಳು ವಿಶೇಷವಾಗಿರುತ್ತವೆ. ಕಡಲ ತೀರದಲ್ಲಿ ಸಿಗುವ ಕಪ್ಪೆಚಿಪ್ಪುಗಳು, ಶಂಖ, ಕವಡೆ, ಹವಳ ಇವುಗಳನ್ನು ಮೈತುಂಬುವಂತೆ ಧರಿಸಿಕೊಂಡಿರುತ್ತಾರೆ. ಈ ಸರಗಳನ್ನು ಯಾರು ಹೆಚ್ಚು ಧರಿಸಿರುತ್ತಾರೆ. ಅವರಿಗೆ ಅವರ ತವರ, ಗಂಡನ ಬಳಗ ಹೆಚ್ಚು ಇದೆ ಎಂದು ಅರ್ಥ. ಇವರು ಧರಿಸುವ ಸರಗಳೆಲ್ಲವೂ ಸಂಬಂಧಿಕರು ನೆನಪಿಗೆ ಕೊಟ್ಟಿರುವಂತಹ ಉಡುಗೆರೆ ಆಗಿರುತ್ತವೆ. ಜೊತೆಗೆ ಹಾಲಕ್ಕಿ ಹೆಣ್ಣುಮಕ್ಕಳ ಸಿರಿವಂತಿಗೆಯೇ ಈ ಮಣಿಸರಗಳ ಆಭರಣ ಧರಿಸುವುಕ್ಕೆ ಆಗಿರುತ್ತದೆ.

[illegible]

ಹೆಣ್ಣು ಮಕ್ಕಳು ಹುಟ್ಟಿದ ತಕ್ಷಣ ಅದಕ್ಕೆ ದೃಷ್ಟಿ ತಾಗಬಾರದು ಎಂದು ಮೊದಲು ಒಂದು ದೃಷ್ಟಿ ಮಣಿಯನ್ನು ಕಟ್ಟುತ್ತಾರೆ. ಮಗು ಬೆಳದಂತೆ ಕೊರಳೊಳಗೆ ಮಣಿಸರಗಳು ಹೆಚ್ಚೆಚ್ಚುತ್ತಾ ಹೋಗುತ್ತವೆ. ಇವು ಕೆಂಪು, ಹಳದಿ, ಕಪ್ಪು ಮತ್ತು ಬಿಳಿ ಮಣಿಗಳಾಗಿರುತ್ತವೆ. ಈ ಮಣಿಗಳ ಜೊತೆಗೆ ಕಿವಿಗೆ ಓಲೆ, ಮೂಗಿಗೆ ಮೂಗುತಿ, ಕೈತುಂಬಾ ಬಳೆ, ಕಡಗ, ಮೇಲು ಕಿವಿಗೆ ಬುಗುಡಿ ಕಾಲಿಗೆ ಕಾಲುಂಗರ ಮುಂತಾದವುಗಳನ್ನು ಇವರು ಧರಿಸುತ್ತಾರೆ.

ಹಸಲರಲ್ಲಿ ಆಭರಣಗಳನ್ನು ತೊಡುವುದು ಇತ್ತೀಚಿನ ವರ್ಷಗಳಿಂದ ರೂಢಿಸಿಕೊಂಡಿದ್ದಾರೆ. ಹಿಂದೆ "ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಸಲರ ಹೆಂಗಸರು ಬೆಳ್ಳಿಬಂಗಾರ ಒಡವೆಗಳನ್ನು ತೊಡುವುದು ನಿಷೇಧವಾಗಿತ್ತು. ಮೂಗು ಚುಚ್ಚಿಸಿಕೊಳ್ಳುವಂತಿರಲಿಲ್ಲ. ಆದರೆ ಈಗ ಸಾಮಾನ್ಯವಾಗಿದೆ. ಮದುವೆಯಾದ ಹೆಂಗಸರು ಬೆಂಡೋಲೆ, ಮೂಗುತಿ, ಕರಿಮಣಿಗಳಿಂದ ಪೋಣಿಸಿರುವ ತುಳಸಿಸರ, ಕಾಲುಂಗುರಗಳನ್ನು ಧರಿಸುವರು. ವಿಧವೆಯರು ಗಾಜಿನ ಬಳೆ, ಕಾಲುಂಗರ, ಮೂಗುತಿ, ತಾಳಿಸರ ಧರಿಸುವಂತಿಲ್ಲ. ಹುಡುಗಿಯರು ಕರೀಮಣಿಸರ ಕಾಲುಂಗರವನ್ನು ಹೊರತುಪಡಿಸಿ ಉಳಿದ ಎಲ್ಲಾ ಆಭರಣಗಳನ್ನು ಧರಿಸಬಹುದು."[೩೭] ಹೀಗೆ ಅವರವರ ಸಂಸ್ಕೃತಿ ಹಿನ್ನೆಲೆಯಲ್ಲಿ ಆಭರಣಗಳನ್ನು ಧರಿಸುವುದನ್ನು ನೋಡಬಹುದು. ಯಾವುದೇ ಬುಡಕಟ್ಟು ಸಮುದಾಯಗಳ ಹೆಂಗಸರಲ್ಲಿ ಕಿವಿಗೆ ಓಲೆ, ಮೂಗಿಗೆ ಮೂಗುತಿ ಕೊರಳಿಗೆ ಮಣಿಯ ಸರಗಳು ಸಾಮಾನ್ಯವಾಗಿ ಇರುತ್ತವೆ. ಅಂತೆಯೇ ಹುಟ್ಟಿದ ಮಗು ಹೆಣ್ಣಾಗಲಿ ಗಂಡಾಗಲಿ ಹುಟ್ಟಿದ ಕೆಲವು ದಿನಗಳ ನಂತರ ಕಿವಿ ಚುಚ್ಚುವ ಶಾಸ್ತ್ರವನ್ನು ಇಟ್ಟುಕೊಳ್ಳುತ್ತಾರೆ. ಕಿವಿಯನ್ನು ಚುಚ್ಚಿದ ನಂತರ ಆಭರಣಗಳನ್ನು ಹಾಕುತ್ತಾರೆ. ಇಲ್ಲವೆ ಬೇವಿನಕಡ್ಡಿಯನ್ನು ಇಡುತ್ತಾರೆ. ಬುಡಕಟ್ಟು ಸಮುದಾಯಗಳಲ್ಲಿ ಹಿರಿಯ ತಲೆಮಾರಿನ ಗಂಡಸರು ಇಂದಿಗೂ ಕಿವಿಗೆ ಓಲೆಗಳನ್ನು ಧರಿಸುವುದನ್ನು ನೋಡಬಹುದು.

ಗೊಂಡರೂ ಕೂಡ ತಮ್ಮದೇ ಆದಂಥ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಆಭರಣಗಳನ್ನು ತೊಡುತ್ತಾರೆ. ಇವರ ಆಭರಣಗಳು ಸಾಮಾನ್ಯವಾಗಿ ಚಿನ್ನ ಮತ್ತು ಬೆಳ್ಳಿಯ ಆಭರಣಗಳು ಆಗಿರುತ್ತವೆ. ಬಡವರು ಕೂಡ ಚಿನ್ನ, ಬೆಳ್ಳಿ, ಕಂಚು ತಾಮ್ರಗಳಿಂದ ತಯಾರಾದ ಆಭರಣಗಳನ್ನು ತೊಡುತ್ತಾರೆ. "'ಹುಟ್‌ಮರು' ಹೆಣ್ಣಾಗಲಿ, ಗಂಡಾಗಲಿ ಹುಟ್ಟಿದ ಆನಂತರ ಮೊಟ್ಟಮೊದಲು ಆಭರಣ ತೊಡಿಸುವುದು ಕಿವಿಯ ಮೇಲೆ. ಇದಕ್ಕೆ ತಾಮ್ರವನ್ನು ಬಳಸುವುದುಂಟು. ಹೆಂಗಸರು ಕಿವಿಯ ಹಾಲಿಗೆ ತೊಡುವ ಆಭರಣವೆಂದರೆ ವಾಲೆ. ಒಂದು ರೂಪಾಯಿ ನಾಣ್ಯದಷ್ಟು ದೊಡ್ಡದಿದ್ದು ಇದನ್ನು ಧರಿಸಲು ಕಿರುಬೆರಳು ಹೊಕ್ಕುವಷ್ಟು ಬಟ್ಟೆಬೇಕು."[೩೮] ಈ ವಾಲಿಗಳು ಇಂದಿಗೂ ನಮ್ಮ ಜನಪದರ ಮತ್ತು ಬುಡಕಟ್ಟು ಸಂಪ್ರದಾಯಗಳಲ್ಲಿ ಕಾಣಿಸುತ್ತವೆ. ಇವರ ಮೂಗಿಗೆ ಮೂಗುತಿ ಕಡ್ಡಾಯ, ಕೊರಳಿಗೆ ಕರಿಮಣಿ ಸರ ಇರುತ್ತವೆ. ಮದುವೆಯಾದ ನಂತರ ಈ ಕರಿಮಣಿಯೊಂದಿಗೆ ತಾಳಿಯನ್ನು ಹಾಕಿಕೊಳ್ಳುತ್ತಾರೆ. ಇವರಿಗೆ ಬಿಳಿಮಣಿ ಸರಗಳು ಬಹಳ ಪ್ರಿಯ. ಇದನ್ನು ಇವರು 'ಹಾಲ್ಮಣಿ ಸರ' ಎಂದು ಕರೆಯುತ್ತಾರೆ. ಹಾಗೆಯೇ ಹವಳದ ಸರಗಳನ್ನು

[illegible]

[illegible]

[illegible]

ಹಾಕುತ್ತಾರೆ. ತೋಳಿಗೆ ಸೋರ್ಗಿ ಎಂಬ ಆಭರಣವನ್ನು ಹಾಕುತ್ತಾರೆ. ಕೈತುಂಬಾ ಮಣಿಬಳೆ, ಕಬ್ಬಿಣದ ಬಳೆ, ಕಡಗವನ್ನು ಸಹ ತೊಡುತ್ತಾರೆ. ಇವರಲ್ಲಿ ವಿಶೇಷವಾಗಿ ಗಂಡಸರೂ ಕಡಗವನ್ನು ತೊಡುತ್ತಾರೆ. ಕಬ್ಬಿಣದ ಬಳೆಗಳನ್ನು ಮಕ್ಕಳಿಗೆ ತೊಡಿಸುತ್ತಾರೆ. ಮೈಮೇಲೆ ಲೋಹ ಇರಬೇಕು ಎಂಬ ನಂಬಿಕೆ ಇವರಲ್ಲಿ ಇದೆ. ಮದುವೆಯಾದ ಹೆಂಗಸರು ಕಾಲುಬಳೆ ಕಾಲುಂಗರಗಳನ್ನು ತೊಡುವುದು ಇವರಲ್ಲಿ ಸಾಮಾನ್ಯ. ವಿಧವೆಯರು ಕಾಲುಂಗರಗಳನ್ನು ಧರಿಸುವಂತಿಲ್ಲ."[೩೯]

ಹೀಗೆ ಪ್ರತಿಯೊಂದು ಬುಡಕಟ್ಟಿನಲ್ಲೂ ಆಭರಣಗಳ ಬಳಕೆಯನ್ನು ತಮ್ಮ ಸಮುದಾಯಗಳ ಕಟ್ಟುಪಾಡು, ನೀತಿ ನಿಯಮಗಳ ಹಿನ್ನೆಲೆಯಲ್ಲಿ ಬಳಸುತ್ತಾರೆ. ಈ ಆಭರಣಗಳೆಲ್ಲವೂ ತಮ್ಮ ಅನುಕೂಲದ ಅರ್ಥಿಕ ಸಾಮರ್ಥ್ಯವನ್ನು ಹೊಂದಿವೆ. ಹಿಂದೆ ತಮಗೆ ಲಭ್ಯವಿರುವ ಮಣಿಸರ ಕಪ್ಪೆಚಿಪ್ಪು, ಶಂಖ ಮುಂತಾದವುಗಳನ್ನು ಧರಿಸುತ್ತಿದ್ದರು. ಈಗಲೂ ಕೆಲವರು ಮಣಿಸರಗಳನ್ನೇ ತಮ್ಮ ಆರ್ಥಿಕ ಸಾಮರ್ಥ್ಯಕ್ಕೆ ಎಟುಕಿದ ಒಡವೆಗಳನ್ನೇ ಸಿಂಗರಿಸಿಕೊಂಡು ತಮ್ಮ ಸಂಸ್ಕೃತಿಯನ್ನು ಉಳಿಸಿಕೊಂಡಿದ್ದಾರೆ.

ಅಡಿಟಿಪ್ಪಣೆಗಳು

೦೧. ಡಾ. ಎಸ್.ಸಿ. ಪಾಟೀಲ, ಕರ್ನಾಟಕ ಜನಪದ ಚಿತ್ರಕಲೆ, ಪುಟ: ೧೯೯
೦೨. ಎನ್.ಆರ್. ನಾಯಕ, ಬುಡಕಟ್ಟು ಜನಾಂಗಗಳ ಜನಪದ, ಪುಟ: ೩೭
೦೩. ಪ್ರೊ. ಹಿ.ಚಿ. ಬೋರಲಿಂಗಯ್ಯ, ಕರ್ನಾಟಕ ಗಿರಿಜನ ಸಂಸ್ಕೃತಿ, ಪುಟ: ೧೫೪
೦೪. ಶಾಂತಿ ನಾಯಕ, 'ಗೊಂಡರು' ಕರ್ನಾಟಕ ಬುಡಕಟ್ಟುಗಳು, ಸಂಪುಟ: ೧, ಪುಟ: ೨೦೧
೦೫. ಅದೇ. ಪುಟ: ೨೦೨
೦೬. ಅದೇ. ಪುಟ: ೨೦೨
೦೭. ಪ್ರೊ. ಹಿ.ಚಿ. ಬೋರಲಿಂಗಯ್ಯ, ಹಾಲಕ್ಕಿ ಒಕ್ಕಲಿಗರು, ಕರ್ನಾಟಕ ಬುಡಕಟ್ಟುಗಳು. ಸಂಪುಟ ೧, ಪುಟ:೩೬
೦೮. ಮಾಹಿತಿಯನ್ನು ನೀಡಿದವರು ನೀಲಮ್ಮ ಚಂದ್ರ ಆನೆಮಾಳ ಅಡಿ.
೦೯. ಮಾಹಿತಿಯನ್ನು ನೀಡಿದವರು ಹುಚ್ಚಪ್ಪ ಮಾಸ್ತರ್, ಈಶ್ವರ ನಾಯಕ, ಹಿರೇಮನೆ
೧೦. ಶಾಂತಿನಾಯಕ, ಗೊಂಡರು ಕರ್ನಾಟಕ ಬುಡಕಟ್ಟುಗಳು, ಸಂ.೧, ಪುಟ: ೪೩
೧೧. ಎಚ್.ಎಂ. ಮಹೇಶ್ವರಯ್ಯ, ಹಚ್ಚೆ, ಸುವರ್ಣ ಜಾನಪದ, ಪುಟ: ೪೩
೧೨. ಪ್ರೊ.ಹಿ.ಚಿ.ಬೋರಲಿಂಗಯ್ಯ, ಹಾಲಕ್ಕಿ ಒಕ್ಕಲಿಗರು, ಕರ್ನಾಟಕ ಬುಡಕಟ್ಟುಗಳು, ಸಂಪುಟ: ೧
೧೩. ಪಿ.ಆರ್. ತಿಪ್ಪೇಸ್ವಾಮಿ, ಕಲಾಕೋಶ, ಪ್ರ.ಸಂ. ಪುಟ: ೩೬೫
೧೪. ಅದೇ. ಪುಟ: ೨೬೫
೧೫. ಪಿ.ಆರ್. ತಿಪ್ಪೇಸ್ವಾಮಿ, ಜಾನಪದ ಚಿತ್ರ ಮತ್ತು ಚಿತ್ರಕಲೆ, ಸುವರ್ಣ ಜಾನಪದ, ಪುಟ: ೧೭೭
೧೬. ಶ್ರೀ ಮಹೇಶ್ವರಯ್ಯ, ಕರಕುಶಲ ಕಲೆಗಳು, ಪುಟ: ೧೫೬
೧೭. ಪಿ.ಆರ್. ತಿಪ್ಪೇಸ್ವಾಮಿ, ಜನಪದ ಚಿತ್ರ ಮತ್ತು ಚಿತ್ರಕಲೆ, ಸುವರ್ಣ ಜಾನಪದ, ಪುಟ: ೧೭೭
೧೮. ಡಾ. ಎಚ್.ಎಂ. ಮಹೇಶ್ವರಯ್ಯ, ಹಚ್ಚೆ ಒಂದು ಜಾನಪದ ಕಲೆ, ಪುಟ: ೩೨
೧೯. ಅದೇ. ಪುಟ: ೧೫
೨೦. ಡಾ. ಎಸ್.ಸಿ. ಪಾಟೀಲ, ಕರ್ನಾಟಕ ಜನಪದ ಚಿತ್ರಕಲೆ, ಪುಟ: ೮೯

೨೧. ಡಾ. ಅಂಬಳಿಕೆ ಹಿರಿಯಣ್ಣ, ಕಚ್ಚೆಗೌಳಿಗರ ಸಂಸ್ಕೃತಿ, ಪುಟ: ೪೭

೨೨. ಅದೇ. ಪುಟ: ೪೫

೨೩. ಮಾಹಿತಿಯನ್ನು ನೀಡಿದವರು ಚಿಕ್ಕಮ್ಮ, ತಿಮ್ಮನ ಹೊಸಳು ಹಾಡಿ, ಕಾಡುಕುರಬರು

೨೪. ಮಾಹಿತಿಯನ್ನು ನೀಡಿದವರು ಮಹಾದೇವಮ್ಮ ಹೊಸಗದ್ದೆ ಪೋಡ್ ಬಿಳಿಗಿರಿರಂಗನ ಬೆಟ್ಟ, ಸೋಲಿಗರು

೨೫. ಕನ್ನಡ ರತ್ನಕೋಶ, ಕನ್ನಡ ಅಭಿವೃದ್ದಿ ಪ್ರಾಧಿಕಾರ, ಪುಟ: ೨೩

೨೬. ಕಮಲಾ ಹೆಮ್ಮಿಗೆ, ಆಭರಣಗಳು, ಕರಕುಶಲ ಕಲೆಗಳ ವಿಶ್ವಕೋಶ, ಪುಟ: ೧೦೪

೨೭. ಅದೇ. ಪುಟ:

೨೮. ಅದೇ. ಪುಟ: ೧೦೪

೨೯. ಅದೇ. ಪುಟ: ೧೦೪

೩೦. ಪ್ರೊ. ಅ. ಸುಂದರ, ಸಂ. ಕರ್ನಾಟಕ ಚರಿತ್ರೆ, ಸಂಪುಟ ೧, ಪುಟ: ೧೬೩

೩೧. ಅದೇ. ಪುಟ: ೧೭೭

೩೨. Ram Dhamija, 'Indian Jewllery' Image Indian Heritage of Indian Arts and Crafts P: 11

೩೩. ಕಮಲಾ ಹೆಮ್ಮಿಗಿ, ಆಭರಣಗಳು, ಕರಕುಶಲ ಕಲೆಗಳ ಕೋಶ, ಪುಟ: ೧೦೫

೩೪. ಪಿ.ಆರ್. ತಿಪ್ಪೇಸ್ವಾಮಿ, ಜನಪದ ಚಿತ್ರ ಮತ್ತು ಶಿಲ್ಪಕಲೆ ಚಿತ್ರ, ಸುವರ್ಣ ಜಾನಪದ, ಪುಟ: ೧೯೭

೩೫. ಅದೇ. ಪುಟ: ೧೯೨-೧೯೩

೩೬. ಅಂಬಳಿಕೆ ಹಿರಿಯಣ್ಣ ಕಚ್ಚೆ ಗೌಳಿಗರ ಸಂಸ್ಕೃತಿ, ಪುಟ: ೪೩

೩೭. ಹುಚ್ಚಪ್ಪ ಮಾಸ್ತರ, ಹಸಲರು, ಕರ್ನಾಟಕ ಬುಡಕಟ್ಟುಗಳು, ಸಂಪುಟ: ೧, ಪುಟ: ೧೨

೩೮. ಶಾಂತಿನಾಯಕ, ಗೊಂಡರು, ಕರ್ನಾಟಕ ಬುಡಕಟ್ಟುಗಳು, ಸಂಪುಟ: ೧, ಪುಟ: ೧೯೭

೩೯. ವಿವರಗಳಿಗೆ ಶಾಂತಿನಾಯಕರ ಗೊಂಡರು ಲೇಖನ ನೋಡುವುದು, ಕರ್ನಾಟಕ ಬುಡಕಟ್ಟುಗಳು, ಸಂ:೧

❄❄❄❄❄

ಅಧ್ಯಾಯ ೫

ಬುಡಕಟ್ಟು ಸಮುದಾಯ : ವೈವಿಧ್ಯಮಯ ಚಿತ್ರಕಲೆ

ಬುಡಕಟ್ಟು ಸಮುದಾಯ : ವೈವಿಧ್ಯಮಯ ಚಿತ್ರಕಲೆ

ಬುಡಕಟ್ಟು ಜನರ ಕಲಾಭಿವ್ಯಕ್ತಿಯನ್ನ ಅವರ ಸಮುದಾಯಗಳಲ್ಲಿ ಪರಂಪರೆಯಿಂದ ಬಂದ ಕೆಲವು ಚಿತ್ರಗಳಿಂದ ನೋಡಬಹುದು. ಈ ಚಿತ್ರಗಳು ನೆಲದ ಮೇಲಿನ, ಗೋಡೆಗಳ (ಭತ್ತಿ) ಮೇಲಿನ ಮತ್ತು ಗೃಹೋಪಯೋಗಿ ವಸ್ತುಗಳ ಮೇಲಿನ ಚಿತ್ರಗಳಾಗಿ ಕಾಣಸಿಗುತ್ತವೆ. ಇವು ಸಮುದಾಯದಿಂದ ಸಮುದಾಯಕ್ಕೆ ಭಿನ್ನತೆಯನ್ನು ಹೊಂದಿರುತ್ತವೆ; ಆದರೂ ಕೆಲವು ಚಿತ್ರಗಳ ವಿನ್ಯಾಸಗಳಲ್ಲಿ, ಹೋಲಿಕೆಗಳಲ್ಲಿ ಸಾಮ್ಯತೆ ಇರುವುದನ್ನು ಕಾಣಬಹುದು. ಅಂದರೆ ಮಹಾರಾಷ್ಟ್ರದ ವಾರ್ಲಿಚಿತ್ರಗಳಿಗೂ ಕರ್ನಾಟಕದ ಕಟ್ಟೆಗೌಳಿಗ, ಕುಣಬಿ, ದೀವರು, ಹಸಲರು ಮುಂತಾದವರ ಚಿತ್ರಗಳಲ್ಲಿ ಸಾಕಷ್ಟು ಹೋಲಿಕೆಯನ್ನು ನೋಡಬಹುದು. ಆದರೂ ಈ ಚಿತ್ರಗಳು ತನ್ನತನವನ್ನು ಹೊಂದಿವೆ. ಇವುಗಳನ್ನು ಪ್ರಾದೇಶಿಕ ಹಿನ್ನೆಲೆಯಿಂದ ನೋಡಿದಾಗ ಅವುಗಳ ಅನನ್ಯತೆ ಸ್ಪಷ್ಟವಾಗುತ್ತದೆ. ಹಾಗಾಗಿ ಈ ಚಿತ್ರಗಳು ಸಂಪೂರ್ಣವಾಗಿ 'ಆಚರಣೆ', 'ಸಂಪ್ರದಾಯ', 'ನಂಬಿಕೆ'ಗಳಲ್ಲಿ ಬೆರೆತಿವೆ. ಇವುಗಳಿಗೆ ಸಂಬಂಧಿಸಿದಂಥ ಚಿತ್ರಗಳ ತಾತ್ವಿಕ ಚರ್ಚೆಯನ್ನು ಅಧ್ಯಾಯ ೪ರಲ್ಲಿ ಈಗಾಗಲೇ ವಿವರಿಸಲಾಗಿದೆ.

ಈ ಅಧ್ಯಾಯದಲ್ಲಿ ಬುಡಕಟ್ಟು ಸಮುದಾಯಗಳ ಹಲವು ಬಗೆಯ ಚಿತ್ರಗಳನ್ನು ವಿವರಿಸಲಾಗಿದೆ. ಪ್ರತಿಯೊಂದು ಬುಡಕಟ್ಟಿನ ಚಿತ್ರಗಳನ್ನ ಪ್ರತ್ಯೇಕವಾಗಿ ಇಲ್ಲಿ ಚರ್ಚಿಸಲಾಗಿದೆ. ಈ ಚಿತ್ರಗಳ ಜೊತೆಗೆ ಚಿತ್ರಗಳನ್ನು ಹೊಂದಿರುವ ಮನೆ ಮನೆಯ ವಿಸ್ತೀರ್ಣಗಳು, ಅವುಗಳಿಗೆ ಸಂಬಂಧಿಸಿದ ಭೌತಿಕ ವಾತಾವರಣವನ್ನು ಇಲ್ಲಿ ಚರ್ಚಿಸಲಾಗುವುದು.

ಇಲ್ಲಿ ಅಧ್ಯಯನಕ್ಕೆ ಒಳಪಡುತ್ತಿರುವ ಬುಡಕಟ್ಟುಗಳ ಬದುಕು, ಜೀವನ ಸ್ಥಿತಿ ಒಂದೇ ತೆರನಾಗಿ ಇಲ್ಲ. ಅವು ಅವರವರ ಬದುಕು, ವೃತ್ತಿ ಮತ್ತು ಪ್ರಾದೇಶಿಕ ಹಿನ್ನೆಲೆಗೆ ಸಂಬಂಧಪಟ್ಟಿರುತ್ತವೆ. ಈ ಚಿತ್ರಗಳನ್ನು ಅಧ್ಯಯನಕ್ಕೆ ಒಳಪಡಿಸುವಾಗ ಇವುಗಳನ್ನು ಹೊರತುಪಡಿಸಿ ಅಧ್ಯಯನ ಮಾಡಲು ಆಗುವುದಿಲ್ಲ. ಬುಡಕಟ್ಟಿನ ಒಟ್ಟು ಬದುಕಿನ ಒಂದು ಭಾಗವಾಗಿ ಅವರ ಚಿತ್ರಕಲೆಯನ್ನ ಇಲ್ಲಿ ಅಧ್ಯಯನಕ್ಕೊಳಪಡಿಸಲಾಗಿದೆ. ಏಕೆಂದರೆ ಅವರ ಒಟ್ಟು ಸಾಮಾಜಿಕ ಆರ್ಥಿಕ ಬದುಕಿನ ಒಂದು ಭಾಗವಾಗಿಯೇ ಅಭಿವ್ಯಕ್ತಿ ಕ್ರಮವೂ ರೂಪಗೊಂಡಿರುತ್ತದೆ. ಇಲ್ಲಿ ಬುಡಕಟ್ಟು ಸಮುದಾಯಗಳು ಇರುವ ಭಿನ್ನ ಸ್ವರೂಪದ ಮನೆಗಳು, ಅವುಗಳ ವಿನ್ಯಾಸ, ಇರುವ ರೀತಿ, ಪ್ರದೇಶ, ಬಳಸುವ ವಸ್ತುಗಳು ಮುಂತಾದ ವಿಷಯಗಳು ಒಳಗೊಳ್ಳುತ್ತವೆ.

[illegible]

[illegible]

[illegible]

[illegible]

ಪ್ರತಿಯೊಂದು ಜೀವಿಯು ತನ್ನ ಅನುಕೂಲಕ್ಕೆ ತಕ್ಕಂತೆ ತಾನು ವಾಸಿಸುವ ಜಾಗಗಳನ್ನು ಕಟ್ಟಿಕೊಳ್ಳುವುದು ಸಾಮಾನ್ಯವಾಗಿರುತ್ತದೆ. ಇಲ್ಲವೆ ಹುಡುಕಿಕೊಳ್ಳುತ್ತದೆ. ಅದು ಅವುಗಳ ಅನುಕೂಲಕ್ಕೆ ಸಂಬಂಧಪಟ್ಟಿರುತ್ತದೆ. ಅದರಲ್ಲಿ ಒಳಿತು, ಕಲ್ಪನೆ, ಮುಖ್ಯವಾಗುತ್ತದೆ. ಏಕೆಂದರೆ ಇವು ಪ್ರಕೃತಿ ಜೀವಿಗಳು ಅಂತೆಯೇ ಸಂಪೂರ್ಣವಾಗಿ ಪ್ರಕೃತಿಯೊಂದಿಗೆ ಬದುಕುತ್ತಿರುವ ಬುಡಕಟ್ಟು ಸಮುದಾಯಗಳು ತಮ್ಮ ಪ್ರಾಕೃತಿಕ ಸಂಪನ್ಮೂಲಗಳನ್ನು ಬಳಸಿಕೊಂಡು ತಮಗೆ ಅಗತ್ಯವೆಷ್ಟೋ ಅಷ್ಟನ್ನು ಮಾತ್ರ ಉಪಯೋಗಿಸಿಕೊಂಡು ಬದುಕುತ್ತಿರುವುದನ್ನು ನೋಡಬಹುದಾಗಿದೆ.

ಬಹುತೇಕ ಬುಡಕಟ್ಟು ಸಮುದಾಯಗಳ ಮನೆಗಳು ಕಾಡಿನ ಮರಗಳು ಬಿದಿರು, ಬೆತ್ತಗಳ, ಹುಲ್ಲಿನ ಮನೆಗಳಾಗಿವೆ. ಈ ಮನೆಗಳು ಸಂಪೂರ್ಣವಾಗಿ ಉಪಯೋಗಕ್ಕೆ ಬಂದ ಮರದ ರಂಬೆಕೊಂಬೆಗಳ ತುಂಡನ್ನು ಬಳಸಿ ಕಟ್ಟಿದ ಮನೆಗಳು ದಪ್ಪ ದಿಮ್ಮಿಗಳಿಂದ ತಮಗೆ ಬೇಕಾದ ವಿನ್ಯಾಸಗಳಲ್ಲಿ ಕೊಯ್ಯಿಸಿ ಕಟ್ಟಿಸಿದ ಮರಗಳಲ್ಲ. ಅವುಗಳ ಬಗ್ಗೆ ಇವರಿಗೆ ಯಾವುದೇ ರೀತಿಯ ಆಕಾಂಕ್ಷೆಯೂ ಇಲ್ಲ. ಇದು ಅವರ ಮನೆ ಲಕ್ಷಣ ಮತ್ತು ಮನಸ್ಸಿನ ಲಕ್ಷಣದಿಂದ ಗೊತ್ತಾಗುತ್ತದೆ. ಇದು ಅವರ ವರ್ತನೆ ಮತ್ತು ಬದುಕಿನಿಂದ ಗೊತ್ತಾಗುತ್ತದೆ. ಅನಗತ್ಯ ಆಸೆಗಳಿಲ್ಲದೆ ಆಹಾರವನ್ನು ಯಾವುದಾದರೂ ಮೂಲದಿಂದ ಹುಡುಕುತ್ತಾ ಸರಳವಾದ ಬದುಕು ನೂಕುತ್ತಾ ಬಂದಿದ್ದಾರೆ. ಇವರ ಮನೆಗಳು ಇವರಿಗೆ ಆತ್ಮೀಯತೆಯನ್ನು ತೃಪ್ತಿಯನ್ನು ತಂದುಕೊಟ್ಟರೆ ಸಾಕು. ಪ್ರಾಕೃತಿಕ ಅನುಕೂಲಕ್ಕೆ ತಕ್ಕಂತೆ ಹೊಂದಿಕೊಂಡು ಮಾಡುವ ಬದುಕು ಇವರದಾಗಿದೆ. ಇವರು ಬದುಕುವ ಕಾಡು ಇವರದೇ ಪ್ರಪಂಚವಾಗಿತ್ತು. ಹಾಗಾಗಿ ಎಲ್ಲೂ ನೆಲೆ ನಿಲ್ಲದೆ ಕಾಡಿನಲ್ಲಿ ಅಲೆಯುತ್ತಾ ಮನೆಗಳನ್ನು ಗುಂಪು ಗುಂಪಾಗಿ ಬದಲಾಯಿಸುತ್ತಾ, ಇಂದು ಅವು ಅಲ್ಲಲ್ಲಿ ನೆಲೆನಿಂತು ಪೋಡು, ಹಾಡಿ, ವಾಡಗಳಲ್ಲಿ ನೆಲೆಸಿದ್ದಾರೆ.

೧. **ಸೋಲಿಗರು :** ಸೋಲಿಗರ ಮನೆಗಳ ವಿನ್ಯಾಸ, ವಿಸ್ತೀರ್ಣಗಳು ಬಹಳ ವಿಶಿಷ್ಟವಾಗಿವೆ. ಈ ಮನೆಗಳು ತಮ್ಮ ಅಗತ್ಯ ವಿಸ್ತೀರ್ಣವನ್ನು ಮಾತ್ರ ಹೊಂದಿವೆ. ಇವು ಬಹಳ ಚಿಕ್ಕ ಮನೆಗಳು ಅಂದರೆ ಗುಡಿಸಲುಗಳು ಈ ಮನೆಯ ಒಳಗೆ ಎರಡು ಭಾಗವಾಗಿದ್ದು ಮನೆಯ ಒಳಭಾಗದಲ್ಲಿ ಅಡುಗೆಯನ್ನು ಮಾಡಿಕೊಳ್ಳುತ್ತಾರೆ. ಮತ್ತೊಂದರಲ್ಲಿ ಮಲಗಲು ಉಪಯೋಗಿಸುತ್ತಾರೆ. ಇವರ ಮತ್ತೊಂದು ವಿಶೇಷವೆಂದರೆ ಪ್ರತ್ಯೇಕವಾದಂಥ ಸಂಸಾರವನ್ನು ನಡೆಸುವುದು. ಇವರಲ್ಲಿ ಅವಿಭಕ್ತ ಕುಟುಂಬ ಪದ್ಧತಿ ಇಲ್ಲ. ಪ್ರತಿಯೊಂದು ಸಂಸಾರವೂ ಪ್ರತ್ಯೇಕವಾಗಿ ಬದುಕು ನಡೆಸುತ್ತವೆ. ಅಂತೆಯೇ ಇವರಲ್ಲಿ ಶಿಷ್ಟಾಚಾರ ಬಹಳ. ಇದು ಪ್ರತಿಯೊಂದು ಬಡುಕಟ್ಟು ಸಮುದಾಯಗಳಲೂ ಇರುವಂತಹದ್ದೇ. ಇವರು ತಮ್ಮ ಮನೆಯ ಒಳಗೆ ತಮ್ಮ ಸಮುದಾಯದವರನ್ನು ಬಿಟ್ಟರೆ ಬೇರಯವವರನ್ನ ಸೇರಿಸುವುದಿಲ್ಲ. ಮಡಿ ಮೈಲಿಗೆಯಲ್ಲಿ ಕಟ್ಟುನಿಟ್ಟಿನ ಬದುಕನ್ನು ನೆಡಸುತ್ತಿದ್ದಾರೆ. ಸೋಲಿಗರ ಮಾದರಿಯ ಮನೆಗಳನ್ನು ಅವರ ಸಾಂಸ್ಕೃತಿಕ ವಿಶೇಷತೆಗಳನ್ನು ಕಾಡಿನ ಒಳಗೆ ಇರುವ ಪೋಡುಗಳಲ್ಲಿ ಕಾಣಬಹುದು.

ಸೋಲಿಗರ ಮನೆಗಳ ರೀತಿ : ಸೋಲಿಗರ ಮನೆಗಳು ಮರಗಳ ಸಣ್ಣ ಕೊಂಬೆಗಳನ್ನು ಸೀಳಿ ತಮ್ಮ ಅಳತೆಗೆ ತಕ್ಕಂತೆ ಕತ್ತರಿಸಿ ತಡಿಕೆಯಾಕೃತಿಯಲ್ಲಿ ಗೋಡೆಗಳನ್ನು ನಿರ್ಮಿಸಿ ಕಟ್ಟಿದ ಮನೆಗಳಾಗಿರುತ್ತವೆ. ಇವರ ಮನೆಗಳನ್ನು ಮಣ್ಣಿನಿಂದಾಗಲಿ, ಕಲ್ಲಿನಿಂದಾಗಲಿ ಅಥವಾ ಇಟ್ಟಿಗೆಯಿಂದಾಗಲಿ ಕಟ್ಟಿರುವುದು ಕಂಡುಬಂದಿಲ್ಲ. ಇವುಗಳ ಬಳಕೆ ಅವರಿಗೆ ಗೊತ್ತಿಲ್ಲ. ಇತ್ತೀಚಿಗೆ ಕೆಲವರಿಗೆ ಮಣ್ಣು, ಕಲ್ಲುಗಳಿಂದ ಕಟ್ಟಿದ ಮನೆಗಳ ಪರಿಚಯವಾಗಿದ್ದರೂ ಬೆರಳಣಿಕೆಯಷ್ಟು ಮಾತ್ರ. ಹಾಗಾಗಿ ಹೆಚ್ಚಿನ ಮನೆಗಳು ಕಟ್ಟಿಗೆಗಳಿಂದ ನಿರ್ಮಿತವಾಗಿದ್ದು, ಅವು ಪ್ರಕೃತಿಯ ಒಂದು ಭಾಗವಾಗಿ ಇರುವಂತೆ ತೋರುತ್ತವೆ. ಪ್ರಕೃತಿಯೊಂದಿಗೆ ಬದುಕುತ್ತಿರುವ ಇವರು ಅದಕ್ಕಿಂತ ಭಿನ್ನವಾಗಿ ಇರಲು ಇಷ್ಟಪಡುವುದಿಲ್ಲ!

ಕಟ್ಟಿಗೆಯಿಂದ ನಿರ್ಮಿಸಿದ ಗೋಡೆಗಳ ಮೇಲ್ಮೈಗೆ ಮಣ್ಣಿನ ಲೇಪನವನ್ನು ಮಾಡಿಕೊಳ್ಳುತ್ತಾರೆ. ಇದು ಸಾರ್ವತ್ರಿಕವಾಗಿ ಇರುವುದಿಲ್ಲ. ಅವರವರ ಇಚ್ಛೆಗೆ ಅನುಸಾರವಾಗಿ ನಿರ್ಮಾಣವಾಗಿರುತ್ತವೆ. ಮಾತ್ರ ಕೆಲವರು ಕಟ್ಟಿಗೆಯ ಗೋಡೆಯ ಒಳ ಮತ್ತು ಹೊರಭಾಗಕ್ಕೆ ಮಣ್ಣನ್ನು ಹಾಕಿದರೆ ಮತ್ತೆ ಕೆಲವರು ಒಂದು ಭಾಗಕ್ಕೆ ಮಣ್ಣನ್ನು ಹಾಕುತ್ತಾರೆ. ಇಲ್ಲವೆ ಹಾಗೆಯೇ ಇರುವುದು ಉಂಟು. ಹೀಗೆ ಅವರವರ ಅನುಕೂಲಕ್ಕೆ ತಕ್ಕಂತೆ ಪರಿಸರಕ್ಕನುಗುಣವಾಗಿ ಮನೆಗಳನ್ನು ಕಟ್ಟಿಕೊಂಡು ಅಲಂಕರಿಸುತ್ತಾರೆ. ಇವರು ಕಟ್ಟಿಗೆಗಳಿಗೆ ಮಣ್ಣನ್ನು ಹಾಕದಿರುವುದಕ್ಕೆ ಕೆಲವು ಕಾರಣಗಳನ್ನು ಕೊಡುತ್ತಾರೆ. ಅದೇನೆಂದರೆ ಹಗಲಲ್ಲಿ ಮನೆಯ ಒಳಗಿನಿಂದ ಮನೆಯ ಹೊರಗಿನದನ್ನು ನೋಡಬಹುದು. ಆದರೆ ಹೊರಗಿನಿಂದ ಮನೆಯ ಒಳಗಿನದನ್ನು ನೋಡಲು ಆಗುವುದಿಲ್ಲ. ಇದು ಅವರ ಮನೆಗಳ ಸರಳ ತಾಂತ್ರಿಕತೆ. ಕಾಡಿನಲ್ಲಿ ಇವರಿಗೆ ಕಾಡ- ಪ್ರಾಣಿಪಕ್ಷಿಗಳ ಜೊತೆಯಲ್ಲಿ ಬದುಕು ನಡೆಸಬೇಕಾಗುತ್ತದೆ. ಅವುಗಳಿಂದ ರಕ್ಷಣೆಗೆ ಮತ್ತು



ಸೋಲಿಗರ ಮನೆ ಮಾದರಿ



ಮುಂಜಾಗ್ರತೆಗೆ ತಕ್ಕಂತೆ ಇವರ ಮನೆಗಳು ಇರುತ್ತವೆ. ಜೊತೆಗೆ ಇವರು ಒಂದು ಕಡೆ ನೆಲೆನಿಂತು ಬದುಕು ನಡೆಸಿದವರಲ್ಲ. ಕಾಡಿನಲ್ಲಿ ಅನಕೂಲ ಇದ್ದ ಕಡೆಗಳಲೆಲ್ಲಾ ಸಂಚರಿಸುತ್ತಾ ಬದುಕು ನಡೆಸುತ್ತಾ ಬಂದವರಾಗಿದ್ದಾರೆ. ಹಾಗಾಗಿ ಇವರ ಮನೆಯ ವಿನ್ಯಾಸಗಳು ಮತ್ತು ಮನೆಯ ವಸ್ತುಗಳು ಅಗತ್ಯವನ್ನು ಮೀರಿ ಇರುವುದಿಲ್ಲ. ಇದು ಹಿಂದೆ ಇದ್ದ ಬುಡಕಟ್ಟುಗಳ ಸ್ಥಿತಿ, ಇಂದು ಸಾಕಷ್ಟು ಬದಲಾಗಿದೆ. ಇಂದು ಅನಿವಾರ್ಯ ಕಾರಣಗಳಿಂದ ಒಂದು ಕಡೆ ನೆಲೆ ನಿಲ್ಲಬೇಕಾಗಿದೆ. ಕಾಡು ಕಾನೂನಿನ ನಿಯಂತ್ರಣದಲ್ಲಿರುವ ಇಂದಿನ ಸಂದರ್ಭದಲ್ಲಿ ಕಾಡಿನಲ್ಲಿ ಸ್ವತಂತ್ರ್ಯವಾಗಿ ಬದುಕುವ ಹಕ್ಕನ್ನು ಕಳೆದುಕೊಂಡಿದ್ದಾರೆ.

ಸೋಲಿಗರು ಬಳಸುವ ಬಣ್ಣ : ಮಣ್ಣನ್ನು ಹಾಕಿದ ಗೋಡೆಗಳಿಗೆ ತಮ್ಮದೇ ಆದಂಥ ಸಾರ್ವತ್ರಿಕ ಬಣ್ಣವನ್ನ ಇವರು ಹಾಕುತ್ತಾರೆ. ಇವರಲ್ಲಿ ಬಣ್ಣದ ಕಲ್ಪನೆ ವಿಶೇಷವಾಗಿಯೇ ಇದೆ. ಗೋಡೆಗೆ ಬಣ್ಣ ಹಾಕುವುದು ಸೌಂದರ್ಯದ ಕಲ್ಪನೆಯಿಂದಲೇ. ಈ ಬಣ್ಣವನ್ನು ತಮ್ಮ ಪರಿಸರದಿಂದಲೇ ಸಿಗುವ ಬಣ್ಣಗಳ ಮಣ್ಣಿನಿಂದ ಬಳಸುತ್ತಾರೆ. ಅದರಲ್ಲೂ ಗೋಡೆಗೆ ಕೆಮ್ಮಣ್ಣು, ತಿಳಿಹಳದಿ ಮಣ್ಣು, ಬೂದಿಮಣ್ಣನ್ನು ಹಾಕುತ್ತಾರೆ. ಇವು ತಮ್ಮ ಪೋಡುಗಳ ಸುತ್ತಮುತ್ತ ಸಿಗುವ ಮಣ್ಣು ಆಗಿರುತ್ತದೆ. ಇಲ್ಲವೆ ಸಿಗುವ ಜಾಗಕ್ಕೆ ಹುಡುಕಿಕೊಂಡು ಹೋಗಿತರುತ್ತಾರೆ. ಇದನ್ನು ಗೋಡೆಗೆ ಹಾಕುವ ಮುನ್ನ ಚೆನ್ನಾಗಿ ಸ್ವಚ್ಛಮಾಡಿ, ಹದಗೊಳಿಸಿ ಆನಂತರ ಗೋಡೆಗೆ ಹಾಕುತ್ತಾರೆ.



ಸೋಲಿಗರು ಗೋಡೆಗಳಿಗೆ ಬಳಸುವ ಬಣ್ಣ

ಸೋಲಿಗರು ಸಂಪ್ರದಾಯಗಳ ಜೊತೆಯಲ್ಲಿ ಬದುಕಿದವರು. ಆಚರಣೆಯನ್ನು ಬದುಕಲ್ಲಿ ರೂಢಿಸಿಕೊಂಡವರು. ಒಂದು ಕಡೆ ನೆಲೆನಿಂತ ಮೇಲೆ ವ್ಯವಸಾಯವನ್ನು ಮಾಡುತ್ತಿದ್ದಾರೆ. ಇವರು ಕೆತ್ತನೆಯ ಬೇಸಾಯ ಪದ್ಧತಿಯನ್ನು ಮಾಡುತ್ತಿದ್ದಾರೆ. ಇದು ಇನ್ನೂ ರೂಢಿಯಲ್ಲಿದೆ. ಈ ವ್ಯವಸಾಯಕ್ಕೆ ಸಂಬಂದಪಟ್ಟಂತೆ ಹಲವು ಹಬ್ಬಗಳನ್ನು ಆಚರಿಸುತ್ತಾರೆ. ಅವುಗಳಲ್ಲಿ ಹೊಸದಾಗಿ ಹಬ್ಬ, ರೊಟ್ಟಿಹಬ್ಬ, ಮುನಿಮಾಡುವುದು ವಿಶೇಷವಾಗಿವೆ. ಈ ಹಬ್ಬಗಳಲ್ಲಿ ಮನೆಯನ್ನು ಸಾರಿಸಿ ಮಡಿಬಟ್ಟೆಯನ್ನು ಧರಿಸಿ



ಮನೆಯ ಅಲಂಕಾರಕ್ಕೆ 'ರಂಗೋಲಿ'ಯನ್ನು ಹಾಕುತ್ತಾರೆ. ಹಾಗೆಯೇ ಇವರು ವಿಶೇಷವಾಗಿ ಸಂಕಮ್ಮನ ಹಬ್ಬವನ್ನು ಮಾಡುತ್ತಾರೆ. "ಸಂಕಮ್ಮ ಸೋಲಿಗರ ಬುಡಕಟ್ಟಿನ 'ತಾಯಿ' ಎಂಬುದು ಪುರಾಣಗಳಿಂದ ವ್ಯಕ್ತವಾಗುತ್ತದೆ. ಒಂದು ಕಾಲದಲ್ಲಿ ಬದುಕುತ್ತಿದ್ದ ವ್ಯಕ್ತಿ ವಿಶಿಷ್ಟವಾದ ರೀತಿಯ ಬದುಕನ್ನು ರೂಢಿಸಿಕೊಂಡಿದ್ದರ ಪರಿಣಾಮವಾಗಿ ಪೌರಾಣಿಕ ವ್ಯಕ್ತಿಯನ್ನಾಗಿ ಪರಿಗಣಿಸುತ್ತಾರೆ."[೧] ಈ ಸಂಕಮ್ಮನ ಹಬ್ಬದಲ್ಲಿ ಇವರು ಗೋಡೆಗಳ ಮೇಲೆ ಶಂಕ, ಜಾಗಟೆ, ಚಿತ್ರಗಳನ್ನು ಬರೆಯುತ್ತಾರೆ."[೨] ಈ ಚಿತ್ರಗಳು ಬಿಳಿಗಿರಿ ರಂಗನಬೆಟ್ಟ, ಮಲೆಮಾದೇಶ್ವರ ಬೆಟ್ಟದ ಕಾಡುಗಳ ಆಸುಪಾಸಿನಲ್ಲಿ ವಾಸಿಸುವ ಸೋಲಿಗರ ಪೋಡುಗಳಲ್ಲಿ ಕಾಣಸಿಗುತ್ತವೆ.

ಪ್ರಾಣಿ ಪಕ್ಷಿಗಳ ಚಿತ್ರಗಳು : ಇವರ ಚಿತ್ರಗಳಲ್ಲಿ ಬಿಳಿಗಿರಿ ರಂಗನಾಥ, ಮಲೆಮಾದೇಶ್ವರ ದೇವರ ಪ್ರಭಾವವನ್ನು ಕಾಣಬಹುದು. ಈ ದೇವರುಗಳ ಆರಾಧಕರೂ ಆಗದಿದ್ದಾರೆ. ಮಲೆಮಾದೇಶ್ವರ ಬೆಟ್ಟದಲ್ಲಿ ವಾಸಿಸುವ ಸೋಲಿಗರು ತಮ್ಮ ಮನೆದೇವರನ್ನು ಮಲೆಮಾದೇಶ್ವರ ಅಂತ ಹೇಳಿಕೊಳ್ಳುತ್ತಾರೆ. ಇವರ ಮನೆಯ ಗೋಡೆಗಳ ಮೇಲೆ ಮಲೆಮಾದೇಶ್ವರನ ವಾಹನ ಹುಲಿಯ ಚಿತ್ರವನ್ನು ಬರೆಯುತ್ತಾರೆ. ಈ ಹುಲಿಯ ಚಿತ್ರವು ಒಂದು ರೀತಿಯಲ್ಲಿ ಭಕ್ತಿಯ ನೆಲೆಯಾದರೆ ಮತ್ತೊಂದು ರೀತಿಯಲ್ಲಿ ಈ ಪ್ರಾಣಿಯು ಇವರಿಗೆ ಪ್ರಭಾವಿಸಿದೆ. ತಾವು ನೋಡುವ ಪ್ರಾಣಿಗಳಲ್ಲಿ ಹುಲಿಯು ಭಯಂಕರ ಅನ್ನಿಸಿದ್ದರಿಂದ ಹುಲಿಯ ಚಿತ್ರವನ್ನು ಬರೆಯುತ್ತಿರಬಹುದು. ಜೊತೆಗೆ ಅದಕ್ಕೆ ವಿರುದ್ಧವಾದಂಥ ಮೃದು ಸ್ವಭಾವದ ಸುಂದರವಾದ ನವಿಲು ಪಕ್ಷಿಯೂ ಸಾಕಷ್ಟು ಪ್ರಭಾವಿಸಿದೆ. ಹಾಗಾಗಿ ಇವರ ಚಿತ್ರಗಳಲ್ಲಿ ಹೆಚ್ಚಾಗಿ ನವಿಲು ಚಿತ್ರಗಳು ಕಂಡುಬರುತ್ತವೆ. ಬಿಳಿಗಿರಿರಂಗನ ಬೆಟ್ಟದಲ್ಲಿ ನವಿಲು ಹೆಚ್ಚಾಗಿ ಇರುವುದರಿಂದ ಇವರ ಮನಸ್ಸಿನ ಮೇಲೆ ಅದು ಅಭಿವ್ಯಕ್ತಗೊಳ್ಳುವ ರೀತಿಯಲ್ಲಿ ಪ್ರಭಾವಿಸಿರಬೇಕು. ನವಿಲನೃತ್ಯವನ್ನು ಇವರು ಹೆಚ್ಚು ನೋಡಿರುವುದರಿಂದ ನವಿಲು ಇವರಿಗೆ ಆಕರ್ಷಿಸಿರಬಹುದು. ಹಾಗಾಗಿ ಇವರ ಚಿತ್ರಗಳಲ್ಲಿ ನವಿಲು ಚಿತ್ರಗಳು ಹೆಚ್ಚಾಗಿ ಕಾಣಿಸುತ್ತವೆ.



ಗೋಡೆಯ ಮೇಲಿನ ಹುಲಿಯ ಚಿತ್ರ

ಪಕ್ಷಿ ಚಿತ್ರಗಳು ಜೊತೆಗೆ ಕಾಡುಪ್ರಾಣಿಗಳಾದ ಆನೆ, ಹಂದಿ ಇನ್ನು ಮುಂತಾದ ಕಾಡುಪ್ರಾಣಿಗಳ ಚಿತ್ರಗಳು ಸಹ ಇವರಲ್ಲಿ ಅಭಿವ್ಯಕ್ತಗೊಂಡಿವೆ. ಇವು ಬೆಳೆದ ಬೆಳೆಗಳನ್ನು ಹಾಳುಮಾಡುವಂತಹ ಪ್ರಾಣಿಗಳು. ಕೃಷಿ ಬದುಕನ್ನು ಹೊಂದಿರುವ ಸೋಲಿಗ ಎಚ್ಚರವನ್ನು ವಹಿಸುತ್ತಲೇ ಇರುತ್ತಾನೆ. ಇವುಗಳನ್ನು ಕಾಯಲು ಮರಗಳ ಮೇಲೆ ಮನೆಯನ್ನು ಮಾಡಿಕೊಂಡು, ರಾತ್ರಿಯ ಸಮಯ ಅಲ್ಲಿ ಬೆಂಕಿಯನ್ನು ಹಾಕಿಕೊಂಡು ಇರುತ್ತಾನೆ. ಬೆಳೆಯನ್ನು ಸಂಪೂರ್ಣವಾಗಿ ತೆಗೆದುಕೊಳ್ಳುವವರೆಗೂ ತನ್ನ ರಕ್ಷಣೆಗೂ ಬೆಂಕಿ ಮತ್ತು ಮರಗಳ ಮೇಲಿನ ಮನೆಯನ್ನು ಹಾಕಿಕೊಳ್ಳುತ್ತಾನೆ. ಈ ಸಂದರ್ಭಗಳಲ್ಲಿ ಪ್ರಾಣಿಗಳನ್ನು ಕಲೆಯ ರೂಪವಾಗಿ ಅಭಿವ್ಯಕ್ತವಾಗುತ್ತವೆ. ಹಾಗಾಗಿ ಅವರು ಬರೆಯುವ ಚಿತ್ರಗಳು ಆಕರ್ಷಣಿಯವಾಗಿರುತ್ತವೆ. ಮತ್ತು ವಾಸ್ತವವಾಗಿರುತ್ತವೆ. ಇದೇ ಹುಲಿ, ಆನೆ, ಹಂದಿ, ಹಾವು, ನವಿಲು ಮುಂತಾದ ಚಿತ್ರಗಳನ್ನು ನಗರದವರು ಬರೆದಾಗ ಅವು ಅಷ್ಟು ಪ್ರಖರವಾಗಿ ಕಂಡುಬರುವುದಿಲ್ಲ. ಕಾರಣ ಯಾವುದೇ ಪಕ್ಷಿಗಳನ್ನು, ಪ್ರಾಣಿಗಳನ್ನು ನೋಡಿ ಬರೆಯುವುದಕ್ಕೂ, ಪ್ರಾಣಿಗಳ ಚಿತ್ರಗಳನ್ನೂ ನೋಡಿ ಬರೆಯುವುದಕ್ಕೂ ಸಾಕಷ್ಟು ವ್ಯತ್ಯಾಸ ಕಂಡುಬರುತ್ತದೆ. ಇಲ್ಲಿ ನೇರದೃಷ್ಟಿಯ ಚಿತ್ರಗಳು ಬುಡಕಟ್ಟು ಚಿತ್ರಗಳಲ್ಲಿ ಕಾಣುತ್ತವೆ. ಈ ಚಿತ್ರಗಳು ಸೋಲುಗರಲ್ಲಿ ವಿಶೇಷವಾಗಿ ಇವೆ.



ಗೋಡೆಯ ಮೇಲಿನ ಪ್ರಾಣಿಗಳ ಚಿತ್ರಗಳು

ಪ್ರಾಣಿಪಕ್ಷಿಗಳ ಚಿತ್ರಗಳ ಜೊತೆಯಲ್ಲಿ ಹೂವಿನ ಚಿತ್ರಗಳು ಮರಗಳ, ಗಿಡಗಳ ಬಳ್ಳಿಗಳ, ಹೂವಿನ, ಕೊಳಗಳ ಚಿತ್ರಗಳು ಇವರ ಗೋಡೆಗಳ ಮೇಲೆ ಕಾಣುತ್ತವೆ. ಹೂವಿನ ಚಿತ್ರಗಳಲ್ಲಿ ಕಮಲದ ಹೂವು ವಿಶೇಷವಾಗಿ ಇವೆ. ಸೋಲಿಗರ ಪ್ರತಿಯೊಬ್ಬರ ಮನೆಯಲ್ಲೂ ಒಂದು ಕೋಳಿಗೂಡು ಇರುವುದು ಸರ್ವಸಾಮಾನ್ಯ. ಈ ಕೋಳಿಗೂಡನ್ನು ತುಂಬಾ ಕಲಾತ್ಮಕವಾಗಿ ಕಟ್ಟಿರುತ್ತಾರೆ. ಕೋಳಿಗಳ ಸಂಪರ್ಕ ಹೆಚ್ಚಿರುವ ಇವರು ತಮ್ಮ ಗೋಡೆಗಳ ಮೇಲೆ ಕೋಳಿಯ ಚಿತ್ರಗಳನ್ನು ವಿಶೇಷವಾಗಿ ಬರೆಯುತ್ತಾರೆ.

[illegible]

[illegible]

[illegible]

ಗೋಡೆಯ ಕೆಳಅಂಚಿನಲ್ಲಿ ಜಾಮಿತಿಯಾಕಾರವನ್ನು ಬಳಸಿಕೊಂಡ ಹೂವುಗಳ ಬಳ್ಳಿಗಳ ಚಿತ್ರಗಳನ್ನು ಬರೆದಿರುವುದು ನೋಡಬಹುದು.




ಸೋಲಿಗರು ಬರೆದ ನವಿಲಿನ ಚಿತ್ರ

ಇಲ್ಲಿಯ ಬಹುತೇಕ ಚಿತ್ರಗಳು ತಮ್ಮ ಭಾವಾಭಿವ್ಯಕ್ತಿಯ ನಿಸರ್ಗ ಕಲ್ಪನೆಯ ಚಿತ್ರಗಳಾಗಿ ಕಾಣಿಸುತ್ತವೆ. ಈ ಚಿತ್ರಗಳಲ್ಲಿ ವಾಸ್ತುಪ್ರಾಣಿಗಳು ಇರುತ್ತವೆ. ನಿಸರ್ಗಪ್ರಿಯತೆ ಇರುತ್ತದೆ. ಪ್ರಕೃತಿ ಪ್ರೇಮವನ್ನು ಹೊಂದಿರುತ್ತದೆ. ಈ ಎಲ್ಲಾ ಅಂಶಗಳು ಬುಡಕಟ್ಟಿನ ಚಿತ್ರಗಳಲ್ಲಿ ಇರುತ್ತವೆ. ಈ ಚಿತ್ರಗಳು ತಿಳಿಬಣ್ಣಗಳಿಂದ ಕೂಡಿರುತ್ತವೆ. ತಿಳಿಬಣ್ಣದ ಗೋಡೆಯ ಮೇಲೆ ಕೆಂಪು ಊರುಮಂಜು ಬಣ್ಣವನ್ನು ಬಳಸಿ ಚಿತ್ರಗಳನ್ನು ಬರೆಯುವುದು ಕಾಣುತ್ತದೆ. ಇದು ಬಂಡ್ಸ್‌ಸೇನಾ ಬಣ್ಣ ಹೋಲುವಂತೆ ಇರುತ್ತದೆ.

ಜಡೇಸ್ವಾಮಿ ಹಬ್ಬದ ಚಿತ್ರ : ಸೋಲಿಗರ ಮತ್ತೊಂದು ಹಬ್ಬ ಜಡೇಸ್ವಾಮಿ ಹಬ್ಬ. ಈ ಹಬ್ಬದಲ್ಲಿ ಮನೆಯ ಮುಂದಿನ ಅಂಗಳದ ನೆಲದ ಮೇಲೆ ತೇರಿನ ಚಿತ್ರವನ್ನು ಬರೆಯುತ್ತಾರೆ. ಹಬ್ಬದ ಸಂದರ್ಭ ಬರೆಯುವ ಈ ಚಿತ್ರವನ್ನು ಎಲ್ಲರೂ ಸಾರ್ವತ್ರಿಕವಾಗಿ ಬರೆಯಬೇಕು ಎಂಬ ನಿಯಮವಿಲ್ಲ. ಅದು ಅವರವರ ಇಚ್ಛೆಗೆ ಅನುಸಾರವಾಗಿ ಬರೆಯಬಹುದು. ಬಿಳಿಗಿರಿರಂಗನ ಬೆಟ್ಟದ ಹಾಗೂ ಮಲೆಮಾದೇಶ್ವರ ಬೆಟ್ಟದಲ್ಲಿ ನಡೆಯುವ ಜಾತ್ರೆಯ ಸಂದರ್ಭದ ತೇರಿನ ಚಿತ್ರ ಇದಾಗಿರುತ್ತದೆ. ಈ ತೇರಿನ ಚಿತ್ರವನ್ನು ಜಡೆಸ್ವಾಮಿ ಹಬ್ಬದಲ್ಲಿ ಪೋಡಿನವರೆಲ್ಲಾ ಒಂದೆಡೆ ಕೂಡಿ ಬರೆಯುತ್ತಾರೆ."[೩]

ರೊಟ್ಟಿ ಹಬ್ಬದ ಚಿತ್ರಗಳು : ಹಬ್ಬಗಳಲ್ಲಿಯೆ ರೊಟ್ಟಿ ಹಬ್ಬ ವಿಶೇಷವಾದದು. ಇದು ಸೋಲಿಗರ "ಸಾಮೂಹಿಕವಾದ ಹಬ್ಬ ಇದನ್ನು 'ರೊಟ್ಟಿಪೂರ' ಎಂದು ಕರೆಯುತ್ತಾರೆ. ಇದು ಸೋಲಿಗರಲ್ಲಿ ಮಾತ್ರ ವಿಶೇಷವಾಗಿ ಕಂಡುಬರುತ್ತದೆ. ಆಚರಿಸುವ ಪ್ರದೇಶ ಸ್ಥಳೀಯ ದೇವತೆಯ ಗುಡಿಯ ಮುಂಬಾಗ,

[illegible]



[illegible]

[illegible]

ಸಾಮಾನ್ಯವಾಗಿ ಈ ಹಬ್ಬವನ್ನು ಸಂಕ್ರಾಂತಿ ತಿಂಗಳು ಆಚರಿಸುವವರು. ಇದಕ್ಕೆ ಕಾರಣವೆಂದರೆ ಅವರು ಸಾಮೂಹಿಕವಾಗಿ ಒಂದು ಗೂಡಲು ಅನುಕೂಲಕರವಾದ ಕಾಲ ಅದು. ಜೊತೆಗೆ ಅವರಿಗೆ ಅದು ಸುಗ್ಗಿ ಕಾಲ. ಅದೇ ಆಗ ಅವರು ವರ್ಷದಲ್ಲಿ ಬೆಳೆದ ಬೆಳೆ ಕೈಸೇರಿರುತ್ತದೆ. ಮುಂದಿನ ಮುಂಗಾರು ಬೀಳುವವರೆಗೆ ಈ ಜನರಿಗೆ ಬಿಡುವ ದೊರೆಯುತ್ತದೆ. ಈ ಸನ್ನಿವೇಶದಲ್ಲಿ ಒಂದು ಹುಣ್ಣಿಮೆಯ ದಿನ ಈ ಹಬ್ಬವನ್ನು ಸಾಮೂಹಿಕವಾಗಿ ಆಚರಿಸುತ್ತಾರೆ."[೪] ಈ ಹಬ್ಬವು ತಾವು ಬೆಳೆದ ದವಸಧಾನ್ಯದ ಪ್ರತಿಫಲವಾಗಿ ಇರುತ್ತದೆ. ಈ ಹಬ್ಬದಲ್ಲಿ ರೊಟ್ಟಿಯನ್ನು ಹಂಚಿ ತಿನ್ನುವುದು ಪದ್ಧತಿ. ಪ್ರತಿಯೊಬ್ಬರ ಮನೆಯಿಂದಲೂ ರೊಟ್ಟಿಯನ್ನು ಹಾಕಿಕೊಂಡು ಬಂದು ಪೋಡಿನ ಎಲ್ಲಾ ಜನ ಒಂದೆಡೆ ಸೇರಿ ರೊಟ್ಟಿಗಳನ್ನು ತಿನ್ನುತ್ತಾರೆ. ಈ ಹಬ್ಬದಲ್ಲಿ ರೊಟ್ಟಿಯನ್ನು ಹಂಚಿ ತಿನ್ನುವ ಮೊದಲ ತಾವು ಸೇರುವ ಜಾಗವನ್ನು ಚೆನ್ನಾಗಿ ಗುಡಿಸಿ, ಸ್ವಚ್ಛಮಾಡಿ, ಸಾರಿಸಿ, ಆನಂತರ ರಂಗೋಲಿಯನ್ನು ಬಿಡಿಸುತ್ತಾರೆ. ಇಂತಹ ರಂಗೋಲಿ ಚಿತ್ರವನ್ನೇ ಬರೆಯಬೇಕು ಇಂತವರೇ ರಂಗೋಲಿಯನ್ನು ಬಿಡಿಸಬೇಕು ಅಂತ ನಿಯಮವಿಲ್ಲ. ತಮ್ಮ ಮನಸ್ಸಿನ ಭಾವನೆಯಲ್ಲಿರುವ ಚಿತ್ರ ಮೂಡುತ್ತದೆಯೋ ಆಚಿತ್ರವನ್ನು ಬರೆಯುತ್ತಾರೆ. ಇಲ್ಲಿ ಮನುಷ್ಯನ ಚಿತ್ರ ಹೆಣ್ಣು-ಗಂಡುಗಳ ಚಿತ್ರ, ಮರಗಿಡ, ಬಳ್ಳಿಗಳ ಚಿತ್ರ, ಪ್ರಾಣಿಪಕ್ಷಿಗಳ ಚಿತ್ರವನ್ನು ಬರೆಯುತ್ತಾರೆ. ರೊಟ್ಟಿಯನ್ನು ಹಂಚಿ ತಿಂದ ನಂತರ ಒಂದೆಡೆ ಸೇರಿದ ಪೋಡಿನವರೆಲ್ಲಾ ಹಾಡುತ್ತಾ ಕುಣಿಯುತ್ತಾ ಇಡೀ ರಾತ್ರಿ ಕಾಲವನ್ನು ಕಳೆಯುತ್ತಾರೆ.

ರಂಗೋಲಿ ಹಾಕುವ ವಿಧಾನ : ಸಗಣಿಯಿಂದ ನೆಲವನ್ನು ಸಾರಿಸುತ್ತಾರೆ. ನಂತರ ಸಗಣಿಯಿಂದ ಸಾರಿಸಿದ ನೆಲ ಸ್ವಲ್ಪ ಹಸಿ ಇದ್ದ ಹಾಗೆ ಅದರ ಮೇಲೆ ರಂಗೋಲಿಯನ್ನು ಬಿಡಿಸುತ್ತಾರೆ. ಹಸಿ ಇದ್ದ ನೆಲವು ಬಿಟ್ಟ ರಂಗೋಲಿಯನ್ನು ಚೆನ್ನಾಗಿ ಹಿಡಿದುಕೊಳ್ಳುತ್ತದೆ. ಹೀಗೆ ಬಿಡಿಸಿದ ರಂಗೋಲಿ ಒಣಗಿದ ನಂತರ ರಂಗಾಗಿ ಕಾಣುತ್ತದೆ. ಮತ್ತು ಹೆಚ್ಚು ಹೊತ್ತು (ದಿನ) ರಂಗೋಲಿ ಅಳಿಸುವುದಿಲ್ಲ. ಹಸಿರು ಬಣ್ಣವನ್ನು ಹೊಂದಿರುವ ಸಗಣಿಯ ಮೇಲೆ ಬಳಿಯ ಬೆಣಚು ಕಲ್ಲಿನ ಪುಡಿಯಿಂದ ರಂಗೋಲಿ ಹಾಕುವುದರಿಂದ ಹಿಂಬಣ್ಣ (ಬೇಸ್ ಕಲರ್) ಆಕರ್ಷಣೆಯನ್ನು ಕೊಡುತ್ತದೆ.

ಹೀಗೆ ಹಬ್ಬ ಮುಂತಾದ ಸಂದರ್ಭಗಳಲ್ಲಿ ಸೋಲಿಗರ ಮನೆಯ ಅಂಗಳದ ಮೇಲೆ, ಗೋಡೆಗಳ ಮೇಲೆ ಚಿತ್ರ ಹಾಗೂ ರಂಗೋಲಿಗಳನ್ನು ಕಾಣುತ್ತೇವೆ. ಇವರ ರಂಗೋಲಿ ಚಿತ್ರಗಳಲ್ಲಿ ಸುತ್ತು ರಂಗೋಲಿಗಳಿಗಿಂತ ಗೀಟು ರಂಗೋಲಿಗಳು ಹೆಚ್ಚು. ಈ ರಂಗೋಲಿಯನ್ನು ರಂಗೋಲಿ ಪುಡಿ (ಬೆಣಚುಕಲ್ಲಿನ ಪುಡಿ) ಮತ್ತು ಸೇಡಿಯಿಂದ ಬರೆಯುತ್ತಾರೆ.

ದೇವರಿಗೆ ಸಂಬಂಧಿಸಿದ ಚಿತ್ರಗಳು : ಇತರೆ ಚಿತ್ರಗಳ ಜೊತೆಗೆ ದೇವರಿಗೆ ಸಂಬಂಧಿಸಿದ ಕೆಲವು ಚಿತ್ರಗಳನ್ನು ಸಹ ಇವರು ಬರೆಯುತ್ತಾರೆ. ಅಲ್ಲಲ್ಲಿಯ ಪೋಡುಗಳಿಗೆ ಸಂಬಂಧಿಸಿದಂತೆ ಕೆಲವು ಸಣ್ಣ ಸಣ್ಣ ದೇವಾಲಯಗಳು ಇವೆ. ಹಬ್ಬ, ಜಾತ್ರೆಯ ಸಂದರ್ಭದಲ್ಲಿ ದೇವಸ್ಥಾನದ ಗೋಡೆಗಳಿಗೆ ಸುಣ್ಣ ಬಳಿದ ನಂತರ ಕೆಲವು ಚಿತ್ರಗಳನ್ನು ಬರೆಯುತ್ತಾರೆ. ಈ ಚಿತ್ರಗಳಲ್ಲಿ ಒಂದು ದೇವರ ಕೊಡೆ ಅಕ್ಕಪಕ್ಕದಲ್ಲಿ

[illegible]

ಬಿರುದುಗಳು ನಡುವೆ ಈಶ್ವರಲಿಂಗ, ಈ ಈಶ್ವರನ ಲಿಂಗವನ್ನು ಸುತ್ತುವರೆದಂತೆ, ನಾಗರಹಾವು ಹೆಡೆ ಎತ್ತಿ ಲಿಂಗಕ್ಕೆ ರಕ್ಷಣೆಯಂತೆ ಇದೆ. ಸೋಲಿಗರು ಈ 'ಬಿರುದು'ಗಳನ್ನು 'ಪವಾಡದ ಕೊಡ್ಲಿ' ಅಂತಲೂ ಕರೆಯುತ್ತಾರೆ. ಈ ಬಿರುದು ಇವರಲ್ಲಿ ಬಹಳ ಪವಿತ್ರವಾದದ್ದು. ದೇವರು ಗುಡ್ಡನ ಮೇಲೆ ದೇವರು ಮೈದುಂಬಿದಾಗ ಈ ಬಿರುದಿನಿಂದ ಹೊಟ್ಟೆಗೆ ಹೊಡೆದುಕೊಳ್ಳುತ್ತಾರೆ. ಈ ದೈವಕ್ಕೆ ಸಂಬಂಧಪಟ್ಟ ಕೆಲಸವನ್ನು ದೇವರಗುಡ್ಡ ಅಥವಾ ಪೂಜಾರಿ ಮಾಡುತ್ತಾನೆ. ಇದು ದೈವಕ್ಕೆ ಸಂಬಂಧಿಸಿದ ಆಚರಣೆಯಲ್ಲಿ ಬರುತ್ತದೆ. ಈ ಪವಾಡಗಳನ್ನು ಸತ್ಯ ನಿಷ್ಠೆಯಿಂದ ಮಾಡಲಾಗುವುದು. ಹಾಗಾಗಿ ಸೋಲಿಗರು ವಾಸಿಸುವ ಪೋಡುಗಳ ಸುತ್ತಮುತ್ತಲಿನ ದೇವಸ್ಥಾನಗಳಲ್ಲಿನ ಗೋಡೆಗಳ ಮೇಲೆ ಈ ರೀತಿಯ ಬಿರುದುಗಳ ಚಿತ್ರಗಳನ್ನು ನೋಡಬಹುದು. ಹಾಗೆಯೇ ಕೊಡೆಯು ಸೋಲಿಗರಿಗೆ ಪವಿತ್ರವಾದದ್ದು. ಅದೂ ಕೂಡ ಈ ಬಿರುದುಗಳ ಜೊತೆಯಲ್ಲೇ ಇರಬೇಕು. ಈಶ್ವರಲಿಂಗ ಮತ್ತು ಅದನ್ನು ಶೃಂಗರಿಸಿದ ನಾಗರಹಾವು ದೈವಗಳಲ್ಲಿ ಹೆಚ್ಚು ಪ್ರಿಯವಾದದ್ದು ಆದ್ದರಿಂದ ಈ ಚಿತ್ರಗಳು ಸೋಲಿಗರ ಪೋಡುಗಳಿಗೆ ಸಂಬಂಧಿಸಿದಂತೆ ದೇವರುಗುಡಿಗಳ ಗೋಡೆಗಳ ಮೇಲೆ ಕಾಣಿಸುತ್ತವೆ."[೫]



ಸೋಲಿಗರ ದೇವಾಲಯದ ಮೇಲಿನ ಬಿರುದುಗಳ ಚಿತ್ರ



ಕುಟುಕು ಚಿತ್ರಗಳು : ಸೋಲಿಗರಲ್ಲಿ ದೇವರುಗಳ ಬಗ್ಗೆ ನಂಬಿಕೆ ಇರುವಂತೆ ದೆವ್ವಗಳ (ಗಾಳಿ) ಬಗ್ಗೆಯೂ ನಂಬಿಕೆ ಇರುವುದನ್ನು ಕಾಣಬಹುದು. ಇವರಿಗೆ ಸಣ್ಣಪುಟ್ಟ ದೆವ್ವಗಳು ಹಿಡಿದರೆ ಅವುಗಳು ಮೈಮೇಲೆ ಬಂದರೆ ಅದನ್ನು ಅವರಲ್ಲೇ ಇರುವ ದೇವರು ಗುಡ್ಡದಿಂದ ಅಥವಾ ದೆವ್ವ ಬಿಡಿಸುವ ತಮ್ಮ ಹಿರೀಕರಿಂದ ದೆವ್ವಗಳನ್ನು ಬಿಡಿಸುತ್ತಾರೆ. ಹಿಡಿದ ದೆವ್ವಗಳು ದೊಡ್ಡವಾಗಿದ್ದರೆ ಅದು ಇವರಿಗೆ ಬಗ್ಗದೆ ಹೋದರೆ ಬಿಳಿಗಿರಿ ರಂಗನಿಗೆ ಹರಕೆ ಮಾಡಿಕೊಳ್ಳುತ್ತಾರೆ. ದೆವ್ವ ಬಿಟ್ಟ ನಂತರ ಹರಕೆಯನ್ನು ತೀರಿಸುತ್ತಾರೆ. ಹರಕೆಯನ್ನು ತೀರಿಸಬೇಕಾದರೆ ದೆವ್ವ ಹಿಡಿದವರಿಂದ ದೇವಸ್ಥಾನದ ಮೆಟ್ಟಿಲುಗಳ ಮೇಲೆ ಚಿತ್ರ ಬರೆಸಿ ಅದನ್ನು ಕಲ್ಲುಕುಟಿಕರಿಂದ ಅಥವಾ ಇವರೆ ಬಿಟ್ಟ ಚಿತ್ರಗಳ ಮೇಲೆ ಕುಟುಕುತ್ತಾರೆ. ಈ ರೀತಿಯ ಕುಟುಕು ಚಿತ್ರಗಳನ್ನು ಬಿಳಿಗಿರಿ ರಂಗಸ್ವಾಮಿಯ ಬೆಟ್ಟದಲ್ಲಿರುವ ಮೆಟ್ಟಿಲುಗಳ ಮೇಲಿರುವುದನ್ನು ನೋಡಬಹುದು. ಹೀಗೆ ಸೋಲಿಗರು ಹರಕೆಯನ್ನು ಹೊತ್ತು ತೀರಿಸುತ್ತಾರೆ. ಇದೇ ರೀತಿಯ ಹರಕೆಗಳನ್ನು ಇತರೆ ಸಮುದಾಯದವರು ಅನುಸರಿಸುತ್ತಾರೆ.



ಬಿಳಿಗಿರಿ ರಂಗನ ದೇವಾಲಯದ ಮೆಟ್ಟಿಲು ಮೇಲಿನ ಚಿತ್ರಗಳು

"ದೆವ್ವ ಬಿಟ್ಟ ಮೇಲೆ ಬೆಟ್ಟದ ಮೆಟ್ಟಿಲುಗಳ ಮೇಲಿಯೇ ಈ ರೀತಿಯ ದೆವ್ವಗಳ ಕುಟುಕು ಚಿತ್ರಗಳನ್ನು ಏಕೆ ಕೆತ್ತಿಸುತ್ತದೆ ಎಂದರೆ ಕಲ್ಲುಗಳ ಮೆಲೆ ಕೆತ್ತಲ್ಪಟ್ಟ ದೆವ್ವಗಳ ಚಿತ್ರಗಳು ರಂಗನಾಥ ಸ್ವಾಮಿಯ ಬಂಧನದಲ್ಲಿ ಇರುತ್ತವೆ ಎಂಬ ನಂಬಿಕೆ ಇವರಲ್ಲಿದೆ. ಹಾಗೆಯೇ ಈ ಚಿತ್ರಗಳನ್ನು ಬೆಟ್ಟ ಹತ್ತಿ ಇಳಿಯುವವರು ತುಳಿದಾಗ ಅದು ಮತ್ತೆ ಹಿಡಿದವರ ಹತ್ತಿರ ಸುಳಿಯುವುದಿಲ್ಲ ಎಂಬ ನಂಬಿಕೆಯಿಂದ ಈ ರೀತಿ ಕೆತ್ತಿಸುತ್ತಾರೆ ಎಂದು ಹೇಳುತ್ತಾರೆ."[೬] ಈ ಕುಟುಕು ಚಿತ್ರಗಳು ಗಂಡುಹೆಣ್ಣಿನ ಚಿತ್ರಗಳ ರೀತಿಯಲ್ಲಿ ಇರುತ್ತವೆ.

೨. ಜೇನು ಕುರುಬರು : ಜೇನುಕುರುಬರ ಮನೆಗಳ ವಿಸ್ತೀರ್ಣವೂ ಸಹ ಸೋಲಿಗರ ಮನೆಗಳಂತೆ ಚಿಕ್ಕದಾಗಿವೆ. ಇವರಲ್ಲಿಯೂ ಕೂಡ ವಿಭಕ್ತ ಕುಟುಂಬ ಪದ್ಧತಿ ಇದೆ. ಮದುವೆಯಾದ ಗಂಡುಹೆಣ್ಣು ಪ್ರತ್ಯೇಕವಾಗಿ ಸಂಸಾರವನ್ನು ನಡೆಸುತ್ತಾರೆ. ಮನೆಗಳನ್ನು ಬಿದಿರಿನಿಂದ ಕಟ್ಟಿಕೊಂಡಿರುತ್ತಾರೆ. ಬಿದಿರನ್ನು ಎರಡು ಭಾಗಮಾಡಿ ಕಟ್ಟಿದಂತ ಮನೆಗಳ ಗೋಡೆಗಳಿಗೆ ಮಣ್ಣನ್ನು ಕಲಸಿ ತೆಳ್ಳಗೆ ಹಾಕುತ್ತಾರೆ. ಆನಂತರ ಗೋಡೆಯನ್ನು ನುಣ್ಣಗೆ ಸಾರಿಸುತ್ತಾರೆ. ಗೋಡೆಯ ಅಲಂಕಾರಕ್ಕೆ ಬಣ್ಣ ಬಣ್ಣಗಳ ಮಣ್ಣನ್ನು ಬಳಸುತ್ತಾರೆ. ಇಲ್ಲವೆ ಸೇಡಿಯನ್ನು ಬಳಸುತ್ತಾರೆ. ಕೆಲವು ಕಡೆ ಮಣ್ಣು ಹಚ್ಚದೆ, ಚಿತ್ರ ರಚಿಸದೆ ಬರೀ ಬಿದಿರು ತಡಿಕೆಯನ್ನು ಗೋಡೆಗಳ ಕಲಾತ್ಮಕವನ್ನಾಗಿ ನಿರ್ಮಿಸುತ್ತಾರೆ.





ಜೇನುಕುರುಬರ ಮನೆಮಾದರಿಗಳು

ಗೋಡೆಗೆ ಮಣ್ಣನ್ನು ಹಾಕಿ ಸಾರಿಸಿದ ಮೇಲೆ ತಮ್ಮದೇ ಆದಂಥ ವಿನ್ಯಾಸಗಳಲ್ಲಿ ಗೆರೆಯನ್ನು ಹಾಕುತ್ತಾರೆ. ಈ ರೀತಿಯ ಗೆರೆಗಳನ್ನು ಯರವರಲ್ಲಿ, ಪಣಿಯರಲ್ಲಿ ಕಾಡುಕುರುಬರಲ್ಲೂ ಕಾಣಬಹುದು. ಒಂದು ಕಡೆಯಿಂದ ಗೋಡೆಯನ್ನು ಸಾರಿಸಿಕೊಂಡು ಬಂದಂತೆ ಗೆರೆಗಳು ಎದ್ದು ಕಾಣುತ್ತವೆ. ಈ ಗೆರೆಗಳ ಚಿತ್ರಗಳನ್ನು ಜೇನುಕುರುಬರ ಮನೆಗಳ ಮೇಲು ಕಾಣುವುದಿಲ್ಲ. ಕೆಲವರು ಮನೆಯ ಗೋಡೆಯ ಮೇಲೆ ಮತ್ತು ಕೆಳಭಾಗದಲ್ಲಿ ಬ್ಯಾಟರೀಸೆಲ್‌ಗಳ ಒಡೆದು ಅದರ ಕಪ್ಪುಪುಡಿಯನ್ನು ಮಣ್ಣಿಗೆ ಕಲಸಿ ಗೋಡೆಗೆ ಹಾಕುತ್ತಾರೆ. ಅದರ ಮೇಲೆ ಮಣ್ಣನ್ನು ಹಾಗೇ ಬಳಿಯುತ್ತಾರೆ. ಕೆಲವರು ಬಳಿಯದೆ ಹಾಗೇ ಇರುವುದು ಉಂಟು. ವಿದ್ಯುಚ್ಛಕ್ತಿಯ ಅಭಾವವಿರುವ ಸೋಲಿಗ, ಜೇನು ಕುರುಬ, ಯರವ, ಪಣಿಯ ಮುಂತಾದವರು ರೇಡಿಯೋ, ಬ್ಯಾಟರಿ ಮುಂತಾದವುಗಳಿಗೆ ಬಳಸಿ ಉಳಿಸಿದ ಶೆಲ್ಸ್‌ಗಳನ್ನು ಉಪಯೋಗಿಸುವುದು. ಇದು ಸಾರ್ವತ್ರಿಕವಾಗಿ ಕಂಡುಬರುವುದಿಲ್ಲ. ಇದು ಇತ್ತೀಚಿಗೆ ಕಂಡುಬರುವಂತ ಹದ್ದಾಗಿದೆ. ಇದು ಅವರವರ ಆಸಕ್ತಿಗೆ ಸಂಬಂಧ ಪಟ್ಟಿರುತ್ತದೆ. ಮನೆಯ ಮೇಲ್ಭಾಗಕ್ಕೆ ಹುಲ್ಲನ್ನು ಇಲ್ಲವೆ ಕೆಲವು ಸೊಪ್ಪನ್ನು ಹಚ್ಚುತ್ತಾರೆ.

ಮನೆಯ ಗೋಡೆಗಳಿಗೆ ಬಳಸುವ ಬಣ್ಣಗಳು ಹಾಗೂ ಅವರು ಧರಿಸುವ ಬಟ್ಟೆಯ ಬಣ್ಣಗಳಿಗೂ ಸಾಮ್ಯತೆಗಳಿರುತ್ತವೆ. “ಪ್ರಾಣಿಗಳು ಕೆಲವು ಬಣ್ಣಗಳಿಂದ ಆಕರ್ಶಿತವಾಗುತ್ತವೆ ಎಂಬುದನ್ನು ಜೇನುಕುರುಬರು ತಿಳಿದಿದ್ದಾರೆ. ಕೆಂಪು ಮತ್ತು ಹಳದಿಯ ಬಟ್ಟೆಗಳು ಹುಲಿಯನ್ನು ಆಕರ್ಶಿಸುತ್ತವೆಯಂತೆ ಹಾಗಾಗಿ ಅಂಥ ಬಟ್ಟೆಗಳನ್ನು ಅವರು ತೊಡುವುದಿಲ್ಲ. ಬಿಳುಪಾದ ಬಟ್ಟೆಯಿಂದ ಆನೆಗಳು ಆಕರ್ಶಿತಗೊಳ್ಳುತ್ತವೆ ಹಾಗಾಗಿ ಬಿಳಿಬಟ್ಟೆಗಳನ್ನು ಧರಿಸುವುದಿಲ್ಲ ಒಂದು ವೇಳೆ ಅಂತಹ ಬಟ್ಟೆಗಳಿದ್ದರೆ ಅವನ್ನು ಕೆಂಪು ಮಣ್ಣಿನಿಂದ ಅದ್ದಿ ಒಗೆದ ಮಾಸಿದಂತೆ ಕಾಣತೊಡಗಿದಾಗ ತೋಡುತ್ತಾರೆ.”[೭] ಇವರು ಕಾಡಿನಲ್ಲಿ ವಾಸಿಸುವಂತಹ ಜನ. ಅದರಲ್ಲೂ ಆನೆ, ಹುಲಿ, ಚಿರತೆಯಂತಹ ಕ್ರೂರ ಪ್ರಾಣಿಗಳೊಂದಿಗೆ ಬದುಕು ನಡೆಸುತ್ತಿದ್ದಾರೆ. ಅವುಗಳೊಂದಿಗೆ ಬದುಕುತ್ತಿರುವ ಇವರು ಅವುಗಳ ಸಂಜ್ಞೆಯನ್ನು ಅರಿತು ಅದಕ್ಕೆ ತಕ್ಕಂತೆ ತಮ್ಮ ಮನೆಗಳನ್ನು ಅವುಗಳ ವಿನ್ಯಾಸ ಮತ್ತು ಮಾದರಿಯ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಇವರ ಮನೆಗಳ ಬಣ್ಣಗಳು ಪ್ರಾಣಿಗಳಿಗೆ ಆಕರ್ಶಿಸಬಾರದೆಂಬುದು ಆಗಿರುತ್ತದೆ. ಹಾಗೆಯೇ ಇವರು ಪ್ರಕೃತಿಯ ಭಾಗವಾಗಿರುವಂತೆ ಮನೆಗಳನ್ನು ಕಟ್ಟಿಕೊಳ್ಳುತ್ತಾರೆ. ಏಕೆಂದರೆ ಮನೆಗಳು ಪ್ರಕೃತಿಗಿಂತ ಭಿನ್ನವಾಗಿ ಇರಬಾರದೆಂಬುದು ಇವರ ಕಲ್ಪನೆಯಾಗಿದೆ.



[illegible]

ಇವರ ಮನೆಯ ಗೋಡೆಗಳಲ್ಲಿರುವ ಗೆರೆಗಳಲ್ಲಿ ಒಂದು ಕ್ರಮಬದ್ಧತೆಯನ್ನು ಕಾಣುತ್ತೇವೆ. ಇವರು ಮೊದಲು ಹದವಾದ ಮಣ್ಣಿನಿಂದ ಗೋಡೆಯನ್ನು ತಮ್ಮ ಕೈಯಿ ಆಡುವ ಕ್ರಮಕ್ಕೆ ಆಡಿಸಿ ಸಾರಿಸುತ್ತಾರೆ. ಆನಂತರ ಬೆರಳಿನಿಂದ ಗೆರೆಯನ್ನು ಎಳೆಯುತ್ತಾರೆ. ಇವರ ಗೋಡೆಯ ಮೇಲಿನ ಬಣ್ಣ ಯರವರ ಮನೆ ಬಣ್ಣಕ್ಕಿಂತ ಭಿನ್ನವಾಗಿ ಕಾಣುತ್ತದೆ. ಇವರು ಗೋಡೆಗಳನ್ನು ಸಾರಿಸುವಾಗ ಹೆಚ್ಚಾಗಿ ಕೆಮ್ಮಣ್ಣನ್ನು ಬಳಸುತ್ತಾರೆ. ಮೊದಲು ಕಪ್ಪುಮಣ್ಣನ್ನು ಕೋಡೆಗೆ ಹಾಕಿ ಆನಂತರ ಬಳಿಯುತ್ತಾರೆ. ಕಾಡುಪ್ರಾಣಿಗಳು ಈ ಗೆರೆಯನ್ನು ಕಂಡು ಬೆದರುವಂತೆ ಮನೆಯ ಹತ್ತಿರ ಅವು ಸುಳಿಯದಂತೆ ಈ ಗೆರೆಗಳು ಕಾಣಲು ಹಾಕುತ್ತಾರೆ. ಇವು ಸೋಲಿಗರ ಮನೆಯ ವಿಸ್ತೀರ್ಣವನ್ನು ಹೊಂದಿದ್ದರೂ ಇವುಗಳ ಸ್ವರೂಪದಲ್ಲಿ ಬೇರೆ ತೆರನಾಗಿ ಇರುವುದನ್ನು ನಾವು ನೋಡಬಹುದುಗಿದೆ.

ಕೆಲವು ಜೇನುಕುರುಬರ ಮನೆಗಳ ಗೋಡೆಯ ಮೇಲೆ ಮತ್ತು ನೆಲದಲ್ಲಿ ರಂಗೋಲಿ ಚಿತ್ರಗಳನ್ನು ನೋಡಬಹುದು. ಇವು ತಮ್ಮ ಸಮುದಾಯದ ಹಿಂದಿನಿಂದಲೂ ಬಂದ ರಂಗೋಲಿಯ ಚಿತ್ರಗಳಲ್ಲ. ಹಿಂದೆ ಇವರು ರಂಗೋಲಿಯ ಚಿತ್ರಗಳನ್ನು ಬಿಡುತ್ತಲೇ ಇರಲಿಲ್ಲವಂತೆ ಬೆಳಿಗ್ಗೆ ಎದ್ದು ಮನೆಯ ಮುಂದೆ ರಂಗೋಲಿಯನ್ನು ಹಾಕುವುದು ಇವರ ಪದ್ಧತಿಯಲ್ಲ. ಈಗಿನ ರಂಗೋಲಿಯನ್ನು ಕಲಿತ ಹುಡುಗಿಯರು ಮಾತ್ರ ರಂಗೋಲಿಯನ್ನು ಹಾಕುತ್ತಾರೆ. ಈ ರಂಗೋಲಿಗಳು ಕಾಣ ಸಿಗುವುದು ಕೆಲವೇ ಕೆಲವು ಮನೆಗಳ ಮೇಲೆ ಅದರಲ್ಲೂ ಅಲ್ಪಸ್ವಲ್ಪ ವ್ಯವಸ್ಥೆಯನ್ನು ಹೊಂದಿದ ಮನೆಗಳಲ್ಲಿ ಮಾತ್ರ ಕಾಣಸಿಗುತ್ತವೆ. ಇವು ಚಿಕ್ಕ ರಂಗೋಲಿಗಳಾಗಿದ್ದು ಗೀಟು ರಂಗೋಲಿಗಳಾಗಿವೆ. ಈ ರಂಗೋಲಿಯನ್ನು ಬರೆಯಲು ಇದ್ದಿಲು, ಕಾಡು ಅರಿಶಿಣ, ಸೀಮೆಸುಣ್ಣ, ಬಣ್ಣ ಹಾಗೂ ಸೇಡಿಯನ್ನು ಬಳಸುತ್ತಾರೆ.




ಜೇನುಕುರುಬರ ಗೋಡೆಯ ಮೇಲಿನ ಗೀರುಚಿತ್ರಗಳು

ಮಕ್ಕಳ ಚಿತ್ರಕಲೆ : 'ಪೆಡಿನಾ ವಿಕಾಸ' ಎಚ್.ಡಿ. ಕೋಟೆಯವರು ೧೨.೧೦.೯೯೦ರಂದು ಸುಮಾರು ಒಂದು ವಾರದ ಕಾಲ 'ಬುಡಕಟ್ಟು ಮಕ್ಕಳ ಚಿತ್ರಕಲೆ' ಶಿಬಿರವನ್ನು ನಡೆಸಿದರು. ಈ ಕಾರ್ಯಕ್ರಮವು N ಬೇಗೂರು ಗ್ರಾಮಪಂಚಾಯಿತ್ತಿ ಜಾಗದ ಕೋಟೆ ಅಡಿಯಲ್ಲಿ ನಡೆದ ಈ ಶಿಬಿರದಲ್ಲಿ ಸೋಲಿಗರು, ಜೇನುಕುರುಬರು, ಕಾಡುಕುರುಬರು, ಯರವರು, ಪಣಿಯ ಬುಡಕಟ್ಟು ಸಮುದಾಯಗಳ ಮಕ್ಕಳು ಭಾಗವಹಿಸಿದ್ದರು. ಜೊತೆಗೆ ಕೆಲವು ಹಿರಿಯರೂ ಸಹ ಇದರಲ್ಲಿ ಭಾಗವಹಿಸಿದ್ದರು. ಅವರ ಮನಸ್ಸಿನ ಭಾವನೆಗಳಿಗನುಗುಣವಾಗಿ ಇವರು ಬರೆದ ಚಿತ್ರಗಳು ಹಲವು ವಿಭಿನ್ನ ಮಾದರಿಯ ಚಿತ್ರಗಳಾಗಿ ನಮಗೆ ಕಾಣಿಸುತ್ತವೆ. ಈ ಚಿತ್ರಗಳೆಲ್ಲವೂ ತಮ್ಮ ಪರಿಸರದಿಂದ ಬಂದಂತವೇ ಆಗಿವೆ. ತಾವು ಬದುಕುವ ಪರಿಸರ, ಬದುಕಿನ ಒಡನಾಟವು ಮಕ್ಕಳ ಮನಸ್ಸಿನಲ್ಲಿ ನೆಲೆಸಿ ವಿಭಿನ್ನ ರೀತಿಯ ಚಿತ್ರಗಳಾಗಿ ಅಭಿವ್ಯಕ್ತಗೊಂಡಿವೆ. ಇಲ್ಲಿ ಮಕ್ಕಳಿಗೇ ಅಲ್ಲದೆ ಬುಡಕಟ್ಟು ಸಮುದಾಯಗಳ ಕೆಲವು ಹಿರಿಯರಿಂದಲೂ ಚಿತ್ರಗಳನ್ನು ಬರೆಸಲಾಯಿತು. ಈ ಚಿತ್ರಗಳಲ್ಲಿ ಹೆಚ್ಚಾಗಿ ದಟ್ಟವಾದ ಮರಗಳ, ಸಾಮಾನ್ಯ ಮರಗಳ, ಹೂವಿನ, ಎಲೆಗಳ, ಸಣ್ಣ ಗಿಡಗಳ, ಪ್ರಾಣಿಗಳ, ಪಕ್ಷಿಗಳ ಚಿತ್ರಗಳಾಗಿವೆ. ಹೀಗೆ ಮುಂತಾದ ವಿಭಿನ್ನ ಮಾದರಿಯ ಚಿತ್ರಗಳನ್ನು ಜೊತೆಗೆ ಈ ಚಿತ್ರಗಳಲ್ಲಿ ವಿಶೇಷವಾಗಿ ಜೇನಿನ ಚಿತ್ರ, ಜೇನಿನ ಹುಟ್ಟಿನ ಚಿತ್ರಗಳು, ಇವೆಲ್ಲವುಗಳನ್ನು ತಮ್ಮದೇ ಆದ ಶೈಲಿಯ ರಂಗೋಲಿ ಚಿತ್ರಗಳನ್ನು ನೋಡಬಹುದಾಗಿದೆ. ಇವು ತಾವು ವಾಸಿಸುವ ಮನೆಯ ಸುತ್ತಮುತ್ತಲಿನ ಪರಿಸರದಲ್ಲಿಯ ಚಿತ್ರಗಳಾಗಿರುತ್ತವೆ.

ಬುಡಕಟ್ಟು ಸಮುದಾಯದವರು ರಚಿಸಿದ ಚಿತ್ರಗಳು ಸಾಮಾನ್ಯ ಚಿತ್ರಗಳಾಗಿರದೆ ಇವು ತಮ್ಮದೇ ಆದಂಥ ಭಾವನೆಯನ್ನ ಅಭಿವ್ಯಕ್ತಿಸುತ್ತವೆ. ಈ ಭಾವನೆಯಲ್ಲಿ ಮರಗಳ, ಪ್ರಾಣಿಗಳ, ಗಿಡಗಳ, ಪಕ್ಷಿಗಳ, ಬಳ್ಳಿಗಳ, ಜೇನಿನ ಚಿತ್ರಗಳು ಮೂಡಿಬಂದಿವೆ. ಇಲ್ಲಿಯ ಚಿತ್ರಗಳು ರೇಖಾಚಿತ್ರಗಳಾಗಿದ್ದು ಈ ರೇಖೆಗಳಲ್ಲಿ ಗಡಸುತನವನ್ನು ಹೊಂದಿವೆ. ಇಲ್ಲಿಯ ಚಿತ್ರಗಳಿಗೆ ನಿರಾಳತೆ ಇದೆ. ಮನಸ್ಸಿನ ಭಾವನೆಯಲ್ಲಿ ಸ್ವತಂತ್ರತೆ ಇರುತ್ತದೆ. ಇವು ಇವರ ಚಿತ್ರಗಳಲ್ಲಿ ಕಾಣಿಸುತ್ತವೆ. ಬುಡಕಟ್ಟು ಚಿತ್ರಗಳಲ್ಲಿ ಆದಿಮಾನವನ ಚಿತ್ರಗಳಲ್ಲಿ ಕಂಡುಬರುವ ತ್ರಿಭುಜಾಕೃತಿಯ ಚಿತ್ರಗಳು ಬಳಕೆಯಾಗಿವೆ. ಹಾಗೆಯೇ ಇಲ್ಲಿಯ ಚಿತ್ರದಲ್ಲಿ ರಥದ ಕಲ್ಪನೆಯು ಇದೆ. ರಥದ ಚಿತ್ರಗಳಲ್ಲಿ ಗಿಡಮರಗಳ Formನ್ನು (ರೀತಿ) ಹೊಂದಿರುವುದನ್ನು ಕಾಣುತ್ತೇವೆ. ಈ ಚಿತ್ರಗಳು ಸಾರೋಸ್ (ಒರಿಸ್ಸಾ) ಬುಡಕಟ್ಟುಗಳ ಚಿತ್ರಗಳನ್ನು ಹೋಲುತ್ತವೆ.

ಜೇನುಕುರುಬರ ಚಿತ್ರಗಳಲ್ಲಿ ವಿಶೇಷವಾಗಿ ಜೇನಿನ ಚಿತ್ರಗಳು ಕಾಣಿಸುತ್ತವೆ. ಇವರ ಚಿತ್ರಗಳಲ್ಲಿ ದಟ್ಟವಾದ ಮರಗಳ ಚಿತ್ರಗಳು ಅಭಿವ್ಯಕ್ತಗೊಂಡು, ಆ ಮರಗಳಲ್ಲಿ ಜೇನುಗೂಡಿನ ಚಿತ್ರಗಳು ಕಾಣಿಸುತ್ತವೆ. ಮನುಷ್ಯನಿಗೆ ಯಾವ ವಸ್ತುವಿನೊಂದಿಗೆ ನಿಕಟ ಸಂಬಂಧ, ಒಡನಾಟವಿರುತ್ತದೆಯೋ ಅವನಿಗೆ ಅದರ ಬಗ್ಗೆ ಆಸಕ್ತಿ, ಆಸೆ, ಭಯ ಇರುತ್ತದೆ. ಅದು ಅವರ ಮನಸ್ಸಿನಲ್ಲಿ ಕಲೆಹಾಕುತ್ತಿರುತ್ತದೆ. ಅಭಿವ್ಯಕ್ತಿಸುವ ಸಂದರ್ಭ ಬಂದಾಗ (ಚಿತ್ರ ಬರೆಯ ಸಂದರ್ಭ ಬಂದಾಗ) ಅವು ಹೊರಹೊಮ್ಮುತ್ತವೆ. ಅವುಗಳನ್ನು ಜೇನುಕುರಬರ ಚಿತ್ರಗಳಲ್ಲಿ ನೋಡಬಹುದು. ಇಲ್ಲಿಯ ಚಿತ್ರಗಳನ್ನು ಶಿಷ್ಟಪದ ಚಿತ್ರಕಲೆ,

[illegible]




ಅರಳೀಮರ



ಮುಗಿಲ ಮಲ್ಲಿಗೆ ಮರ




ಅರಳೀಮರ




ಮರದಲ್ಲಿ ಜೇನುಗೂಡು

ಜೇನುಕುರುಬರ ಮಕ್ಕಳು ಮತ್ತು ಹಿರಿಯರು ರಚಿಸಿದ ಚಿತ್ರಗಳು




ಡಿ. ಕಾಳ, ಜೋಗನಕೋಟೆ



ಸುಮ್ಮಕ್ಕ ಜೋಗನಕೋಟೆ



ಜಯಮ್ಮ, ಜೋಗನಕೋಟೆ




ಸುನಂದರಾಜೇಗೌಡ, ಜೋಗನಕೋಟೆ









ಆಧುನಿಕ ಚಿತ್ರಕಲೆಯೊಂದಿಗೆ ಇಟ್ಟು ನೋಡಿದಾಗ ಇವುಗಳ ಭಿನ್ನತೆ ಮತ್ತು ವಿಶೇಷತೆಗಳು ಕಾಣಿಸುತ್ತವೆ.

ಈ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಬುಡಕಟ್ಟು ಸಮುದಾಯದವರಿಂದ ಕೆಲವು ಚಿತ್ರಗಳನ್ನು ಬರೆಸಲಾಯಿತು. ಅಂತೆಯೇ ಜೇನುಕುರುಬರಿಂದಲೂ ಕೆಲವು ಚಿತ್ರಗಳನ್ನು ಬರೆಸಲಾಯಿತು. ಇವರು ಬರೆದ ಚಿತ್ರಗಳಲ್ಲಿ ಜೇನಿನ ಹುಟ್ಟು, ಜೇನಿನ ಹುಟ್ಟನ್ನು ಹೊಂದಿದ ಮರಗಳ ಚಿತ್ತಾರಗಳನ್ನು ಬರೆದರು. ಚಿತ್ರಗಳಲ್ಲಿ ಇವರು ಒತ್ತನ್ನು ಕೊಟ್ಟಿರುವುದು ಜೇನುಗೂಡಿಗೆ. ಹಾಗಾಗಿ ಜೇನಿಗೂ ಜೇನುಕುರುಬರಿಗೂ ನೇರ ಸಂಬಂಧವಿದೆ. ಜೇನು ಗೂಡಿಗೆ, ಹಾಗಾಗಿ ಈ ಜೇನಿಗೂ ಜೇನುಕುರುಬರಿಗೂ ಸಂಬಂಧ ಇದೆ. ಜೇನು ಬಿಚ್ಚುವ, ತೆಗೆಯುವ ಕೆಲಸವನ್ನು ಸೋಲಿಗರೂ ಮಾಡುತ್ತಾರೆ. ಆದರೆ ಜೇನನ್ನು ಬಿಚ್ಚುವುದೇ ವೃತ್ತಿಯಾಗಿ ಜೇನುಕುರುಬರಲ್ಲಿ ಬೆಳೆದು ಬಂದಿದೆ. ಜೇನುಕುರಬರಲ್ಲಿ ಜೇನು ಬಿಚ್ಚುವುದರಲ್ಲಿ ಇರುವ ಶ್ರದ್ದೆ ಈ ಚಿತ್ರಗಳಲ್ಲಿ ಗೊತ್ತಾಗುತ್ತದೆ. ಅಂತೆಯೇ ಈ ಜೇನಿನೊಂದಿಗೆ ಇವರಿಗೆ ಇರುವ ಸಂಬಂಧವು ಸಾಕಷ್ಟು ಪ್ರಭಾವಿಸಿದೆ. ಈ ಜೇನಿನ ಹರಲೆಯನ್ನು (ಮೊಟ್ಟೆಯೊಂದಿಗಿನ ಜೇನುಗೂಡು ಮೇಣ) ಇವರು ಆಹಾರವಾಗಿ ಉಪಯೋಗಿಸುತ್ತಾರೆ. ಈ ರೀತಿಯ ಸಂಪರ್ಕ ಮತ್ತು ಬದುಕಿನ ಒಡನಾಟ ವ್ಯಕ್ತಿಯ ಮನಸ್ಸಲ್ಲಿ ಘಾಡವಾಗಿ ಉಳಿಯುವುದರಿಂದ ಈ ರೀತಿಯ ಚಿತ್ರಗಳು ಕಂಡುಬರುತ್ತವೆ. ಆದರೆ ಇವರ ಮಕ್ಕಳ ಚಿತ್ರಗಳಲ್ಲಿ ಸ್ವಲ್ಪ ಭಿನ್ನತೆಯನ್ನು ಕಾಣುತ್ತೇವೆ. ಮರ, ಗಿಡ, ಹೂವು, ಬಳ್ಳಿ, ಪ್ರಾಣಿ, ಪಕ್ಷಿ, ಅಪರೂಪಕ್ಕೆ ಬಸ್ಸು, ಕಾರು, ಮುಂತಾದ ಚಿತ್ರಗಳನ್ನು ಸಹ ನೋಡಬಹುದು.

ಯಾವುದೇ ವ್ಯಕ್ತಿಯಿಂದ ಒಂದು ಕಲಾಕೃತಿ ಹೊರಬರಬೇಕಾದರೆ ಅದು ಅವನನ್ನು ಹೆಚ್ಚು ಕಾಡಬೇಕು. ಇಲ್ಲವೆ ಅದು ಅವನಿಗೆ ಎಟುಕದಂತೆ ದೂರ ಇರಬೇಕಾಗುತ್ತದೆ. ಹಾಗಾಗಿ ಬದುಕಿನೊಂದಿಗೆ ಇರುವ ಪ್ರಕೃತಿಯೇ, ಇವರಿಗೆ ಚಿತ್ರಗಳಾಗಿ ತಮ್ಮ ಭಾವನೆಯಲ್ಲಿ ಮೂಡಿವೆ.

ಜೇನುಕುರುಬರ ತಾಯಿತದ ಮೇಲಿನ ಚಿತ್ರಗಳು : ಜೇನುಕುರುಬರಲ್ಲಿಯೂ ತಾಯಿತ ಕಟ್ಟುವ, ಕಟ್ಟಿಸಿಕೊಳ್ಳುವ ಪದ್ಧತಿಯುಂಟು. ಈ ತಾಯಿತವನ್ನು ಕಟ್ಟುವವರು ಜೇನುಕುರುಬರೇ, ಇದಕ್ಕೆ ಸಂಬಂಧಪಟ್ಟ ಅನುಭವಸ್ಥರೇ ಇರುವವರೆ, ಈ ಕೆಲಸವನ್ನು ಮಾಡುತ್ತಾರೆ. ಆರೋಗ್ಯ ಸರಿ ಇಲ್ಲದಾಗ, ದೈವಗಳ ಭಕ್ತಿಯಲ್ಲಿ, ದೆವ್ವಗಾಳಿ, ಸೋಕು ಮುಂತಾದ ಸಂದರ್ಭಗಳಲ್ಲಿ ತಾಯಿತವನ್ನು ಸಂಬಂಧಿಸಿದವರಿಂದ ಕಟ್ಟಿಸಿಕೊಳ್ಳುತ್ತಾರೆ.



ಈ ತಾಯಿತದ ಮೇಲೆ ಬರೆದಿರುವ ಚಿತ್ರಗಳು ಮತ್ತು ಬರವಣಿಗೆಗಳು ಸಾಮಾನ್ಯ ತಾಯಿತಗಳಿಗಿಂತ



ಭಿನ್ನವಾಗಿರುತ್ತವೆ. ಈ ತಾಯಿತದಲ್ಲಿ ಸೂರ್ಯಚಂದ್ರನ ಚಿತ್ರಗಳ ಗೆರೆಗಳು, ಬಳ್ಳಿ, ಗಿಡಗಳ, ಎಲೆಗಳ, ಹೂವುಗಳ ಚಿತ್ರಗಳನ್ನು ನೋಡಬಹುದಾಗಿದೆ. ಈ ತಾಯಿತವನ್ನು ಬರೆಯುವರು ದೇವರುಗುಡ್ಡರು. ಈ ತಾಯಿತದಲ್ಲಿ ವಿಶೇಷವಾಗಿ ಪ್ರಕೃತಿ ಪ್ರಿಯತೆ ಕಾಣುತ್ತದೆ. ಈ ಪ್ರಕೃತಿಯೇ ರಕ್ಷಣೆಗಾಗಿ ಇವರ ಮೈಯನ್ನು ಸೇರುತ್ತದೆ. ಇವರು ಮೂಲತಃ ಪ್ರಕೃತಿಯ ಆರಾಧಕರು ಹಾಗಾಗಿ ಈ ರೀತಿಯ ಚಿತ್ರಗಳು ನಂಬಿಕೆಯ ನೆಲೆಯಲ್ಲಿಯೂ ಹೊರಹೊಮ್ಮುತ್ತವೆ. ಇದೇ ರೀತಿಯ ತಾಯಿತ ಮತ್ತು ಚಿತ್ರಗಳ ಅಂಶವನ್ನು ಸೋಲಿಗರೂ ಹೊಂದಿದ್ದಾರೆ. ಅಂತೆಯೆ ಎಲ್ಲಾ ಬುಡಕಟ್ಟು ಸಮುದಾಯಗಳು ತಮ್ಮ ನಂಬಿಕೆಯ ನೆಲೆಯಲ್ಲಿ ಯಂತ್ರ, ಮಂತ್ರ, ತಂತ್ರ, ತಾಯಿತ ಮುಂತಾದವುಗಳನ್ನು ಹೊಂದಿವೆ. ಅವುಗಳನ್ನು ಸಂಬಂಧಿಸಿದ ಸಮಯಗಳಲ್ಲಿ ಉಪಯೋಗಿಸಿಕೊಳ್ಳುತ್ತಾರೆ. ಹೆಗ್ಗಡ ದೇವನಕೋಟೆ ತಾಲೂಕಿನಲ್ಲಿರುವ ಕಾಡಿನಲ್ಲಿ ಜೇನುಕುರುಬರು, ಕಾಡುಕುರುಬರು, ಫಣಿಯರು, ಯರವರು, ಸೋಲಿಗರು, ಇರುಳಿಗರು ಈ ಎಲ್ಲಾ ನಂಬಿಕೆಯನ್ನು ಇಟ್ಟುಕೊಂಡಿದ್ದಾರೆ.



ಯರವರ ಗೋಡೆ ಮೇಲಿನ ಗೀರುಚಿತ್ರಗಳು

೩. ಯರವರು : ಇವರ ಮನೆಯ ಆಕೃತಿಯಲ್ಲಿ ಸೋಲಿಗರ ಜೇನುಕುರುಬರ, ಕಾಡುಕುರುಬರ ಮತ್ತು ಪಣಿಯರ ಮನೆಗಳಂತೆ ವೈಶಿಷ್ಟ್ಯತೆಯನ್ನ ಹೊಂದಿವೆ. ಸೋಲಿಗರ,ಜೇನುಕುರುಬರ ಸಾಂಪ್ರದಾಯಿಕ ಮನೆಗಳಿಗಿಂತ ಭಿನ್ನತೆಯನ್ನು ಹೊಂದಿವೆ. ನಾಲ್ಕು ಮೂಲೆಯು ಎದ್ದು ಛತ್ರಿಯಾ ಕಾರದ ರೀತಿಯಲ್ಲಿ ಇವರ ಮನೆಗಳು ಇವೆ. ಈ ಮನೆಗಳಿಗೆ ಹೊದಿಕೆಯಾಗಿ ಹುಲ್ಲನ್ನು ಬಳಸುತ್ತಾರೆ. ಇವರ ಮನೆಗಳಿಗೂ ಫಣಿಯರ ಮನೆಗಳಿಗೂ ಸಾಕಷ್ಟು ಹೋಲಿಕೆ ಇದೆ. ಈ ಮನೆಗಳು ಮರದಿಂದ ಕಟ್ಟಿದ ಮನೆಗಳು ಆಗಿವೆ. ಅದರಲ್ಲೂ ಬಿದಿರಿನಿಂದ ಕಟ್ಟಿದ ಮನೆಗಳು, ಬಿದಿರನ್ನು ಸೀಳಿ, ಅದನ್ನು ಹೆಣಕಿ ಹೆಣೆದು ಗೋಡೆಗಳಾಗಿ ಕಟ್ಟಿಕೊಂಡಿರುವ ಮನೆಗಳು ಆಗಿವೆ. ಇವರೂ ಕೂಡ ಬಿದಿರಿನ ಗೋಡೆಗೆ ಹದಗೊಳಿಸಿದ ಮಣ್ಣನ್ನು ಮೆತ್ತುತ್ತಾರೆ.

ಮಣ್ಣನ್ನು ಹದಗೊಳಿಸಿಕೊಳ್ಳುವ ವಿಧಾನ : ಮೊದಲು ಕಪ್ಪುಮಣ್ಣನ್ನು ತಂದು ಅದನ್ನು ಚೆನ್ನಾಗಿ ಕಲೆಸಿ ಹದಗೊಳಿಸಿ ಒಂದುಕಡೆ ಇಡುತ್ತಾರೆ. ಅದನ್ನು ಮೂರು ನಾಲ್ಕು ದಿನ ಹಾಗೆಯೇ ಬಿಡುತ್ತಾರೆ. ಅದು ಬಿಸಿಲು ಚಳಿಗೆ ಹದಗೊಳ್ಳುತ್ತದೆ. ಅಂದರೆ ಕಲಿಸಿದ ಮಣ್ಣು ಪ್ರಕೃತಿಯೊಂದಿಗೆ ಸೇರಿ ಹಳಸಿ ಹದಗೊಳ್ಳುತ್ತದೆ. ಹದಗೊಂಡ ಮಣ್ಣನ್ನು ಬಿದಿರಿನ ತಡಿಕೆಯ ಗೋಡೆಗೆ ಮೆತ್ತುತ್ತಾರೆ. ಹದಗೊಂಡ



ಮಣ್ಣು ಮೃದುವಾಗಿ ಇರುತ್ತದೆ. ನಂತರ ಅದನ್ನು ಗೋಡೆಯ ಮೇಲೆ ಸಾರಿಸುತ್ತಾರೆ. ಇದು ಅಲಂಕಾರಕ್ಕೆ ಸಂಬಂಧಪಟ್ಟಿರುವುದು ಆಗಿರುತ್ತದೆ. ಸಾರಿಸಿದ ಗೆರೆಗಳು ಎದ್ದುಕಾಣುವಂತೆ ತಮ್ಮ ಅಳತೆಗೆ ಸಂಬಂಧಪಟ್ಟಂತೆ ಗೋಡೆಯಲ್ಲಿ ಎಳೆಯಲಾಗುತ್ತದೆ. ಗೋಡೆಯನ್ನು ಬಳಿಯುವವರ ಕೈ ಅಳತೆಗೆ ಇದು ಸಂಬಂಧಪಟ್ಟಿರುತ್ತದೆ. ಈ ಗೆರೆಗಳು ಬೂದುಬಣ್ಣದ ಗೆರೆಗಳು, ಕಪ್ಪು ಬಣ್ಣದ ಗೆರೆಗಳು ಆಗಿರುತ್ತವೆ.”[೮] ಹೀಗೆ ಗೆರೆಗಳನ್ನು ಏಕೆ ಹಾಕುತ್ತಾರೆ ಎಂದರೆ ಅವುಗಳು ಪ್ರಾಣಿಗಳನ್ನು ಆಕರ್ಷಿಸದಂತೆ ಮನೆಯ ಗೋಡೆಯ ಬಣ್ಣ ಮತ್ತು ಗೆರೆಗಳು ಕಂಡುಬರುತ್ತವೆ. ಹುಲಿ ಹಳದಿ, ಕೆಂಪು ಬಣ್ಣವನ್ನು, ಆನೆ ಬಿಳಿ ಬಣ್ಣವನ್ನು ಆಕರ್ಷಿಸುತ್ತವೆ ಎಂದು ಹಿಂದೆ ವಿವರಿಸಿ ಆಗಿದೆ. ಈ ಕಲ್ಪನೆಯಲ್ಲಿ ಇವರ ಮನೆಯ ಗೋಡೆಗಳ ಬಣ್ಣಗಳು ಸಾಮಾನ್ಯವಾಗಿ ಮಂಕಾಗಿ ಇರುವುದನ್ನು ನೋಡುತ್ತೇವೆ. ಆದ್ದರಿಂದ ಇವರು ಗೋಡೆಗಳಿಗೆ ಸಾಮಾನ್ಯವಾಗಿ ಸುಣ್ಣ ಅಥವಾ ಬಿಳಿಯ ಸೇಡಿಯನ್ನು ಬಳಸುವುದಿಲ್ಲ.

ಕಾಕನಕೋಟೆಯ ಕಾಡಿನಲ್ಲಿ ಅಥವಾ ರಾಜೀವಗಾಂಧಿ ರಾಷ್ಟ್ರೀಯ ಉದ್ಯಾನವನ ಕಾಡಿನಲ್ಲಿ ಆನೆಗಳು ಹೇರಳವಾಳಿರುವುದರಿಂದ ಬಿಳಿಯ ಬಣ್ಣದ ಗೋಡೆಗಳು ಆನೆಗೆ ಆಕರ್ಷಣೆ ನೀಡಬಾರದೆಂಬ ಕಾರಣ ಇದೆ. ಹಾಗಾಗಿ ಈ ಕಾಡಿನಲ್ಲಿ ವಾಸಿಸುವ ಬುಡಕಟ್ಟು ಸಮುದಾಯಗಳ ಮನೆಗಳ ಗೋಡೆಯ ಬಣ್ಣಗಳು ಬಹಳ ಮಂಕಾಗಿ ಇರುವುದನ್ನು ಕಾಣುತ್ತೇವೆ. ಇದನ್ನು ತಂಪು ಬಣ್ಣಗಳೆಂದು ಕರೆಯಬಹುದು. ಇವರು ಹಾಕಿದ ಗೆರೆಗಳು ಶಾಂತತೆಯನ್ನು, ಕಣ್ಣಿಗೆ ತಂಪಾದ ನೋಟವನ್ನು ಬೀರುತ್ತವೆ. ಹಾಗೆಯೇ ಗೋಡೆಯ ಕೆಳಭಾಗದ ಗೋಡೆಯ ಅಂಚಲ್ಲಿ ತ್ರಿಭುಜಾಕಾರದ ಚಿತ್ರಗಳು ಕಾಣಿಸುತ್ತವೆ. ಈ ತ್ರಿಭುಜಗಳು ಬೆಟ್ಟಗುಡ್ಡಗಳನ್ನು ಸಂಕೇತಿಸುತ್ತವೆ. ಇವು ಆದಿಮ ಚಿತ್ರಕಲೆಯನ್ನು ಹೋಲುತ್ತವೆ. ಇದನ್ನು ಗೋಡೆ ಬಳಿಯುವಾಗಲೇ ಬೆರಳಿನ ಸಹಾಯದಿಂದ ಗೀರಿದ ಚಿತ್ರಗಳಾಗಿರುತ್ತವೆ. ಇವರ ಗೋಡೆಯ ಮೇಲಿನ ಗೀರು ಚಿತ್ರಗಳು ಎಂದು ಹೇಳಬಹುದು. ಈ ಗೀರು ಚಿತ್ರಗಳನ್ನು ಮನೆಯ ಹೊರಭಾಗದ ಸುತ್ತಲೂ ಬರೆಯಲಾಗಿರುತ್ತದೆ. ಇವು ಮನೆಗಳ ಗೋಡೆಗಳ ಮೇಲೆ ಬೇರೆ ಬೇರೆ ಆಕಾರದಲ್ಲಿ ಇರುವುದನ್ನು ನೋಡುತ್ತೇವೆ. ಇಲ್ಲಿ ಬೇರೆ ಬೇರೆ ಬಣ್ಣಗಳನ್ನು ಬಳಸಲಾಗಿದೆ. ಈ ಚಿತ್ರಗಳು ಕಲಾತ್ಮಕವಾಗಿ ಕಾಣಸುತ್ತವೆ. ಇಲ್ಲಿ ಬಳಸುವ ಬಣ್ಣಗಳು ಸಂಪೂರ್ಣವಾಗಿ ಪ್ರಕೃತಿಯಲ್ಲಿ ಸಿಗುವ ಬಣ್ಣಗಳಾಗಿರುತ್ತವೆ. ಅವು ಮಸಿಕಪ್ಪು, ಸಗಣಿ, ಕಪ್ಪುಮಣ್ಣು, ಉರಿದ ಬ್ಯಾಟರಿಶಲ್ಲುಗಳು ಮುಂತಾದವು ಆಗಿರುತ್ತವೆ. ಈ ಬಣ್ಣಗಳ ವಿವರಣೆಯನ್ನು ಅಧ್ಯಾಯ ೭ರಲ್ಲಿ ವಿವರಿಸಲಾಗಿದೆ. ಗೋಡೆಯ ಮೇಲಿನ ಚಿತ್ರಗಳು ಬಾಳೆಯ ಎಲೆ, ಹುಲಿಪಟ್ಟೆ, ತೆಂಗಿನಗರಿ, ಗುಡ್ಡಗಳು, ಮರಗಳು, ಬಳ್ಳಿಯ ಚಿತ್ರಗಳಂತೆ ಕಾಣುತ್ತವೆ. ಈ ಮನೆಗಳನ್ನು ದೂರದಿಂದ ನೋಡಿದಾಗ ಅವು ಕಾಡಿನಿಂದ ಬೇರ್ಪಡದೆ ಕಾಡಿನೊಂದಿಗೆ ಹೊಂದಿಕೊಂಡು ಇರುವಂತೆ ಕಾಣುತ್ತವೆ.

ಗೋಡೆಗಳ ಮೇಲೆ ಗೀರು(ಗೆರೆ) ಚಿತ್ರಗಳನ್ನು ಬರೆಯುವ ವಿಧಾನ : ಹದಗೊಂಡ ಕಪ್ಪುಮಣ್ಣನ್ನು ಹೆಣಿಕೆಯ ಬಿದಿರಿನ ಗೋಡೆಗೆ ಅಥವಾ ತಡಿಕೆಗೆ ಮೆತ್ತುತ್ತಾರೆ (ಹಾಕುತ್ತಾರೆ). ಅದು ಒಂದು ಹಂತದ ತನಕ ಕೈಯಲ್ಲೇ

[illegible]

[illegible]

[illegible]

ಗೋಡೆಯನ್ನು ಸಾಫಾಗಿ (ನಯವಾಗಿ) ಮಾಡುತ್ತಾರೆ. ಅದು ಅರ್ಧ ಒಣಗಿದ ಮೇಲೆ ಬತ್ತದ ಹುಲ್ಲಿನ ಮಸಿಯೊಂದಿಗೆ ಬಿಳಿ ಸೇಡಿಯನ್ನು ಮಿಶ್ರಣಮಾಡಿಕೊಂಡು ಗೋಡೆಗೆ ಬಳಿಯುತ್ತಾರೆ. ಆನಂತರ ಬೆರಳಿನಿಂದ ಗೆರೆಯನ್ನು ಎಳೆಯುತ್ತಾರೆ. ಗೆರೆಯನ್ನು ಎಳೆದಾಗ ಗೋಡೆಯಲ್ಲಿದ್ದ ಹಿಂಬಣ್ಣವಾದ ಕಪ್ಪುಬಣ್ಣ ಎದ್ದು ಕಾಣುತ್ತದೆ. ಇದು ಒಂದು ರೀತಿಯ ವಿಧಾನ.

ಮತ್ತೊಂದು ವಿಧಾನ : ಬಿದಿರಿಗೆ ಕಪ್ಪುಮಣ್ಣನ್ನು ಹಾಕಿದ ಮೇಲೆ ಬತ್ತದ ಹುಲ್ಲಿನ ಮಸಿಯೊಂದಿಗೆ ಸಗಣಿಯನ್ನು ಮಿಶ್ರಣಮಾಡಿಕೊಂಡು ಬಳಿಯುತ್ತಾರೆ. ಅದು ಅಲ್ಪಸ್ವಲ್ಪ ಒಣಗಿದ ನಂತರ ಕೆಂಪು ಮಣ್ಣಿಗೆ ಸಗಣಿಯನ್ನು ಕಲಸಿ ಅದರ ಮೇಲೆ ಹಚ್ಚುತ್ತಾರೆ. ಆನಂತರ ತಮಗೆ ಬೇಕಾದ ಆಕೃತಿಯಲ್ಲಿ ತಮ್ಮ ಬೆರಳುಗಳಿಂದ ಗೀರುತ್ತಾರೆ. ಹೀಗೆ ಗೀರಿದಾಗ ಹಿಂದಿದ್ದ ಕಪ್ಪುಬಣ್ಣ ಗೆರಯಾಗಿ ಎದ್ದುಕಾಣುತ್ತದೆ. ಗೋಡೆ ಬಳಿಯವವರ ಕೈಯಿನ ಅಳತೆಯಂತೆ ಗೀರುಗಳು ಅಥವಾ ಗೆರೆಗಳು ಗೋಡೆಗಳ ಮೇಲೆ ಮೂಡುತ್ತವೆ. ಇಲ್ಲಿ ತಮ್ಮ ಮನಸ್ಸಿನ ಭಾವನೆಗಳು, ಗೀರುಗಳ ರೂಪದಲ್ಲಿ ಎದ್ದುಕಾಣುತ್ತವೆ. ಮತ್ತು ತಮ್ಮ ಸುತ್ತಮುತ್ತಲಿನ ಪರಿಸರವನ್ನು ಪ್ರತಿಬಿಂಬಿಸುತ್ತವೆ.



ಯರವರ ಗೋಡೆ ಮೇಲಿನ ಗೀರುಚಿತ್ರ


ಸಗಣಿಯನ್ನು ಮಸಿಯೊಂದಿಗೆ ಗೋಡೆಗೆ ಬಳಿಯಲು ಮುಖ್ಯ ಕಾರಣವೇನೆಂದರೆ ಕೈಯಿಗೆ ಅಂಟದಂತೆ ಸಗಣಿ ತಡೆಯುತ್ತದೆ ಇದರ ಜೊತೆಗೆ ಸಗಣಿಯ ಬಗ್ಗೆ ಅವರಿಗಿರುವ ನಂಬಿಕೆಗೆ ಕಾರಣವಾಗಿದೆ.

ಹೀಗೆ ಪ್ರತಿಯೊಂದು ಬುಡಕಟ್ಟು ಸಮುದಾಯದವರು ಕೂಡ ಮನೆಯ ಗೋಡೆಗಳ ಮೇಲಿನ, ನೆಲದ ಮೇಲಿನ ಬಣ್ಣಗಳನ್ನು ತಯಾರಿಸಿ ಬಳಸುತ್ತಾರೆ. ಇವನ್ನು ಆಯಾ ಸಮುದಾಯದ ಮನೆಗಳ ಮೇಲೆ ಕಾಣಬಹುದು. ಈ ಬಣ್ಣಗಳ ಕಲ್ಪನೆಯು ನಗರಸಂಪರ್ಕವನ್ನು ಹೊಂದಿದ ಕೆಲವೇ ಕೆಲವು ಬುಡಕಟ್ಟುಗಳಲ್ಲಿ ಬದಲಾವಣೆಯನ್ನು ಕಾಣಬಹುದು. ಇದು ಸಿಗುವುದು ತೀರಾ ವಿರಳ.



ಯರವರು ತಮ್ಮ ಮನೆಗಳಿಗೆ ಬಣ್ಣವನ್ನು ಹಾಕುವುದು ಬಿಸು ಹಬ್ಬದ ಸಂದರ್ಭದಲ್ಲಿ, ಇದು ಯುಗಾದಿ ಹಬ್ಬ ಕಳೆದ ಒಂದು ತಿಂಗಳ ನಂತರ ಬರುವ ಹಬ್ಬವಾಗಿದೆ.

ವೋಣಂ ಹಬ್ಬದಲ್ಲಿ ಬರೆಯುವ ಚಿತ್ರ : ಇವರ ಮತ್ತೊಂದು ವಿಶೇಷವಾದ ಹಬ್ಬವೆಂದರೆ ವೋಣಂ ಹಬ್ಬ. ಈ ವೊಣಂ ಹಬ್ಬದಲ್ಲಿ ಹೂವಿನ ಚಿತ್ರ ಬರೆಯುತ್ತಾರೆ. ಇದಕ್ಕೆ 'ಹತ್ತ' ಚಿತ್ರ ಎಂದು ಕರೆಯುತ್ತಾರೆ. ಈ ವೊಣಂ ಹಬ್ಬದಲ್ಲಿ ಹೂವಿನ ಚಿತ್ರಗಳದೇ ವಿಶೇಷ. ಇದು ಕೇರಳದ ದೊಡ್ಡಹಬ್ಬ. ಈ ಹಬ್ಬದಲ್ಲಿ ಹತ್ತು ದಿನ ಹೂವಿನ ಚಿತ್ರ ಬರೆಯುತ್ತಾರೆ. ಹತ್ತನೇ ದಿನಕ್ಕೆ ಹೂವಿನ ಚಿತ್ರ ಪೂರ್ಣಗೊಳ್ಳುತ್ತದೆ. ಒಂದೊಂದು ದಿನವೂ ಒಂದೊಂದು ಮಂಡಲ ವನ್ನು ಹಾಕುತ್ತಾರೆ. ಹೀಗೆ ಒಂದು ಮಂಡಲದಿಂದ ಪ್ರಾರಂಭವಾಗಿ ಹತ್ತು ಮಂಡಲ ದವರೆಗೆ ಮುಂದುವರೆಯುತ್ತದೆ. ಈ ಹತ್ತು ಮಂಡಲಕ್ಕೂ ಹತ್ತು ತರಹದ ಹೂವನ್ನು ಹಾಕುತ್ತಾರೆ. ಈ ಮಂಡಲದ ಮಧ್ಯದಲ್ಲಿ ಒಂದು ದೊಡ್ಡ ಹೂವನ್ನು ಇಡುತ್ತಾರೆ. ಜೊತೆಗೆ ಒಂದು ದೀಪವನ್ನು ಹಚ್ಚಿ ಇಡುತ್ತಾರೆ.



ಹೂವಿನ ಚಿತ್ರ ಬರೆಯುತ್ತಿರುವ ಯರವರ ಮಹಿಳೆ

ಮಂಡಲ ಎಂದರೆ ಗೋಲ ಎಂದು ಅರ್ಥ. ಈ ಚಿತ್ರ ಬರೆಯಲು ಬಳಸುವ ಹೂವುಗಳು ಕಾಡಿನಲ್ಲಿ ಸಿಗುವ ಹೂವುಗಳೇ ಆಗಿರುತ್ತವೆ. ಈ ಚಿತ್ರವನ್ನು ಬರೆಯುವವರು ಯರವ ಬುಡಕಟ್ಟು ಸಮುದಾಯದ ಹೆಣ್ಣು ಮಕ್ಕಳು. ಇವರು ಚಿತ್ರ ಬರೆಯುವಾಗ ಸ್ನಾನಮಾಡಿ ಮಡಿಧರಿಸಿಯೇ ಚಿತ್ರವನ್ನು ಬರೆಯುತ್ತಾರೆ. ಬರೆದಂತ ಚಿತ್ರಕ್ಕೆ ಹೂವನ್ನು ಸುಂದರವಾಗಿ ತುಂಬಿದ ನಂತರ ಅದಕ್ಕೆ ಪೂಜೆಯನ್ನು ಮಾಡುತ್ತಾರೆ. ಈ ಹಬ್ಬ ಸೆಪ್ಟೆಂಬರ್ ತಿಂಗಳಲ್ಲಿ ಬರುತ್ತದೆ. ಇದು ಇವರ ಸಾರ್ವತ್ರಿಕ ಹಬ್ಬ.


ದೀಪಾವಳಿ ಹಬ್ಬದಲ್ಲಿ ವಿಶೇಷವಾಗಿ ದನಗಳ ಪೂಜೆಯನ್ನು ಮಾಡುತ್ತಾರೆ. ಈ ಹಬ್ಬದಲ್ಲಿ ದನಗಳ ಮೈತೊಳೆದು ಅವುಗಳ ಕೊಂಬುಗಳನ್ನು ನೀಟಾಗಿ ಹರೆದ ನೀಲಿಬಣ್ಣವನ್ನು ಕೊಂಬಿಗೆ ಹಾಕುತ್ತಾರೆ. ನೀಲಿಯ ಜೊತೆಗೆ ಹರಳೆಣ್ಣೆಯನ್ನು ಮಿಶ್ರಣಮಾಡಿಕೊಂಡು ಹಾಕುತ್ತಾರೆ. ಆನಂತರ ನೀಲಿಬಣ್ಣವನ್ನು ಹಸ್ತಕ್ಕೆ ಹಾಕಿಕೊಂಡು ದನಗಳ ಬೆನ್ನಿನ ಮೇಲೆ ಹಾಕುತ್ತಾರೆ. ದನಗಳ ಬೆನ್ನಿನ ಮೇಲೆ ಈ ರೀತಿಯ ಹಸ್ತ ಇರಬೇಕು ಎಂದು ಹೇಳುತ್ತಾರೆ. ಇದಕ್ಕೆ ಕಾರಣ ದನಗಳಿಗೆ ದೃಷ್ಟಿತಾಗಬಾರದೆಂಬ ಉದ್ದೇಶದಿಂದ. ಇದೇ ದಿನ ದನಗಳ ಹಣೆಗೆ ಮುಳ್ಳುಗಳ್ಳಿಯ ಹಾಲನ್ನು ತಂದು ಹುಚ್ಚುತ್ತಾರೆ. ಅದನ್ನು ದನಗಳ ದೃಷ್ಟಿಬೊಟ್ಟು ಎಂದು ಕರೆಯುತ್ತಾರೆ. ಈ ಸಂದರ್ಭದಲ್ಲಿ ದನಗಳು ಹಸಿರನ್ನು ಮೇದು ದಸ್ಟಪುಷ್ಟವಾಗಿರುತ್ತವೆ. ಅವುಗಳಿಗೆ



ದೃಷ್ಟಿ ತಾಗಬಾರದೆಂಬ ನಂಬಿಕೆ ಅವರಲ್ಲಿ ಇದೆ. ಈ ಪದ್ಧತಿ ಕೃಷಿಪ್ರಧಾನ ಸಮುದಾಯಗಳಲ್ಲೆಲ್ಲಾ ಕಾಣಸಿಗುತ್ತದೆ.

೪ **ಕಾಡುಕುರುಬರು :** ಕಾಡುಕುರುಬರು ತಮಗೆ ಕಾವಿನಲ್ಲಿ ಅನುಕೂಲವೆನಿಸಿದ ಕಡೆ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಇವನ ಮನೆಗಳೂ ಕೂಡ ಬಿದಿರಿನಿಂದ ಕಟ್ಟಿದ ಮನೆಗಳಾಗಿರುತ್ತವೆ. ಮನೆಯ ಅಲಂಕಾರಕ್ಕೆ ತಕ್ಕಂತೆ ಮಣ್ಣನ್ನು ಹದಗೊಳಿಸಿ ಬಿದಿರತಡಿಕೆಯ ಗೋಡೆಗಳಿಗೆ ಮೆತ್ತುತ್ತಾರೆ. ನಂತರ ಗೋಡೆಯ ಅಲಂಕಾರಕ್ಕೆ ತಮ್ಮ ಕೈಗಳಿಂದ ಗೆರೆಗಳನ್ನು ಎಳೆದು ಸುಂದರಗೊಳಿಸುತ್ತಾರೆ. ಇದೇ ರೀತಿಯ ಗೋಡೆ ಅಲಂಕಾರ ಜೇನುಕುರುಬರು ಹಾಗೂ ಎವರಲ್ಲೂ ಸಹ ಕಾಣಬಹುದಾಗಿದೆ.

ಕಾಡಕುರುಬರ ಚಿತ್ರಗಳು : ಇವರು ಚಿತ್ರವನ್ನು ಬರೆಯಲು ಸೇಡಿಯನ್ನು ಬಳಸುತ್ತಾರೆ. ಜೊತೆಗೆ ರಂಗೋಲಿಯನ್ನು ಹಾಕುತ್ತಾರೆ. ಇವು ದಿನನಿತ್ಯ ಬರೆಯುವ ಚಿತ್ತಾರಗಳು. ಅಂದರೆ ಮನೆಯಂಗಳಕ್ಕೆ ಬೆಳಿಗ್ಗೆ ಹಾಕುವ ರಂಗೋಲಿ ಚಿತ್ರಗಳು ಇವು ಆಗಿರುತ್ತವೆ. ಇವರಲ್ಲಿ ವಿಶೇಷವಾಗಿ ಚಿತ್ರಬರೆಯುವುದು ಸಂಪ್ರದಾಯದ ಸಂದರ್ಭಗಳಲ್ಲಿ ಅದರಲ್ಲೂ ಮದುವೆ ಸಂದರ್ಭದಲ್ಲಿ ಬರೆಯವ ಹಸೆಯ ಚಿತ್ತಾರಗಳಲ್ಲಿ ಹಸೆಮಣೆಯ ಕೆಳಗಡೆ ಅಕ್ಕಿಯಿಂದ ರಂಗೋಲಿ ಚಿತ್ತಾರಗಳನ್ನು ಕಲಾತ್ಮಕವಾಗಿ ಹಾಕುತ್ತಾರೆ.



ಲೀಲಾವತಿ ಜಾಗನಕೋಟೆ

"ಅಕ್ಕಿಯಿಂದ ಹಾಕುವ ಚಿತ್ತಾರದ ರಂಗೋಲಿಯ ಕಲಾತ್ಮಕತೆಯನ್ನು ಅವರ ಬಾಯಲ್ಲೇ ಕೇಳಬೇಕು. ಈ ರಂಗೋಲಿ ಪದವು ಈ ರೀತಿಯಾಗಿ ಸಾಗಿಬರುತ್ತದೆ.

ಅಕ್ಕಿ ತಕ್ಕೊಂಡು ಚಿಕ್ಕಿ ಬರ್‍ಯಾಳೆ
ಅಕ್ಕಿ ಮೇಲದ ಚಿತ್ರದ ರಂಗೋಲೆ
ಏನು ಮೇಲದ ಚಿತ್ರದ ರಂಗೋಲೆ
ಏನು ಏನಿದು ಚದುನಂದರ

ತೋಳು ಚಪ್ಪರ ಚಿತ್ರ ರಂಗೋಲೆ ಹೀಗೆ ವಿಧವಿಧವಾದ ಚಿತ್ತಾರದ ಎಳೆಗಳನ್ನು ಬರೆಯುವುದು ಇಲ್ಲಿ ಒಂದು ಕಲೆಯಾಗಿದೆ."[೯] ಅಂತೆಯೇ ಹಲವು ಪದಗಳನ್ನು ಇವರು ಚಿತ್ರ ಬರೆಯುವ ಸಂದರ್ಭದಲ್ಲಿ ಹಾಡುತ್ತಾರೆ. ಇದು ಅಕ್ಕಿಯಲ್ಲಿ ಬರೆಯುವ ಹಸೆಯ ಚಿತ್ರವಾಗಿರುತ್ತದೆ. ಹಾಗೆಯೇ


ಹಣ್ಣು ತಕ್ಕೊಂಡು ನಮ್ಮಣ್ಣಯ್ಯನ ಬಾರ್‍ಹೇಳೆ
ಹಣ್ಣು ಮೇಲದ ಚಿತ್ರದ ರಂಗೋಲೆ
ಏನು ಏನಿದು ಚದುನಂದರ

ತೋಳು ಚಪ್ಪರ ಚಿತ್ರ ರಂಗೋಲೆ"[೧೦]. ಇದು ಚಪ್ಪರದಲ್ಲಿ ನೆಲದ ಮೇಲೆ ಹಾಕುವ ರಂಗೋಲಿಗಳು ಆಗಿವೆ. ಮದುವೆ ಸಂದರ್ಭದಲ್ಲಿ ಇವರಿಗೆ ರಂಗೋಲಿ ಹಾಕುವುದು ವಿಶೇಷವಾದಂಥ ಸಂಪ್ರದಾಯವೇ ಆಗಿದೆ. ರಂಗೋಲಿಯನ್ನು ಹಾಕುವವರು ಹಲವು ಬಗೆಯ ಹಾಡುಗಳನ್ನು ಹಾಡುತ್ತಲೇ

[illegible]

ಚಿತ್ತಾರಗಳನ್ನು ಬರೆಯುತ್ತಾರೆ. ಈ ಸಂದರ್ಭದಲ್ಲಿ ಮುಖ್ಯವಾಗಿ ಅಕ್ಕಿ, ಹಣ್ಣು, ಹೂವು, ಎಲೆಗೆ ಸಂಬಂಧಪಟ್ಟಂತೆ ಹೆಚ್ಚು ಪ್ರಾಶಸ್ತ್ಯವನ್ನು ಕೊಡಲಾಗಿದೆ.

ಕಾಡುಕುರುಬರು ರಚಿಸಿದ ಚಿತ್ರಗಳು



ಲೀಲಾವತಿ ಜಾಗನಕೋಟೆ

ಇವರ ಮನೆಗಳಲ್ಲಿಯೂ ಕೂಡ ಗೋಡೆಗಳ ಮೇಲೆ ಚಿತ್ರಗಳು ಕಾಣಸಿಗುತ್ತವೆ. ಅವುಗಳಲ್ಲಿ ಪ್ರಕೃತಿ ಚಿತ್ರಗಳೇ ಹೆಚ್ಚು. ಅಂದರೆ ಗಿಡಮರಗಳ ಮತ್ತು ಪ್ರಾಣಿಪಕ್ಷಿಗಳ ಚಿತ್ರ ಹೆಚ್ಚಾಗಿ ಕಾಣಸಿಗುತ್ತವೆ. ಬಾಳೆಗಿಡಗಳ ಚಿತ್ರ, ತೆಂಗಿನ ಮರಗಳ ಚಿತ್ರಗಳನ್ನು ಹೇರಳವಾಗಿ ಕಾಣುತ್ತವೆ. ಮೂಲತಃ ಇವರು ನೆಲೆನಿಂತ ಮೇಲೆ ಬಾಳೆ ಮತ್ತು ತೆಂಗನ್ನು ಹಾಕಿದವರು. ಹಾಗಾಗಿ ಇವು ಸಾಕಷ್ಟು ಪ್ರಭಾವವನ್ನು ಬೀರಿವೆ. ಈ ಬಾಳೆ, ತೆಂಗಿನ ಗಿಡಗಳ ಚಿತ್ರಗಳು ನೈಜವಾಗಿದ್ದು ಇವು ತಮ್ಮ ಅನುಭವದ ಜ್ಞಾನದಲ್ಲಿ ಬರೆಯಲ್ಪಟ್ಟಿವೆ. ಇವು ಇಂದಿನ ಅಕೆಡೆಮಿಕ್ ಅಭ್ಯಾಸಕ್ಕೆ ಹೊಂದಿದ್ದರೂ ತಮ್ಮದೇ ಆದ ವಿಶೇಷತೆಯನ್ನು ಕಾಣಬಹುದಾಗಿದೆ. ಆದರೆ ಸಾಮಾನ್ಯ ನೋಡುಗರಿಗೆ ಈ ಚಿತ್ರಗಳು ಅತ್ಯಂತ ಸರಳೀಕೃತವಾಗಿ ಕಾಣಿಸುತ್ತವೆ.

ಇವರಲ್ಲಿ ರಂಗೋಲಿ ಚಿತ್ರಗಳು ವಿಶೇಷತೆಯನ್ನು ಹೊಂದಿದ್ದು, ಈ ಚಿತ್ರಗಳು ತಮ್ಮದೇಯಾದಂಥ ಬುಡಕಟ್ಟಿನ ಶೈಲಿಯಲ್ಲಿವೆ. ಅವುಗಳಲ್ಲಿ ವಿಶೇಷವಾಗಿ ಅರಳಿ ಎಲೆಯ ಚಿತ್ರ ಬಿಡಿಸುವುದು, ಹೂವಿನ ಚಿತ್ರಗಳನ್ನು ಬಿಡಿಸುವುದು, ಹಾಗೂ ಜಾಮಿತಿಯಾಕಾರದ ಚಿತ್ರಗಳು ಸಹ ನಮಗೆ ಕಾಣಿಸುತ್ತವೆ. ಇವರು ಕಲಾಭಿರುಚಿಯನ್ನು, ಸೌಂದರ್ಯ ಪ್ರಜ್ಞೆಯನ್ನು ಹೊಂದಿದ್ದಾರೆ. ಇವರಲ್ಲಿ ಹಚ್ಚೆಯ ಚಿತ್ರಗಳು ಹೇರಳವಾಗಿ ಕಾಣಸಿಗುತ್ತವೆ.

ಪಣಿಯರು : ಪಣಿಯರ ಮನೆಗಳ ಭೌತಿಕ ಲಕ್ಷಣಗಳೂ ಕೂಡ ತಮ್ಮದೇ ಆದಂಥ ಹಿನ್ನೆಲೆಗಳನ್ನು ಒಳಗೊಂಡಿವೆ. ನಾಲ್ಕು ಕಂಬಗಳನ್ನು ನೆಟ್ಟು ಅದರ ಮೇಲೆ ಹುಲ್ಲು, ಕಾಡು, ಸೊಪ್ಪುಗಳನ್ನು ಹಾಕಿಕೊಂಡು ಕಾಡಮಧ್ಯದಲ್ಲಿ ಕೂಲಿಯ ಜೀವನವನ್ನು ಮಾಡುತ್ತಾ ಬಂದಿದ್ದಾರೆ. ಇವರೂ ಕೂಡ ತಮ್ಮ ಮನೆಯ



ಗೋಡೆಗಳ ಮೇಲೆ ತಮ್ಮದೇ ಆದಂಥ ಬಣ್ಣಗಳ ಕಲ್ಪನೆಯನ್ನು ಹೊಂದಿದ್ದಾರೆ. ಇಂತಹ ಬಣ್ಣಗಳನ್ನು ಅವರ ಮನೆಯ ಗೋಡೆಗಳ ಮೇಲೆ ನೋಡಬಹುದು. ಇವರು ಸಾಮಾನ್ಯವಾಗಿ ಬಿದಿರು ತಡಿಕೆಯ ಗೋಡೆಗಳಿಗೆ ಮಣ್ಣನ್ನು ಹಾಕುವುದಿಲ್ಲ. ಒಂದು ವೇಳೆ ಹಾಕಿದರೆ ಕೆಂಪುಬಣ್ಣದ ಮಣ್ಣನ್ನು ಹಾಕುತ್ತಾರೆ. ಇದು ಬಹುತೇಕ ಪಣಿಯ ಸಮುದಾಯಗಳ ಮನೆಗಳಲ್ಲಿ ಕಾಣಬರುವ ದೃಶ್ಯ ನೈಸರ್ಗಿಕವಾಗಿ ಸಿಗುವಂತ ಹಲವು ಬಗೆಯ ಮಣ್ಣನ್ನು ಮನೆಗೆ ಬಳಸುತ್ತಾರೆ. ಬಿಳಿಸೇಡಿಯನ್ನು ಬಳಸುತ್ತಾರೆ. ಹಬ್ಬ ಹರಿದಿನಗಳಲ್ಲಿ ಮನೆಗೆ ಈ ನೈಸರ್ಗಿಕ ಬಣ್ಣವನ್ನು ಹಾಕುತ್ತಾರೆ. ಜೊತೆಗೆ ಯರವರಂತೆ, ಜೇನುಕುರುಬರಂತೆ, ಕಾಡುಕುರುಬರಂತೆ ತಮ್ಮದೇ ಆದಂಥ ರೀತಿಯಲ್ಲಿ ಗೀರು ಚಿತ್ರಗಳನ್ನು ಹಾಕುತ್ತಾರೆ. ಇವು ಅನ್ಯ ಸಮುದಾಯಗಳಿಗಿಂತ ಭಿನ್ನವಾದಂಥ ರೀತಿಯಲ್ಲಿ ಇರುತ್ತವೆ. ಜೊತೆಗೆ ಗೋಡೆಯ ಮೇಲೆ ತಮ್ಮ ಅಳತೆಗೆ ತಕ್ಕಂತೆ ಕಪ್ಪುಪಟ್ಟಿಯನ್ನು ಬಿಡುತ್ತಾರೆ. ಇದು ಗೋಡೆಗಳ ಮೇಲೆ ಕಂಡುಬರುವ ವೈಶಿಷ್ಟ್ಯ.

ಮದುವೆ ಮತ್ತಿತರ ಕಾರ್ಯಗಳಲ್ಲಿ ತಮ್ಮದೇ ಆದಂಥ ಶೈಲಿಯ ಸಾಂಪ್ರದಾಯಿಕ ಶೈಲಿಯ ಚಿತ್ರಗಳನ್ನು ಗೋಡೆಗಳ ಮೇಲೆ ಬರೆಯುತ್ತಾರೆ. ಮದುವೆಯ ಸಂದರ್ಭದಲ್ಲಿ ಗೋಡೆಗಳಿಗೆ ಬಳ್ಳಿ ಚಿತ್ರಗಳನ್ನು ಬರೆಯುತ್ತಾರೆ. ಬಳ್ಳಿ ಚಿತ್ರಗಳು ಗೋಡೆಗಳ ಮೇಲೆ ಇದೆ ಎಂದರೆ ಆ ಮನೆಯಲ್ಲಿ ಮದುವೆಯ ಕಾರ್ಯ ನಡೆದಿದೆ ಎಂದು ಅರ್ಥವನ್ನು ಕೊಡುತ್ತದೆ.

ಬಳ್ಳಿ ಬರೆಯುವ ವಿಧಾನ : ಒಂದು ಹದಕ್ಕೆ ಸುಣ್ಣವನ್ನು ಕಲಿಸಿಕೊಂಡು ಬಟ್ಟಲಿಗೆ ಹಾಕಿಕೊಳ್ಳುತ್ತಾರೆ. ಮರದ ಎಲೆಯನ್ನು, ಅದರಲ್ಲೂ ತೊಟ್ಟು ಇರುವ ಎಲೆಯನ್ನು ಒಂದು ಅಳತೆಗೆ ಕತ್ತರಿಸಿಕೊಂಡು ಎಲೆಯ ತೊಟ್ಟನ್ನು ಹಿಡಿದುಕೊಂಡು, ಅದರ ಎಲೆಯನ್ನು ಸುಣ್ಣಕ್ಕೆ ಅದ್ದಿ ಗೋಡೆಗೆ ಹಚ್ಚುತ್ತಾರೆ.

ಮದುವೆಯ ಸಂದರ್ಭದಲ್ಲಿ ಗಂಡಿಗೆ ಮತ್ತು ಹೆಣ್ಣಿಗೆ ಅರಿಶಿಣವನ್ನು ಹಚ್ಚುತ್ತಾರೆ. ಅರಿಶಿಣವನ್ನು ಅರೆದು ಅದನ್ನು ಕಲಸಿ ಹಣೆಗೆ ಒಂದು ಪಟ್ಟಿಯನ್ನು ಹಾಕುತ್ತಾರೆ. ಆನಂತರ ಅದರ ಮೇಲೆ ಚಿಕ್ಕಿಚಿಕ್ಕಿಯನ್ನು ಇಡುತ್ತಾರೆ. ಇದು ಇವರಿಗೆ ಸಿರಿವಂತಿಗೆಯನ್ನು ಸೂಚಿಸುತ್ತದೆ. ಹಾಗೆಯೇ ಇದು ಮದುವೆಯ ಸಂದರ್ಭದಲ್ಲಿ ಕಂಡುಬರುತ್ತದೆ.



ಪಣಿಯರು ಮದುವೆ ಸಂದರ್ಭದಲ್ಲಿ ಗೋಡೆಯ ಮೇಲೆ ಬರೆದ ಚಿತ್ರ

ಇಂದು ಕೂಲಿಯಿಂದಲೇ ಬದುಕನ್ನು ಸಾಗಿಸುತ್ತಿರುವ ಪಣಿಯರು ತುಂಬ ಕಷ್ಟವನ್ನು ಎದಿರುಸುತ್ತಿದ್ದಾರೆ. ಹಾಗಾಗಿ ಮನೆಗೆ ಸಂಬಂಧಿಸಿದ ಅತ್ಯಗತ್ಯ ವಸ್ತುಗಳನ್ನು ಮಾತ್ರ ಹೊಂದಿರುತ್ತಾರೆ. ಮತ್ತು ಇವರ ಮನೆಗಳೂ ಕೂಡ ಚಿಕ್ಕ ಚಿಕ್ಕಮನೆಗಳಾಗಿರುವುದನ್ನು ಕಾಣಬಹುದು.



೬ ಹಸಲರು : ಹಸಲರು ಚಿತ್ರಗಳನ್ನು, ಹಬ್ಬ ಹರಿದಿನ, ಮದುವೆ ಮತ್ತಿತರ ವಿಶೇಷ ಸಂದರ್ಭಗಳಲ್ಲಿ ಚಿತ್ರಗಳನ್ನು ಬರೆಯುತ್ತಾರೆ. ಈ ಸಂದರ್ಭಗಳಲ್ಲಿ ಮನೆಯ ನೆಲದ ಮೇಲೆ, ಗೋಡೆಗಳ ಮೇಲೆ ಕೆಲವು ವಸ್ತುಗಳ ಮೇಲೆ ಚಿತ್ರಗಳನ್ನು ಬರೆಯುತ್ತಾರೆ. ಈ ಎಲ್ಲಾ ಚಿತ್ರಗಳು, ಸಂಪ್ರದಾಯ ಸಂಬಂಧಿ ಮತ್ತು ಆಚರಣಾ ಸಂಬಂಧಿ ಚಿತ್ರಗಳು ಆಗಿರುತ್ತವೆ. ಹಸಲರು ಬುಡಕಟ್ಟು ಜನಾಂಗವಾಗಿದ್ದು ಕಾಡಿನಲ್ಲೇ ಹುಟ್ಟಿ ಕಾಡಿನಲ್ಲೇ ಬೆಳೆದು ಬದಕನ್ನು ಸಾಗಿಸುತ್ತಿರುವಂತವರು. ಇವರು ಕೃಷಿಪ್ರಧಾನ ವ್ಯವಸ್ಥೆಗೆ ಅಂಟಿಕೊಂಡು ಅದಕ್ಕೆ ಸಂಬಂಧಿಸಿದಂತೆ ಬದುಕನ್ನು ಸಾಗಿಸುತ್ತಾ ಇದ್ದಾರೆ. ಕೆಲವು ಆಚರಣೆ ಮತ್ತು ಸಂಪ್ರದಾಯಗಳು ಕೃಷಿ ವ್ಯವಸ್ಥೆಯಿಂದಲೇ ಹುಟ್ಟಿದಂತವು. ಅವುಗಳಿಗೆ ತಕ್ಕಂತೆ ಚಿತ್ರಕಲೆ ಅವರ ಬದುಕಲ್ಲಿ ಒಂದು ಭಾಗವಾಗಿ ಬೆಳೆದಿರುವುದನ್ನು ಕಾಣಬಹುದಾಗಿದೆ.



ಗೋಡೆಯ ಮೇಲಿನ ಹಸೆಯ ಚಿತ್ತಾರ

ಸಾಂಪ್ರದಾಯಿಕ ಚಿತ್ರಗಳು : ಹಸಲರು ಮದುವೆಯ ಸಂದರ್ಭದಲ್ಲಿ ಹಲವಾರು ರೀತಿಯ ಚಿತ್ರಗಳನ್ನು ಬರೆಯುತ್ತಾರೆ. ಇವರ ಮದುವೆಯಲ್ಲಿ ಹಸೆಯ ಚಿತ್ರ ಬರೆಯುವುದು ಕಡ್ಡಾಯ. ಬಹಳ ಸಂಭ್ರಮದಿಂದ ಹಸೆಯ ಚಿತ್ರಗಳನ್ನು ಬರೆಯುತ್ತಾರೆ. ಇದು ಸಂಪ್ರದಾಯವಾಗಿ ನಡೆದುಕೊಂಡು ಬಂದ ಕಲೆ. ಈ ಹಸೆಯ ಚಿತ್ರವನ್ನು ಬರೆಯುವುದರ ಜೊತೆಗೆ ಬಾಗಿಲ ಅಲಂಕಾರಕ್ಕೆ ಬಾಗಿಲ ಸುತ್ತಾ ಗೋಡೆಗೆ ಹಲವು ರೀತಿಯಲ್ಲಿ ಚಿತ್ತಾರಗಳನ್ನು ಬರೆಯುತ್ತಾರೆ. ಹಸೆಯ ಚಿತ್ತಾರಗಳಲ್ಲಿ ಹಲವು ರೀತಿಯ ಹಸೆಯ ಚಿತ್ತಾರಗಳು



ಭೂಮಣಿ ಬುಟ್ಟಿಯ ಮೇಲಿನ ಬಿಡಿ ಚಿತ್ರಗಳು



[illegible]

[illegible]

[illegible]

ಹಸಲರ ಚಿತ್ತಾರಗಳು



ಹಸಲರ ಗೋಡೆಯ ಮೇಲಿನ ಚಿತ್ರ



ಹಸಲರ ಭೂಮಿಣಿ ಬುಟ್ಟಿಯ ಬಿಡಿ ಚಿತ್ರ

ಕಾಣಿಸುತ್ತವೆ. ಹಸೆಯ ಚಿತ್ತಾರಗಳನ್ನು ಇವರು ಬರೆಯವುದು ಗೋಡೆಗಳ ಮೇಲೆಯೇ. ಅವುಗಳನ್ನು ದೀವರ ಭಾಗದಲ್ಲಿ ವಿವರಿಸಲಾಗುವುದು.

ಇವರಲ್ಲಿ ಭೂಮಿಹುಣ್ಣಿಮೆ ಹಬ್ಬವು ಬಹುಮುಖ್ಯವಾದಂಥ ಹಬ್ಬ. ಈ ಹಬ್ಬದಲ್ಲಿ ಭೂಮಿಣಿಪುಟ್ಟಿಯ (ಬುಟ್ಟಿಯ) ಮೇಲೆ ಸಾಂಪ್ರದಾಯಿಕ ಚಿತ್ರಗಳನ್ನು ಬರೆಯುತ್ತಾರೆ. ಇದನ್ನು ಭೂಮಿ ಹುಣ್ಣಿಮೆಯ ದಿನ ಆಚರಿಸುತ್ತಾರೆ. ಅಂದು ಫಸಲನ್ನು ಕೊಡುವ ಬತ್ತದ ಸಸಿಗಳಿಗೆ ಸೀಮಂತಕಾರ್ಯ. ಈ ಸೀಮಂತ ಕಾರ್ಯವನ್ನು ಮಾಡಲೋಸ್ಕರ ಭೂಮಿಣಿ ಬುಟ್ಟಿಯನ್ನು ತಯಾರುಮಾಡಿಕೊಂಡು ಅದರ ಮೇಲೆ ಚಿತ್ರವನ್ನು ಬರೆಯುತ್ತಾರೆ.


ಕೊಟ್ಟಿಗೆಯ ಗೋಡೆಗೆ ಗೋವಿನಪಾದ

ಕೃಷಿಕರಾದ ಇವರು ಗೋವಿನ ಪೂಜೆಯನ್ನು ವಿಶೇಷವಾಗಿ ಆಚರಿಸುತ್ತಾರೆ. ಈ ಪೂಜೆಯು ದೀಪವಾಳಿಯ ಹಬ್ಬದಂದು ನಡೆಯುತ್ತದೆ. ಇದಕ್ಕೆ ಕಾರಣ ಗೋವುಗಳ ಬಗ್ಗೆ ಅವರಿಗಿರುವ ಅಷ್ಟೊಂದು ಭಕ್ತಿ ಈ ಗೋವುಗಳ ಪೂಜೆಯನ್ನು ಮಾಡಿ ಅದರ ಗುರುತಾಗಿ ಕೊಟ್ಟಿಗೆಯ ಗೋಡೆಗಳ ಮೇಲೆ ಗೋವಿನ ಪಾದದ ಚಿತ್ರಗಳನ್ನು ಬರೆಯುತ್ತಾರೆ. ಈ ಗೋವಿನ ಪಾದದ ಗುರುತನ್ನು ಅಥವಾ ಚಿತ್ರಗಳನ್ನು ಒಂದು ವರ್ಷದ ತನಕ ಅಳಿಸುವುದಿಲ್ಲ. ಏಕೆಂದರೆ ಗೋವುಗಳು ಇರುವ ಮನೆಗೆ ಈ ಗೋವಿನ ಪಾದದ ಚಿತ್ರ ಶ್ರೇಯಸ್ಕರವೆಂಬ ನಂಬಿಕೆ ಇದೆ. ಮತ್ತು ಅದೇ ನಂಬಿಕೆಯ ಮೇಲೆ ಚಿತ್ರಗಳನ್ನು ಬರೆಯುತ್ತಾರೆ.

ಪ್ರಾದೇಶಿಕವಾಗಿ ಹಸಲರು ಮತ್ತು ದೀವರು ಒಂದೇ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಇವರು ತಾಳಗುಪ್ಪ ಸುತ್ತಮುತ್ತ, ಸಾಗರ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಜೊತೆ-ಜೊತೆಯಲ್ಲಿ ವಾಸ ಮಾಡುತ್ತಿದ್ದಾರೆ. ಈ ಹಿನ್ನಲೆಯಲ್ಲಿ ಇವರ ಚಿತ್ರಗಳನ್ನು ನೋಡಬೇಕು. ಏಕೆಂದರೆ ಹಸಲರ ಚಿತ್ರಗಳಲ್ಲಿ ಮತ್ತು ದೀವರ ಚಿತ್ರಗಳಲ್ಲಿ ಸಾಕಷ್ಟು ಹೋಲಿಕೆ ಇವೆ. ಈ ಎರಡು ಸಮುದಾಯಗಳಲ್ಲೂ ಕೂಡ ಚಿತ್ರಕಲೆಗೆ ಸಂಬಂಧಪಟ್ಟಂತೆ ಒಂದೇ ರೀತಿ ಇರುವುದನ್ನು ನೋಡಬಹುದು. ಹಾಗಾಗಿ ಹಸೆಯ ಚಿತ್ರಗಳಿಗೆ, ಭೂಮಿಣಿ ಚಿತ್ರಗಳಿಗೆ, ಗೋವಿನಪಾದದ ಚಿತ್ರಗಳಿಗೆ ಸಂಬಂಧಿಸಿದಂತೆ ದೀವರು ಭಾಗದಲ್ಲಿ ವಿವರಿಸಲಾಗುವುದು.

೭ ದೀವರು : ಹಸಲರಲ್ಲಿ ಕಂಡುಬರುವ ಚಿತ್ರಗಳಲ್ಲಿ ಕಂಡುಬರುವ ಬಹುತೇಕವಾಗಿ ದೀವರಲ್ಲಿಯೂ ಇವೆ. ದೀವರು ಹೇಳಿಕೊಳ್ಳುವ ಪ್ರಕಾರ ಈ ಹಸೆಯ, ಬೂಮಣಿ ಬುಟ್ಟಿಯ ಚಿತ್ರಕಲೆಯು ನಮ್ಮಲ್ಲೇ ಮೊದಲು ಹುಟ್ಟಿದ್ದು. ಆನಂತರ ಹಸಲರಿಗೆ, ಮತ್ತಿತರಿಗೆ ಹೋಗಿದೆ ಎಂದು ಹೇಳಿಕೊಳ್ಳುತ್ತಾರೆ. ಅದಕ್ಕೆ ಅವರಲ್ಲಿರುವ ದಟ್ಟವಾದ ಈ ಬಗೆಯ ಚಿತ್ತಾರಗಳನ್ನು ಉದಾಹರಣೆಯಾಗಿ ಕೊಡುತ್ತಾರೆ. ಹಸೆಯ ಚಿತ್ತಾರಗಳನ್ನು ಗೋಡೆಗಳ ಮೇಲೆ ಬರೆಯುವುದು ಬುಡಕಟ್ಟು ಸಮುದಾಯಗಳ ವಿಶೇಷ. ಇವರ ಮನೆಯ



ಗೋಡೆಗಳ ಮೇಲೆ ಹಸೆಯ ಚಿತ್ತಾರಗಳನ್ನು ಬರೆದಿದೆ ಎಂದರೆ ಹಸೆ ಚಿತ್ರ ಬರೆದ ಮನೆಯಲ್ಲಿ ಮದುವೆಯಾಗಿದೆ ಎಂದರ್ಥ. ಇವರಲ್ಲಿ ಹಸೆಯ ಚಿತ್ತಾರಗಳನ್ನು ನೆಲದ ಮೇಲೆ ಬರೆಯುವುದಿಲ್ಲ. ಏಕೆಂದರೆ ಅದರ ಬಗ್ಗೆ ಒಂದು ಗೌರವ ಭಾವನೆ ಇದ್ದು, ಅದನ್ನು ತುಳಿಯಬಾರದು ಎಂದು ಇವರು ಪ್ರತಿದಿನ ಬೆಳಿಗ್ಗೆ ಸಂಜೆ ಮನೆಯ ಅಂಗಳಕ್ಕೆ ಮತ್ತು ಬಾಗಿಲ ಹೊಸ್ತಿಲಿಗೆ ರಂಗೋಲಿಯನ್ನು ಹಾಕುತ್ತಾರೆ. ರಂಗೋಲಿಯ ಮೇಲೆ ಹೂವನ್ನು ಇಡುತ್ತಾರೆ. ಅವರು ಪುನಃ ರಂಗೋಲಿಯನ್ನು ಹಾಕುವ ತನಕ ಹಾಗೆಯೇ ಇರುತ್ತದೆ. ಚಿತ್ರಗಳ ಬಗ್ಗೆ ರಂಗೋಲಿಯ ಬಗ್ಗೆ ಈ ದೀವರಿಗೆ ಬಹಳ ಭಕ್ತಿ. ಇದನ್ನು ಇವರು ಭಕ್ತಿಯ ನೆಲೆಯಲ್ಲಿ ನೋಡುತ್ತಾರೆ. ತಿರುಗಾಡುವಾಗ ಬಿಟ್ಟ ರಂಗೋಲಿಯನ್ನು ತುಳಿಯದಂತೆ ಎಚ್ಚರದಿಂದ ತಿರುಗಾಡುತ್ತಾರೆ.



ದೀವರ ಭುಮಣಿ ಬುಟ್ಟಿಗಳು

ಹಸಯೆ ಚಿತ್ತಾರ : ಮದುವೆ ನಡೆಯುವ ಗುಂಡು ಮತ್ತು ಹೆಣ್ಣಿನ ಮನೆಯ ಇಬ್ಬರ ಮನೆಯಲ್ಲೂ ಹಸೆಯ ಚಿತ್ತಾರಗಳನ್ನು ಬರೆಯುತ್ತಾರೆ. ಮದುವೆಯ ಹಿಂದಿನ ದಿನ ಮದುವೆಯ ನಂತರದ ದಿನ, ಮದುವೆಯ ದಿನ, ಗಂಡು ಹೆಣ್ಣನ್ನು ಹಸೆಗೆ ಬೆನ್ನು ಮಾಡಿಕೂಡಿಸಿ ಹಸೆಯನ್ನು ಹಾಕಲಾಗುತ್ತದೆ. ಈ ಹಸೆಯ ಚಿತ್ತಾರವನ್ನು ಇವರು ಎರಡು ರೀತಿಯಲ್ಲಿ ಬರೆಯುತ್ತಾರೆ. ೧. ಒಂದು ಜೋಡಿಯ ಮದುವೆಯ ಹಸೆಯ ಚಿತ್ರ ಎರಡು ಜೋಡಿ ಮದುವೆಯ ಹಸೆಯ ಚಿತ್ರ. ಈ ಹಸೆಯನ್ನು ನೋಡಿದರೇ ಮದುವೆ ಎಷ್ಟು ನಡೆಯುತ್ತಿವೆ ಎಂಬುದು ಗೊತ್ತಾಗುತ್ತದೆ. ಒಂದು ಜೋಡಿ ಮದುವೆಯ ಹಸೆಯ ಚಿತ್ರದಲ್ಲಿ ಒಂದು ಜೋಡಿ ಗಂಡು, ಹೆಣ್ಣಿನ ಚಿತ್ರಗಳು ಇರುವುದನ್ನು ಕಾಣುತ್ತೇವೆ. ಎರಡು ಜೋಡಿ ಮದುವೆಯಲ್ಲಿ ಹಸೆಯ ಚಿತ್ರಗಳಲ್ಲಿ ಎರಡು ಜೋಡಿಯನ್ನು ಹೊಂದಿರುವ ಹಸೆಯ ಚಿತ್ರಗಳನ್ನು ನೋಡುತ್ತೇವೆ. ಎರಡು ಮದುವೆ ಒಂದೇ ಮುಹೂರ್ತದಲ್ಲಿ ನಡೆದರೆ ಈ ರೀತಿಯ ಹಸೆಯ ಚಿತ್ರಗಳನ್ನು ಬರೆಯಲಾಗುತ್ತದೆ.



ಹಸೆಯ ಗೋಡೆಯ ಚಿತ್ತಾರ

ಪೊಪ್ಪಳಿ : ಹಸೆಯ ಚಿತ್ತಾರದಲ್ಲಿ ಕಂಡುಬರುವ ಚಿತ್ರಗಳ ಹೆಸರನ್ನು ಈ ರೀತಿಯಲ್ಲಿ ಗುರ್ತಿಸಬಹುದು. ಚದುರಂಗದ ಮನೆಯ ರೀತಿಯಲ್ಲಿ ಇರುತ್ತದೆ.





ಮೊದಲಕ್ಕೈ : ಇದನ್ನು ಮದನಕ್ಕೈ ಎಂದು ಕರೆಯುತ್ತಾರೆ. ಇದನ್ನು ಕಾಮದ ಸಂಕೇತವಾಗಿ ಈ ಚಿತ್ರವನ್ನು ಬರೆಯಲಾಗಿದೆ

ಸೀತೆಯ ಮುಡಿ : ಸೀತೆಯ ಮುಡಿಯನ್ನು ಈ ಹಸೆಯ ಚಿತ್ರದ ಒಂದು ಭಾಗದಲ್ಲಿ ಬರೆಯಲಾಗಿದೆ.

ನಿಳ್ಳಿ(ಲಿ) : ಇದೊಂದು ಚಿತ್ರ ಇದು ಬಾಸಿಂಗಕ್ಕೆ ಸಂಬಂಧಪಟ್ಟಿರುತ್ತದೆ. ಇದನ್ನು ಗಂಡಿನ ಬಾಸಿಂಗ ಎಂದು ಕರೆಯುತ್ತಾರೆ.

ಬಾಸಿಂಗದ ನಿಳ್ಳಿ(ಲಿ) : ಇದೂ ಕೂಡ ಬಾಸಿಂಗಕ್ಕೆ ಸಂಬಂಧಪಟ್ಟಿರುತ್ತದೆ. ಇದನ್ನು ಗಂಡಿನ ಬಾಸಿಂಗ ಎಂದು ಕರೆಯುತ್ತಾರೆ.

ಒಂದು ಜೋಡಿ ಗಂಡುಹೆಣ್ಣಿನ ಚಿತ್ರ : ಇದು ಹಸೆಯ ಚಿತ್ರ ಮಧ್ಯಭಾಗದಲ್ಲಿ ಇರುತ್ತದೆ. ಈ ಜೋಡಿ ಗಂಡು ಹೆಣ್ಣಿನ ಚಿತ್ರವನ್ನು ಪಲ್ಲಕ್ಕಿಯ ಮೇಲೆ ಕೂರಿಸಿದ ರೀತಿಯಲ್ಲಿ ಇರುತ್ತವೆ.

ಎರಡು ಜೋಡಿ ಗಂಡುಹೆಣ್ಣಿನ ಚಿತ್ರ : ಇದು ಒಂದೇ ಮನೆಯಲ್ಲಿ ಎರಡು ಮದುವೆಯಾದರೆ ಎರಡು ಜೋಡಿ ಗಂಡುಹೆಣ್ಣಿನ ಚಿತ್ರವನ್ನು ಬರೆಯುತ್ತಾರೆ. ಆಗ ಚಿತ್ರವು ಸ್ವಲ್ಪ ದೊಡ್ಡದಾಗಿರುತ್ತದೆ. ಈ ಹಸೆಯ ಚಿತ್ರದ ಕೆಳಗೆ ಮದುವೆಗೆ ಬಂದ ಜನರ ಚಿತ್ರವನ್ನು ಬರೆಯಲಾಗುತ್ತದೆ.

ಭೂಮಣಿ ಬುಟ್ಟಿಯ ಮೇಲಿನ ಚಿತ್ತಾರ

ಭೂಮಿಣಿ ಬುಟ್ಟಿ ಚಿತ್ರ : ಈ ಚಿತ್ರವನ್ನು ಭೂಮಿ ಹುಣ್ಣಿಮೆ ಹಬ್ಬದಲ್ಲಿ ಭೂಮಿಣಿ ಪುಟ್ಟಿಯ ಮೇಲೆ ಬರೆಯುತ್ತಾರೆ. ಬಿದುರ ಬುಟ್ಟಿಯ ಮೇಲೆ ಕೆಂಪುಮಣ್ಣಿನಿಂದ ಸಾರಿಸಿ ಒಣಗಿಸಿ ಆನಂತರ ಅಕ್ಕಿಯನ್ನು ಚೆನ್ನಾಗಿ ನೆನಸಿ, ರುಬ್ಬಿ ಮಾಡಿದ ಹಿಟ್ಟಿನಿಂದ ಹಲವು ರೀತಿಯ ಚಿತ್ರಗಳನ್ನು ಬರೆಯುತ್ತಾರೆ. ಈ ಭೂಮಿಣಿ ಬುಟ್ಟಿಯ ಮೇಲೆ ಬರುವ ಚಿತ್ರಗಳು ಈ ಕೆಳಕಂಡಂತೆ ಇರುವುದನ್ನು ನೋಡಬಹುದು. ಈ ಚಿತ್ರಗಳು ಕೃಷಿ ಮತ್ತು ಮನುಷ್ಯ ಸಂಬಂಧಕ್ಕೆ ಒಳಪಟ್ಟಿರುವಂತವು ಆಗಿರುತ್ತವೆ.

ಪೊಪ್ಪಳಿ : ಇದು ಚದುರಂಗ ಮನೆಯ ರೀತಿಯಲ್ಲಿ ಇರುತ್ತದೆ.

ಭೂಮಿಣಿ ಬುಟ್ಟಿ : ಭೂಮಿ ಹುಣ್ಣಿಮೆ ಹಬ್ಬದಲ್ಲಿ ಭೂಮಿಣಿ ಬುಟ್ಟಿಯನ್ನು ಬಳಸುವುದರಿಂದ ಬುಟ್ಟಿಯ ಚಿತ್ರದಲ್ಲಿ ಬರೆಯುತ್ತಾರೆ.

ಭತ್ತದ ಸಸಿ : ಭತ್ತದ ಸಸಿಯನ್ನು ಬರೆಯುತ್ತಾರೆ.

ಕೋಳಿಮೊಟ್ಟೆ : ಕೋಳಿಯ ಮೊಟ್ಟೆಯನ್ನು ಸಂಕೇತವಾಗಿ ಬರೆಯುತ್ತಾರೆ.

ಸೀತೆಮುಡಿ : ಸೀತೆಯ ಜೆಡೆ

ನಿಳ್ಳಿಹೆಣ್ಣಿನ : ಬಾಸಿಂಗ

ಬಾಸಿಂಗದ ನಿಳ್ಳಿ : ಗಂಡಿನ ಬಾಸಿಂಗ

ಮನುಷ್ಯ : ಗಂಡುಹೆಣ್ಣಿನ ಚಿತ್ರಗಳನ್ನು ಬರೆಯಲಾಗುತ್ತದೆ.

ದೀವರ ಚಿತ್ರಗಳ ಬಿಡಿ ಭಾಗಗಳು ೧





ದೀವರ ಚಿತ್ರಗಳ ಬಿಡಿ ಭಾಗಗಳು ೨





ಜೋಗಿಯ ಜಡೆ : ಜೋಗಿಯ ಜಡೆಯನ್ನು ಈ ಭೂಮಿಣಿ ಬುಟ್ಟಿಯಲ್ಲಿ ಬರೆಯುತ್ತಾರೆ.

ರಾಮನ ಮಂಡಿ : ರಾಮನ ಮುಡಿಯನ್ನು ಗೆರೆಗಳ ಮೂಲಕ ಸಂಕೇತವಾಗಿ ಬರೆಯಲಾಗುತ್ತದೆ.

ಎಂಟು ಮೂಲೆ ಆರತಿ : ಅಲಂಕಾರಕ್ಕೆ ಎಂಟು ಮೂಲೆಯ ಆರತಿಯು ಚಿತ್ರವನ್ನು ಬರೆಯಲಾಗುತ್ತದೆ.

ಗೊಂಬೆಸಾಲು : ಎರಡು ರೀತಿಯಲ್ಲಿ ಗೊಂಬೆ ಸಾಲನ್ನು ಬರೆಯಲಾಗುತ್ತದೆ. ಸಂಕೇತಗಳ ರೀತಿಯಲ್ಲಿ ರೇಖೆಗಳನ್ನು ಎಳೆದು ಅದಕ್ಕೆ ಬಣ್ಣವನ್ನು ತುಂಬುತ್ತಾರೆ.

ರಂಗೋಲಿ : ಸಾಮಾನ್ಯ ರಂಗೋಲಿಗಳು ಈ ಬುಟ್ಟಿಯ ಚಿತ್ರದಲ್ಲಿ ಬರೆಯುತ್ತಾರೆ.

ಗೋವಿನ ಪಾದ : ಗೋವಿನ ಪಾದವನ್ನು ಈ ಭೂಮಿಣಿ ಬುಟ್ಟಿಯ ಚಿತ್ರ ಒಳಗೊಂಡಿರುತ್ತದೆ.

ಏಣಿ : ಏಣಿಯ ಚಿತ್ರವನ್ನು ಸಂಕೇತಿಕವಾಗಿ ಈ ಚಿತ್ರದಲ್ಲಿ ಕಾಣಬಹುದು.

ಗೊಣಬೆ : ಸಮೃದ್ಧಿಯ ಸಂಕೇತವಾಗಿ ಗೊಣಬೆ ಅಥವಾ ಬಣವೆಯನ್ನು ಇಲ್ಲಿ ಬರೆಯುತ್ತಾರೆ.

ಜೊತೆಗೆ ಬೀಸಣಿಗೆ, ಗರಗಸದ ಸಾಲು, ಸಾಲುಮರ, ಮಾವಿನಕೊನೆ ಬೆಂಡಿನ ದಂಡೆ, ಪತಂಗದ ಸಾಲು ಹೀಗೆ ಹಲವಾರು ಚಿತ್ರಗಳನ್ನು ಭೂಮಿಣಿ ಬುಟ್ಟಿಯಲ್ಲಿ ನೋಡಬಹುದು. ಇದಕ್ಕೆ ಸಂಬಂಧಿಸಿದಂತೆ ಆಚರಣೆ ಮತ್ತು ಸಂಪ್ರದಾಯಗಳ ಹಿನ್ನೆಲೆಯಲ್ಲಿ ಅಧ್ಯಯನ ಳರಲ್ಲಿ ವಿವರಿಸಲಾಗುವುದು.

ದೀಪಾವಳಿ ಹಬ್ಬದಲ್ಲಿ ಗೋವಿನ ಪಾದದ ಚಿತ್ರವನ್ನು ಬರೆಯುತ್ತಾರೆ. ಇದನ್ನು ಕೊಟ್ಟಿಗೆಯ ಬಾಗಿಲಿಗೆ ಅಕ್ಕಪಕ್ಕದಲ್ಲಿನ ಗೋಡೆಗಳ ಮೇಲೆ ಬರೆಯುತ್ತಾರೆ. ಅಲಂಕಾರಕ್ಕೆ ಮನೆಯ ವಸ್ತುಗಳ ಮೇಲೆ ತಮ್ಮ ಅನುಭವದ ಚಿತ್ತಾರಗಳನ್ನು ಬಿಡಿಸುತ್ತಾರೆ. ಇವು ಸಂಪೂರ್ಣವಾಗಿ ಕೃಷಿ ಬದುಕನ್ನು ಸಂಕೇತಿಸುವ ಚಿತ್ರಗಳಾಗಿ ತೇರಿನ ಚಿತ್ರಗಳನ್ನು ಬರೆಯುತ್ತಾರೆ. ಈ ತೇರಿನ ಚಿತ್ರವನ್ನು ಹಲವು ಬಗೆಯಲ್ಲಿ ಬರೆಯುವುದನ್ನು ನೋಡುತ್ತೇವೆ. ಈ ಎಲ್ಲಾ ಚಿತ್ರಗಳ ಸಂಪ್ರದಾಯ ಮತ್ತು ಆಚರಣೆಗಳ ಹಿನ್ನೆಲೆಯಲ್ಲಿ ಬರೆಯಲಾಗುತ್ತದೆ.



ತುಳಸಿ ಕಟ್ಟೆಗೆ ಹಾಕಿದ ಚಿತ್ತಾರ

೮ ಗೊಂಡರು : ಗೊಂಡರ ಚಿತ್ರಗಳೂ ಕೂಡ ಇತರ ಬುಡಕಟ್ಟಿನ ಚಿತ್ರಗಳಂತೆ ಆಚರಣೆ ಮತ್ತು ಸಂಪ್ರದಾಯಗಳಲ್ಲಿ ಸೇರಿಕೊಂಡಿವೆ. ಇವರಲ್ಲಿ ಪ್ರತಿನಿತ್ಯವೂ ರಂಗೋಲಿ ಚಿತ್ರಗಳನ್ನು ಬಿಡಿಸುವ ಪದ್ಧತಿಯುಂಟು. ಆದರೆ ಆಚರಣೆ ಮತ್ತು ಸಂಪ್ರದಾಯಗಳಲ್ಲಿ ವಿಶೇಷವಾಗಿ ಸೇಡಿಯ ಚಿತ್ತಾರಗಳನ್ನು ಬಿಡಸುವುದು ಉಂಟು. ಯಾವುದೇ ಧಾರ್ಮಿಕ ಕಾರ್ಯಗಳನ್ನು ಮಾಡುವಾಗಲೂ ಮೊದಲು ನೆಲವನ್ನು ಸಾರಿಸಿ ಆನಂತರ ಸೇಡಿಯ ಚಿತ್ತಾರಗಳನ್ನು ಬರೆಯುತ್ತಾರೆ. ಇವರಲ್ಲಿ ನೆಲೆದ ಮೇಲಿನ ಚಿತ್ರಗಳು, ಗೊಂಡರ ಪರಿಚಯದಲ್ಲಿ



ವಿವರಿಸಿದರಂತೆ ಇವರ ಮನೆಯ ಮುಂದಿನ ಕಣದಲ್ಲಿ ತುಳಸಿಕಟ್ಟೆ ಇರವುದು ಸರ್ವೇ ಸಾಮಾನ್ಯ. ಪ್ರತಿ ದೇವರ ಕಾರ್ಯಗಳು ಈ ಕಣದಲ್ಲಿ ಅಂದರೆ ಮನೆಯ ಮುಂದಿನ ಅಂಗಳದಲ್ಲಿ ನಡೆಯುತ್ತವೆ. ಮೊದಲು ತುಳಸಿ ಕಟ್ಟೆಯ ಸುತ್ತ ಸಾರಿಸಿ ಶುಬ್ರಗೊಳಿಸಿದ ನಂತರ ಸೇಡಿಯ ಚಿತ್ತಾರಗಳನ್ನು ಬರೆಯುತ್ತಾರೆ. ಇವರು ಈ ಚಿತ್ರಗಳನ್ನು ಬರೆಯುವ ರೀತಿಯೇ ಬೇರೆಯಾಗಿರುತ್ತದೆ. ಹಾಗೆಯೇ ಇವರು ಬರೆಯುವ ಚಿತ್ರಗಳೇ ವಿಭಿನ್ನ ರೀತಿಯಲ್ಲಿ ಇವೆ. ಇವುಗಳು ಸಂಪೂರ್ಣವಾಗಿ ತಮ್ಮ ಸಮುದಾಯದ ಹಿನ್ನೆಲೆಯನ್ನು, ಧಾರ್ಮಿಕ ಅಂಶಗಳನ್ನು ಒಳಗೊಂಡಿರುತ್ತವೆ.

ಇವರ ಚಿತ್ರಗಳಲ್ಲಿ ವಿಶೇಷವಾಗಿ ಸೇಡಿಯ ಚಿತ್ರಗಳು ಕಾಣಸಿಗುತ್ತವೆ. ಇವು ಇವರ ಧಾರ್ಮಿಕ ಆಚರಣೆಗಳಾದ ಹರಿಸೇವೆ, ಮುಡಿಪು ಕಟ್ಟುವುದು, ಚಕ್ರ ಕಟ್ಟುವುದು, ಬಲಿಂದ್ರನಹಬ್ಬ ಜಟ್ಟಿಗನಹಬ್ಬ, ತಿರುಪತಿ ಯಾತ್ರೆ ಮುಂತಾದ ಸಂದರ್ಭಗಳಲ್ಲಿ ಈ ಚಿತ್ರಗಳನ್ನು ವಿಶೇಷವಾಗಿ ಬರೆಯುತ್ತಾರೆ. ಹಾಗೆಯೇ ಈ ಸಂದರ್ಭದಲ್ಲಿ ದೇವರಿಗೆ ವಿಶೇಷವಾಗಿ ಹೂವಿನ ಅಲಂಕಾರಗಳನ್ನು ಮಾಡುತ್ತಾರೆ. ಇದು ಚಿತ್ತಾರಗಳ ಜೊತೆಯಲ್ಲಿ ವಿಶೇಷ ಸಂದರ್ಭದ ಮೆರಗನ್ನು ಸೂಚಿಸುತ್ತದೆ.



ಧವಸ ಧಾನ್ಯಗಳನ್ನು ತುಂಬುವ ಮಡಿಕೆಯ ಮೇಲಿನ ಚಿತ್ತಾರ

ಹೊಸ ಬೆಳೆ ಬಂದಾಗ (ಬತ್ತ ಮನೆಗೆ ಬಂದಾಗ) ಮತ್ತು ನವರಾತ್ರಿಯಲ್ಲಿ ಗೋಡೆಗೆ ಚಿತ್ತಾರಗಳನ್ನು ಬರೆಯುತ್ತಾರೆ. ಇವರು ಬಲೀಂದ್ರನ ಹಬ್ಬದ ಸಮಯದಲ್ಲಿ ಬಾಗಿಲ ಅಕ್ಕಪಕ್ಕಕ್ಕೆ ಊರಮಂಜನ್ನು ಬಳಿದು, ಅದರ ಮೇಲೆ ಸೇಡಿಯಿಂದ ತುಂಬಾ ಸೊಗಸಾದ ಚಿತ್ರಗಳನ್ನು ಬರೆಯುತ್ತಾರೆ. ಈ ಚಿತ್ರಗಳು, ದೀವರ ರುಣಬಿಯ ಮತ್ತು ಸಾರೋಸ್ ಚಿತ್ರಗಳಲ್ಲಿಯ ಹೋಲಿಕೆಯನ್ನು ಕಾಣಬಹುದಾಗಿದೆ. ಮದುವೆಯ ಸಂದರ್ಭದಲ್ಲಿ ಗೋಡೆಗೆ ಚಿತ್ತಾರಗಳನ್ನು ಬರೆಯುತ್ತಾರೆ. ಅವುಗಳು ತಮ್ಮ ಭಾವನೆಗೆ ಸಂಬಂಧಪಟ್ಟ ಚಿತ್ರಗಳು ಆಗಿರುತ್ತವೆ. ಸೃಜನಶೀಲ ಚಿತ್ರಗಳು ಆಗಿರುತ್ತವೆ. ಅವುಗಳ ಕಲೆಯನ್ನು, ಬರೆಯುವ ವಿಧಾನವನ್ನು ರೂಢಿಸಿಕೊಂಡು ಬಂದಿದ್ದಾರೆ.

ಗೊಂಡರ ಚಿತ್ರಗಳಲ್ಲಿ ಧಾರ್ಮಿಕ ಚಿತ್ರ ಎದ್ದು ಕಾಣುತ್ತವೆ. ಇವರು ತಿರುಪತಿ ವೆಂಕಟರಮಣನ



ಭಕ್ತರು. ವೆಂಕಟರಮಣನಿಗೆ ಸಂಬಂಧಿಸಿದಂತೆ ಹಲವು ಚಿತ್ರಗಳು ಕಾಣಿಸುತ್ತವೆ. ಅಂದರೆ ಮೂರುನಾಮದಂತ ಗೆರೆಗಳು ಗಂಟೆ, ಮಣಿ, ಶಂಕ, ಜಾಗಟೆ ಮುಂತಾದವುಗಳನ್ನು ಸಾಂಕೇತಿಕವಾಗಿ ಈ ಸೇಡಿ ಚಿತ್ರದಲ್ಲಿ ಬರೆಯುತ್ತಾರೆ. ಈ ಚಿತ್ರಗಳೆಲ್ಲವೂ ಭಕ್ತಿಯ ನೆಲೆಯಲ್ಲಿಯೇ ಇರುತ್ತವೆ.



ಬಲೀಂದ್ರನ ಹಬ್ಬದಲ್ಲಿ ಬಾಗಿಲ ಪಕ್ಕಕ್ಕೆ ಬರೆಯುವ ಗೋಡೆಯ ಚಿತ್ರ

ಯಾವುದೇ ದೇವರ ಕಾರ್ಯವನ್ನು ಮಾಡುವಾಗ ಹೊಸ ಪದಾರ್ಥವನ್ನು ತರುತ್ತಾರೆ. ಅಂದರೆ ಹೊಸ ಮಡಿಕೆಗಳನ್ನು ತರುತ್ತಾರೆ. ಅವುಗಳ ಮೇಲೆ ಶೃಂಗಾರಕ್ಕೆ ಮತ್ತು ಸಂಪ್ರದಾಯಕ್ಕೆ ಸಂಬಂಧಿಸಿದಂತ ಚಿತ್ರಗಳನ್ನು ಬರೆಯುತ್ತಾರೆ. ಹಲವು ಬುಡಕಟ್ಟು ಸಮುದಾಯಗಳು ಸೇಡಿಯ ಚಿತ್ತಾರಗಳನ್ನು ಬರೆದರೂ ಎಲ್ಲಾ ಸೇಡಿ ಚಿತ್ತಾರಗಳೂ ಒಂದೇ ತೆರನಾಗಿ ಇರುವುದಿಲ್ಲ. ಪ್ರತಿಯೊಂದು ಬುಡಕಟ್ಟು ಒಂದೊಂದು ರೀತಿಯ ಸೇಡಿಯ ಚಿತ್ರಗಳನ್ನು ಬರೆಯುವುದನ್ನು ನೋಡಬಹುದು. ಗೊಂಡರು ಜಟ್ಟಿಗನ ಕಂಬದ ಮೇಲೆ ರಚಿಸುವ ಚಿತ್ರಗಳು ತುಂಬಾ ಕಲಾತ್ಮಕವಾಗಿರುತ್ತವೆ. ಅವರು ಜಟ್ಟಿಗನ ಕಂಬಗಳನ್ನು ಹೆಚ್ಚಾಗಿ ಮರದಿಂದ ಮಾಡಿರುತ್ತಾರೆ. ಕಲ್ಲಿನಿಂದ ಮಾಡಿದ ಜಟ್ಟಿಗನ ಕಂಬಗಳು ಬಹಳ ಅಪೂರ್ವವಾಗಿ ಕಾಣುತ್ತವ. ಗೊಂಡರು ಜಟ್ಟಿಗಿನ ಕಂಬಗಳಿಗೆ ಹಲಸಿನ ಮತ್ತು ಸುರಗಿಯ ಮರಗಳನ್ನು ಉಪಯೋಗಿಸುತ್ತಾರೆ. ಕಂಬವು ಐದು ಅಥವಾ ಆರು ಅಡಿ ಎತ್ತರವಿರುತ್ತದೆ. ಒಂದು ಅಡಿ ವ್ಯಾಸವಿದ್ದು ಮೇಲಿಂದ ಕೆಳಗಿನವರೆಗೆ ದುಂಡಗಿದ್ದು ಒಂದೇ ಗಾತ್ರದಲ್ಲಿರುತ್ತದೆ. ಕಂಬದ ಮೇಲ್ಭಾಗವು ಬೋಡಾಗಿರುತ್ತದೆ. ಅದರ ಕೆಳಭಾಗದಲ್ಲಿ ಒಂದು ಅಡಿ ಮೇಲ್ಭಾಗದಲ್ಲಿ ಚೌಕಾಕಾರದ ಮನೆ ಮಾಡಿದ್ದು ಅದರಲ್ಲಿ ಚೆಡ್ಡಿ ತೊಟ್ಟಿರುವ ವೀರನೊಬ್ಬನ ಆಕೃತಿಯನ್ನು ಕೆತ್ತಿರುತ್ತಾರೆ. ಆತನ ಕೈಯಲ್ಲಿ ಕತ್ತಿ ಇರುತ್ತದೆ. ಗೊಂಡರು ಆತನನ್ನು ಜಟ್ಟಿಗನೆನ್ನುತ್ತಾರೆ. ಮುಂಭಾಗದಲ್ಲಿ ಬಳ್ಳಿ ಮತ್ತು ಹೂವುಗಳನ್ನು ಬಿಡಿಸಿರುತ್ತಾರೆ. ಹೆಂಚಿನ ದೇವಸ್ಥಾನದಲ್ಲಿರುವ ಜಟ್ಟಿಗರ ಕಂಬಗಳಿಗೆ ಮಾತ್ರ ಬಣ್ಣದ ಚಿತ್ರಗಳನ್ನು ಬಿಡಿಸಿರುತ್ತಾರೆ. ಮರದ ಅಡಿಯಲ್ಲಿ ನಿಲ್ಲಿಸಿರುವ ಕಂಬಗಳು ತಮ್ಮ ಮೂಲ ರೂಪದಲ್ಲೇ ಇರುತ್ತದೆ. ಹರಕೆ ಹೊತ್ತ ಗೊಂಡರು ಬಡಗಿಯಿಂದ ಜಟ್ಟಿಗನ ಕಂಬವನ್ನು ಮಾಡಿಸಿಕೊಂಡು ಬಂದು ಅದನ್ನು ದೇವಸ್ಥಾನದಲ್ಲಿ ಇಲ್ಲವೆ



ಗೊಂಡರ ಚಿತ್ತಾರಗಳು



ಗೊಂಡರ ಗೋಡೆಯ ಮೇಲಿನ ಚಿತ್ತಾರ



ಗೊಂಡರ ತುಳುಸಿ ಕಟ್ಟೆಯ ಮುಂದಿನ ಚಿತ್ತಾರಗಳು





ಹಾಲುಗೂಡಿದ ಮರದ ಅಡಿಯಲ್ಲಿ ನಿಲ್ಲಿಸಿ ಪೂಜೆ ಸಲ್ಲಿಸುತ್ತಾರೆ. ಬೇರೆ ಬೇರೆ ಕಡೆಗಳಲ್ಲಿರುವ ಜಟ್ಟಿಗನ ಕಂಬಗಳ ಬಗ್ಗೆ ಗೊಂಡರು ಅಣ್ಣತಮ್ಮಂದಿರ ಸಂಬಂಧವನ್ನು ಕಲ್ಪಿಸಿ ಹೇಳುತ್ತಾರೆ."[೧೧]

೯ **ಕುಣಬಿಯರು :** ಉತ್ತರಕನ್ನಡ ಜಿಲ್ಲೆಯ ಬುಡಕಟ್ಟು ಸಮುದಾಯಗಳ ಮನೆಯ ಮುಂದಿನ ವಿಶಾಲವಾದ ಕಣ ಕಣದಲ್ಲಿ ತುಳಸೀಕಟ್ಟೆ, ತುಳಸಿ ಕಟ್ಟೆಯ ಸುತ್ತಾ ವಿವಿಧ ಬಗೆಯ ಸೇಡಿಯ ಚಿತ್ತಾರಗಳು ಕಾಣಿಸುವುಂತೆ ಕುಣಬಿಯರ ಮನೆಯ ಮುಂದೆಯೂ ವಿಶಾಲವಾದ ಕಣ ಅಂಗಳ ಆ ಕಣದಲ್ಲಿ ತುಳಸಿಕಟ್ಟೆ ಇರುತ್ತದೆ. ಈ ರೀತಿಯ ತುಳಸೀ ಕಟ್ಟೆಯ ಪೂಜೆಯನ್ನು ಹಾಲಕ್ಕಿ ಒಕ್ಕಲಿಗರಲ್ಲಿ, ಗೊಂಡರಲ್ಲಿ, ಸಿದ್ಧಿಯರಲ್ಲಿ ಪ್ರಮುಖವಾಗಿ ಕಾಣುತ್ತೇವೆ. ಪೂಜೆಗೆ ಸಂಬಂಧಿಸಿದಂತೆ ಪೂಜೆ ವಿಧಿವಿಧಾನಗಳು ನಡೆಯುವುದಕ್ಕಿಂತ ಮೊದಲು ರಂಗೋಲಿಯನ್ನು ಅಥವಾ ಸೇಡಿಯ ಚಿತ್ತಾರಗಳನ್ನು ಹಾಕುತ್ತಾರೆ.



ತುಳಸಿ ಕಟ್ಟೆಯ ಮುಂದೆ ಚಿತ್ತಾರವನ್ನು ಬಿಡಿಸುತ್ತಿರುವ ಯುವತಿ

ಬಾಗಿಲ ಸುತ್ತ ಗೋಡೆಯ ಮೇಲೆ ಇರುವ ಚಿತ್ರಗಳು ಹಸಲರಲ್ಲಿ ದೀವರಲ್ಲಿ ಹಾಲಕ್ಕಿಗಳಲ್ಲಿ ಸಿದ್ಧಿಯರಲ್ಲಿ ಕಂಡುಬರುವಂತೆ ಇವರ ಮನೆಯ ಬಾಗಿಲ ಅಲಂಕಾರಕ್ಕೆ ಗೋಡೆಗಳ ಮೇಲೆ ಚಿತ್ತಾರಗಳನ್ನು ಬರೆಯುತ್ತಾರೆ. ಈ ಚಿತ್ರಗಳು ಸಮುದಾಯದಿಂದ ಸಮುದಾಯಕ್ಕೆ ಭಿನ್ನವಾಗಿಯೇ ಇರುತ್ತವೆ. ಈ ಚಿತ್ತಾರಕ್ಕೆ ಇವರು ಸೇಡಿ ಮತ್ತು ಕೆಮ್ಮಣ್ಣನ್ನು ಬಳಸುತ್ತಾರೆ. ಇವು ಗೆರೆ ಮತ್ತು ಚಿಕ್ಕಚಿಕ್ಕ ಚಿತ್ರಗಳಾಗಿ ನಮಗೆ ಕಾಣಿಸುತ್ತವೆ. ಈ ಚಿತ್ರಗಳನ್ನು ಎರಡು ಸಂದರ್ಭಗಳಲ್ಲಿ ಬರೆಯುತ್ತಾರೆ. ಅದು ಮದುವೆಯ ಸಂದರ್ಭದಲ್ಲಿ ಮತ್ತು ಹಬ್ಬ ಹರಿದಿನಗಳ ಸಂದರ್ಭದಲ್ಲಿ ಮನೆಯ ಗೋಡೆಗೆ ಕಪ್ಪು ಜೇಡಿಮಣ್ಣಿನಿಂದ ಸಾರಿಸುತ್ತಾರೆ. ಅದರ ಮೇಲೆ ಈ ರೀತಿಯ ಚಿತ್ರವನ್ನು ಬರೆಯುತ್ತಾರೆ.

ಇವರ ಮನೆಯ ಗೋಡೆಗಳ ಮೇಲಿನ ಬಣ್ಣಗಳನ್ನು ನೋಡುವಾಗ ಎರಡು ರೀತಿಯ ಬಣ್ಣಗಳು ಕಾಣಸಿಗುತ್ತವೆ. ಗೋಡೆಯ ಅರ್ಧಭಾಗ ಕಪ್ಪುಬಣ್ಣಿನಿಂದ ಬಳಿದರೆ ಮೇಲ್ಭಾಗದಲ್ಲಿ ಬಿಳಿ ಸೇಡಿಯ



ಬಣ್ಣವನ್ನು ಬಳಿಯುತ್ತಾರೆ. ಇದು ಕುಣಬಿಯರ ಮನೆಯ ಗೋಡೆಗಳ ಮೇಲಿನ ಬಣ್ಣದ ಕಲ್ಪನೆಯಾಗಿರುತ್ತದೆ. ಬುಡಕಟ್ಟು ಸಮುದಾಯದವರು ಕೂಡ ತಮ್ಮ ಮನೆಯ ಬಣ್ಣಗಳ ವಿಶಿಷ್ಟವಾದ ಕಲ್ಪನೆಯನ್ನು ಹೊಂದಿಕುಣಬಿಯರು ಸುಗ್ಗಿಹಬ್ಬದ ಸಮಯದಲ್ಲಿ ಮುಂಬಾಗಿಲ ಗೋಡೆಯ ಎರಡೂ ಬದಿಗೆ ಗೆರೆಗಳಿಂದ ರಚಿಸಿದ ಚಿತ್ರಗಳು ಇತರೆ ಬುಡಕಟ್ಟು ಸಮುದಾಯಗಳು ರಚಿಸುವ ಚಿತ್ರಗಳಿಗಿಂತ ಭಿನ್ನವಾಗಿ ಹಾಗೂ ವಿಶೇಷವಾಗಿ ಕಂಡುಬರುತ್ತವೆ.



ಬಾಗಲಿಯ ಬದಿಯಲ್ಲಿನ ಚಿತ್ತಾರಗಳು

ಬಿಳಿಸೇಡಿಯಲ್ಲಿ ಬರೆಯುವ ರಂಗೋಲಿ ಚಿತ್ರ ಇವರಲ್ಲಿ ವಿಶೇಷವಾಗಿ ಇರುತ್ತದೆ. ಅಂದರೆ ಬಿಳಿಸೇಡ ಮಣ್ಣನ್ನು ತಂದು ಅದನ್ನು ಶೋಧಿಸಿ ಮಣ್ಣಲ್ಲಿ ಕಲಸಿ-ಗಟ್ಟಿ ಮಾಡಿಕೊಂಡು ಸಂಗ್ರಹಿಸಿಕೊಂಡಿರುತ್ತಾರೆ. ದಿನ ಬೆಳಿಗ್ಗೆ ರಂಗವಲ್ಲಿ ಹಾಕುವಾಗ ಈ ಬಿಳಸೇಡಿ ಗಟ್ಟಿಮಾಡಿಕೊಂಡೇ ಹಾಕುತ್ತಾರೆ.

ಕಾಡುಮರದ ಎಲೆ, ಬಣ್ಣಬಣ್ಣದ ಹೂವುಗಳಿಂದ ಗೋಡೆಗಳ ಮೇಲೆ ತಮಗೆ ಇಷ್ಟ ಬಂದ ರೀತಿಯಲ್ಲಿ ಹೂವಿನ ಚಿತ್ರಗಳನ್ನು ಬರೆಯುತ್ತಾರೆ. ಬಣ್ಣದ ಕಲ್ಪನೆಯು ಇವರ ಚಿತ್ರಗಳನ್ನು ಗಮನಿಸಿದಾಗ ತಿಳಿಯುತ್ತದೆ. ಇವು ತಮ್ಮ ಕಲ್ಪನೆಯ ವಾಸ್ತವತೆಯನ್ನು ಬಿಂಬಿಸುತ್ತವೆ.

೧೦ ಹಾಲಕ್ಕಿ ಒಕ್ಕಲಿಗರು : ಹಾಲಕ್ಕಿ ಒಕ್ಕಲಿಗರು ಕರ್ನಾಟಕದ ಇತರೆ ಬುಡಕಟ್ಟು ಸಮುದಾಯದವರಂತೆ ಇವರೂ ಕೂಡ ವಿಶೇಷತೆಯನ್ನು ಹೊಂದಿದ್ದಾರೆ. ಈ ವಿಶೇಷತೆಯು ಇವರ ಸಂಪ್ರದಾಯ, ಉಡುಗೆತೊಡುಗೆಗಳಿಂದ ತಿಳಿಯುತ್ತದೆ. "ಮುಗ್ಧತೆಯೇ ಮೈವೆತ್ತಂತೆ ಎಣ್ಣೆಗೆಂಪಿನ ಮಂದಹಾಸ ತುಟಿಗಳು ಮುಡಿಯಂತೆ ಕಟ್ಟಿದ ತುರುಬಗೆ ಬಣ್ಣ ಬಣ್ಣದ ಹೂವು, ಕುಪ್ಪಸವಿಲ್ಲದೆ ಎದೆಗೆ ರಂಗುರಂಗಿನ ಹತ್ತಾರು ಬಗೆಯ ಮಣಿಯ ಸರಗಳ ಮಾಲೆ ಅದರಲ್ಲಿ ಮುತ್ತೈದೆತನವನ್ನು ಎತ್ತಿತೋರುವ ಕೆಂಪು ಹವಳದಷ್ಟು ಪುಷ್ಟವಾದ ನೀಳ ತೋಳಿಗೆ ಹಲವು ಜೊತೆ ತೋಳ ಬಂದಿಗಳ ಜೋಡಣೆ ಮುಂಗೈಗೆ ಬೆಳ್ಳಿಯ ಕಡಗಗಳ ಅಂದ, ಕಾಲಿಗೆ ಕಡಗ, ಕಿವಿಗೆ ಕಡಕು, ಮೂಗಿಗೆ ಮೂಗುತಿ, ಹಣೆಗೆ ಕೆಂಪು ತಿಲಕ, ಎಲೆ ಅಡಿಕೆ



ರಂಗಿಗೆ ಕೆಂಪಾದ ಹಲ್ಲುಗಳು, ಸದಾ ಬಿಸಿಲಿಗೆ ತೆರೆದುಕೊಂಡ ಬೆತ್ತಲೆ ಬೆನ್ನಿಗೆ ಕಡುಗಪ್ಪು. ಬಣ್ಣ ಹಾಲಕ್ಕಿ ಹೆಣ್ಣುಮಕ್ಕಳು ಸೀರೆ ಉಡುವ ಪರಿಯೇ ವಿಶಿಷ್ಟ. ಹೀಗೆ ಹಾಲಕ್ಕಿ ಒಕ್ಕಲಿಗರು ವಿಶೇಷವಾಗಿ ಕಾಣಿಸುತ್ತಾರೆ. ಹಾಗೆಯೇ ಇವರ ಮನೆಗಳೂ ವಿಶೇಷವಾಗಿವೆ. ಇವರ ಮನೆಗಳ ಹೊರಗೋಡೆಗಳು ವಿವಿಧ ಚಿತ್ತಾರಗಳಿಂದ ಕಂಗೊಳಿಸುತ್ತವೆ. ಪ್ರಾಣಿಪಕ್ಷಿ ಮತ್ತು ಸಸ್ಯಗಳ ಸಂಕೇತವನ್ನಬಹುದಾದ ಬಹು ಸುಂದರ ಚಿತ್ತಾರಗಳಿವು. ಅವು ಕೇವಲ ಚಿತ್ತಾರಗಳಾಗಿರದೆ ಅವರ ಬದುಕನ್ನು ಹೇಳುವ ಸೂಕ್ಷ್ಮ ಸಂಜ್ಞೆಗಳಾಗಿರುತ್ತವೆ."[೧೨] ಇವರ ಚಿತ್ತಾರಗಳು ಸಂಪೂರ್ಣವಾಗಿ ಇವರ ಬದುಕನ್ನು ಪ್ರತಿಬಿಂಬಸುತ್ತವೆ. ಇವರ ಒಡನಾಟಕದಲ್ಲಿ ಕಂಡುಬರುವ ಎಲ್ಲ ಬಗೆಯ ಅಂಶಗಳು ಇವರ ಚಿತ್ರಗಳಲ್ಲಿ ಕಾಣಿಸುತ್ತವೆ.



ಹಲಿ ಒಯ್ಯುತ್ತಿರುವ ಹಾಲಕ್ಕಿ ಮಹಿಳೆ

ಇವರು ಬರೆಯುವ ಚಿತ್ರಗಳಿಗೆ ಅಲ ಚಿತ್ತಾರ, ಸೇಡಿಚಿತ್ತಾರ, ಅಲಿಹುಯ್ಯುವುದು, ಚಿತ್ರ ಬಿಚ್ಚುವುದು ಮುಂತಾದ ರೀತಿಯಲ್ಲಿ ಕರೆಯುತ್ತಾರೆ. ಈ ಚಿತ್ತಾರಗಳನ್ನು ನೆಲದ ಮೇಲೆ, ಗೋಡೆಗಳ ಮೇಲೆ ಗೃಹೋಪಯೋಗಿ ವಸ್ತುಗಳ ಮೇಲೆ ಬರೆಯುತ್ತಾರೆ. ಪ್ರತಿಯೊಬ್ಬರ ಮನೆಯ ಮುಂದೆ ತುಳಸೀಕಟ್ಟೆ ಸಾಮಾನ್ಯವಾಗಿ ಇರುತ್ತದೆ. ಅದರಲ್ಲಿ ತುಳಸಿದೇವರನ್ನು ಇಟ್ಟಿರುತ್ತಾರೆ ಇವನ್ನು ಪ್ರತಿದಿನ ಪೂಜೆ ಮಾಡುತ್ತಾರೆ. ಅಂತೆಯೂ ಪೂಜೆಗೆ ಮುಂಚೆ ಅದರ ಸುತ್ತ ಅಲ್ಲಿ ಚಿತ್ತಾರಗಳನ್ನು ಬರೆಯುತ್ತಾರೆ. ಈ ತುಲಸಿಕಟ್ಟೆ ಮತ್ತು ತುಳಸಿದೇವರು ಯಜಮಾನನ ಮನೆಯಲ್ಲಿ ಇರುತ್ತದೆ. ಯಾವುದೇ ಕಾರ್ಯವನ್ನು ಮಾಡುವಾಗ ಮೊದಲಪೂಜೆ ಈ ತುಳಸಿಕಟ್ಟೆಗೆ ಸಲ್ಲುತ್ತದೆ. ತುಳಸಿಕಟ್ಟೆ ಇಲ್ಲದ ಮನೆಯವರು ತುಳಸಿಕಟ್ಟೆಯ ಅಲಿ ಚಿತ್ತಾರವನ್ನು ಬರೆದು ಅದರ ಮೇಲೆ ಸರಿಯಾದ ತೆಂಗಿನಕಾಯನ್ನು ಇಟ್ಟು ಅದನ್ನೇ ತುಳಸಿ ದೇವರೆಂದು ನಂಬಿ ಪೂಜೆ ಮಾಡುತ್ತಾರೆ. ಈ ರೀತಿ ಮಾಡುವವರು ಮನೆಯ ಕಿರಿಯ ಪ್ರತೀಕ ಸಂಸಾರದವರು. ಕಿರಿಯವರು ತುಳಸಿಕಟ್ಟೆಯನ್ನು ಕಟ್ಟಿಕೊಳ್ಳುವಂತಿಲ್ಲ. ಅವರು ಪೂಜೆ ಮತ್ತಿತರ ದೇವರ ಕಾರ್ಯಗಳಿಗೆ ಹಿರಿಯರಾದಂಥ ಅಣ್ಣನ ಅಥವಾ ತಂದೆಯ ಮನೆಗೆ ಬಂದು ಪೂಜೆಯನ್ನು ಮಾಡಿಕೊಂಡು ಹೋಗಬೇಕಾಗುತ್ತದೆ. ಇವರಲ್ಲಿ ಹಿರಿತನಕ್ಕೆ ಅಷ್ಟು ಗೌರವ ಮರ್ಯಾದೆಯುಂಟು.

ಹಾಲಕ್ಕಿಗಳ ಹಬ್ಬಗಳು ಬಂತೆಂದರೆ ಮನೆಯ ಅಂಗಳವನ್ನು ಕಣ್ಣಿಗೆ ಕಂಗೊಳಿಸುವಂತ ಸಿಂಗರಿಸುತ್ತಾರೆ. ಹಸಿರು ತೋರಣಗಳೊಂದಿಗೆ ಮನೆಯ ಒಳಹೊರ ಅಂಗಳಗಳನ್ನು ಸಗಣಿಯಿಂದ ಸಾರಿಸಿ ಸಿಂಗಾರ ಮಾಡುತ್ತಾರೆ. ಮನೆಯ ಗೋಡೆಯ ಮೇಲೆ ನೆಲಗಳ ಮೇಲೆ ಅಲಿಯ ಚಿತ್ರಣಗಳು ಕಣ್ಣಿಗೆ ತಂಪನ್ನು ಮನಸ್ಸಿಗೆ ಆನಂದವನ್ನು ತುಂಬುವಂತಿರುತ್ತವೆ. ಇವರ ಚಿತ್ರಗಳು ಸಂಪ್ರದಾಯ ಆಚರಣೆಗೆ ಸಂಬಂಧಿಸಿದ



ಹಾಲಕ್ಕಿ ಒಕ್ಕಲಿಗರ ಚಿತ್ರಗಳು



ಹಸೆ ಗೋಡೆಯ ಚಿತ್ತಾರ



ನೆಲದ ಮೇಲಿನ ಕಳಸದ ಚಿತ್ತಾರ



ಒಳಕಲ್ಲಿನ ಮೇಲಿನ ಚಿತ್ತಾರ



ಗೋಡೆಯ ಮೇಲಿನ ಚಿತ್ತಾರ



ಒಲೆಯ ಮೇಲಿನ ಚಿತ್ರ











ಹಾಲಕ್ಕಿಗಳ ಗೋಡೆಯ ಮೇಲಿನ ಹಲಿ ಚಿತ್ತಾರಗಳು






ಚಿತ್ರಗಳು ಆಗಿರುತ್ತವೆ. ಈ ಚಿತ್ರಗಳನ್ನು ಆಯಾ ಸಂದರ್ಭಕ್ಕೆ ತಕ್ಕಂತೆ ಬರೆಯುತ್ತಾರೆ. ಈ ಅಲಿಯ ಚಿತ್ರಗಳು ಹೀಗೆ ಇರಬೇಕು ಅಂತ ನಿಯಮವಿಲ್ಲ. ಆದರೆ ಈ ಚಿತ್ರಗಳು ತಮ್ಮದೇ ಆದಂತಹ ಫಾರ್ಮನ್ನು (Form) ಹೊಂದಿರುತ್ತವೆ. ಇವರ ಚಿತ್ರಗಳನ್ನು ಈ ಕೆಳಕಂಡ ರೀತಿಯಲ್ಲಿ ವಿವರಸಬಹುದು. ಇದನ್ನು ಕ್ಷೇತ್ರಕಾರ್ಯದ ಸಂದರ್ಭದ ಸಮಯದಲ್ಲಿ ಸಂಬಂಧಿಸಿದ ವಕ್ತೃಗಳಿಂದ ಪಡೆಯಲಾಗಿದೆ.

೧. ಬತ್ತ - ಕಟ್ಟುವ ವಳಕಲ್ಲು ಮರದ್ದು, ಅದರ ಸುತ್ತಲೂ ಬರೆದ ಚಿತ್ತಾರ ಈ ಚಿತ್ತಾರವನ್ನು ಯುಗಾದಿ ಹಬ್ಬದ ಸಂದರ್ಭದಲ್ಲಿ ಬರೆಯಲಾಗುತ್ತದೆ.
೨. ಬಯಲು ಒಲೆ - ಒಲೆಯ ಮುಂದಿನ ಚಿತ್ತಾರ.
೩. ಬಾಗಿಲು ಮುಂದಿನ ಚಿತ್ತಾರ - ಕಳಸವನ್ನು ಹೆಚ್ಚಾಗಿ ಬರೆಯುತ್ತಾರೆ. ಕಳಸದಲ್ಲಿ ಹಲವು ಬಗೆಯ ಮೂಲಕಳಸಗಳು ಉಂಟು ಜೊತೆಗೆ ಚೌಕಕಳಸಗಳು ಇವೆ.
೪. ಮನುಷ್ಯರ ಚಿತ್ರಗಳು - ಮದುವೆಯ ಸಂದರ್ಭದಲ್ಲಿ ಬರೆಯುತ್ತಾರೆ.
೫. ಗುಮಟೆ ಬಾರಿಸುವ ಮನುಷ್ಯನ ಚಿತ್ತಾರ - ಸಾಮಾನ್ಯವಾಗಿ ಹಬ್ಬ ಹರಿದಿನಗಳದ ಅಂಗಳದಲ್ಲಿ ಬರೆಯುತ್ತಾರೆ.
೬. ಗುಮಟೆಯ ಚಿತ್ತಾರ ಮದುವೆಯ ಮನೆಯಲ್ಲಿ ಗಂಡುಹೆಣ್ಣು ಕುಳಿತು ಹಿಂಬದಿ ಗೊಡೆಗೆ ಬರೆಯುವ ಚಿತ್ತಾರ.
೭. ಚಕ್ರದ ಚಿತ್ತಾರ - ಇದನ್ನು ಬಲೀಂದ್ರನ ಹಬ್ಬದ ಸಮಯದಲ್ಲಿ ಹೆಚ್ಚಾಗಿ ಬರೆಯುವ ಚಿತ್ತಾರ.
೮. ಹಸೆಮಣೆಯ ಚಿತ್ತಾರ
೯. ತಳಕಿ ಮನುಷ್ಯನ ಚಿತ್ತಾರ
೧೦. ತುರಾಯಿ ಮನುಷ್ಯನ ಚಿತ್ತಾರ - ಸುಗ್ಗಿ ಹಬ್ಬದ ಸಮಯದಲ್ಲಿ ಬರೆಯುವ ಚಿತ್ತಾರ.
೧೧. ಮದುವೆಯ ಸಂದರ್ಭದಲ್ಲಿ ಬಾಗಲಿಗೆ ಬರೆಯುವ ಚಿತ್ತಾರ
೧೨. ಮಡಿಕೆಯ ಮೇಲಿನ ಚಿತ್ತಾರ ಈ ಚಿತ್ತಾರವನ್ನು ಸುಗ್ಗಿಹಬ್ಬದಲ್ಲಿ ದಾನ್ಯವನ್ನು ತುಂಬುವ ಸಂದರ್ಭದಲ್ಲಿ ಬರೆಯಲಾಗುತ್ತದೆ.
೧೩. ಗೋಡೆಯ ಮೇಲೆ ಇರುವ ತುಳಸಿಗಿಡದ ಚಿತ್ತಾರ
೧೪. ಮದುವೆ ಸಂದರ್ಭದಲ್ಲಿ ಗೋಡೆಯ ಮೇಲೆ ಬರೆಯುವ ಚಿತ್ತಾರ
೧೫. ದೀಪಾವಳಿ ಸಂದರ್ಭದಲ್ಲಿ ಬರೆಯುವ ಕೆಮ್ಮಣ್ಣಿನ ಚಿತ್ತಾರ. ಬಳ್ಳಿಯ ಮೇಲೆ ಗಂಡು, ಹೆಣ್ಣು, ಪಕ್ಷಿಗಳು ಕುಳಿತಿರುವ ಚಿತ್ತಾರ.
೧೬. ಗೋಡೆಯ ಮೇಲಿನ ಚಿತ್ತಾರ ಅರಳಿಮರದ ಚಿತ್ರ ಸೇಡಿಯಿಂದ ಬರೆದದ್ದು
೧೭. ಗೊಣಬೆ ಮತ್ತು ಏಣಿಯ - ಚಿತ್ತಾರ ಸುಗ್ಗಿಹಬ್ಬದ ಸಮಯದಲ್ಲಿನ ಚಿತ್ತಾರ
೧೮. ಕಳಸದ ಹುಲಿ - ದಿನಾಲು ಬಾಗಿಲಿಗೆ ಬರೆಯುವ ಚಿತ್ತಾರ
೧೯. ಸುಗ್ಗಿ ಹಬ್ಬದಲ್ಲಿ ಬರೆಯುವ ನಾಲ್ಕು ಮೂಲೆಯ ಕಳಸ
೨೦. ಗೊಣಬೆ, ಏಣಿ, ತಾಳಿಗಳು ಗುಂಪು ಇರುವ ಚಿತ್ತಾರ ಹಬ್ಬ - ಹರಿದಿನಗಳಲ್ಲಿ ಬರೆಯುವ ಚಿತ್ತಾರ
೨೧. ಮನುಷ್ಯರ ಚಿತ್ತಾರ ಗಂಡು ಮತ್ತು ಹೆಣ್ಣು
೨೨. ಮದುವೆಯ ಸಂದರ್ಭ ಮನೆಯ ಬಾಗಿಲ ಬದಿಗೆ ಬರೆಯುವ ಅಲಿ ಚಿತ್ತಾರ
೨೩. ನೆಲದ ಮೇಲಿನ ತೋರಣಗಳ ಸಾಲಿನ ಚಿತ್ತಾರ ಮತ್ತು ಗೋಡೆಯ ಮೇಲಿನ ತೋರಣ ಸಾಲಿನ

ಹಾಲಕ್ಕಿ ಚಿತ್ರಗಳ ಬಿಡಿ ಭಾಗಗಳು





ಚಿತ್ತಾರ.

೨೪. ತಾಳಗಳ ಚಿತ್ತಾರ ಇವುಗಳ ಸಾಮಾನ್ಯ ಇವುಗಳನ್ನು ಹೊಸಮನೆ ಕಟ್ಟಿಕೊಂಡಾಗ ಆ ಚಿತ್ರಗಳನ್ನು ಚಿತ್ರಗಳಾಗಿ ಬಿಡಿಸುತ್ತಾರೆ, ಬರೆಯುತ್ತಾರೆ.

೨೫. ಗುಮಟೆ ಚಿತ್ತಾರ

ಇನ್ನೂ ಹಲವಾರು ಬಗೆಯ ಚಿತ್ತಾರಗಳು ಹಾಲಕ್ಕಿ ಒಕ್ಕಲಿಗರಲ್ಲಿ ನೋಡಬಹುದು. ಇವರಿಗೆ ಈ ಎಲ್ಲಾ ಚಿತ್ರಗಳ ನಡುವೆ ಸಂಬಂಧವಿದೆ, ಒಡನಾಟವಿದೆ. ಇವು ಪದೇಪದೇ ಚಿತ್ರಗಳಾಗಿ ಇವರಲ್ಲಿ ಮೂಡುತ್ತವೆ. ಕೃಷಿಗೆ ಸಂಬಂಧಿಸಿದಂತೆ, ಹಬ್ಬ ಆಚರಣೆಗೆ ಸಂಬಂಧಿಸಿದಂತೆ, ಸಂಪ್ರದಾಯಗಳಿಗೆ ಸಂಬಂಧಿಸಿದಂತೆ ಹಲವು ಬಗೆಯ ಚಿತ್ರಗಳನ್ನು ಆಯಾ ಸಂದರ್ಭಕ್ಕೆ ತಕ್ಕಂತೆ ಬರೆಯುತ್ತಾರೆ. ಈ ಚಿತ್ರಗಳು ಇವರಲ್ಲೇ ಪ್ರಾದೇಶಿಕ ಭಿನ್ನತೆಯನ್ನು ಹೊಂದಿವೆ. ಆದರೆ ಚಿತ್ರಗಳು ತನ್ನ ಸಮುದಾಯದ ಅನನ್ಯತೆಯನ್ನು ಬಿಡುವುದಿಲ್ಲ.

ಚಿತ್ರವನ್ನು ಬಿಡುವ (ವಿಧಿಸುವ) ಶೈಲಿಯಲ್ಲಿ ಹಾಲಕ್ಕಿ ಒಕ್ಕಲಿಗರು ತಮ್ಮದೇ ಆದಂಥ ಶೈಲಿಯನ್ನು ಹೊಗೂಡಿಸಿಕೊಂಡಿದ್ದಾರೆ. ಬಟ್ಟೆಯನ್ನು ಕಲಸಿದ ಸೇಡಿಯಲ್ಲಿ ನೆನಸಿ ಅದನ್ನು ಅಂಗೈಯಲ್ಲಿ ಹಿಂಡುತ್ತಾ ಎರಡು ಮೂರು ಬೆರಳುಗಳ ಸಹಾಯದಿಂದ ಚಿತ್ರ ಬರೆಯುತ್ತಾರೆ.

೧೧. ಗೌಳಿಗರು : ಈ ಗೌಳಿಗರನ್ನು ಕಚ್ಚೆಗೌಳಿಗರು ಎಂದು ಕರೆಯುತ್ತಾರೆ. ಇವರು ಕಾಡಿನಲ್ಲೇ ಇರುವುದರಿಂದ ತಮಗೆ ಸಿಗಬಹುದಾದ ಬಿದಿರು, ಎಂಬ ಬೆತ್ತ, ಕಾಡಿನ ಮರಗಳನ್ನು ಬಳಸಿ ಮನೆಗಳನ್ನು ಕಟ್ಟುತ್ತಾರೆ. ನಂತರ ಹದವಾದ ಮಣ್ಣನ್ನು ಬಳಸಿ ಮನೆಯನ್ನು ಕಟ್ಟಿಕೊಳ್ಳುತ್ತಾರೆ.

ಗೋಡೆಗೆ ಹಾಕುವ ಮಣ್ಣು ತಯಾರಿಕೆ : ತಿಳಗಪ್ಪು ಮಣ್ಣನ್ನು ಚೆನ್ನಾಗಿ ಹದಗೊಳಿಸಿ ಅದಕ್ಕೆ ಬತ್ತದ ಹುಲ್ಲು, ನೆಲ್ಲಸೊಪ್ಪು, ಬೇವಿನ ಸೊಪ್ಪನ್ನು ಮಿಶ್ರಣ ಮಾಡಿಕೊಂಡು ಗೋಡೆಗೆ ಹಾಕುತ್ತಾರೆ. ಹೀಗೆ ಹಾಕುವುದರಿಂದ ಗೋಡೆಗಳಿಗೆ ಹುಳಹುಪ್ಪಟೆಗಳು ಬರುವುದಿಲ್ಲ. ಈ ಮಣ್ಣಿನ ಜೊತೆಗೆ



ಗೌಳಿಗರ ಒಳಗೋಡೆಗಳ ಮೇಲಿನ ಚಿತ್ತಾರ



ಸಗಣಿ ಮತ್ತು ಮರಳನ್ನು ಸಹ ಮಿಶ್ರಣ ಮಾಡಿಕೊಂಡು ಗೋಡೆಗಳಿಗೆ ಮಣ್ಣನ್ನು ಹಾಕುತ್ತಾರೆ. **ಮಣ್ಣನ್ನು ಹದಮಾಡಿಕೊಳ್ಳುವ ವಿಧಾನ :** ಮಣ್ಣನ್ನು ತಂದು ಬಿಸಲಿಗೆ ಹಾಕಿ ಒಂದೆರಡು ದಿನಗಳವರೆಗೆ ಅದನ್ನು ಒಣಗಿಸಿ ಅದರಲ್ಲಿದ್ದ ಕಲ್ಲು, ಕಸ, ಕಡ್ಡಿಗಳನ್ನು ಆಯ್ದು ತೆಗೆದು ಮನೆಯ ಅಂಗಳದಲ್ಲಿ ಯಾರೂ ತುಳಿಯದ ಜಾಗಕ್ಕೆ ಹಾಕುತ್ತಾರೆ. ಒಳ್ಳೆಯ ದಿನವನ್ನು ನೋಡಿ ಅದಕ್ಕೆ ನೀರನ್ನು ಹಾಕಿ ಕಲಸಿ ಮೇಲೆ ಹೇಳಿದ ಮರಳು, ಹುಲ್ಲು, ಬೇವಿನಸೊಪ್ಪು ಮುಂತಾದವುಗಳನ್ನು ಮಿಶ್ರಣ ಮಾಡಿಕೊಂಡು ಹತ್ತರಿಂದ ಹದಿನೈದು ದಿನಗಳವರೆಗೆ ಹಾಗೆಯೇ ಇಟ್ಟು, ಹದಗೊಳಿಸಿ ಆನಂತರ ಗೋಡೆಗೆ ಹಾಕುತ್ತಾರೆ. ಚೆನ್ನಾಗಿ ಹದಗೊಂಡಷ್ಟು ಗೋಡೆಗೆ ಒಳ್ಳೆಯದು. ಏಕೆಂದರೆ ಗೋಡೆ ಬಿರುಕು ಬಿಟ್ಟುಕೊಳ್ಳುವುದಿಲ್ಲ. ಈ ಗೋಡೆಯ ಬಣ್ಣವೇ ಇವರ ಚಿತ್ರಗಳಿಗೆ ಹಿಂಬಣ್ಣವಾಗಿರುತ್ತದೆ.

ಗೌಳಿಗರ ಚಿತ್ರಗಳು ಮರಾಠಿ ಮೂಲದವುಗಳಾಗಿದ್ದರೂ ಅವುಗಳಲ್ಲಿ ಪ್ರಾದೇಶಿಕ ಅಂಶಗಳನ್ನು ನೋಡಬಹುದು. ಒಂದು ಕಡೆಗೆ ಹಸಲರು ದೀವರ ಚಿತ್ರಗಳನ್ನು ನೋಡಿದಾಗ ಅವೂ ಕೂಡ ಮಹಾರಾಷ್ಟ್ರದ ಚಿತ್ರಗಳನ್ನು ಹೋಲುವಂತೆ ಕಾಣುತ್ತವೆ. ದೀವರಲ್ಲಿ ಅಕ್ಕಿ ರುಬ್ಬಿ ಬರೆದ ಚಿತ್ರಗಳನ್ನು ನೋಡುವಂತೆ ಮಹಾರಾಷ್ಟ್ರದ ಬುಡಕಟ್ಟು ಚಿತ್ರಗಳಲ್ಲಿಯೂ ಅಕ್ಕಿರುಬ್ಬಿ ಬರೆದ ಚಿತ್ರಗಳನ್ನು ನೋಡಬಹುದು.



ಗೌಳಿಗರ ಹೊರಗೋಡೆಯ ಮೇಲಿನ ಚಿತ್ತಾರ

ಇವರ ಮನೆಗಳು ಕಾಡಿನಲ್ಲಿ ಸಿಗುವ ಮರಗಳಿಂದ ಕಟ್ಟಿದವುಗಳೇ ಆಗಿರುತ್ತವೆ. ಈ ಮನೆಗಳು ಗೌಳಿಗರ ಸಂಸ್ಕೃತಿಯನ್ನು ಬಿಂಬಿಸುತ್ತವೆ. ಹಾಗೆಯೇ ತಮ್ಮದೇ ಆದಂಥ ರೀತಿಯಲ್ಲಿ ಕಟ್ಟಿಕೊಂಡಿರುವುದನ್ನು ನೋಡಬಹುದು. ಸಾಮಾನ್ಯವಾಗಿ ಇವರ ಮನೆಗಳು ಮೂರುಭಾಗವಾಗಿ ಇರುತ್ತವೆ. ಮೊದಲ ಭಾಗದಲ್ಲಿ ದನ ಎಮ್ಮೆಗಳನ್ನು ಕಟ್ಟಲು ಜಾಗವನ್ನು ಮಾಡಿಕೊಂಡು ನಂತರ ಅವರು ಮಲಗುವ ಜಾಗವನ್ನು ಮಾಡಿಕೊಂಡಿರುತ್ತದೆ. ಇದು ಮಧ್ಯಭಾಗದಲ್ಲಿರುತ್ತವೆ. ಕೊನೆಯ ಭಾಗದಲ್ಲಿ ಅಡುಗೆಮನೆ ಮತ್ತು ದೇವರಮನೆಗಳು ಇರುವುದನ್ನು ನೋಡುತ್ತೇವೆ. ಸಾಮಾನ್ಯವಾಗಿ ಗೌಳಿಗರ ಮನೆಗಳಲ್ಲಿ ಎರಡು ಕಡೆ ಒಲೆ ಇರುತ್ತದೆ. ಒಂದು ಒಲೆ

ಗೌಳಿಗರ ಗೋಡೆಯ ಮೇಲಿನ ಚಿತ್ರಗಳು



ಗೌಳಿಗರು .



ಒಳಗಡೆ ಇದ್ದರೆ ಮತ್ತೊಂದು ಒಲೆ ಮನೆಯ ಹೊರಭಾಗದಲ್ಲಿ ಅಂದರೆ ಮದುಮನೆಯಲ್ಲಿ ಇರುತ್ತದೆ. ತಮಗೆ ಯಾವ ಒಲೆಯಲ್ಲಿ ಅಡುಗೆ ಮಾಡಲು ಸೂಕ್ತವೆನಿಸುತ್ತದೆಯೋ ಆ ಒಲೆಯಲ್ಲಿ ಅಡುಗೆಯನ್ನು ಮಾಡುತ್ತಾರೆ. ಮಧ್ಯದಂಗಳದ ಮನೆಯ ಒಲೆಯಲ್ಲಿ ಬೇಸಿಗೆ ಸಂದರ್ಭದಲ್ಲಿ ಅಡುಗೆಯನ್ನು ಮಾಡುತ್ತಾರೆ.

ಇವರ ಮನೆಯ ಗೋಡೆಗಳ ಮೇಲೆ ಹಬ್ಬ ಹರಿದನ ಮತ್ತು ಮನೆಯ ಮದುವೆಕಾರ್ಯಗಳಲ್ಲಿ ಇವರು ತಮ್ಮದೇ ಆದಂಥ ಚಿತ್ತಾರಗಳನ್ನು ಬರೆಯುತ್ತಾರೆ. ಈ ಚಿತ್ತಾರಗಳು ಗೌಳಿಗರ ಸಂಸ್ಕೃತಿಯನ್ನು ಬಿಂಬಿಸುತ್ತವೆ. ಈ ಚಿತ್ರಗಳು ಸಂಪೂರ್ಣವಾಗಿ ಕಾಡು ಮತ್ತು ಕಾಡಿನ ಗಿಡ ಮರಗಳಿಗೆ, ಹೂವು ಬಳ್ಳಿಗಳು ಅರಳಿ ಎಲೆ, ಸೂರ್ಯಚಂದ್ರ, ಗೂಳಿ ಚಿತ್ರಗಳಿಗೆ ಸಂಬಂಧಪಟ್ಟಂತವು ಆಗಿರುತ್ತವೆ. ಹಾಗೆಯೇ ಇವರ ಚಿತ್ರಗಳಲ್ಲಿ ಪ್ರಕೃತಿಪ್ರಿಯತೆಯನ್ನು ಕಾಣಬಹುದು. ಈ ಚಿತ್ರಗಳು ಸಂಪೂರ್ಣವಾಗಿ ಸೃಜನಶೀಲತೆಯನ್ನು ಹೊಂದಿದ ಚಿತ್ರಗಳು ಆಗಿರುತ್ತವೆ. ಗೋಡೆಯ ಮೇಲೆ ಕಂಡುಬರುವ ಚಿತ್ರಗಳು ಏಕಸ್ವರೂಪವಾಗಿ ಇರುವುದಿಲ್ಲ. ಈ ಚಿತ್ರಗಳು ಅವರವರು ಬರೆಯುವ ಮನಃಸ್ಥಿತಿಗೆ ಮತ್ತು ಕಲ್ಪನೆಗೆ ಸಂಬಂಧಪಟ್ಟ ಚಿತ್ರಗಳು ಆಗಿರುತ್ತವೆ. ಹಾಗಾಗಿ ಈ ಚಿತ್ತಾರಗಳು ತಮ್ಮ ಸಂಸ್ಕೃತಿಯನ್ನು ಬಿಂಬಿಸುವ ಚಿತ್ರಗಳೆಂದೇ ಹೇಳಬಹುದು. ಈ ಚಿತ್ತಾರಗಳು ಮಹಾರಾಷ್ಟ್ರದ ವಾರ್ಲಿ ಚಿತ್ರಗಳನ್ನು ಹೋಲುತ್ತವೆ. ಆದರೂ ಇವು ತಮ್ಮ ಪ್ರಾದೇಶಿಕ ಹಿನ್ನೆಲೆಯನ್ನು ಬಿಂಬಿಸುತ್ತವೆ. ಇವರಲ್ಲಿ ಗೋಡೆ ಚಿತ್ತಾರಗಳೇ ಹೆಚ್ಚು ಅವುಗಳಲ್ಲಿ ಅರಳಿಮರದ ಚಿತ್ತಾರ ಸಾಮಾನ್ಯವಾಗಿ ಇರುತ್ತದೆ. ಇದು ಸಂಪೂರ್ಣವಾಗಿ ಬರೆಯುವವರ ಸೃಜನಶೀಲತೆಗೆ ಸಂಬಂಧಪಟ್ಟಿರುತ್ತದೆ. ಮನುಷ್ಯನ ಚಿತ್ರ ಪ್ರಾಣಿಪಕ್ಷಿಗಳ ಚಿತ್ರ, ಪ್ರಕೃತಿಯ ಚಿತ್ರ ಹೀಗೆ ಹಲವು ರೀತಿಯಲ್ಲಿ ಇವರ ಚಿತ್ತಾರಗಳನ್ನು ನೋಡಬಹುದು. ಇವರಲ್ಲಿ ಕಂಡುಬರುವ ಹಸೆಯ ಚಿತ್ರವು ಚೌಕಾಕಾರದ ಅರಳಿಮರದ ಚಿತ್ರವಾಗಿರುತ್ತದೆ. ಅವುಗಳನ್ನು ತಮ್ಮದೇ ಆದಂತಹ ಶೈಲಿಯಲ್ಲಿ ಇವರು ಬರೆಯುತ್ತಾರೆ.

೧.೨ ಸಿದ್ದಿಯರು : ಪ್ರಕೃತಿಯ ಮಡಿಲಲ್ಲಿ ಬದುಕುತ್ತಿರುವ ಸಿದ್ದಿಯರು ತಮ್ಮ ಮನೆಗಳ ಮೇಲೆ ತಮ್ಮದೇ ಆದಂಥ ಚಿತ್ರಗಳನ್ನು ಅವುಗಳ ವಿನ್ಯಾಸಗಳನ್ನು ನೋಡಬಹದು. ಈ ಚಿತ್ರಗಳು ಸಂಪೂರ್ಣವಾಗಿ ಪ್ರಾಕೃತಿಕ ಚಿತ್ರಗಳೇ ಆಗಿವೆ. ಇವರ ಮನೆಗಳೂ ಕೂಡ ಕಾಡಿನ ಮರಗಳಿಂದ ಕಟ್ಟಿದ ಮನೆಗಳು ಆಗಿವೆ. ಬಿದಿರು ಮತ್ತು ಕಾಡಿನ ಮರಗಳನ್ನು ಮನೆಗಳಿಗೆ ಬಳಸುತ್ತಾರೆ. ಅದರ ಮೇಲೆ ಮನೆಯ ಅಲಂಕಾರಕ್ಕೆ ತಮ್ಮದೇ ಆದಂಥ ನೈಸರ್ಗಿಕ ಬಣ್ಣವನ್ನು ಹಾಕುತ್ತಾರೆ.

ಸಿದ್ದಿಯರ ಚಿತ್ರಗಳನ್ನು ಕೂಡ ಮೂರು ರೀತಿಯಲ್ಲಿ ನೋಡಬಹುದು

೧. ಗೋಡೆಯ ಮೇಲಿನ ಚಿತ್ತಾರಗಳು (ಚಿತ್ತಿಚಿತ್ತಾರಗಳು)

೨. ನೆಲದ ಮೇಲಿನ ಚಿತ್ತಾರಗಳು

೩. ಗೃಹೋಪಯೋಗಿ ಅಥವಾ ಜೀವನೋಪಯೋಗಿ ವಸ್ತುಗಳ ಮೇಲಿನ ಚಿತ್ರಗಳು ಎಂಬುದಾಗಿ ವಿಂಗಡಿಸಿಕೊಳ್ಳಬಹುದು.

ಗೋಡೆಯ ಮೇಲಿನ ಚಿತ್ರಗಳಲ್ಲಿ ಹೆಚ್ಚಾಗಿ ಬಾಗಿಲ ಅಲಂಕಾರಕ್ಕೆ ಸಂಬಂಧಿಸಿದರಂತೆ ಹಲವು ಬಗೆಯ ಚಿತ್ರಗಳನ್ನು ನೋಡಬಹುದು. ಈ ಚಿತ್ರಗಳು ಸಾಮಾನ್ಯವಾಗಿ ಎಲ್ಲಾ ಮನೆಯ ಬಾಗಿಲ ಮುಂದೆ ಇರುತ್ತದೆ.

ದೊಡ್ಡ ಚಿತ್ರಗಳು ಸಿಗದಿದ್ದರೆ ಸಣ್ಣ ಸಣ್ಣ ಚಿತ್ರಗಳಾದರೂ ಸಿಗುತ್ತವೆ. ಈ ಚಿತ್ರಗಳಲ್ಲಿ ಹೂವಿನ ಚಿತ್ರಗಳು ಹೆಚ್ಚು ಜೊತೆಗೆ ಬಳ್ಳಿಗಳ ಚಿತ್ರಗಳು ಕಾಣಿಸುತ್ತವೆ. ಬಳ್ಳಿಗಳಿಂದ ಹೂವುಗಳು ಬಿಟ್ಟ ಹಾಗೆ ಚಿತ್ರಗಳನ್ನು ಬರೆಯುತ್ತಾರೆ. ಈ ಚಿತ್ರಗಳು ತುಂಬಾ ವಿಶೇಷವಾಗಿದ್ದು ಆಕರ್ಷಣೆಯುನ್ನು ಹೊಂದಿರುತ್ತವೆ. ಈ ಚಿತ್ರಗಳು ಹಬ್ಬಗಳಲ್ಲಿ ಅಥವಾ ಮದುವೆಯ ಸಂದರ್ಭಗಳಲ್ಲಿ ಬರೆಯುತ್ತಾರೆ. ಅಂತೆಯೇ ಮದುವೆಯಲ್ಲಿ ಹಸೆ ಚಿತ್ರಗಳನ್ನು ವಿಶೇಷವಾಗಿ ಇವರು ಬರೆಯುತ್ತಾರೆ. ಈ ಹಸೆ ಚಿತ್ರಗಳಲ್ಲಿ ವಿಶೇಷವಾಗಿ ಹೂವಿನ ಚಿತ್ರಗಳು ವಿಶೇಷ. ಜೊತೆಗೆ ಬಾಸಿಂಗಗಳನ್ನೇ ಹೊತ್ತ ಮದುವೆ ಗಂಡು ಹೆಣ್ಣಿನ ಚಿತ್ರಗಳು ಮತ್ತು ಮದುವೆಗೆ ಸೇರಿದ ಜನರ ಚಿತ್ರಗಳು ವಿಶೇಷವಾಗಿ ಹಣೆಯಲ್ಲಿ ಕಾಣುತ್ತವೆ. ಇವು ತನ್ನದೇ ಆದಂಥ ಸರಳ ಚೌಕಟ್ಟನ್ನು ಒಳಗೊಂಡಿರುತ್ತವೆ.



ಬಾಗಲಿ ಎರಡೂ ಬದಿಗಳ ಚಿತ್ರ

ನೆಲೆದ ಮೇಲಿನ ಚಿತ್ರಗಳಲ್ಲಿ ಸೇಡಿಯ ಅಲಚಿತ್ತಾರ ಅಥವಾ ರಂಗೋಲಿ ಚಿತ್ತಾರಗಳು ವಿಶೇಷವಾಗಿ ಕಾಣಸಿಗುತ್ತವೆ. ಇವುಗಳಲ್ಲಿ ಹಲವು ಬಗೆಯ ಚಿತ್ತಾರಗಳನ್ನು ನೋಡಬಹುದು. ಈ ನೆಲದ ಚಿತ್ತಾರಗಳನ್ನು ಪ್ರತಿದಿನದ ಪದ್ಧತಿಯಂತೆ ಬೆಳಿಗ್ಗೆ ಬಾಗಿಲಿಗೆ ನೀರು ಹಾಕಿದ ನಂತರ ಸೇಡಿಯ ಚಿತ್ತಾರಗಳನ್ನು ಬರೆಯುತ್ತಾರೆ.

ಗೃಹೋಪಯೋಗಿ ವಸ್ತುಗಳಾದ ಮಡಿಕೆ, ಖತ್ತಿ, ಮಚ್ಚು, ಕುಡಿಕೆ, ಕುಡಲು, ಪಾತ್ರೆಗಳ ಮೇಲೆ ಸಂಪ್ರದಾಯಗಳಿಗೆ ಸಂಬಂಧಿಸಿದಂತೆ ಹಲವು ಬಗೆಯ ಚಿತ್ತಾರಗಳನ್ನು ಬರೆಯುತ್ತಾರೆ. ಈ ಚಿತ್ತಾರಗಳು ಮದುವೆ ಮತ್ತಿತರ ಆಚರಣೆಗಳ ಸಂದರ್ಭದಲ್ಲಿ ತಮ್ಮ ಸಮುದಾಯದ ಸಂಸ್ಕೃತಿಯ ಹಿನ್ನೆಲೆಯ ಸಂದರ್ಭಗಳಲ್ಲಿ ಚಿತ್ರಗಳನ್ನು ಬರೆಯುತ್ತಾರೆ. ಈ ರೀತಿಯಾಗಿ ಸಿದ್ದಿಯರಲ್ಲಿ ಕಾಣಸಿಗುತ್ತವೆ.

ಅಡಿಟಿಪ್ಪಣಿಗಳು

೧. 'ಸೋಲಿಗರು' ಕರ್ನಾಟಕ ಬುಡಕಟ್ಟುಗಳು, ಸಂ.೧, ಡಾ. ಚಂದ್ರುಕಾಳೇನಹಳ್ಳಿ, ಪುಟ: ೩೨೫

೨. ಮಾಹಿತಿಯನ್ನು ನೀಡಿದವರು 'ರಾಜು' 'ಕಾರ್ಯಕರ್ತ' ವಿವೇಕಾನಂದ ಗಿರಿಜನ ಕಲ್ಯಾಣಕೇಂದ್ರ



೩. ಮಾಹಿತಿಯನ್ನು ನೀಡಿದವರು ಮಾದೇಗೌಡ ಯರಕನ ಗದ್ದೆಪೋಡು

೪. ಸೋಲಿಗರು, ಕರ್ನಾಟಕ ಬುಡಕಟ್ಟುಗಳು, ಸಂ.೧, ಡಾ. ಚಂದ್ರುಕಾಳೇನಳ್ಳಿ, ಪುಟ: ೩೨೩

೫. ಬಸವೇಶ್ವರ ದೇವಸ್ಥಾನದ ಗೋಡೆಯ ಮೇಲಿನ ಚಿತ್ರಗಳ ವಿವರ ಯರಕನಗದ್ದೆಯ ಪೋಡು

೬. ಮಾಹಿತಿಯನ್ನು ನೀಡಿದವರು ಪಟೇಲ ಬಂಗಾರ ಗಿರಿಯಪ್ಪ ಬಿಳಿಗಿರಿ ರಂಗನ ಬೆಟ್ಟ

೭. ಜೇನುಕುರುಬರು ಕರ್ನಾಟಕ ಬುಡಕಟ್ಟುಗಳು ಸಂ.೧, ಕಿಕ್ಕೇರಿ ನಾರಾಯಣ, ಪುಟ: ೩೧೪

೮. ಮಾಹಿತಿಯನ್ನು ನೀಡಿದವರು ಯರವರ ತೋಲಯ್ಯ ಕೊಳವಿನ ಹಾಡಿ ಕಾಕನಕೋಟೆ ಕಾಡು

೯. ಕಾಡು ಕುರುಬ ಮತ್ತು ಜೇನುಕುರುಬರ ಸಂಸ್ಕೃತಿ, ಎ.ಸಿ. ಲಲಿತ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ಪುಟ: ೫೦

೧೦. ಅದೇ. ಪುಟ: ೬೪

೧೧. ಡಾ. ಪಿ.ಕೆ. ಖಂಡೋಬ, ಗೊಂಡರ ಸಂಸ್ಕೃತಿ,ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೩, ಪುಟ: ೨೯೬-೯೭

೧೨. ಹಾಲಕ್ಕಿ ಒಕ್ಕಲಿಗರು ಕರ್ನಾಟಕ ಬುಡಕಟ್ಟುಗಳು, ಸಂ. ೧, ಪ್ರೊ. ಹಿ.ಚಿ. ಬೋರಲಿಂಗಯ್ಯ, ಪುಟ: ೩೮೯

೧೩. ಅದೇ. ಪುಟ: ೩೮೯

❄❄❄❄❄

ಅಧ್ಯಾಯ ೬

ಬಣ್ಣಗಳ ತಯಾರಿಕೆ, ಬಳಕೆ ಮತ್ತು ಸಾಧನಗಳು

ಬಣ್ಣಗಳ ತಯಾರಿಕೆ, ಬಳಕೆ ಮತ್ತು ಚಿತ್ರ ಬರೆಯಲು ಉಪಯೋಗಿಸುವ ಸಾಧನಗಳು

ಕನ್ನಡ ರತ್ನಕೋಶದಲ್ಲಿ 'ಬಣ್ಣ' ಎಂಬ ಪದಕ್ಕೆ "ರಂಗು, ವರ್ಣ, ಸೀರೆ, ಹಾಡು, ಗುಣ, ಅಂದ, ತೋರಿಕೆ ಎಂಬ ಅರ್ಥವಿದೆ. ಹಾಗೆಯೇ 'ಬಣ್ಣಿಸು' = ವರ್ಣಿಸಿ, ಹೊಗಳು, ಬಣ್ಣಹಾಕು, ಬಣ್ಮವೇರು, ಶೋಬಿಸು. 'ಬಣ್ಣಕ(ಗ)ಟ್ಟು' = ಕಳೆಯೇರು. 'ಬಣ್ಣ(ಂ)ಕೆ(ಗೆ)ಡು' = ರಂಗು ಇಲ್ಲವಾಗು, ಬಣ್ಣ ಬಯಲಾಗು, ನಿಜಸ್ವರೂಪ ಪ್ರಕಟವಾಗು, ಬಣ್ಣಬಿಡು ಬಣ್ಣಗೇಡು, ಬಣ್ಣಮಾ(ವಾ)ತು ಬೆಡಗಿನ ಮಾತು, 'ಬಣ್ಣಸರ' = ಒಂದು ಬಗೆಯ ಮಣಿಗಳ ಸರ 'ಬಣ್ಣನೆ' = ವರ್ಣನೆ."[೧] ಎಂಬಿತ್ಯಾದಿ ವಿವರಣೆ ಇದೆ. ಗುರುನಾಥ ಜೋಷಿ ಅವರ ಕನ್ನಡ ಕನ್ನಡ ಶಬ್ದಕೋಶದಲ್ಲಿ ಬಣ್ಣ ಎಂಬ ಪದಕ್ಕೆ "ಕಳೆ, ವರ್ಣ, ಬಣ್ಣ ಏರು ಬಣ್ಣ ಹೆಚ್ಚಾಗು, ಕಳೆ ಏರು, ಬಣ್ಣಗಾರ (ನಾ) ಚಿತ್ರಗಾರ, ಜೀನಗಾರ, ಬಣ್ಣಗಾರ, ವರ್ಣನೆ ಮಾಡುವವ, ಬಣ್ಣಗಾರಿಕೆ ಬಣ್ಣ ಉದ್ದುವ ಉದ್ಯೋಗ, ಬಣ್ಣಗೊಳ್ = ಬಣ್ಣದ ಅನ್ನ, ಚಿತ್ರನ್ನ, 'ಬಣ್ಣವುರ'(ನಾ)=ಬಣ್ಣಬಣ್ಣದ"[೨] ಹೀಗೆ ಹಲವಾರು ರೀತಿಯ ಅರ್ಥಗಳು ಕಾಣಸಿಗುತ್ತವೆ.

ಹಾಗೆಯೇ ಇದೇ ಶಬ್ದಕೋಶದಲ್ಲಿ ವರ್ಣ ಎಂಬ ಪದಕ್ಕೆ "ಬಣ್ಣ, ಹೊಳಪು, ಅಕ್ಷರ, ಗೀತ, ರೂಪ, ಚಿನ್ನ, ಪಂಗಡ, ಕುಲ, ಕೀರ್ತಿ, ಸುತ್ತಿ, ಆಕೃತಿ, ಪೋಷಾಕು"[೩] ಎಂಬ ಅರ್ಥಗಳನ್ನು ಪಡೆದುಕೊಂಡಿವೆ. ಹೀಗೆ ಬಣ್ಣ, ವರ್ಣ ಎಂಬ ಪದಗಳು ಸಂದರ್ಭಕ್ಕೆ ತಕ್ಕಂತೆ ಬಳಕೆಯಾಗುತ್ತವೆ. ಬಣ್ಣವಿಲ್ಲದೆ ಮಾನವನ ಬದುಕಿಲ್ಲ. ಇತರ ಅಗತ್ಯಗಳಂತೆ ಮಾನವನ ಬದುಕಲ್ಲಿ ಬಣ್ಣಗಳ, ಬಣ್ಣದ ಬದುಕಿನ ಅಗತ್ಯತೆ ಇರುತ್ತದೆ. ಕುಡಿಯಲು, ಉಣ್ಣಲು, ಉಡಲು, ವಾಸಿಸಲು ನೀರು, ಆಹಾರ, ಬಟ್ಟೆ, ವಸತಿ ಹೇಗೆ ಮುಖ್ಯವೋ ಹಾಗೆಯೇ ಬಣ್ಣಗಳ ಕಲ್ಪನೆ ಅಗತ್ಯವಾಗಿರುತ್ತದೆ. ಈ ಕಲ್ಪನೆ ಪ್ರಜ್ಞಾಪೂರ್ವಕ ವಾಗಿರಬಹುದು. ಇಲ್ಲವೆ ಅಪ್ರಜ್ಞಾಪೂರ್ವಕವಾಗಿರಬಹುದು. ಇದು ಮನುಷ್ಯನ ಅಂತರಂಗದಲ್ಲಿ ಇರುವಂತಹದು ಇಲ್ಲವೇ ಆಕರ್ಷಣೆಯಿಂದ ಬಂದಿರುವುದು ಆಗಿರಬಹುದು. ಬಣ್ಣದ ಪರಿಕಲ್ಪನೆಯಂತೂ ಮಾನವನಿಗೆ ಮೊದಲು ನಿಸರ್ಗದಿಂದಲೇ ಬಂದದ್ದು ಎಂದು ಹೇಳಬಹುದು. ಏಕೆಂದರೆ ಪರಿಸರ ಪ್ರತಿಯೊಂದನ್ನು ತಿಳಿಸುತ್ತದೆ. "ವಾಸಿಸಲು ಮನೆಯನ್ನು ಕಟ್ಟಿಕೊಳ್ಳಲು, ಉಡಲು ಬಟ್ಟೆಯನ್ನು ತಯಾರಿಸಿಕೊಳ್ಳಲು ಗೊತ್ತಿರದ ಆದಿಮಾನವನ ಕಾಲದಿಂದಲೂ ಇಂದಿನ ಸುಸಂಸ್ಕೃತ ಮಾನವನವರೆಗೆ

[illegible]

[illegible]

[illegible]

[illegible]

'ಬಣ್ಣವೂ' ಅವನ ಜೀವಿತದ ಒಂದು ಪ್ರಮುಖ ಅಂಗವಾಗಿದೆ ಎನ್ನಬಹುದು. ಗವಿ ಗುಹೆಗಳಲ್ಲಿ ವಾಸಿಸುತ್ತಿದ್ದ ಮಾನವನು ಕಲ್ಲು. ಬಂಡೆಗಳಲ್ಲಿ ಚಿತ್ರಿಸಿದ ಬಣ್ಣದ ಚಿತ್ರಗಳನ್ನು ನೋಡಿದರೆ ಅವನಿಗಿದ್ದ ಕಲಾಪ್ರಜ್ಞೆ ಏನೆಂಬುದಗು ತಿಳಿಯಬಹುದಾಗಿದೆ. ಆದಿಮಾನವನ ಕಾಲದಲ್ಲಿ ಬಣ್ಣ ಅಭಿವ್ಯಕ್ತಿ ಮಾಧ್ಯಮವಷ್ಟೇ ಅಲ್ಲದೆ, ಸಂಪರ್ಕ ಮಾಧ್ಯಮವೂ ಆಗಿತ್ತು."[೪] ಎಂಬುದು ಗೊತ್ತಾಗುತ್ತದೆ. ಆದಿಮಾನವನಲ್ಲೂ ತನ್ನದೇ ಆದಂತ ಬಣ್ಣಗಳ ಕಲ್ಪನೆಯನ್ನು ನೋಡುತ್ತೇವೆ. ಪ್ರಾಗಿತಿಹಾಸ ವರ್ಣಚಿತ್ರಗಳನ್ನು ನೋಡುವಾಗ ಹಿರೆಬೆನಕಲ್ಲಿನ ೧೧ನೇಯ ಚಿತ್ರಗವಿಯಲ್ಲಿ "ಮನುಷ್ಯನ, ಪ್ರಾಣಿಗಳ ಮತ್ತು ವಿಚಿತ್ರವಾದ ರೇಖಾಚಿತ್ರಗಳು ಇವೆ. ಕೆಲವು ಗವಿಗಳಲ್ಲಿ ಸಾಮೂಹ ನೃತ್ಯ, ಪ್ರಾಣಿಗಳ ಸಾಲುಗಳು ಮನುಷ್ಯರ ಜೋಡಿಗಳು ಇವೆ."[೫] ಈ ಚಿತ್ರಗಳು "ಚೆಲ್ಲಾಪಿಲ್ಲಾಯಾಗಿವೆ. ಹೆಚ್ಚಾಗಿ ಕೆಮ್ಮಣ್ಣಿನ ಬಣ್ಣದಲ್ಲಿವೆ. ಬಣ್ಣದ ಛಾಯೆಯ ಕಾಲ ವೈಪರೀತ್ಯದಿಂದ ಹಾಗೂ ಇತರೆ ಕಾರಣಗಳಿಂದ ಒಂದೇ ಸಮನಾಗಿಲ್ಲ. ಅಪರೂಪವಾಗಿ ಕಾಡಿಗೆ ಕಪ್ಪು ಹಾಗೂ ಮಿಶ್ರಿತ ಹಳದಿ ಮುಸುಕು ಬಿಳಿಯ ದ್ವಿವರ್ಣಗಳಲ್ಲಿ ಚಿತ್ರಗಳಿವೆ. ಬಾದಾಮಿಯ ೩ನೆಯ ಗವಿಯ ಚಿತ್ರಗಳು ದ್ವಿವರ್ಣದಲ್ಲಿವೆ. ಮಧ್ಯಯುಗೀನ ಕಾಲದ ಚಿತ್ರಗಳು ಸುಣ್ಣದಂತಹ ಬಿಳಿಯ ಬಣ್ಣದಲ್ಲಿವೆ. ಬ್ರಹ್ಮಗಿರಿ ಮತ್ತು ಚಿತ್ರದುರ್ಗದ ಹಲವಾರು ಚಿತ್ರಗಳು ಬಿಳಿಯ ಬಣ್ಣದಲ್ಲಿವೆ."[೬] ಇವೆಲ್ಲವನ್ನು ಗಮನಿಸಿದರೆ ಆದಿಯಲ್ಲಿ ಮಾನವನು ಚಿತ್ರರಚನೆಗೆ ಯಾವ ಯಾವ ಬಣ್ಣಗಳನ್ನು ಬಳಸುತ್ತಿದ್ದ ಎಂಬುದು ತಿಳಿದುಬರುತ್ತದೆ.

"ಭಾರತದ ನೂತನ ಶಿಲಾಯುಗದ ಮಾನವರು ತಯಾರಿಸಿದ ಗಡಿಗೆ, ಮಡಿಕೆಗಳ ಮೇಲೆ ವಿವಿಧ ವರ್ಣಗಳನ್ನು ಬಳಸಿ ಚಿತ್ತಾರಗಳನ್ನು ಚಿತ್ರಿಸಿರುವುದನ್ನು ಕಂಡರೆ ಅವನಿಗೆ ಬಣ್ಣಗಳ ವಿಷಯದಲ್ಲಿ ಅಪಾರವಾದ ತಿಳುವಳಿಕೆ ಇತ್ತೆಂದು ತಿಳಿದುಬರುತ್ತದೆ. ಸಾಮಾನ್ಯವಾಗಿ ಅವನು ಕೆಂಪು, ಹಳದಿ ಮತ್ತು ಕಂದುಬಣ್ಣಗಳನ್ನು ಹೆಚ್ಚಾಗಿ ಬಳಸಿದ್ದಾನೆ."[೭] ಈ ಬಣ್ಣಗಳು ಮೂಲಬಣ್ಣಗಳೆಂದು ಹೇಳಬಹುದ. ಹಂಪಿಯ ಸಮೀಪದ ಆನೆಗುಂದಿಯಲ್ಲಿಯೂ ಕೂಡ ಇತಿಹಾಸಪೂರ್ವಕಾಲದ ಬಂಡೆಗಳ ಮೇಲಿನ ಚಿತ್ರಗಳೂ ಕೂಡ ಕೆಂಪು ಹಾಗೂ ಕಂದು ಬಣ್ಣವನ್ನು ಹೊಂದಿವೆ. ಹಾಗಾಗಿ ಹಿಂದೆ ಈ ಮೂರು ಬಣ್ಣಗಳೆ ಮುಖ್ಯವಾಗಿ ಬಳಕೆಯಾಗುತ್ತಿದ್ದಿರಬೇಕು.

ಅಜಂತಾ, ಎಲ್ಲೋರ, ಬಾದಾಮಿಯ ಗುಹಾಂತರಗಳಲ್ಲಿಯೂ ಕೂಡ ವಿಶೇಷವಾದಂತ ವರ್ಣಚಿತ್ರಗಳನ್ನು ನೋಡಬಹುದು. ಇತಿಹಾಸಕಾಲದ ಗವಿಗಳಲ್ಲಿನ ವರ್ಣಚಿತ್ರಗಳನ್ನು ನೋಡುವುದಾದರೆ ಒಂದನೆಯ ಪುಲಕೇಶಿಯ ಕಾಲದ ಚಿತ್ರಗಳು ನಮಗೆ ಕಾಣಿಸುತ್ತವೆ. ಅವು "ಮೊದಲನೆಯ ಪುಲಕೇಶಿಯ ಕೋಟೆಯ ಮೇಲಣ ಮತ್ತು ಕೆಳಗಣ ಶಿವಾಲಯಗಳನ್ನುಳ್ಳ ಎತ್ತರದ ಗುಡ್ಡದ ಉತ್ತರಕ್ಕೆ ಒಂದು ಬೆಟ್ಟದ ಸಾಲಿದೆ. ಈ ಸಾಲಿನಲ್ಲಿ ಅಲ್ಲಲ್ಲಿ ಒಟ್ಟು ಆರು ಗವಿಗಳ ಚಿತ್ರಗಳಿವೆ. ಅವುಗಳಲ್ಲಿ ಒಂದು ಕಲ್ಲಾಸರೆಯ ಹಿಂಬದಿಯ ನೆಟ್ಟಗಿನ ಕಲ್ಲು ಬಂಡೆಯ ಮೇಲೆ ಸ್ವಲ್ಪ ಹಳದಿ ಬಣ್ಣದ, ಸುಣ್ಣದ ಲೇಪನ ಮಾಡಿದೆ. ಇದರ ಮೇಲೆ ಕೆಂಪು ಬಣ್ಣದ ರೇಖೆಗಳು ಪ್ರಮಾಣಬದ್ಧವಾಗಿ ಎಲ್ಲಾ ದೈಹಿಕ ಲಕ್ಷಣಗಳನ್ನು ಕಾಣುವ ಹಾಗೆ

ಗಣ್ಯವ್ಯಕ್ತಿಗಳ ಚಿತ್ರಗಳನ್ನು ಬಿಡಿಸಲಾಗದೆ ರೇಖೆಗಳೊಳಗಿನ ಭಾಗವು ಹಿನ್ನೆಲೆಯ ಹಳದಿ ಬಿಳಿ ಮಿಶ್ರ ಬಣ್ಣದಿಂದ ತುಂಬಿರುವುದರಿಂದ ವ್ಯಕ್ತಿಗಳ ಮೈಮಾಟ ಸ್ಫುಟವಾಗಿ ಕಾಣುತ್ತವೆ."[೮] ಇಲ್ಲಿಯ ಚಿತ್ರಗಳನ್ನು ಪ್ರತಿನಿಧಿಸಲು ಅವುಗಳಿಗೆ ತಮ್ಮ ಕಲ್ಪನೆಯ ಸೂಕ್ತ ಬಣ್ಣಗಳನ್ನು ಕೊಟ್ಟಿರುವುದು ಕಂಡುಬರುತ್ತದೆ. ಏಕೆಂದರೆ ಇವರಿಗೆ "ನೈಸರ್ಗಿಕವಾಗಿ ಬಣ್ಣಬಣ್ಣ ಪಟ್ಟಿಯುಳ್ಳ ಮರಳು ಕಲ್ಲಿನ ಹಿನ್ನೆಲೆ, ನಿಂತ ವ್ಯಕ್ತಿಗಳ ಮೊಳಕಾಲಿನ ಕೆಳಭಾಗದಲ್ಲಿ ಸಹಜವಾಗಿ ಕಪ್ಪುಬಣ್ಣವಾದ್ದರಿಂದ ವ್ಯಕ್ತಿಗಳು ಆಕಾಶದಲ್ಲಿ ಸಂಚರಿಸುತ್ತಿದ್ದಾರೇನೋ ಎಂಬ ಭ್ರಮೆ ಉಂಟಾಗುತ್ತದೆ."[೯] ಚಿತ್ರಕ್ಕೆ ಬಣ್ಣಗಳ ಲೇಪನ ಮಾಡುವುದು ಅದಕ್ಕೆ ಅರ್ಥಬರಲಿ ಎಂದು. ಈ ಕಲ್ಪನೆಯನ್ನು ಹಿಂದೆಯೇ ಬಣ್ಣಗಳ ಮೂಲಕ ಅಭಿವ್ಯಕ್ತಿಸುವುದನ್ನು ನೋಡುತ್ತೇವೆ. ಇವರು ಬಳಸುತ್ತಿದ್ದ ಬಣ್ಣಗಳು ನೈಸರ್ಗಿಕ ಬಣ್ಣಗಳು. ತಮಗೆ ಹತ್ತಿರವಿದ್ದ ಬಣ್ಣಗಳನ್ನು ಬಳಸುತ್ತಿದ್ದು, ಗವಿ, ಬಂಡೆಗಳ ಮೇಲಿನ ಚಿತ್ರಳಲ್ಲಿ ಈ ಬಣ್ಣಗಳನ್ನು ನೋಡಬಹುದು.

೧೫ನೆಯ ಶತಮಾನಕ್ಕಿಂತ ಹಿಂದೆ ಬಣ್ಣಗಳನ್ನು ತಮ್ಮದೇ ಆದಂಥ ರೀತಿಯಲ್ಲಿ ತಯಾರು ಮಾಡಿಕೊಳ್ಳುತ್ತಿದ್ದರು. ಆಗ "ವಿವಿಧ ರೀತಿಯ ವರ್ಣಗಳ ಸೀಮೆಸುಣ್ಣದ ಬಳಪಗಳನ್ನು ಉಪಯೋಗಿಸುತ್ತಿದ್ದ ಉಲ್ಲೇಖಗಳಿವೆ (Chalk) ಎಂಬುದು ಕ್ರೆಯಾನ್(Crayon)ದ ಇನ್ನೊಂದು ರೂಪವಾಗಿದೆ. ಇದ್ದಿಲು ಕಡ್ಡಿ ಅಥವಾ ಚಾರಕೋಲ್‌ನ ಗುಣವನ್ನೇ ಈ ಚಾಕ್ ಹೊಂದಿವೆ. ಲೆನಾರ್ಡೋ ಎಂಬ ಕಲಾವಿದನು ಕಬ್ಬಿಣದ ಅದಿರಿನಿಂದ ತಯಾರಿಸಿದ ಕೆಂಪುಬಣ್ಣದ ಬಳಪವನ್ನು ಬಳಸುತ್ತಿದ್ದನು. ೧೬ನೆಯ ಶತಮಾನದಲ್ಲಿ 'ಟೆರಾಕೋಟಾ'ದಿಂದ ತಯಾರಿಸಲಾದ. ಕೆಂಪು, ಬಿಳಿ, ಕಪ್ಪು ಹಾಗೂ ಕಂದುಬಣ್ಣದ ಬಳಪಗಳನ್ನು ಬಳಸಿ ಚಿತ್ರಗಳನ್ನು ರಚಿಸುತ್ತಿದ್ದನು. ಇತ್ತೀಚಿಗೆ 'ಕಾಂಟೆ' ಎಂಬ ಕಲಾವಿದನು ವಿವಿಧ ವರ್ಣಗಳ ಗಟ್ಟಿಯಾದ ಹಾಗೂ ಮೃದುವಾದ ಬಣ್ಣದ ಬಳಪಗಳನ್ನು ಪರಿಚಯಿಸಿರುವನು."[೧೦] "ಆನೆಗುಂದಿಯಲ್ಲಿರುವ ಹುಚ್ಚಪ್ಪಯ್ಯನ ಮಠ ಎಂದು ಕರೆಯಲಾದ ಕಟ್ಟಡವೊಂದರ ಒಳಭಾಗದಲ್ಲಿ ಅತ್ಯಂತ ಸುಂದರವಾದ ಚಿತ್ರ ಅವಶೇಷಗಳಿದ್ದು ವಿಜಯನಗರದ ಅರಸೊತ್ತಿಗೆಯ ಕಾಲದಲ್ಲಿಯೇ ಚಿತ್ರಿತವಾದವುಗಳಾಗಿವೆ."[೧೧]

ವಿಜಯನಗರ ಪತನದ ನಂತರ ಮೈಸೂರು ಅರಸರು ವಿಜಯನಗರದ ಕಲಾಶೈಲಿಯನ್ನು ತಮ್ಮದೇ ಆದ ಶೈಲಿಯ ಚೌಕಟ್ಟಿನಲ್ಲಿ ಮುಂದುವರೆಸಿಕೊಂಡು ಬಂದರು. ಇಲ್ಲಿ ತೈಲ ವರ್ಣಚಿತ್ರಗಳು ಸಮೃದ್ಧಿಯಾಗಿ ಕಂಡುಬಂದವು. ಮೈಸೂರು ಅರಸರ ಕಾಲ ನಂತರದ ಈಚಿನ ಚಿತ್ರಗಳಲ್ಲಿ ಆಧುನಿಕ ಬಣ್ಣಗಳ ಬಳಕೆಯನ್ನು ನೋಡಬಹುದು. ಬಣ್ಣಗಳ ಬಳಕೆಯಲ್ಲಿ ಬೆಳವಣಿಗೆ ಹೊಂದುತ್ತಿದ್ದಂತೆಯೇ ಇವುಗಳನ್ನು ಉಪಯೋಗಿಸಲು ಒಂದು ವರ್ಗ ಸಮಾಜದಲ್ಲಿ ಇತ್ತು. ಇದು ಬಂಡವಾಳಶಾಹಿ ವರ್ಗ ಅಂದರೆ ಅನುಕೂಲಸ್ಥ ವರ್ಗ. ಇವರು ತಮ್ಮ ಮನೆಗಳಿಗೆ ಕಟ್ಟಡಗಳಿಗೆ ಹಾಗೂ ಕೈಗಾರಿಕೆಗಳಿಗೆ ಉಪಯೋಗಿಸುತ್ತಿದ್ದಾರೆ. ಈವೊತ್ತಿನ ಆಧುನಿಕ ಜಗತ್ತಿನಲ್ಲಿ ಬಣ್ಣಗಳಿಗೆ ಸಂಬಂಧಿಸಿದಂತೆ ಉತ್ಪಾದನಾ ಘಟಕಗಳೇ ಸ್ಥಾಪನೆಯಾಗಿ ಮಾರುಕಟ್ಟೆಯ ಜಾಲದಲ್ಲಿ ಪೈಪೋಟಿ ನಡೆಸುತ್ತಿವೆ. ಇಂತಹ ಪೈಪೋಟಿಯ ಜಗತ್ತಿನಲ್ಲಿಯೇ ಒಂದು ಕಡೆ ಜನಸಾಮಾನ್ಯರು ಮತ್ತು ಬುಡಕಟ್ಟು ಜನಸಮುದಾಯದವರು ಬದುಕು

[illegible]

ನಡೆಸುತ್ತಿದ್ದಾರೆ. ಇವರು ತಮ್ಮದೇ ಆದಂಥ ಬಣ್ಣಗಳ ಬಳಕೆಯನ್ನು ಇಟ್ಟುಕೊಂಡಿದ್ದಾರೆ. ಇವರು ಬಳಸುವ ಬಣ್ಣಗಳು ತಾವು ಬದುಕುವ ಪ್ರಾದೇಶಿಕತೆಯಲ್ಲಿ ಬಳಸುವ ಬಣ್ಣಗಳಾಗಿರುತ್ತವೆ. ಜನಸಾಮಾನ್ಯರು ಸುಣ್ಣ, ಗೋಪಿ ಬಣ್ಣ, ಅಗ್ಗದ ಬಣ್ಣದ ಪುಡಿಗಳನ್ನು ಬಳಸಿದರೆ ಬುಡಕಟ್ಟು ಜನರು ತಮ್ಮ ನಿಸರ್ಗದಲ್ಲಿ ಸಿಗುವ ಮಣ್ಣನೇ (ಸೇಡಿ) ಬಣ್ಣವನ್ನಾಗಿ ಬಳಸಿಕೊಳ್ಳುತ್ತಾರೆ. ಇದು ಕೂಡ ಸಂಪೂರ್ಣವಾಗಿ ವ್ಯಕ್ತಿಯ ಆರ್ಥಿಕ ಸ್ಥಿತಿಯನ್ನು ಅವಲಂಬಿಸಿರುತ್ತದೆ. ವ್ಯಕ್ತಿ ಹೆಚ್ಚು ಹೆಚ್ಚು ಅನುಕೂಲವಾದಂತೆಲ್ಲಾ ಆಧುನಿಕ ಜಗತ್ತಿನ ಅವಕಾಶಗಳು ತೆರೆದಿರುತ್ತವೆ. ಆರ್ಥಿಕ ಸ್ಥಿತಿ ಕುಂಟಿತ ಮತ್ತು ಅವಕಾಶಗಳ ಕೊರತೆಯಿಂದ ತಮ್ಮ ಮಿತಿಯೊಳಗೆ ಬದುಕು ಸಾಗುತ್ತಿರುತ್ತದೆ. ಅದರಂತೆ ಬಣ್ಣಗಳ ಬಳಕೆ ಬದುಕಿಗಿಂತ ಹೊರತಾಗಿರುವುದಿಲ್ಲ.

"ಸ್ಥಳೀಯವಾಗಿ ದೊರೆಯುವ ಹಾಗೂ ಅಗ್ಗದ ಉಪಕರಣಗಳು ಜನಪದರಲ್ಲಿ ಬಳಕೆಯಲ್ಲಿವೆ. ಕೈ ಕಾಗದವನ್ನು ಅಂತೆಯೇ ಬಳಸಿ ಇಲ್ಲವೆ ಬಟ್ಟೆಯ ಮೇಲೆ ಹುಣಸೆ ಸರಿಗೆ ಚಾಕ್ ಪೌಡರ್ ಸೇರಿಸಿ ಬಳಿದು ಪಟಗಳನ್ನು ತಯಾರಿಸಿರುತ್ತಾರೆ. ಬಿದಿರಿನಿಂದ ಚೂಪಾದ ಕಡ್ಡಿಯನ್ನೇ ಲೇಖನಿಯಾಗಿ ಬಳಸುತ್ತಾರೆ. ಹೆಚ್ಚಾದರೂ ಹತ್ತಿಯ ಕುಂಚಗಳನ್ನು ಬಳಸುವುದುಂಟು. ಬಣ್ಣಗಳು ಸ್ಥಳೀಯವಾಗಿ ದೊರೆಯುವ ಕಲ್ಲು ಅಥವಾ ಹೂವುಗಳಾಗಿದ್ದರೆ ಮರದ ಅಂಟನ್ನು ಬೆರಸಿ ಬಳಸುತ್ತಾರೆ."[೧೨] ನೈಸರ್ಗಿಕವಾಗಿ ಸಿಗುವ ಬಣ್ಣಗಳ ಕಚ್ಚಾವಸ್ತುಗಳನ್ನು ಜನಪದರು ಮತ್ತು ಬುಡಕಟ್ಟು ಸಮುದಾಯದವರು ಉಪಯೋಗಿಸುವುದನ್ನು ನೋಡುತ್ತೇವೆ. ಬುಡಕಟ್ಟು ಸಮುದಾಯದವರ ಬಣ್ಣಗಳ ಬಳಕೆಯನ್ನು ತೆಗೆದುಕೊಂಡರೆ ಅವರು ಪ್ರಾಕೃತಿಕ ಸಾಮಗ್ರಿಗಳನ್ನು ಹೇಗೆ ಬಣ್ಣಗಳನ್ನಾಗಿ ಉಪಯೋಗಿಸಿಕೊಳ್ಳುತ್ತಾರೆ ಎಂಬುದು ಗೊತ್ತಾಗುತ್ತದೆ.

೪ **ಹಚ್ಚೆಯ ಬಣ್ಣ :** ಹಚ್ಚೆಯು ಭಾರತೀಯ ಪರಂಪರೆಯಲ್ಲಿ ತನ್ನದೇ ಆದಂತ ಸ್ಥಾನವನ್ನು ಹೊಂದಿದೆ. ಅದನ್ನು ಸಂಪ್ರದಾಯಸ್ಥರು ಕೂಡ ಅನುಸರಿಸುತ್ತಾ ಬಂದಿದ್ದಾರೆ. ಹಚ್ಚೆಯ ಬಣ್ಣಗಳೂ ಕೂಡ ಬಹಳ ವಿಶಿಷ್ಟತೆಯನ್ನು ಹೊಂದಿದಂತ ಬಣ್ಣಗಳೇ ಆಗಿವೆ. ಇದು ತುಂಬಾ ಪ್ರಾಚೀನ ಕಲೆಯೂ ಹೌದು. ಈ ಹಚ್ಚೆಯ ಬಣ್ಣದ ಬಗ್ಗೆ ನೋಡುವಾಗ ಇದು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನತೆ ಹೊಂದಿರುವುದನ್ನು ನೋಡುತ್ತೇವೆ. ಈ ಬಣ್ಣವನ್ನು ಹಚ್ಚೆ ಹಾಕುವವರು ತಯಾರು ಮಾಡಿಕೊಳ್ಳುತ್ತಾರೆ. ಇದು ಸಂಪೂರ್ಣವಾಗಿ ಗಿಡಮೂಲಕೆಯಿಂದ ಕೂಡಿದ ರಸವಾಗಿರುತ್ತದೆ. ಇದನ್ನು ಹಲವು ರೀತಿಯಲ್ಲಿ ತಯಾರುಮಾಡಿಕೊಳ್ಳುತ್ತಾರೆ. ಹಚ್ಚೆಯ ಬಣ್ಣವು "ಬರೆಯುವ ಮಸಿ, ಅರಿಷಿಣ, ಔಡಲೆಣ್ಣೆಯನ್ನು ಬಳಸಿ ಕೆಲವರು ಹಳದಿ ಮಿಶ್ರಿತ ಹಸಿರು ಬಣ್ಣವನ್ನು ತಯಾರಿಸಿದರೆ ಇನ್ನೂ ಕೆಲವರು ಬಳ್ಳಿ, ಕಾಯಿ, ಎಲೆಯ ರಸ ಮತ್ತು ಬೇರಿನ ರಸಗಳಿಂದ ಬಣ್ಣ ತಯಾರಿಸುತ್ತಾರೆ."[೧೩] ಈ ಬಣ್ಣದ ಮೂಖ್ಯ ಉದ್ದೇಶ ಶಾಶ್ವತವಾಗಿರಬೇಕು. ಮತ್ತು ನಂಜನ್ನು ಕಳೆವ ಶಕ್ತಿಯನ್ನು ಹೊಂದಿರಬೇಕು. ದೇಹಕ್ಕೆ ಯಾವುದೇ ರೀತಿಯ ತೊಂದರೆ ಬರಬಾರದು, ಸಾಯುವತನಕ ಜೊತೆಯಲ್ಲಿ ಇರಬೇಕು ಎಂಬುದು ಆಗಿರುತ್ತದೆ.

ಭಾರತದಲ್ಲಿ ಹಚ್ಚೆಯ ಬಣ್ಣಗಳು ಎರಡು ರೀತಿಯಲ್ಲಿ ಪ್ರಚಲಿತದಲ್ಲಿವೆ. ಅವು "೧. ಹಸಿರು ಮಿಶ್ರಿತ ಹಳದಿ ಬಣ್ಣ, ೨. ನೀಲಿ ಮಿಶ್ರಿತ ಕಪ್ಪುಬಣ್ಣ, ಎಲ್.ಕೆ. ಅನಂತಕೃಷ್ಣ ಅಯ್ಯರ್ ಹಾಗೂ

[illegible]

[illegible]

ಎಚ್.ವಿ. ನಂಜುಂಡಯ್ಯನವರು ಹೊರತಂದ 'The Mysore Tribes and Castes"[೧೪] ಎಂಬ ಗ್ರಂಥದಲ್ಲಿ ಹಚ್ಚೆಯ ಬಗ್ಗೆ ಹೇಳಿದ್ದಾರೆ. ಈ ಹಚ್ಚೆಯ ಬಳಕೆಯು ಪ್ರಪಂಚದ ಎಲ್ಲಾ ಭಾಗಗಳಲ್ಲೂ ಕಂಡುಬರುತ್ತದೆ.

೨ ಬಣ್ಣಗಳು ಮಾನವನಿಗೆ ಪರಿಚಯವಾದ ಬಗೆ : ಕ್ರಿ.ಪೂ. ಸು. ೧೦೦೦೦ ಇಸವಿಯ ಹಿಂದಿನ ಚಿತ್ರಗಳನ್ನು ನೋಡುವುದಾದರೆ ಮಧ್ಯಪ್ರದೇಶ ರಾಜ್ಯ ಸತ್‌ಪುರ ಪ್ರದೇಶದಲ್ಲಿ ಮೃದು ಮರಳುಗಲ್ಲಿನಲ್ಲಿ ಐವತ್ತಕ್ಕೂ ಹೆಚ್ಚು ಬೆಟ್ಟಗಳಲ್ಲಿನ ಕಲ್ಲುಬಂಡೆಗಳ ಮೇಲೆ ಚಿತ್ರಕಲೆಗಳಿರುವುದು ಈಗಲೂ ಕಂಡುಬರುತ್ತದೆ. ಅವುಗಳಲ್ಲಿನ ಬಹುತೇಕ ಚಿತ್ರಕಲೆಗಳು ಬಿಳಿ ಅಥವಾ ಕಡುಗೆಂಪು, ಕೆಲವು ತಿಳಿಗೆಂಪು ಬಣ್ಣಗಳಿಂದ ಕೂಡಿವೆ. ಇವು ಸ್ವಾಭಾವಿಕ ಚಿತ್ರಗಳಾಗಿವೆ. ಈ ಚಿತ್ರಗಳಲ್ಲಿ ಪ್ರಾಣಿಗಳು ಮತ್ತು ಅವುಗಳನ್ನು ಬೇಟೆಯಾಡುವ ಜನರ ಚಿತ್ರಗಳು ಇವೆ."[೧೫] ಈ ರೀತಿ ಬರೆದ ಚಿತ್ರಗಳಿಗೆ ತುಂಬಿದ, ಹಾಕಿದ, ಬಣ್ಣಗಳು ಆದಿಮ ಚಿತ್ರಕಲೆಗಳಲ್ಲಿ ಕಂಡುಬರುತ್ತವೆ.

ಚಿತ್ರಗಳನ್ನು ಬರೆಯಲು ಅವನ/ಅವಳ ಮನಸ್ಸಿನಲ್ಲಿ ಉಂಟಾದ ಭಯ, ಸಂತೋಷ ಮತ್ತು ಧೈರ್ಯವೇ ಕಾರಣವಾಗಿರಬೇಕು. ಆ ಭಾವನೆಗಳು ಗುಹೆಗಳಲ್ಲಿ ಕಲ್ಲುಬಂಡೆಗಳ ಮೇಲೆ ಚಿತ್ರಗಳಾಗಿ ವ್ಯಕ್ತಗೊಂಡಿರಬೇಕು. ಇಂತಹ ಚಿತ್ರಗಳು ಮೊದಲು ಕಲ್ಲಿನ (ಬಂಡೆಗಳ) ಮೇಲೆ ಅಡ್ಡ, ಉದ್ದ ಗೆರೆಗಳಿಂದ ರೂಪಗೊಂಡವು. ಹಾಕಿದ. ಆಮೇಲೆ ಅದರಲ್ಲಿ ಆಕಾರಗಳನ್ನು ಸೃಷ್ಟಿಸಿದ. ಕಲ್ಲಿನ ಮೇಲೆ ಗೆರೆ ಎಳೆದಾಗ ಅದನ್ನು ಕಂಡು ಆದ ಸಂತೋಷಕ್ಕೆ ಬೆರಗಾದ ತನ್ನ ಗುಂಪಿನ ಇತರ ಜನರಿಗೆ ತಿಳಿಸಿದ ಹಾಗೆ ತನ್ನ ಭಾವನೆಯನ್ನು ಚಿತ್ರದ ಮೂಲಕ ಅಭಿವ್ಯಕ್ತಪಡಿಸಲು ಪ್ರಾರಂಭಿಸಿದ. ಹಾಕಿದ ಗೀರುಗಳನ್ನು ಕಲ್ಲಿನಿಂದ ಕುಟುಕಿದ ನಂತರದ ದಿನಗಳಲ್ಲಿ ಆತನಿಗೆ ಬಣ್ಣಗಳ ಕಡೆಗೆ ಗಮನ ಹರಿಸಿದ. ಆತ ಪ್ರಾಣಿಗಳನ್ನು ಕೊಂದಾಗ ಪ್ರಾಣಿಗಳಿಂದ ಬರುವ ರಕ್ತವನ್ನು ನೋಡಿದ. ಮಾನವನಿಗೆ ಮೊದಲು ಪರಿಚಯವಾದ ಬಣ್ಣವೆಂದರೆ 'ರಕ್ತ'ವೆಂದು ಹೇಳಬಹುದು. ಈ ರಕ್ತವು (ಬಣ್ಣವು) ಮಾನವನಿಗೆ ಆಕರ್ಷಿಸಿರಬಹುದು. ಆದಿಮಾನವ ಈ ಬಂಡೆಗಳ ಮೇಲೆ ಇರುವ ಚಿತ್ರಗಳು "ಹಸ್ತಕ್ಕೆ ಬಣ್ಣ ಹಚ್ಚಿ ಅಚ್ಚಾಸಿದ ಹಾಗಿವೆಯಂತೆ ಆದಿಮಾನವ ತಾನು ಬೇಟೆಯಾಡಿದ ಪ್ರಾಣಿಗಳ ಹಸಿರಕ್ತವನ್ನು ಕೈಗೆ ಹಚ್ಚಿಕೊಂಡು ಹಾಗೆಯೇ ಬಂಡೆಗಳಿಗೆ ಹಚ್ಚಿರುವ ಸಾಧ್ಯತೆಯೂ ಇರಬೇಕು. ಪ್ರಪಂಚದ ಅನೇಕ ಕಡೆ ಗವಿಗಳಲ್ಲಿ ಪ್ರಾಚೀನ ಚಿತ್ರಕಲೆ ಪ್ರಾಣಿಗಳ ರೂಪದಲ್ಲಿದ್ದು ಹಾಗೂ ಮಾನವಾಕೃತಿಯ ರೂಪದಲ್ಲಿ ಚಿತ್ರಿತವಾಗಿರುವುದನ್ನು ವಿದ್ವಾಂಸರು ಗುರುತಿಸುತ್ತಾರೆ. ಆದಿಮಾನವನ ಚಿತ್ರಗಳು ಶಿಲೆ, ವೃಕ್ಷಗಳ ತೊಗಟೆ, ಜೀವ ಜಂತುಗಳ ಚರ್ಮ, ಎಲುಬು, ಕೊಂಬು ಕೊಳಗದಂತಹ ಸಾಮಗ್ರಿಗಳ ಮೇಲೆ ಚಿತ್ರಿತವಾಗಿವೆ. ಕೆಲಿಫೋರ್ನಿಯಾದ ಕೊಳ್ಳ ಸ್ಕಾಟ್‌ಲ್ಯಾಂಡದ ಕಲ್ಲುಬಂಡೆ, ರೈಫ್‌ಲ್ಯಾಂಡದ ಡೊಳ್ಳು ಓವ್ಹರ್ನ್ (ಫ್ರಾನ್ಸ್)ದ ಕೊಂಬುಗಳ ಮೇಲೆ ಚಿತ್ರಗಳಿರುವುದನ್ನು ಈಗಾಗಲೇ ಗುರುತಿಸಲಾಗಿದೆ."[೧೬]

ಗೀರು ಚಿತ್ರಗಳು ಮತ್ತು ಕುಟುಕು ಚಿತ್ರಗಳ ನಂತರ ಆತನಿಗೆ (ಆದಿಮಾನವನಿಗೆ) ಬುದ್ಧಿ

ಬೆಳೆದಂತೆಲ್ಲಾ ಬಣ್ಣಗಳ ಕಲ್ಪನೆ ಪ್ರಾರಂಭವಾಯಿತು. ಮೂಲ ಬಣ್ಣಗಳು ಪರಿಚಯವಾಗಿ, ಆನಂತರ ಹಲವು ಬಣ್ಣಗಳು ಪರಿಚಿತವಾದವು. ಪರಿಚಿತ ಬಣ್ಣಗಳಲ್ಲಿ ಮೊದಲು ಕೆಂಪುಬಣ್ಣ ಆಮೇಲೆ ಹಳದಿ ಬಣ್ಣ (ಈ ಹಳದಿ ಬಣ್ಣದಲ್ಲಿ ತಿಳಿಹಳದಿ, ಕಡು ಹಳದಿ, ಕೆಂಪು ಮಿಶ್ರಿತ ಹಳದಿ) ಪರಿಚಿತವಾದವು. ಈ ಬಣ್ಣಗಳು ಮಾನವನಲ್ಲಿ ಏಕೆ ಪರಿಚಿತವಾದವು ಏಕೆ ಆಕರ್ಷಿಸಿದವು ಎಂಬ ಪ್ರಶ್ನೆಗಳು ಉಗಮವಾಗುತ್ತವೆ. ಅದಕ್ಕೆ ಉತ್ತರವಾಗಿ ಈ ಬಣ್ಣಗಳು ಪರಿಚಯವಾಗಲು ಹುಲಿ, ಸಿಂಹ, ಚಿರತೆಯಂತಹ ಕ್ರೂರ ಪ್ರಾಣಿಗಳನ್ನು ಬಿಟ್ಟರೆ ಉಳಿದ ಎಲ್ಲಾ ಪ್ರಾಣಿಗಳನ್ನು ಸಾಮಾನ್ಯವಾಗಿ ಹೆದರಿಸುವಂತಹ ಸಾಮರ್ಥ್ಯವಿತ್ತು. ಈ ವಿಷಯವಾಗಿ ಆದಿಮಾನವನ ಬಗೆಗೆ ಕೆಲವು ಅಧ್ಯಯನಗಳಲ್ಲಿ ಕಂಡುಬರುತ್ತದೆ. ಆದ್ದರಿಂದ ಈ ಹಳದಿ ಬಣ್ಣಗಳು ಆತನ ಮನಸ್ಸಿನಲ್ಲಿ ಉಳಿದಿದೆ ಎಂದು ಹೇಳಬಹುದು. ಹಾಗಾಗಿ ಆದಿಮಾನವನಿಗೆ ಈ ಹಳದಿ ಬಣ್ಣ ಕಾಡುವ ಬಣ್ಣವಾಗಿ ಉಳಿಯಿತು. ಮನಸ್ಸಿನಲ್ಲಿ ಉಳಿಯುವ ಬಣ್ಣಗಳು. ಅಭಿವ್ಯಕ್ತಿಯ ಸಂದರ್ಭದಲ್ಲಿ ಮುಂದಾಗಲು ಕಾರಣವಾದವು. ಮೂಲ ಬಣ್ಣಗಳ ಕಲ್ಪನೆಯು ಆದಿಮಾನವನಲ್ಲಿ ಇದು ಒಂದು ಬಗೆಯಾದರೆ ಎರಡನೆಯದು ಆತ ನಿಸರ್ಗದಲ್ಲೇ ಇರುವುದರಿಂದ ಸೂರ್ಯ ಉದಯದ ಮತ್ತು ಮುಳುಗುವ ಸಂದರ್ಭದಲ್ಲಿ ಉಂಟಾಗುವ ದಿನದ ಪ್ರಕೃತಿಯ ಮೊದಲ ಬಣ್ಣ ಮತ್ತು ಕೊನೆಯ ಬಣ್ಣ ಅವನ ಮನಸ್ಸಿನಲ್ಲಿ ಘಾಡವಾಗಿ ಉಳಿದಿರಬಹುದು. ಆದ್ದರಿಂದ ಆ ಬಣ್ಣಗಳನ್ನು ತಾನು ನೆಲೆಸಿರುವ ಆಸುಪಾಸಿನಲ್ಲಿನ ಬಣ್ಣದ ಮಣ್ಣನ್ನು ಹುಡುಕಿಕೊಂಡ. ಈ ಬಣ್ಣದ ಕಲ್ಪನೆಯನ್ನು ಅವರ ಮನೆಯ ಗೋಡೆಗಳ ಮೇಲೆ ಉಪಯೋಗಿಸುವುದನ್ನು ಇಂದಿನ ಬುಡಕಟ್ಟು ಸಮುದಾಯಗಳ ಹಿನ್ನೆಲೆಯಲ್ಲಿ ನೋಡಬಹುದಾಗಿದೆ.

ಕಂದು ಮತ್ತು ಕಪ್ಪುಬಣ್ಣಗಳು ನೇರವಾಗಿ ಪ್ರಾಣಿಗಳ ರಕ್ತವನ್ನು ಉಪಯೋಗಿಸುವುದರಿಂದ ಅದು ಕಂದುಬಣ್ಣವಾಗಿಯೂ ಇರಬಹುದು. ಕೆಲವೊಮ್ಮೆ ನೆಲದಲ್ಲಿ ಸಿಕ್ಕ ಕಪ್ಪುಮಣ್ಣಿಗೆ ತಾವು ಸುಟ್ಟ ಕಟ್ಟಿಗೆಯ ಇದ್ದಿಲನ್ನು ಅರೆದು, ಕಲಸಿ ಬಣ್ಣವಾಗಿ ಹಚ್ಚಿರಬಹುದು. ನಂತರದ ದಿನಗಳಲ್ಲಿ ಅದು ನಿಲ್ಲದೆ ಇರದ ಕಾರಣ ಅದಕ್ಕೆ ತಿಳಿಗೆಂಪು ಮಣ್ಣನ್ನು ಕಲಸಿ ಹಚ್ಚಿರಬಹುದು. ಇಲ್ಲಿ ನೆಲದಲ್ಲಿ ಸಿಗುವ ಮಣ್ಣನ್ನು ಉಪಯೋಗಿಸಿರುವುದನ್ನು ನಾವು ಕಾಣುತ್ತೇವೆ. ಬಣ್ಣಗಳ ಕಲ್ಪನೆಯೂ ಮಾನವನಲ್ಲಿ ಜಾಗೃತಿಯಿಂದಲೋ ಪ್ರಜ್ಞಾಪೂರ್ವಕವಾಗಿಯೇ ಅಥವಾ ಅಪ್ರಜ್ಞಾಪೂರ್ವಕವಾಗಿಯೇ ಮೂಡಿತು. ಜೊತೆಗೆ ಹಲವು ಬಣ್ಣಗಳನ್ನು ಮಿಶ್ರಣ ಮಾಡಿ ಬಳಸುವುದನ್ನು ಅಂದೇ ರೂಢಿಯಲ್ಲಿಟ್ಟುಕೊಂಡಿದ್ದ. ಹಾಗಾಗಿ ಮಾನವ ಮೊದಲು ಕೆಂಪು (ಕಂದು) ಹಳದಿ, ಕಪ್ಪು, ಬಿಳಿ, ಬೂದು ಬಣ್ಣಗಳನ್ನು ಕಂಡುಕೊಂಡ ನಂತರದ ದಿನಗಳಲ್ಲಿ ಹಸಿರು ಗಿಡದ ಎಲೆಯನ್ನು ಉಜ್ಜಿ ಅರೆದು ನಂತರ ಅದನ್ನು ಹಸಿರು ಬಣ್ಣವನ್ನಾಗಿ ತಯಾರಿಸಿಕೊಂಡ. ಇವನು ಎಲೆಗಳನ್ನು ಅರೆದು ಅದರಲ್ಲಿ ಬಂದ ರಸವನ್ನು ತನ್ನ ಬಣ್ಣಗಳ ಬಳಕೆಗೆ ಉಪಯೋಗಿಸಿಕೊಂಡ.

ಆಕಾಶದ ನೀಲಿ ಬಣ್ಣವನ್ನು ನಿರಂತರವಾಗಿ ನೋಡುತ್ತಿದ್ದ. ಅದರ ಬಣ್ಣವನ್ನು ಗುರುತಿಸಿದ. ನೀಲಿ ಬಣ್ಣಗಳ ಹೂವನ್ನು ಸಂಗ್ರಹಿಸಿ ಅವುಗಳನ್ನು ಅರೆದು ಅದರಿಂದ ಬಂದ ರಸವನ್ನು ಬಣ್ಣವನ್ನಾಗಿ

ಬಳಸತೊಡಗಿದ. ಹೀಗೆ ಮಾನವನ ಪ್ರಕೃತಿಯೊಂದಿಗೆ ಬದುಕುತ್ತಾ, ಪ್ರಕೃತಿಯಲಿ ಕಂಡ, ಅನುಭವಿಸಿದ ಬಣ್ಣಗಳನ್ನು ಉಪಯೋಗಿಸತೊಡಗಿದ.

ಬಣ್ಣಗಳ ಕಲ್ಪನೆ ಬಂದ ನಂತರ ಮಾನವ ಕೆಂಪು (ಕೆಮ್ಮಣ್ಣು), ಹಳದಿ, ಬಿಳಿಯ ಬಣ್ಣಗಳನ್ನು ಅಲ್ಲಲ್ಲಿ ಉಪಯೋಗಿಸಿರುವುದನ್ನು ನಾವು ಗಮನಿಸಬಹುದಾಗಿದೆ. ನಂತರದ ಬಣ್ಣಗಳ ಬಳಕೆಯಲ್ಲಿ ಹಲವಾರು ಬಣ್ಣಗಳನ್ನು ಕಂಡುಹಿಡಿದು ಬಳಕೆಯನ್ನು ಮಾಡಿಕೊಂಡಿರುವುದು ಗಮನಾರ್ಹವಾಗಿದೆ.

ಬಣ್ಣಗಳನ್ನು ಕಂಡುಕೊಂಡ ಮೇಲೆ ಬಣ್ಣಗಳನ್ನು ಬಂಡೆಗಳ ಮೇಲೆ ತಾವು ವಾಸಿಸುತ್ತಿರುವ ಗುಹೆಗಳ ಮೇಲೆ ಬಳಸಲಾಯಿತು. ಮಾನವ ನಾಗರೀಕತೆ ಹೊಂದಿದಂತೆಲ್ಲಾ ಅವನು ಪ್ರಕೃತಿಯೊಂದಿಗೆ ಬದುಕುತ್ತಾ ತನ್ನ ವೈಶಿಷ್ಟತೆಯನ್ನು ತೋರುತ್ತಲೇ ಬಂದ. ಮಾನವನ ಬದುಕಿನ ಅವಿಷ್ಕಾರಗಳು ಬದಲಾವಣೆಯ ಪ್ರಕ್ರಿಯೆಯು ಕಾಣುತ್ತಲೇ ಬಂದವು. ಅದರ ಪರಿಣಾಮವಾಗಿ ತಾನು ತಿನ್ನುತ್ತಿದ್ದ ಆಹಾರವನ್ನು ಸುಟ್ಟು ತಿನ್ನಲು ಪ್ರಾರಂಭಿಸಿದ. ಮನೆಯನ್ನು ಮಾಡಿಕೊಂಡ. ಗೋಡೆಗಳನ್ನು ನಿರ್ಮಿಸಿಕೊಂಡ. ಮನೆಗೆ ಬೇಕಾದ ತನ್ನ ಅಗತ್ಯ ವಸ್ತುಗಳನ್ನು ಮಾಡಿಕೊಂಡ. ಹೀಗೆ ಅನಕೂಲವನ್ನು ಮಾಡಿಕೊಂಡ ಮಾನವ ಅವುಗಳ ಮೇಲೆ ತನ್ನ ಅಭಿವ್ಯಕ್ತಿಯನ್ನು ಪ್ರಕಟಿಸತೊಡಗಿದ. ಅವುಗಳು ಕಾಲಾನಂತರದಲ್ಲಿ ಗೋಡೆಯ ಮೇಲಿನ ಚಿತ್ರಗಳು ನೆಲದ ಮೇಲಿನ ಚಿತ್ರಗಳು ಉಡುಗೆ-ತೊಡುಗೆಯ ಮೇಲಿನ ಚಿತ್ರಗಳಾಗಿ ಕಾಣತೊಡಗಿದವು. ಈ ರೀತಿಯ ಚಿತ್ರಗಳನ್ನು ಕರ್ನಾಟಕದ ಬುಡಕಟ್ಟು ಸಮುದಾಯಗಳ ಹಿನ್ನೆಲೆಯಲ್ಲಿ ನೋಡಲಾಗಿದೆ. ಇಲ್ಲಿ ಆದಿಮಾನವ ಸಂದ ಬೆಳೆದು ಬಂದ ಚಿತ್ರಕಲೆಗಳ ಮಾದರಿಗಳು ಇಲ್ಲಿನ ಬುಡಕಟ್ಟು ಸಮುದಾಯಗಳಲ್ಲಿ ಕಾಣಿಸುತ್ತವೆ. ಈ ಚಿತ್ರಗಳ ವಿವರಣೆಯನ್ನು ಅಧ್ಯಾಯ ಮೂರರಲ್ಲಿ ವಿವರಿಸಲಾಗಿದೆ.

ಬಣ್ಣಗಳ ಕಲ್ಪನೆಗೆ ಆದಿಯಲ್ಲಿ ಮಾನವನಿಗೆ ಹಗಲುರಾತ್ರಿಗಳು ಪೂರಕವಾಗಿವೆ. ಹಾಗೆಯೇ ಪ್ರಕೃತಿಯ ಬದಾವಣೆಗಳೂ ಕಾರಣವಾಗಿವೆ. ಅಂದರೆ ಮಳೆಗಾಲ, ಚಳಿಗಾಲ, ಬೇಸಿಗೆ ಕಾಲಗಳೂ ಕೂಡ ಬಣ್ಣಗಳ ಕಲ್ಪನೆಯಲ್ಲಿ ಹೊಸತನವನ್ನು ಕಲ್ಪಿಸಿ ಮನಸ್ಸಿನಲ್ಲಿ ಮೂಡಿಸಿದೆ. ಬೆಳಕಾದಾಗ (ಹಗಲಲ್ಲಿ) ಎಲ್ಲಾ ವಸ್ತುಗಳು ತಮ್ಮ ಆಕಾರ, ಬಣ್ಣಗಳು ಸ್ಪಷ್ಟವಾಗಿ ಕಾಣಿಸಿಕೊಳ್ಳುವ ಹಾಗೆಯೇ ರಾತ್ರಿಯ ಸಮಯದಲ್ಲಿ ತಮ್ಮ ಬಣ್ಣದ ಪ್ರತಿಬಿಂಬ ಮಂದವಾಗಿ ಬಿಡುತ್ತವೆ. ಮಳೆಗಾಲದಲ್ಲಿ ಹಸಿರನ್ನು ತುಂಬಿಕೊಂಡಿರುವಂತೆ ಪ್ರಕೃತಿ ಕಾಣುತ್ತದೆ. ಹಾಗೆಯೇ ಚಳಿಗಾಲ, ಬೇಸಿಗೆಕಾಲದಲ್ಲಿ ಪ್ರಕೃತಿಯ ವಾತಾವರಣ ಬೇರೆಯದಾಗಿಯೇ ಕಾಣಿಸುತ್ತದೆ. ಜೊತೆಗೆ ಮರಗಿಡಗಳ ಬಣ್ಣ ಬಣ್ಣದ ಹೂವುಗಳೂ ಕೂಡ ಏಕಕಾಲದಲ್ಲಿ ಬಿಡುವುದಿಲ್ಲ. ಅವುಗಳು ತಮ್ಮದೇ ಆದಂತ ಕಾಲವನ್ನು ಹೊಂದಿರುತ್ತವೆ. ಅವುಗಳು ಆಯಾ ಕಾಲಕ್ಕನುಗುಣವಾಗಿ ಇರುತ್ತವೆ.

ಪ್ರಕೃತಿಯೊಂದಿಗೆ ಬದುಕುತ್ತಿರುವ ಮನುಷ್ಯ ಅಲ್ಲಿಯೇ ಬದುಕಲು ಮತ್ತು ತನ್ನನ್ನು ರಕ್ಷಿಸಿಕೊಳ್ಳಲು ಕಾಡಿನಲ್ಲಿರುವ ಪ್ರಾಣಿಪಕ್ಷಿಗಳ ಚಲನವಲನಗಳನ್ನು ಅರಿತು ಬದುಕಬೇಕಾಯಿತು. ಅವುಗಳಂತೆ ಇರಲು ಬಯಸುತ್ತಾನೆ. ಹಾಗಾಗಿ ಪ್ರಾರಂಭದ ಹಂತದಲ್ಲಿ ಮಾನವನ ಗಿಡ ಬಳ್ಳಿ ಹೂವುಗಳನ್ನು ಅವನ ಮೈಯಿಗೆ

[illegible]

ಸಿಂಗರಿಸಿಕೊಂಡ. ಮರದ ತೊಗಟೆಗಳನ್ನು ತನ್ನ ಮೈಯಿಗೆ ಸುತ್ತಿಕೊಂಡ. ಇದು ಅವನಿಗೆ ಸಹಜ ಕ್ರಿಯೆಯಾಗಿತ್ತು. ಇದು ಒಂದು ಹಂತದಲ್ಲಿ ಪ್ರಾಣಿಯಂತೆ ಕಾಣಬೇಕೆಂಬುದಾಗಿತ್ತು. ಆದರೆ, ಇನ್ನೊಂದು ರೀತಿಯಲ್ಲಿ ಅದು ಅವನಿಗೆ ಮಳೆ, ಚಳಿ, ಬಿಸಿಲಿಗೆ ರಕ್ಷಣೆಯನ್ನು ಕೊಡುವಂತಹದೂ ಆಗಿತ್ತು. ಮತ್ತೊಂದು ಹಂತದಲ್ಲಿ ಅದೇ ವಸ್ತುಗಳನ್ನು ಧರಿಸುವುದು ತನಗೆ ಚೆನ್ನಾಗಿ ಕಾಣಲಿ ಎಂಬುದೂ ಆಗಿತ್ತು. ಜೊತೆಗೆ ಪ್ರಾಣಿಗಳ ಚರ್ಮವನ್ನು ಉಡಲು ಆದಿಮಾನವ ಪ್ರಾರಂಭಿಸಿದ ಅದರಿಂದ ಅವನಿಗೆ ಪ್ರಾಣಿಗಳಂತೆ ತಾನು ಕಾಣಿಸುತ್ತೇನೆ. ಮತ್ತು ಪ್ರಾಣಿಗಳು ಭಯದಿಂದ ಓಡಿ ಹೋಗುತ್ತೇವೆ. ಅಥವಾ ಅವುಗಳಿಂದ ಯಾವುದೇ ರೀತಿಯ ತೊಂದರೆಯಾಗುವುದಿಲ್ಲವೆಂಬ ಕಲ್ಪನೆಯನ್ನು ಹೊಂದಿದ್ದ. ಹೀಗೆ ಮಾನವ ಅಂದಿನಿಂದ ಇಂದಿನವರೆಗೆ ವಿವಿಧ ಕಾರಣಗಳಿಗಾಗಿ ವಿವಿಧ ಬದಲಾವಣೆಗಳನ್ನು ಪಡೆಯುತ್ತಾ ಬಂದ.

ಕೆಲವೊಮ್ಮೆ ಪ್ರಾಣಿಗಳನ್ನು ಬೇಟೆಯಾಡುವ ಸಂದರ್ಭದಲ್ಲಿ ತನ್ನನ್ನು ಅವುಗಳಿಂದ ರಕ್ಷಿಸಿಕೊಳ್ಳಲು ಮಣ್ಣಿನ ರಾಡಿಯನ್ನು (ಕೆಸರನ್ನು) ಬಳಿದು ಕೊಳ್ಳುತ್ತಿದ್ದ. ಕಾಡುಪ್ರಾಣಿಗಳು ನೀರನ್ನು ಕುಡಿಯಲು ನೀರ ಹತ್ತಿರ ಬಂದರೆ ಅವನು ಅಲ್ಲಿರುವ ಮಣ್ಣಿನ ಕೆಸರನ್ನು ಹಚ್ಚಿಕೊಂಡು ಬಿಡುತ್ತಿದ್ದ. ಹೀಗೆ ಅವನು ಮಾಡುವುದರಿಂದ ಆ ಜಾಗದ ಒಂದು ಭಾಗವಾಗಿ ಕಾಣಿಸುತ್ತಿದ್ದ. ನೀರು ಕುಡಿಯಲು ಬಂದ ಪ್ರಾಣಿಗಳನ್ನು ಸುಲಭವಾಗಿ ಬೇಟೆಯಾಡುತ್ತಿದ್ದ. ಕೆಲವೊಮ್ಮೆ ಬೇರೆ ಬೇರೆ ಜಾಗಗಳಲ್ಲಿ ಸಿಗುವ ಮಣ್ಣುಗಳನ್ನು ಬಳಿದಿಕೊಂಡು ರಕ್ಕೆ ಪುಕ್ಕುಗಳನ್ನು ಕಟ್ಟಿಕೊಂಡು ಪ್ರಾಣಿಗಳಿಗೆ ಭಯವನ್ನು ಹುಟ್ಟಿಸುವಂತೆ ಮಾಡುತ್ತಿದ್ದ. ಹೀಗೆ ಮಾಡುವುದರಿಂದ ನಿಸರ್ಗವನ್ನು ತನ್ನದಾಗಿಸಿಕೊಳ್ಳುತ್ತಿದ್ದ. ಇದನ್ನು ಅನುಭವಿಸಿ ಆನಂದಪಡುವುದು ಅವನ ಬದುಕಾಗಿತ್ತು.

ಬಣ್ಣಗಳ ಗುಣಧರ್ಮ :

ಕೆಂಪು - ಅಪಾಯ, ಭಯ, ಹಿಂಸೆ ಮತ್ತು ಪ್ರೇಮವನ್ನು ಸಾಂಕೇತಿಸುವ ಬಣ್ಣವಾಗಿವೆ.

ಹಸಿರು - ಸಮೃದ್ಧಿಯ ಸಂಕೇತವಾಗಿದೆ

ನೀಲಿ - ಪ್ರಾಶಾಂತತೆ, ಪರಿಶುದ್ಧತೆ, ನಿರ್ಮಲತೆಯನ್ನು ಹೇಳುವುದಾಗಿದೆ

ಹಳದಿ -ಶ್ರೀಮಂತಿಕೆಯ ಬಣ್ಣವಾಗಿದೆ

ಕೇಸರಿ - ತ್ಯಾಗ, ಸಮರ್ಪಣೆ ಭಾವವನ್ನು ಸಂಕೇತಿಸುವ ಬಣ್ಣವಾಗಿದೆ

ಕಪ್ಪು - ದುಃಖ, ದಾರದ್ರ, ಕಷ್ಟವನ್ನು ಹೇಳುವ ಬಣ್ಣವಾಗಿದೆ

ಬಿಳಿ - ಪರಿಶುದ್ದತೆಯನ್ನು ಸಂಕೇತಿಸುವ ಬಣ್ಣವಾಗಿದೆ. ಹೀಗೆ ಈ ಬಣ್ಣಗಳು ವಿವಿಧ ರೀತಿಯ ಗುಣಧರ್ಮವನ್ನು ಸೂಚಿಸುತ್ತವೆ. 'ಭಾರತೀಯ ಕಲೆಯಲ್ಲಿನ ರಸ' ಸಿದ್ದಾಂಥದಲ್ಲಿಯೂ ಪ್ರತಿಯೊಂದು ರಸಕ್ಕೂ ತನ್ನದೇ ಆದ ಬಣ್ಣದ ಕಲ್ಪನೆಯನ್ನು ಹೊಂದಿರುವುದು ಈ ಕೆಳಗಿನಂತೆ ನೋಡಬಹುದು.

ಶೃಂಗಾರ ರಸವು = ಶ್ಯಾಮಬಣ್ಣ

ಹಾಸ್ಯರಸವು ಬಿಳಿಯ = ಬಣ್ಣ

ಕರುಣ ರಸವು = ಬೂದುಬಣ್ಣ

ರೌದ್ರರಸವು = ಕೆಂಪು ಬಣ್ಣ

ವೀರ ರಸವು = ಗೌರ ಬಣ್ಣ

ಭಯಾನಕ ರಸವು = ಕಪ್ಪು ಬಣ್ಣ

ಭೀಬತ್ಸ ರಸವು = ನೀಲಿ ಬಣ್ಣ

ಅದ್ಭುತ ರಸವು = ಹಳದಿ ಬಣ್ಣ

ಹೀಗೆ ರಸಪ್ರಧಾನ ಚಿತ್ರ ಕಲಾಕೃತಿಗಳು ಬಣ್ಣಗಳನ್ನೊಳಗೊಂಡು ರಚನೆಗೊಳ್ಳುತ್ತವೆ. ಈ ಬಣ್ಣಗಳನ್ನು ಒಳಗೊಂಡ ಚಿತ್ರಗಳು ಕೆಲವು ನೋಟಕ್ಕೆ ಕೆಲವು ರಂಗನ್ನು, ತಂಪನ್ನು ಅಥವಾ ಸೌಮ್ಯವನ್ನು ಕೊಡುವ ಚಿತ್ರಗಳಾಗಿ ಕಂಡುಬಂದರೆ; ಮತ್ತೆ ಕೆಲವು ಬಿಸಿ ಅಥವಾ ಕಣ್ಣಿಗೆ ಚುಚ್ಚುವಂತೆ ಗೋಚರಿವಂತಹ ಬಣ್ಣಗಳಾಗಿರುತ್ತವೆ.

ಬಣ್ಣಗಳಲ್ಲಿ ಸಾದೃಶ್ಯ ಬಣ್ಣಗಳು ಇರುವಂತೆ ವಿರೋಧ ಬಣ್ಣಗಳೂ ಇವೆ. ಅವು ಒಂದನ್ನೊಂದು ವಿರೋಧಿಸುತ್ತವೆ. ಕಪ್ಪುಬಣ್ಣ x ಬಿಳಿಬಣ್ಣ, ಕಪ್ಪುಬಣ್ಣ x ಹಳದಿಬಣ್ಣ, ಕಪ್ಪುಬಣ್ಣ x ಹಳದಿಬಣ್ಣ, ಹಸಿರುಬಣ್ಣ x ಕೆಂಪುಬಣ್ಣ ಹೀಗೆ ವಿರೋಧಿ ಬಣ್ಣಗಳನ್ನು ಗುರುತಿಸಬಹುದು. ಕೆಲವು ಬಣ್ಣಗಳನ್ನು ತಯಾರುಮಾಡುವಾಗ ಬಣ್ಣ ಬಣ್ಣಗಳನ್ನು ಮಿಶ್ರಣಮಾಡಬೇಕಾಗುತ್ತದೆ. ಮಿಶ್ರಣದಲ್ಲಿ ಪ್ರಮಾಣಗಳು ಹೆಚ್ಚು ಕೆಲಸ ಮಾಡುತ್ತವೆ. ಇವು ಹಲವು ರೀತಿಯ ಬಣ್ಣಗಳನ್ನು ಉಂಟುಮಾಡುತ್ತವೆ. ಏಳು ಬಣ್ಣಗಳು ಸೇರಿಸಿದಾಗ ಬಿಳಿಯ ಬಣ್ಣ ಅಥವಾ ಬೂದು ಬಣ್ಣಬರುತ್ತದೆ. ಇದು ಸಮಪ್ರಮಾಣ ಮಿಶ್ರಣದಿಂದ ಸಾಧ್ಯವಾಗುತ್ತದೆ.

ಇಂದಿನ ಬಣ್ಣಗಳು ಹಲವು ರೀತಿಯಲ್ಲಿ ಇವೆ. ಅವುಗಳೆಂದರೆ

೧. ನೀರು ಮಿಶ್ರಿತ ಬಣ್ಣ

೨. ತೈಲ ಮಿಶ್ರಿತ ಬಣ್ಣ

೩. ಅಂಟು ಮಿಶ್ರಿತ ಬಣ್ಣ

೪. ರಾಸಾಯನಿಕ ಮಿಶ್ರಿತ ಬಣ್ಣ

೫. ಪ್ರಾಕೃತಿಕ ಬಣ್ಣ

೬. ಭೂಬಣ್ಣ (ಭೂಮಿಯಲ್ಲಿ ಸಿಗುವ ಮಣ್ಣು ಬಣ್ಣ)

೭. ಮೇಣದ ಬಣ್ಣಗಳು.

೧. ನೀರು ಮಿಶ್ರಿತ ಬಣ್ಣಗಳು : ವಾಟರ್ ಕಲರ್, ಪೋಸ್ಟರ್ ಕಲರ್, ಪ್ರೋಜಿ ಕಲರ್, ಅಕ್ರೆಲಿಕ್ ಕಲರ್, ವಾಟರ್ ಡಿಸ್ಟೆಂಪರ್, ಕುಪ್ಪಿ ಬಣ್ಣ, ಹರಳು ಬಣ್ಣ, ಸ್ಟೈನರ್ ಬಣ್ಣ.

೨. ತೈಲ ಮಿಶ್ರಿತ ಬಣ್ಣಗಳು : ಆಯಿಲ್ ಕಲರ್, ಅಕ್ರೆಲಿಕ್ ಕಲರ್, ಎನಾಮಲ್ ಕಲರ್, ಆಯಿಲ್ ಪೇಸ್ಟಲ್ಸ್, ಆಯಿಲ್ ಡಿಸ್ಟೆಂಪರ್ಸ್, ಟೆಂಪರಾ

[illegible]

೩. **ಅಂಟು ಮಿಶ್ರಿತ ಬಣ್ಣಗಳು** : ಎಗ್‌ಟೆಂಪಾರ್, ಅರ್ಥ್‌ಪೌಡರ್ ಕಲರ್ಸ್, ಹೋಳಿಬಣ್ಣಗಳು ಬ್ಯಾನರ್ ಪುಡಿ ಬಣ್ಣಗಳು.

೪. **ರಾಸಾಯನಿಕ ಮಿಶ್ರಿತ ಬಣ್ಣಗಳು** : ಬಾಟಿಕ್ ಕಲರ್ಸ್, ಸೆರಾಮಿಕ್ ಕಲರ್ಸ್, ಆಕ್ಸೈಡ್ ಕಲರ್ಸ್ ಸಿಂತೆಟಿಕ್ ಕಲರ್ಸ್.

೫. **ಪ್ರಾಕೃತಿಕ ಬಣ್ಣಗಳು** : ವೆಜಿಟಬಲ್ ಡೈಕಲರ್ಸ್, ಪಾಚಿ, ಮರಗಳ ಚಕ್ಕೆಬಣ್ಣಗಳು, ಹೂವುಗಳ ಬಣ್ಣ, ಎಲೆಗಳ ಬಣ್ಣ

೬. **ಭೂಬಣ್ಣ (ಭೂಮಿಯಲ್ಲಿ ಸಿಗುವ ಬಣ್ಣಗಳು)** : ಊರ್ಮಂಜು ಬಣ್ಣ, ಕೆಮ್ಮಣ್ಣು ಬಣ್ಣ, ಖಾವಿ ಬಣ್ಣ, ಹಳದಿ ಕಟಗ, ಬಿಳಿ ಕಟಗ, ಬಳಪ ಕಲ್ಲಿನ ಬಣ್ಣಗಳು

೭. **ಮೇಣದ ಬಣ್ಣಗಳು** : ಕ್ರಯಾನ್ ಬಣ್ಣ, ಲ್ಯಾಕರ್ ಬಣ್ಣ, ಅರಗು ಬಣ್ಣ

ಇವು ಇಂದು ಬಳಕೆಯಾಗುತ್ತಿರುವ ಬಣ್ಣಗಳ ಪರಿಭಾಷೆಗಳು ಮತ್ತು ಅರ್ಥಗಳು. ನೀರು ಮಿಶ್ರಿತ ಬಣ್ಣದಲ್ಲಿ ಪಾರದರ್ಶಿಕತೆ ಇರುತ್ತದೆ. ಇದನ್ನು ಡ್ರಾಯಿಂಡ್ ಹಾಳೆಯ ಮೇಲೆ ಬಳಸಲಾಗುತ್ತದೆ. ಇದು ಲ್ಯಾನ್‌ಸ್ಕೇಪ್, ಸ್ಟಲ್‌ಲೈಫ್, ಪೋಟ್‌ರೇಟ್ ಇನ್ನು ಮುಂತಾದ ಚಿತ್ರಗಳಿಗೆ ಬಳಸಬಹುದು. ಇದು ಕಲಾವಿದ ಬಳಸಿಕೊಳ್ಳುವ ಒಂದು ಮಾಧ್ಯಮವಾಗಿರುತ್ತದೆ. ಇದು ವಾಟರ್ ಕಲರ್‌ಗೆ ಸಂಬಂಧಿಸಿರುತ್ತದೆ.

ಪೋಸ್ಟರ್ ಕಲರ್ : ಅಪಾರದರ್ಶಕ ಬಣ್ಣ ಇದನ್ನು ವಾಣಿಜ್ಯ ಚಿತ್ರಕಲೆಯಲ್ಲಿ ಪೋಸ್ಟರ್ ವಿಷಯಕ್ಕೆ ಬಳಸಿಕೊಳ್ಳುತ್ತಾರೆ. ಮತ್ತು ಡಿಜೈನ್ (ನಕ್ಷೆ) ಚಿತ್ರಕ್ಕೆ ಬಳಸುತ್ತಾರೆ. ಕಲಾವಿದರು ಇದನ್ನು ತಮ್ಮ ತಂತ್ರಗಳಿಗನುಸಾರವಾಗಿ ಬಳಸಿಕೊಳ್ಳುತ್ತಾರೆ.

ಫ್ಲ್ಯಾಜಿ ಕಲರ್ : ಇದು ಪಾರದರ್ಶಕ ಬಣ್ಣ. ನೀರಿನಲ್ಲಿ ಮಿಶ್ರಣ ಮಾಡಿ ಬರೆಯುವ ಬಣ್ಣ. ಈ ಬಣ್ಣವನ್ನು ಕಪ್ಪು ಬಿಳುಪು ಛಾಯಾಚಿತ್ರಗಳಿಗೆ ಬಳಸುತ್ತಾರೆ. ಕಲಾವಿದರು ತಮ್ಮ ಕಲಾಕೃತಿಗಳಲ್ಲಿಯೂ ಸಹ ಇದನ್ನು ಬಳಸುತ್ತಾರೆ.

ಅಕ್ರಲಿಕ್ ಬಣ್ಣ : ಇದು ಕ್ಯಾನ್‌ವಸ್, ಪೇಪರಗಳ ಮೆಲೆ ನೀರನ್ನು ಮಿಶ್ರಣ ಮಾಡಿಕೊಂಡು ಬಳಸುತ್ತಾರೆ. ಮತ್ತು ತೈಲವನ್ನು ಮಿಶ್ರಣಮಾಡಿ ಚಿತ್ರವನ್ನು ಬರೆಯಲು ಬಳಸುತ್ತಾರೆ.

ವಾಟರ್ ಡಿಸ್ಟೆಂಪರ್ : ನೀರಿನೊಂದಿಗೆ ಮಿಶ್ರಣಮಾಡಿಕೊಂಡ ಗೋಡೆಗೆ ಬಳಸುವ ಬಣ್ಣ

ಕುಪ್ಪಿಬಣ್ಣ : ಇದು ಪುಡಿಬಣ್ಣ. ನೀರಿನಲ್ಲಿ ಕಲಸಿ ಗೌರಿಹುಣ್ಣಿಮೆ ಸಂದರ್ಭದಲ್ಲಿ ದನಗಳ ಮೈಮೇಲೆ ಹಸ್ತ ಹಾಕಲು ಬಳಸುವ ಬಣ್ಣ. ಇದನ್ನು ಗೋಡೆಗೂ ಬಳಸುತ್ತಾರೆ.

ಹರಳು ಬಣ್ಣ : ಇದನ್ನು ನೀರಿನಲ್ಲಿ ಕುದಿಸಿ, ಬಿದಿರು, ಬೆತ್ತ ಮತ್ತು ಈಚಲ ಹುಲ್ಲಿನ ಚಾಪೆಗೆ ಹಾಕುತ್ತಾರೆ.

ಸ್ಟೈನರ್ ಬಣ್ಣ : ಇದು ಗೋಡೆಗೆ ಬಳಸುವ ಬಣ್ಣ. ಡಿಸ್ಟೆಂಪರ್‌ಗೆ ಸಹಾಯಕ ಬಣ್ಣವಾಗಿರುತ್ತದೆ.

ಆಯಿಲ್ ಕಲರ್ : ಕ್ಯಾನ್‌ವಾಸ್ ಮೇಲೆ ಮಾಡುವ ಚಿತ್ರಗಳಿಗೆ ಅಗಸಿ ಎಣ್ಣೆಯನ್ನು ಬೆರಸಿ ಬರೆಯುವ ಬಣ್ಣ.

ಏನಾಮಲ್ ಕಲರ್ : ವಾಣಿಜ್ಯ ದೃಷ್ಟಿಯಿಂದ ಮನೆಯ ಕಿಟಕಿ, ಬಾಗಿಲು ಇನ್ನಿತರೆ ಮರದ ಸಾಮಗ್ರಿಗಳ ಮೇಲೆ ಟರಪಂಟ್ ಟೈನ್ ಬೆರಸಿ ಬಳಸುತ್ತಾರೆ.

ಅಕ್ರೆಲಿಕ್ ಕಲರ್ : ಅಗಸಿ ಎಣ್ಣೆಯನ್ನು ಮಿಶ್ರಣಮಾಡಿಕೊಂಡು ಕ್ಯಾನ್‌ವಾಸ್ ಮೇಲೆ ಈ ಬಣ್ಣವನ್ನು ಬಳಸುತ್ತಾರೆ.

ಟಂಪರಾ : ಹುಡಿ ಬಣ್ಣವನ್ನು ಕೋಳಿಮಟ್ಟೆಯಲ್ಲಿರುವ ಗ್ಲಿಜರಿನ್ ಮತ್ತು ಲಿನ್‌ಸಿಡಾಯಿಲ್‌ನೊಂದಿಗೆ ಮಿಶ್ರಣಮಾಡಿದ ಬಳಸುತ್ತಾರೆ. ಇದಕ್ಕೆ ಡಿಸ್ಟಲ್ಡ ವಾಟರ್ ಹಾಕಿ ಬಳಸಿದರೆ ವಾಟರ್ ಕಲರ್ ಆಗುತ್ತದೆ. ಅಗಸಿ ಎಣ್ಣೆ ಹಾಕಿದರೆ ಅದು ಆಯಿಲ್ ಕಲರ್ ಅಥವಾ ಕಡು ಬಣ್ಣವಾಗುತ್ತದೆ. ಇದರೊಂದಿಗೆ ಲವಂಗದ ಎಣ್ಣೆಯನ್ನು ಮಿಶ್ರಣಮಾಡಲಾಗುತ್ತದೆ.

ಅರ್ಥ್ ಪೌಡರ್ ಕಲರ್ಸ್ : ಬೇರೆ ಬೇರೆ ಜಾಗದಲ್ಲಿ ಸಿಗುವ ಕಲ್ಲುಪುಡಿ, ಮಣ್ಣುಪುಡಿಯನ್ನು ಸರಿಯಾಗಿ ಸೋಸಿ ಅಂಟಿನೊಂದಿಗೆ ಬೆರಸಿ ಉಪಯೋಗಿಸುವಂತಹ ಬಣ್ಣ

ಹೋಳಿಬಣ್ಣಗಳು : ಇವು ಪುಡಿ ಬಣ್ಣಗಳು. ನೀರಿನೊಂದಿಗೆ ಬೆರಸಿ ಹೋಳಿ ಆಡಲು ಬಳಸುತ್ತಾರೆ. ಅಂಟನ್ನು ಬೆರಸಿ ಬ್ಯಾನರ್‌ನನ್ನು ಬರೆಯಲು ಬಳಸುತ್ತಾರೆ.

ಬಾಟಿಕ್ ಡೈಕಲರ್ : ಇವು ರಾಸಾಯನಿಕ ಬಣ್ಣಗಳು. ಬಟ್ಟೆಗೆ ಬಳಸುವಂತಹ ಬಣ್ಣಗಳು.

ಸೆರಾಮಿಕ್ ಕಲರ್ : ಇವು ರಾಸಾಯನಿಕ ಬಣ್ಣಗಳು. ಈ ಬಣ್ಣವನ್ನು ಸುಟ್ಟು ಮಣ್ಣಿನ ವಸ್ತುವಿನ ಮೇಲೆ ಹಾಕಿ ಪುನಃ ಸುಟ್ಟಾಗ ಬರುವಂತಹ ಬಣ್ಣ

ವೆಜಿಟೆಬಲ್ ಡೈಕಲರ್ಸ್ : ಇವು ತರಕಾರಿಗಳಿಂದ ತಯಾರಿಸಿದ ಬಣ್ಣಗಳು. ಇವುಗಳನ್ನು ಬಟ್ಟೆಗಳಿಗೆ ಡೈ ಮಾಡಲು ಬಳಸುತ್ತಾರೆ.

ಕ್ರಯಾನ್ ಬಣ್ಣ : ಮೇಣಕ್ಕೆ ಪುಡಿ ಬಣ್ಣ ಸೇರಿಸಿ ಮಾಡಿದ ಬಣ್ಣ. ಚಿತ್ರ ಬರೆಯಲು ಇದನ್ನು ಬಳಸುತ್ತಾರೆ.

ಲ್ಯಾಕರ್ ಬಣ್ಣ : ಇದೂ ಕೂಡ ಮೇಣ, ಅರಗು ಮತ್ತು ಪುಡಿ ಬಣ್ಣವನ್ನು ಸೇರಿಸಿ ಮಾಡಿದ ಬಣ್ಣ. ಇದನ್ನು ಉಡ್‌ಟರನಿಂಗ್‌ನಲ್ಲಿ ಈ ಬಣ್ಣ ಬಳಸುತ್ತಾರೆ.

ಅರಗು ಬಣ್ಣ : ಅರಗಿನ ಜೊತೆಗೆ ಪುಡಿ ಬಣ್ಣವನ್ನು ಮಿಶ್ರಣ ಮಾಡಿಕೊಂಡ ಬಣ್ಣ. ಇದನ್ನು ಬಂಗಾರ ಹಾಗೂ ಬಳ್ಳಿಯ ಆಭರಣಗಳಲ್ಲಿ ಬಳಸುತ್ತಾರೆ.

ಹೀಗೆ ವಿವಿಧ ಬಣ್ಣಗಳನ್ನು ಮಿಶ್ರಣಮಾಡಿ ವಿಶಿಷ್ಟವಾದ ಬಣ್ಣವೊಂದನ್ನು ತಯಾರಿಸಿ ಚಿತ್ರಗಳನ್ನು ಬರೆಯಲು ಬಳಸುತ್ತಿರುವುದನ್ನು ಇಂದು ಕಂಡುಬರುತ್ತದೆ.

೬ ಬುಡಕಟ್ಟುಗಳಲ್ಲಿ ಬಣ್ಣಗಳ ತಯಾರಿಕೆ

ಮಾನವನಿಗೆ ಬುದ್ಧಿ ವಿಕಾಸವಾದಂತೆ ತನಗೆ ಪ್ರಾಕೃತಿಕವಾಗಿ ಸಿಗುವ ಸಂಪನ್ಮೂಲಗಳನ್ನು ಬಳಸಿಕೊಂಡು ಮನೆಯನ್ನು ಕಟ್ಟಿಕೊಂಡ. ಇವು ಮರ, ಬಂಬು, ಬಿದಿರು, ಬೆತ್ತಗಳಿಂದ ಕಟ್ಟಿದ ಮನೆಗಳಾಗಿದ್ದವು. ಅವುಗಳಿಗೆ ತನ್ನದೇ ಆದಂತಹ ಕಲ್ಪನೆಯ ಬಣ್ಣಗಳನ್ನು ಬಳಿಯತೊಡಗಿದ. ಇಲ್ಲಿ ಆಯ್ಕೆಮಾಡಿಕೊಂಡಿರುವ ಎಲ್ಲಾ ಬುಡಕಟ್ಟು ಸಮುದಾಯದವರು ಕಾಡಿನ ಬದುಕನ್ನು ಅನುಭವಿಸುತ್ತಾ, ಕಾಲವನ್ನು ಹಾಕುತ್ತಾ ಬಂದವರು. ಇವರ ಬದುಕಲ್ಲಿ ಚಿತ್ರಗಳನ್ನು ನೋಡಿದರೆ ಹಳೆಯ ಆದಿಮಾನವನ ಕೆಲವು ಚಿತ್ರಗಳು, ಅವುಗಳ ರೇಖಾವಿನ್ಯಾಸಗಳು ಕಾಣಸಿಗುತ್ತವೆ. ತನ್ನ ಹಳೆಯ ಚಿತ್ರಕಲೆಯ ಪರಂಪರೆಯನ್ನು ಉಳಸಿಕೊಂಡು ತನ್ನದೇ ಆದ ರೀತಿಯಲ್ಲಿ ಬುಡಕಟ್ಟು ಚಿತ್ರಗಳನ್ನು ಬರೆಯುತ್ತಿರುವುದನ್ನು ನೋಡಬಹುದಾಗಿದೆ. ಈ ಬುಡಕಟ್ಟು ಚಿತ್ರಗಳಲ್ಲಿ ಕೆಲವು ಹೋಲಿಕೆಗಳು ಕಂಡುಬರುತ್ತವೆ. ಆದರೆ ಅದರಲ್ಲಿ ಪ್ರಾದೇಶಿಕ ಭಿನ್ನತೆಯನ್ನು ಹೊಂದಿರುವುದನ್ನು ನಾವು ನೋಡಬಹುದು.

ಬುಡಕಟ್ಟು ಸಮುದಾಯಗಳ ಚಿತ್ರಗಳ ಕೆಲವು ಬಣ್ಣಗಳನ್ನು ರೀತಿಯಲ್ಲಿ ವಿಭಾಗಿಸಿಕೊಳ್ಳಬಹುದು.

೧. ಮನೆಯ ಗೋಡೆಗೆ ಬಳಸುವ ಬಣ್ಣಗಳ ತಯಾರಿಕೆ
೨. ಗೋಡೆಗಳ ಮೇಲೆ ರೇಖಾಚಿತ್ರ ಬಿಡಲು ಬಳಸುವ ಬಣ್ಣಗಳ ತಯಾರಿಕೆ
೩. ರೇಖಾಚಿತ್ರಗಳಿಗೆ ತುಂಬುವ ಬಣ್ಣಗಳು
೪. ಬಟ್ಟೆಗಳಿಗೆ ಹಾಕುವ ಬಣ್ಣಗಳು
೫. ರಂಗೋಲಿ ಹಾಕುವ ಬಣ್ಣಗಳು
೬. ರಂಗೋಲಿಯ ಒಳಭಾಗದಲ್ಲಿ ಹಾಕುವ ಬಣ್ಣಗಳು
೭. ಮೈಯಿಗೆ ಹಚ್ಚಿಕೊಳ್ಳುವ ಬಣ್ಣಗಳು
೮. ನಿವಾಳಿ ಬಣ್ಣ
೯. ಮಾಟ, ಮಂತ್ರ ತಂತ್ರಗಳ ಹಚ್ಚೆ ಬಣ್ಣ
೧೦. ಹಚ್ಚೆ ಬಣ್ಣ
೧೧. ಮಣ್ಣಿನ ಗೊಂಬೆಗಳಿಗೆ ಹಾಕುವ ಬಣ್ಣ
೧೨. ಬೆತ್ತ, ಬಿದುರುಗಳ ಕಡ್ಡಿಗೆ ಹಾಕುವ ಬಣ್ಣ
೧೩. ಈಚಲ ಚಾಪೆಗೆ ಹಾಕುವ ಬಣ್ಣ
೧೪. ಮುಖ ವರ್ಣಿಕೆಗೆ ಬಣ್ಣ ತಯಾರಿಕೆ
೧೫. ದನ-ಕರುಗಳಿಗೆ ಶೃಂಗರಿಸುವ ಸಲುವಾಗಿ ಬಣ್ಣ ತಯಾರಿಕೆ
೧೬. ಮಡಿಕೆ ಕುಡಿಕೆಗಳ ಮೇಲೆ ಚಿತ್ರ ಬರೆಯಲು ಬಣ್ಣ ತಯಾರಿಕೆ
೧೭. ಮಂಡಲ ಹಾಕಲು ಉಪಯೋಗಿಸುವ ಬಣ್ಣ
೧೮. ಹಗರಣದಲ್ಲಿ ಬಣ್ಣ ತಯಾರಿಕೆ
೧೯. ಕಾಳುಗಳಲ್ಲಿ ಬಣ್ಣ ತಯಾರಿಕೆ
೨೦. ಹಣ್ಣುಗಳಿಂದ ಬಣ್ಣ ತಾಯಾರಿಕೆ
೨೧. ಬೇರು, ನಾರು, ಬೀಜಗಳಿಂದ ಬಣ್ಣ ತಾಯಾರಿಕೆ
೨೨. ಎಲೆ ಹೂವುಗಳಿಂದ ಬಣ್ಣ ತಯಾರಿಕೆ

೧ 

ಬಿಳಿ = ಅಕ್ಕಿ ರುಬ್ಬಿದ ಹಿಟ್ಟು, ಸೇಡಿ, ಬಿಳಿ ಕಟಗ, ಸುಣ್ಣ.

೨ 

ಕಪ್ಪು = ಅಕ್ಕಿ ಹುರಿದು ಮಾಡಿದ ಮಸಿ, ಕಪ್ಪು ಮಣ್ಣು, ಬತ್ತದ ಹುಲ್ಲಿನ ಮಸಿ,
ಕಾಡಿಗೆ, ಇಜ್ಜಿಲು ಪುಡಿ.

೩ 

ಕೆಂಪು = ಕೆಂಮ್ಮಣ್ಣು, ಚಾಜಿ ಕಲ್ಲು (ಕಾವಿಕಲ್ಲು), ಕುಂಕುಮ, ಹೂಗಳರಸ,
ಹಿಂಡ್ಲೆಕಾಯಿ.

೪ 

ಹಳದಿ = ಹಳದಿ ಕಟಗು ಮಣ್ಣು, ಗುರಿಗೆಕಾಯಿ, ಕಾಡು ಅರಿಶಿಣ ಪುಡಿ, ಹೂಗಳರಸ.


೫ 

ಹಸಿರು = ಹಸುವಿನ ಸಗಣಿರಾಡಿ, ಎಲೆಗಳರಸ, ಹಸಿರುಪಾಚಿ.

೬ 

ನೀಲಿ = ಹೂಗಳರಸ, ನೀಲಿ ಪುಡಿ.

ಬುಡಕಟ್ಟು, ಮಿಶ್ರಣ ಮಾಡಿಕೊಳ್ಳುವ ಬಣ್ಣಗಳು II



ಹೀಗೆ ನಾನಾ ರೀತಿಯಲ್ಲಿ ಬಣ್ಣಗಳನ್ನು ತಯಾರಿಸಿಕೊಂಡು ವಿವಿಧ ಮಾದರಿಯ ಚಿತ್ರಗಳಿಗೆ ಹಾಕಲಾಗುತ್ತದೆ. ಬುಡಕಟ್ಟು ಸಮುದಾಯಗ ಬಣ್ಣಗಳು ಎಂದರೆ ಆಧುನಿಕ ರಾಸಾಯನಿಕ ಬಣ್ಣಗಳು ಅಲ್ಲ. ಅವು ನೈಸರ್ಗಿಕ ಬಣ್ಣಗಳು. ಇವು ಬರೀ ಬಣ್ಣಗಳಾಗಿ ಮನುಷ್ಯನ ಮನೋಧರ್ಮಕ್ಕೆ ಮನಃ ಸ್ಥಿತಿಗೆ ಸಂಬಂಧಪಟ್ಟಿರುತ್ತವೆ. ಪ್ರತಿಯೊಂದು ಬಣ್ಣಕ್ಕೂ ತನ್ನದೇ ಆದಂತ ಒಂದೊಂದು ಗುಣಧರ್ಮವನ್ನು ಹೊಂದಿರುತ್ತವೆ. ಈ ಬಣ್ಣಗಳು ರಸಪ್ರಧಾನವಾಗಿಯೂ ಕೆಲಸವನ್ನು ಮಾಡುತ್ತವೆ. ಕಲಾವಿದ ಈ ಬಣ್ಣಗಳ ಜೊತೆಯಲ್ಲಿ ಆಟ ಆಡುತ್ತಾನೆ. ಅವುಗಳನ್ನು ತನ್ನ ಸೃಜನಶೀಲ ಚಿತ್ರಗಳಲ್ಲಿ ಅಭಿವ್ಯಕ್ತಿಸುತ್ತಾನೆ. ಅವು ಅವನ ಭಾವನೆಯ ಮನಸಿನಾಳದ ಬಿಂಬಗಳು ಆಗಿರುತ್ತವೆ. ಇಂದು ಬಣ್ಣಗಳು ಮತ್ತು ಅವುಗಳ ಬಳಕೆ (ಚಿತ್ರಕಲೆಯಲ್ಲಿ) ತನ್ನದೇ ಆದ ಅಧ್ಯಯನ ಶಿಸ್ತುಗಳಲ್ಲಿ ಸಾಗುತ್ತಾ ಬಂದಿವೆ.

ಕರ್ನಾಟಕ ಬುಡಕಟ್ಟು ಚಿತ್ರಕಲೆಗೆ ಸಂಬಂಧಿಸಿದಂತೆ ಹೇಳುವುದಾದರೆ ಇವರು ತಮ್ಮದೇ ಆದಂತ ರೀತಿಯಲ್ಲಿ ಚಿತ್ರಗಳನ್ನು ಬರೆಯುತ್ತಾರೆ. ಈ ಚಿತ್ರ ಬರೆಯಲು ತಾವೇ ಬಣ್ಣಗಳನ್ನು ತಯಾರು ಮಾಡಿಕೊಳ್ಳುತ್ತಾರೆ. ಇಲ್ಲಿಯ ಚಿತ್ರಗಳನ್ನು ನೋಡಿದರೆ ಇಂದಿನ ಜಾಗೀತಕರಣದ ಸಂದರ್ಭದಲ್ಲೂ ಕೂಡ. ಅವರಿಗೆ ಯಾವುದೇ ರೀತಿಯ ನಗರಗಳ ಆಧುನಿಕರಣದ ಸವಲತ್ತುಗಳು ಸಿಗದೆ ತಮ್ಮದೇ ಆದಂತ ರೀತಿಯಲ್ಲಿ ಬದುಕನ್ನು ನಡೆಸುತ್ತಿರುವುದನ್ನು ನೋಡಬಹುದಾಗಿದೆ. ಇವರು ತಮ್ಮದೇ ಆದಂತ ಸಂಸ್ಕೃತಿ, ಸಂಪ್ರದಾಯ ಆಚರಣೆಗಳೊಂದಿಗೆ ರಮ್ಯ ಚಿತ್ರಕಲೆಗಳನ್ನು ಹೊಂದಿದ್ದಾರೆ. ಹೀಗೆ ಚಿತ್ರ ಬರೆಯಲು ತಾವು ಹಿಂದಿನಿಂದ ರೂಢಿಮಾಡಿಕೊಂಡು ಬಂದಂತಹ ಬಣ್ಣಗಳನ್ನೆ ಇಂದೂ ಸಹ ಬಳಸುತ್ತಿದ್ದಾರೆ. ಈ ಬಣ್ಣಗಳೆಲ್ಲವೂ ಸಂಪೂರ್ಣವಾಗಿ ನಿಸರ್ಗದ ಕೊಡುಗೆಗಳಾಗಿದ್ದು ಪ್ರಾದೇಶಿಕತೆಯ ಹಿನ್ನೆಲೆಯನ್ನು ಹೊಂದಿರುವಂತವು ಆಗಿವೆ. ಇಲ್ಲಿ ಇವರು ಬಳಸುವ ಬಣ್ಣಗಳ ತಯಾರಿಕೆ ಮತ್ತು ಬಳಕೆಯನ್ನು ಮೊದಲು ವಿವರಿಸಿ ಆನಂತರ ಅವರು ಚಿತ್ರ ಬರೆಯಲು ಉಪಯೋಗಿಸುವ ಸಾಧನಗಳ ಬಗ್ಗೆ ವಿವರಿಸಲಾಗುವುದು.

೧. **ಸೇಡಿ :** ಸೇಡಿಯನ್ನು ಕರ್ನಾಟಕದ ಬಹುತೇಕ ಎಲ್ಲಾ ಬುಡಕಟ್ಟು ಸಮುದಾಯಗಳು ಬಳಸುತ್ತವೆ. ಸೇಡಿ ಎನ್ನುವುದು ಒಂದು ರೀತಿಯ ಬಿಳಿಯ ಮಣ್ಣು. ಕೆಲವು ಕಡೆ ಈ ಸೇಡಿ ಮಣ್ಣು ತಿಳಿಹಳದಿ ಬಣ್ಣವನ್ನು ಹೊಂದಿರುತ್ತದೆ. ಈ ಸೇಡಿ ಮಣ್ಣನ್ನು ಜೇಡಿ ಮಣ್ಣು ಎಂದು ಕರೆಯುತ್ತಾರೆ. ಸೇಡಿ ಜೇಡಿ ಮಣ್ಣಿನಂತೆ ನುಣ್ಣಗೆ ಇರುತ್ತದೆ.

ಸೆಡಿ ಮಣ್ಣು ಎಲ್ಲಾ ಜಾಗದಲ್ಲೂ ಸಿಗುವುದಿಲ್ಲ. ನೀರು ಹರಿಯುವ ಪ್ರದೇಶದಲ್ಲಿ ಅದರಲ್ಲೂ ಹೊಳೆಯ ಅಂಚಲ್ಲಿ ಕೆಲವು ಗುಡ್ಡಗಳ ಪದರುಗಳಲ್ಲಿ ಈ ಮಣ್ಣು ಸಿಗುತ್ತದೆ. ಈ ಸೇಡಿ ಮಣ್ಣನ್ನು ತಂದು ಅದನ್ನು ಶುದ್ಧಮಾಡಿ ಉಂಡೆ ಕಟ್ಟಿಕೊಂಡು ಅಥವಾ ಪುಡಿಯನ್ನು ಮಾಡಿಕೊಂಡು ಇಟ್ಟುಕೊಳ್ಳುತ್ತಾರೆ. ಈ ಸೇಡಿ ಚಿತ್ರವನ್ನು ಹಲವು ಬಗೆಯಲ್ಲಿ ಬರೆಯುತ್ತಾರೆ. ಕೆಲವರು ಇದು ಆಯಾ ಬುಡಕಟ್ಟು ಸಮುದಾಯದವರು ರೂಢಿಸಿಕೊಂಡು ಬಂದಿರುವುದರ ಮೇಲೆ ಅವಲಂಬಿಸಿರುತ್ತದೆ. ಸೇಡಿಯ ಚಿತ್ತಾರಗಳನ್ನು ಸೇಡಿಯ ಘಟ್ಟಿಯಿಂದಲೇ ಬರೆದರೆ ಇನ್ನೂ ಕೆಲವರು ಅದನ್ನು ನೀರಿನಲ್ಲಿ ನೆನಸಿ ತಾವೇ ತಯಾರಿಸಿಕೊಂಡ

ಕುಂಚಗಳಿಂದ ಇಲ್ಲವೆ ಬಟ್ಟೆಯಿಂದ ಚಿತ್ತಾರಗಳನ್ನು ಬರೆಯುತ್ತಾರೆ. ಇದು ಸಮುದಾಯದಿಂದ ಸಮುದಾಯಕ್ಕೂ ಭಿನ್ನತೆಯನ್ನು ಹೊಂದಿರುತ್ತದೆ.

ಈ ಸೇಡಿ ಚಿತ್ತಾರಗಳನ್ನು ಕೆಲವು ಬುಡಕಟ್ಟುಗಳಲ್ಲಿ ಸೇಡಿ ಚಿತ್ತಾರವೆಂದು ಕರೆದರೆ ಮತ್ತೆ ಕೆಲವು ಸಮುದಾಯಗಳಲ್ಲಿ 'ಹಲಿ' ಅಥವಾ 'ಅಲಿ' ಚಿತ್ರವೆಂದು ಕರೆಯುತ್ತಾರೆ. ಈ ಸೇಡಿಯ ಚಿತ್ತಾರಗಳನ್ನು ನೆಲದ ಮೇಲೆ, ಗೋಡೆಗಳ ಮೇಲೆ ಗೃಹ ಉಪಯೋಗಿ ವಸ್ತುಗಳ ಮೇಲೆ ಬರೆಯಲಾಗುತ್ತದೆ.

ಸೇಡಿಯನ್ನು ಸಂಗ್ರಹಿಸುವುದಕ್ಕೆ ಕೆಲವು ನಿಯಮಗಳುಂಟು. ಬಿಡುವಿನ ಸಮಯದಲ್ಲಿ ಒಳ್ಳೆಯ ದಿನವನ್ನು ನೋಡಿಕೊಂಡು ಪೋಡು, ಆಡಿ, ವಾಡೆಗಳ ಎಲ್ಲಾ ಜನರು ಕೂಡಿ ಹೋಗಿ ಸೇಡಿಯನ್ನು ಸಂಗ್ರಹಿಸಿಕೊಂಡು ಬರುತ್ತಾರೆ. ಅದನ್ನು ತಂದು ಮನೆಯಲ್ಲಿ ಶುದ್ಧಗೊಳಿಸಿ ಒಂದು ಕಡೆ ಇಟ್ಟು ಪೂಜೆ ಮಾಡುತ್ತಾರೆ. ಆನಂತರ ಪೂಜೆಯಾದ ಸೇಡಿಯನ್ನು ಚಿತ್ತಾರಗಳನ್ನು ಬರೆಯಲು ಉಪಯೋಗಿಸುತ್ತಾರೆ.

೨ ಕೆಂಪು ಮಣ್ಣು (ಕೆಮ್ಮಣ್ಣು) : ಇದು ಕೆಂಪು ಮಣ್ಣು ಸೇಡಿಯಂತೆ ನಿಸರ್ಗದಲ್ಲಿ ಸಿಗುವ ಮಣ್ಣು. ಕೆಂಪು ಭೂಪ್ರದೇಶದಲ್ಲಿ ರಂಗಾಗಿದ್ದ ಭಾಗದಲ್ಲಿ ಈ ಮಣ್ಣನ್ನು ಅಗೆದು ಕೆಳಭಾಗದ ಮಣ್ಣನ್ನು ತೆಗೆಯುತ್ತಾರೆ. ಇದನ್ನು ಚೆನ್ನಾಗಿ ಪುಡಿ ಮಾಡಿ ಅದರಲ್ಲಿರುವ ಕಲ್ಲು ಮತ್ತಿತರ ಕಸಕಡ್ಡಿಗಳನ್ನು ತೆಗೆಯುತ್ತಾರೆ. ಅದನ್ನು ಶುಚಿಮಾಡಿಕೊಂಡು ಒಂದು ಕಡೆ ಸಂಗ್ರಹಿಸುತ್ತಾರೆ. ಇದನ್ನು ಮನೆಯ ನೆಲಕ್ಕೆ ಮತ್ತು ಗೋಡೆಗಳಿಗೆ ಹಾಕಲು ಬಳಸುತ್ತಾರೆ. ಹಬ್ಬ ಹರಿದಿನ, ಮದುವೆ ಮುಂತಾದ ಸಂಪ್ರದಾಯ ಆಚರಣೆಗಳ ಸಂದರ್ಭಗಳಲ್ಲಿ ಈ ಮಣ್ಣನ್ನು ಮನೆಗೆ ಬಳಸುತ್ತಾರೆ. ಹಸೆಯ ಚಿತ್ತಾರಕ್ಕೆ ಹಿಂಬಣ್ಣವಾಗಿ ಕೆಮ್ಮಣ್ಣಿನ ಬಣ್ಣಗಳನ್ನು ಗೋಡೆಗೆ ಹಾಕುತ್ತಾರೆ. ಈ ಕೆಮ್ಮಣ್ಣಿನ ಮೇಲೆ ಹಸೆ ಚಿತ್ರಗಳನ್ನು ಬರೆಯಲಾಗುತ್ತದೆ. ಹಸಲರು ಮತ್ತು ದೀವರು ಭೂಮಿ ಹುಣ್ಣಿಮೆಯ ಸಂದರ್ಭದಲ್ಲಿ 'ಭೂಮಿಣಿ ಪುಟ್ಟಿ'ಗೆ ಚಿತ್ತಾರಗಳನ್ನು ಬರೆಯಲು ಹಿಂಬಣ್ಣವಾಗಿ ಈ ಮಣ್ಣನ್ನು ಬಳಸುತ್ತಾರೆ. ಇದು ಮಾನವನ ಬಣ್ಣಗಳ ಗುರುತಿಸುವಿಕೆಯಲ್ಲಿ ಮೊದಲ ಬಣ್ಣದಾಗಿರುತ್ತದೆ. ಕೆಂಪು ಪ್ರತಿಯೊಬ್ಬನಿಗೂ ಆಕರ್ಷಿತ ಬಣ್ಣವೇ. ಹಾಗಾಗಿ, ಶುಭ ಸಂದರ್ಭಗಳಲ್ಲಿ ಸ್ವಚ್ಛತೆಗಾಗಿ ಕೆಂಪು ಮಣ್ಣನ್ನು ಬಳಸುತ್ತಾರೆ.

೩. ಬೂದಿ ಮಣ್ಣು : ಈ ಮಣ್ಣು ಕೂಡ ಸೇಡಿ, ಕೆಮ್ಮಣ್ಣಿನಂತೆ ಸಿಗುವ ಮಣ್ಣು. ಇದು ಸೇಡಿಯಂತೆ ಬೆಳ್ಳಗಿರದೆ ಅತ್ಯಂತ ಕಪ್ಪಗೂ ಇರದೆ ಇರುವಂತ ಮಣ್ಣು. ಇದೂ ಕೂಡ ಹೊಳೆಯ ಅಥವಾ ನೀರು ಹರಿಯುವ ಜಾಗದಲ್ಲಿ ಸಿಗುವಂತಹ ಮಣ್ಣು. ಈ ಮಣ್ಣನ್ನು ಸಂಗ್ರಹಿಸಿ ಸಂಬಂಧಿಸಿದ ಕಾರ್ಯಗಳಲ್ಲಿ ಉಪಯೋಗಿಸುತ್ತಾರೆ. ಈ ಬೂದಿ ಮಣ್ಣನ್ನು ಗೋಡೆಗಳಿಗೆ ಬಳಿಯುತ್ತಾರೆ. ಹೀಗೆ ಮನೆಯ ಅಂದಕ್ಕೆ ತಕ್ಕಂತೆ ನಾನಾ ತರಹದ ಮಣ್ಣುಗಳನ್ನು ಸಂಗ್ರಹಿಸಿ, ಚಿತ್ತಾರಗಳಿಗೆ ಬಣ್ಣವಾಗಿ ಬಳಸುತ್ತಾರೆ.

೪. ಹಳದಿ ಮಣ್ಣು, ತಿಳಿಹಳದಿ ಮಣ್ಣು, ತಿಳಿಗೆಂಪು ಮಣ್ಣು : ಬಣ್ಣಗಳ ಕಲ್ಪನೆಯಲ್ಲಿ ಬುಡಕಟ್ಟು ಜನರು ಒಂದೇ ತೆರನಾದ ಬಣ್ಣಗಳನ್ನು ಬಳಸುವುದಿಲ್ಲ. ತಾವು ವಾಸಿಸುವ ಹಲವು ಕಡೆಗಳಿಂದ ವಿವಿಧ

[illegible]

ಬಣ್ಣದ ಮಣ್ಣನ್ನು ತಂದು ಸಂಗ್ರಹಿಸಿಟ್ಟು ಕೊಂಡಿರುತ್ತಾರೆ. ಗೋಡೆಯ ಮಣ್ಣಿನ ಬಣ್ಣಕ್ಕೆ ಹೊಂದಿಕೆಯಾಗುವಂತೆ ಬಣ್ಣದ ಮಣ್ಣನ್ನು ಹೊಂದಿಸಿಕೊಂಡು ಹದಗೊಳಸಿ ಹಾಕುತ್ತಾರೆ. ಕಪ್ಪು ಮಣ್ಣು, ಬೂದಿ ಮಣ್ಣು, ಹಳದಿ ಮಣ್ಣು, ತಿಳಿಹಳಿದ ಮಣ್ಣು, ತಿಳಿಗೆಂಪು ಮಣ್ಣನ್ನು ಹಾಕುವಾಗ ತಮಗೆ ಇಷ್ಟವಾದ ಮಣ್ಣಿನೊಂದಿಗೆ ಬೇರೆ ಮಣ್ಣನ್ನು ಬೆರಸಿಕೊಂಡು ಇಲ್ಲವೆ ಸೇಡಿಯನ್ನು ಬೆರಸಿಕೊಂಡು ತಮ್ಮ ಕಣ್ಣ ಅಂದಕ್ಕೆ ಮನೆಗೆ ಬಣ್ಣವನ್ನು ಹಾಕುತ್ತಾರೆ. ಈ ಎಲ್ಲಾ ಬಗೆಯ ಮಣ್ಣುಗಳು ತಮಗೆ ಹತ್ತಿರದಲ್ಲಿ ಸಿಗುವಂತ ಮಣ್ಣುಗಳು ಆಗಿರುತ್ತವೆ.

೫. **ಕಪ್ಪು ಮಣ್ಣು :** 'ಕಪ್ಪುಮಣ್ಣ'ನ್ನು ಹೆಚ್ಚಾಗಿ ಬುಡಕಟ್ಟು ಸಮುದಾಯದವರು ಬಳಸುತ್ತಾರೆ. ಇದನ್ನು ಮನೆಯ ಗೋಡೆಗಳಿಗೆ ಮತ್ತು ನೆಲಕ್ಕೆ ಹಾಕುತ್ತಾರೆ. ಕಪ್ಪು ಮಣ್ಣನ್ನು ಮನೆಗೆ ಬಳಿಯುವುದರಿಂದ ಮನೆಗಳು ಮಂಕಾಗಿ ಕಂಡು ಪ್ರಕೃತಿಯ ಭಾಗವಾಗಿರುತ್ತವೆ. ಹಾಗಾಗಿ ಕಪ್ಪು ಮಣ್ಣನ್ನು ಬಳಸುತ್ತೇವೆ ಎಂದು ಹೇಳುತ್ತಾರೆ.

ಬಿದಿರು ಕಟ್ಟಿಗೆಗಳಿಂದ ಗೋಡೆಗೆ ಹಾಕಲು ಪ್ರತಿ ಬುಡಕಟ್ಟಿನವರೂ ಕಪ್ಪು ಮಣ್ಣನ್ನು ಸಂಗ್ರಹಿಸುತ್ತಾರೆ. ಬಿದಿರಿಗೆ ಇಲ್ಲವೆ ಕಟ್ಟಿಗೆಗೆ ಚೆನ್ನಾಗಿ ಹಿಡಿಯುವುದು ಕಪ್ಪು ಮಣ್ಣು. ಮಳೆ, ಬಿಸಿಲನ್ನು ತಾಳಿಕೊಲ್ಲುವ ಶಕ್ತಿಯೂ ಸಹ ಈ ಬಣ್ಣಕ್ಕಿದೆ. ಹಾಗಾಗಿ ಎಲ್ಲಾ ಬುಡಕಟ್ಟುಗಳು ಮನೆಯ ತಡಿಕೆಯ ಗೋಡೆಗಳಿಗೆ ಕಪ್ಪು ಮಣ್ಣನ್ನು ಹಾಕುತ್ತಾರೆ. ಅದನ್ನೇ ಸಾಫಾಗಿ ಸಾರಿಸುತ್ತಾರೆ. ಇಲ್ಲವೆ ಇಷ್ಟವಾದ ಬೇರೆಯ ಮಣ್ಣಮ್ನ ಬಳಸುತ್ತಾರೆ. ಕಪ್ಪು ಮಣ್ಣನ್ನು ಗೋಡೆಗೆ ಬಳಸುವ ಬುಡಕಟ್ಟು ಸಮುದಾಯಗಳೆಂದರೆ ಅರಣ್ಯದ ಒಳಗಿರುವ ಸಮುದಾಯಗಳು.

ಕಪ್ಪು ಮಣ್ಣನ್ನು ಗೋಡೆಗೆ ಹಾಕುವ ಮೊದಲು ಮಣ್ಣನ್ನು ತಂದು ಅದರಲ್ಲಿನ ಕಸಕಡ್ಡಿಗಳನ್ನೆಲ್ಲಾ ತೆಗೆದು ಸ್ವಚ್ಛಗೊಳಿಸುತ್ತಾರೆ. ಆನಂತರ ಸ್ವಚ್ಛಗೊಂಡ ಮಣ್ಣನ್ನು ನೀರಿನಲ್ಲಿ ಕಲಸಿ ಒಂದು ಕಡೆ ಗುಡ್ಡೆ ಹಾಕುತ್ತಾರೆ. ಒಂದೆರಡು ದಿನ ನೀರಿನಲ್ಲಿ ನೆನೆಯಿಡುತ್ತಾರೆ. ಹೀಗೆ ನೆನೆಸುವುದರಿಂದ ಅದು ಬಿಸಿಲು ಗಾಳಿಯಲ್ಲಿ ಬೇಯುತ್ತದೆ ಎಂದು ಹೇಳುತ್ತಾರೆ. ಹೀಗೆ ಬೆಯ್ಯುವುದರಿಂದ ಅದನ್ನು ಗೋಡೆಗೆ ಹಾಕಲು ಅನಕೂಲವಾಗಿರುತ್ತದೆ. ಮಣ್ಣು ಕೈಯಿಗೆ ಅಂಟುವುದಿಲ್ಲ. ಇದು ಮಣ್ಣನ್ನು ಹದ ಮಾಡಿಕೊಳ್ಳುವ ವಿಧಾನ. ಹದಗೊಂಡ ಯಾವುದೇ ಮಣ್ಣು ಕೈಯಿಗೆ ಅಂಟುವುದಿಲ್ಲ.

ಬಿದಿರು ಇಲ್ಲವೆ ಕಟ್ಟಿಗೆಯ ಗೋಡೆಗೆ ಹಾಕಿದ ಮಣ್ಣು ಒಂದು ಹಂತದ ತನಕ ಒಣಗಿದ ಮೇಲೆ ತಮಗೆ ಬೇಕಾದ ಮಣ್ಣಿನ ಬಣ್ಣಗಳನ್ನು ಹಾಕಿಕೊಳ್ಳುತ್ತಾರೆ. ಇಲ್ಲವೆ ಈ ಕಪ್ಪುಮಣ್ಣಿಗೆ ಇದ್ದಿಲುಪುಡಿ, ಬೂದಿ, ಭತ್ತದ ಹುಲ್ಲಿನ ಮಸಿ ಯಾವುದಾದರೊಂದನ್ನು ಮಿಶ್ರಣ ಮಾಡಿಕೊಂಡು ಬಳಿಯುತ್ತಾರೆ. ತಮ್ಮ ಅಂದಕ್ಕೆ ಅದನ್ನು ನೀಟಾಗಿ ಸಾರಿಸುತ್ತಾರೆ. ಕಪ್ಪು ಮಣ್ಣಿನ ಜೊತೆಗೆ ಕೆಲವುಕಡೆ ಕಂದುಮಣ್ಣನ್ನು ಬಳಸುತ್ತಾರೆ.

[illegible]

[illegible]

[illegible]

[illegible]

[illegible]

[illegible]

[illegible]

೬ ಇದ್ದಿಲುಪುಡಿ ಮತ್ತು ಬೂದಿ : ಬುಡಕಟ್ಟು ಜನಾಂಗಗಳು ನಿಸರ್ಗ ಜೀವಿಗಳು. ಇವರಿಗೆ ಇರುಳಲ್ಲಿ ಬೆಂಕಿಯೇ ಬೆಳಕು ಮತ್ತು ರಕ್ಷಣೆ. ತಮ್ಮ ಮನೆಯ ಮುಂದೆ ಮಲಗುವ ಜಾಗದಲ್ಲಿ ಸದಾ ಬೆಂಕಿ ಉರಿಯುತ್ತಲೇ ಇರುತ್ತದೆ. ಈ ಬೆಂಕಿ ಪ್ರಾಣಿಗಳಿಂದ ರಕ್ಷಿಸಿಕೊಳ್ಳಲು ಹಾಕಿಕೊಂಡಿರುವುದು ಆಗಿರುತ್ತದೆ. ಅಗತ್ಯವಿದ್ದರೆ ಉರಿಯುವ ಕೆಂಡಕ್ಕೆ ನೀರನ್ನು ಹಾಕಿ ಇದ್ದಿಲನ್ನು ಮಾಡಿಕೊಳ್ಳುತ್ತಾರೆ. ಇಲ್ಲವಾದರೆ ಕೆಂಡ ತನ್ನ ಶಕ್ತಿಯನ್ನು ಕಳೆದುಕೊಳ್ಳುತ್ತಾ, ಬೂದಿಯಾಗುತ್ತದೆ. ಇದ್ದಿಲು ಅತ್ಯಂತ ಕಪ್ಪು ಬಣ್ಣವನ್ನು ಹೊಂದಿರುತ್ತದೆ. ಹೀಗೆ ಸುಟ್ಟ ಬೂದಿಯನ್ನು ಗೋಡೆಗೆ ಹಾಕುವ ಸಂದರ್ಭದಲ್ಲಿ ಹದಗೊಂಡ ಮಣ್ಣಿನೊಂದಿಗೆ, ಇದ್ದಿಲುಪುಡಿ ಮಿಶ್ರಣ ಮಾಡಿಕೊಂಡು ಬಳಸಲಾಗುತ್ತದೆ. ಇದ್ದಿಲು ಪುಡಿಯನ್ನು ಗೋಡೆಗೆ ಹಾಕಲು ಹದಗೊಂಡ ಮಣ್ಣಿನೊಂದಿಗೆ ಮಿಶ್ರಣಮಾಡಿ ಹದಗೊಳಿಸಿ ಗೋಡೆಗೆ ಹಾಕುವುದರಿಂದ ಮಣ್ಣು ಮೈಯಿ ಕೈಯಿಗೆ, ಬಟ್ಟೆಗೆ ಅಂಟುವುದಿಲ್ಲ. ಈ ರೀತಿಯ ಬಣ್ಣಗಳು ಬಳಸುವ ವಿಧಾನವನ್ನು ಕಾಣಬಹುದಾಗಿದೆ. ಹಾಗೆಯೇ ಕೆಲವರು ಹದಗೊಂಡ ಮಣ್ಣಿನೊಂದಿಗೆ ಬೂದಿಯನ್ನು ಮಿಶ್ರಣಮಾಡಿಕೊಂಡು ಹಾಕುತ್ತಾರೆ. ಇದು ಅವರವರ ಬಣ್ಣಗಳ ಕಲ್ಪನೆಗೆ ಸಂಬಂಧಪಟ್ಟಿರುವುದು ಆಗಿರುತ್ತದೆ.

೭ ಬತ್ತದ ಹುಲ್ಲಿನ ಮಸಿ : ಇದೂ ಕೂಡ ಬುಡಕಟ್ಟು ಸಮುದಾಯಗಳು ವಿಶೇಷವಾಗಿ ಬಳಸುವ ಬಣ್ಣದ ಪರಿಕಲ್ಪನೆ. ಬಹುತೇಕ ಬುಡಕಟ್ಟುಗಳು ಈ ಭತ್ತದ ಹುಲ್ಲಿನ ಮಸಿಯನ್ನು ಬಳಸುತ್ತಾರೆ. ಇದನ್ನು ಮನೆಯನ್ನು ಸಾರಿಸಲು, ಮನೆಯ ಗೋಡೆಯ ಮೇಲೆ ಚಿತ್ರ ಬರೆಯುವ ಸಂದರ್ಭದಲ್ಲಿ ಬಳಸುತ್ತಾರೆ. ಹಸಲರು ದೀವರು ಈ ಭತ್ತದ ಹುಲ್ಲಿನ ಮಸಿಯನ್ನು ಹಬ್ಬಗಳಲ್ಲಿ ಮದುವೆಯ ಸಂದರ್ಭಗಳಲ್ಲಿ ಕೆಲವು ಚಿತ್ರಗಳನ್ನು ಬರೆಯಲು ಬಳಸುತ್ತಾರೆ. ಕುಣಬಿಯರು, ಗೊಂಡರು, ಯರವರು ಮನೆಯನ್ನು ಸಾರಿಸುವ ಸಂದರ್ಭದಲ್ಲಿ ಸಗಣಿಯೊಂದಿಗೆ ಮಿಶ್ರಣ ಮಾಡಿಕೊಂಡು ಸಾರಿಸುತ್ತಾರೆ. ಇದು ಸಂಪೂರ್ಣವಾಗಿ ಸಗಣಿಯ ಬಣ್ಣವನ್ನು ಹೊಂದದೆ ಕಪ್ಪು ಬಣ್ಣವನ್ನು ಹೊಂದಿರುತ್ತದೆ. ತನ್ನದೇ ಆದಂತ ಬಣ್ಣದ ರಂಗನ್ನು ಕೊಡುತ್ತದೆ. ಇದು ಸಗಣಿಮಿಶ್ರಿತ ಕಪ್ಪು ಬಣ್ಣವಾಗಿ ಎದ್ದು ಕಾಣುತ್ತದೆ.

ಬತ್ತದ ಹುಲ್ಲನ್ನು ಒಂದು ಕಡೆ ಹಾಕಿ ಅದಕ್ಕೆ ಬೆಂಕಿಯನ್ನು ಹಾಕುತ್ತಾರೆ. ಅದು ಉರಿದು ಕೆಂಪಾಗುತ್ತದೆ. ಆ ಹುಲ್ಲಿನ ಬೆಂಕಿ ಉರಿದು ಬೂದಿಯಾದ ತಕ್ಷಣ ಹುಲ್ಲಿನ ಕೆಂಡಕ್ಕೆ ನೀರನ್ನು ಹಾಕುತ್ತಾರೆ. ಅದು ಕಪ್ಪು ಬಣ್ಣವನ್ನು ಕೊಡುತ್ತದೆ. ಹುಲ್ಲು ಕೆಂಡವಾದ ತಕ್ಷಣ ನೀರನ್ನು ಹಾಕುವುದರಿಂದ ಕೆಂಡವಾದ ಹುಲ್ಲು ರಂಗಾಗಿ ಕಪ್ಪುಮಸಿಯನ್ನು ಬಿಡುತ್ತದೆ. ಇದನ್ನು ತಮ್ಮ ಅನುಕೂಲಕ್ಕೆ ಬಣ್ಣವಾಗಿ ಬಳಸಿಕೊಳ್ಳುತ್ತಾರೆ. ಇದು ಇವರಿಗೆ ಬಣ್ಣದ ಕಲ್ಪನೆಯನ್ನು ಹೊಂದಿ ಇದನ್ನು ಬಳಸುತ್ತಿದ್ದೇವೆ ಎಂದು ಹೇಳಿಕೊಳ್ಳದಿದ್ದರೂ ಭತ್ತ ಹುಲ್ಲಿನ ಕಪ್ಪನೆಯ ಮಸಿ ಅಗೋಚರವಾಗಿ ಆಕರ್ಷಿಶಿ ಬಳಕೆಗೆ ಒಳಪಟ್ಟಿರುತ್ತದೆ.

೮ ಸಗಣಿ : ಸಗಣಿಯನ್ನು ಧಾರ್ಮಿಕ ಹಿನ್ನೆಲೆಯ ದೃಷ್ಟಿಯಿಂದ ಮನೆಯನ್ನು ಸಾರಿಸಲು ಬಳಸುತ್ತಾರೆ. ಇದನ್ನು ಪವಿತ್ರವೆಂತಲೂ ಬಳಸುತ್ತಾರೆ. ಜೊತೆಗೆ ನೆಲದ ಮೇಲೆ ರಂಗೋಲಿಯನ್ನು ಬಿಡಲು ಹಿಂಬಣ್ಣಕ್ಕೆ ಸಹಾಯಕವಾಗುತ್ತದೆ. ರಂಗೋಲಿಯ ಅಥವಾ ಸೇಡಿಯ ಬಣ್ಣಕ್ಕೆ ಸಗಣಿಯ ಬಣ್ಣ ವಿರುದ್ಧ

[illegible]

[illegible]

[illegible]

ಬಣ್ಣವಾಗಿರುತ್ತದೆ. ಹಾಗಾಗಿ ಈ ಎಲ್ಲಾ ದೃಷ್ಟಿಯಿಂದ ಮನೆ, ಮನೆಯ ಮುಂದಿನ ಅಂಗಳಕ್ಕೆ ಬಳಸುತ್ತಾರೆ. ಸಗಣಿಯನ್ನು ಸಾರಿಸುವವಳು ಹೆಣ್ಣು ಅದರ ಮೇಲೆ ರಂಗೋಲಿ ಚಿತ್ತಾರ ಬಿಡುವವಳು ಹೆಣ್ಣು. "ಪ್ರಕೃತಿಗೆ (ಹೆಣ್ಣು) ಹಸಿರಿನ ಹಂಬಲ. ಹಸಿರೊಂದಿಗೆ ಜೀವ ಸಂಕುಲ ಕಲರವ. ಹೆಣ್ಣಿಗೆ ಹಸಿರೇ ಸಾರ್ಥಕದ ನಿಲುವು. ಹಸಿರಲ್ಲಿ ಹಸಿರಾಗಿ ಹಸಿರ ಹಡೆವಾಸೆ. ಒಂದರ್ಥದಲ್ಲಿ ಹಸಿರು ಹಲವು ಹತ್ತು ಸಂಕೇತಗಳ ಆಗರ."[೧೭] ಹೀಗೆ ಜೋಕುಮಾರಸ್ವಾಮಿ ನಾಟಕದಲ್ಲಿ ಹಸಿರು ಬಣ್ಣದ ಬಗ್ಗೆ ಇರುವ ಕಲ್ಪನೆಯನ್ನು ನೋಡಬಹುದು. ಸಗಣಿ ಹಸಿರು ಬಣ್ಣವನ್ನು ಹೊಂದಿರುವಂತಹದು. ಹಸಿರು ಸಂಮೃದ್ಧಿಯ ಸಂಕೇತ.

ಇದರ ಜೊತೆಗೆ ಸಗಣಿಯನ್ನು ಧಾರ್ಮಿಕ ಹಿನ್ನೆಲೆಯಲ್ಲಿ ಬಳಸುವುದು ಗೋವಿಗೆ ಹಿಂದೂ ಧರ್ಮದಲ್ಲಿ ತನ್ನದೇ ಆದಂತ ಸ್ಥಾನವಿದೆ. ಗೋಮೂತ್ರ, ಸಗಣಿಯ ಬಳಕೆಯಿಂದ ಪಾಪನಾಶವಾಗುವುದು ಎಂಬ ನಂಬಿಕೆ ಇದೆ. ಇದು ಮನೆಯ ಶ್ರೇಷ್ಠತೆಯನ್ನು ಒಳಿತನ್ನು ಸಮೃದ್ಧಿಯನ್ನು ಸೂಚಿಸುವ ಬಣ್ಣವಾಗಿದೆ. "ಅಂಗೀಲ್ಡಿ ಮಾರದಲ್ಲಿ ತಕ್ಡೀಲಿ ತೂಗದಲ್ಲಿ ಅದಿಲ್ದೆ ಹಬ್ಬ ಆಗಲ್ಲ."[೧೮] ಜನಪದರ ಒಗಟುಗಳಲ್ಲಿ ಸಗಣಿಯ ಪ್ರಾಮುಖ್ಯತೆಯನ್ನು ನೋಡಬಹುದು.

ಸಗಣಿಯನ್ನು ಮನೆಗೆ ಹಾಕುವುದರಿಂದ ಅದು ಸದಾ ಹಸಿರಾಗಿ ಇರುತ್ತದೆ. ಹಸಿರು ಮನುಷ್ಯನಿಗೆ ಹತ್ತಿರವಾದ ಬಣ್ಣ. ದನಗಳು ಕಾಡಿನಲ್ಲಿ ಹಲವು ಜಾತಿಯ ಹುಲ್ಲನ್ನು, ಬಗೆಬಗೆಯ ಔಷಧಿ ಜಾತಿಯ ಎಲೆಗಳ ಚಿಗುರನ್ನು ತಿನ್ನುತ್ತವೆ. ಹಾಗಾಗಿ ಅವುಗಳು ಹಾಕಿದ ಸಗಣಿಯಲ್ಲಿ ಕೆಲವು ಔಷಧಿಯ ಅಂಶಗಳು ಇರುತ್ತವೆ. ಆದ್ದರಿಂದ ಹಿಂದಿನಿಂದ ಜನಪದ ವೈದ್ಯರು ಈ ಸಗಣಿಯನ್ನು ಬಳಸುತ್ತಾ ಬಂದಿರಬಹುದು.

ಬುಡಕಟ್ಟು ಸಮುದಾಯಗಳ ಕೆಲವರು ಸಗಣಿಯನ್ನು ಮನೆಗೆ ಹಾಕುವಾಗ ಕೆಲವರು ಬರೀ ಸಗಣಿಯನ್ನು ಹಾಕುತ್ತಾರೆ. ಮತ್ತೆ ಕೆಲವರು ಭತ್ತದ ಹುಲ್ಲಿನ ಮಸಿಯನ್ನು ಸೇರಿಸಿ ಹಾಕುತ್ತಾರೆ. ಮತ್ತೆ ಕೆಲವರು ಹಳದಿ ಕಟಗದ ಪುಡಿಯನ್ನು ಸೇರಿಸಿಕೊಂಡು ಗೋಡೆಗೆ ಹಾಕುತ್ತಾರೆ. ಈ ಸಗಣಿಯಲ್ಲಿ ಅಂಟಿನ ಅಂಶ ಇರುವುದರಿಂದ ಸಗಣಿಯನ್ನು ಬಳಸುತ್ತಾರೆ. ಇದನ್ನು ತಮ್ಮ ಅನೂಕಲಕ್ಕೆ ತಕ್ಕಂತೆ ಬುಡಕಟ್ಟು ಸಮುದಾಯದವರು ಬಳಸುವುದನ್ನು ನೋಡುತ್ತೇವೆ.

೯ ಸುಣ್ಣ : ಸುಣ್ಣವನ್ನು ಬುಡಕಟ್ಟು ಸಮುದಾಯದವರು ತಯಾರುಮಾಡುವುದಿಲ್ಲ. ಇದನ್ನು ಕೊಂಡು ತಿಂದು ಬಳಸುತ್ತಾರೆ. ಸುಣ್ಣ ಒಂದು ಜಾತಿಯ ಕಲ್ಲು. ಈ ಸುಣ್ಣ ಕಲ್ಲನ್ನು ತಂದು ಅದರ ಬಗ್ಗೆ ಅನುಭವ ಇರುವವರು ಸುಟ್ಟು ಸುಣ್ಣವನ್ನು ಮಾಡುತ್ತಾರೆ. ಸುಣ್ಣದ ಬಳಕೆ ಬುಡಕಟ್ಟು ಸಮುದಾಯಗಳಲ್ಲಿ ಬಹಳ ವಿರಳ. ಆದರೂ ಕೆಲವು ಸಮುದಾಯಗಳು ಸುಣ್ಣವನ್ನೇ ಪ್ರಧಾನವಾಗಿ ಬಳಸುತ್ತಾರೆ. ಬುಡಕಟ್ಟು ಜನರಲ್ಲಿ ಸುಣ್ಣದ ಬದಲು ಸೇಡಿಯನ್ನು ಬಳಸುತ್ತಾರೆ. ಏಕೆಂದರೆ ಸೇಡಿಯೇ ಸುಣ್ಣದ ಬಿಳುಪನ್ನು ಕೊಡುವುದರಿಂದ, ಹಾಗೆಯೇ ಬಣ್ಣಬಣ್ಣಗಳ ಮಣ್ಣು ನಿಸರ್ಗದಲ್ಲಿಯೇ ಸಿಗುವುದರಿಂದ ಇವರು ಸುಣ್ಣವನ್ನು ಹೆಚ್ಚಾಗಿ ಬಳಸುವುದಿಲ್ಲ.

[illegible]

[illegible]

[illegible]

[illegible]

ಸುಣ್ಣವನ್ನು ತರಲು ಹಣ ಕೊಡಬೇಕು. ಹಾಗಾಗಿ ನಿಸರ್ಗದಲ್ಲಿ ಸಿಗುವ ಹಲವು ಬಗೆಯ ಮಣ್ಣುಗಳ ಬಳಕೆಯನ್ನು ಬುಡಕಟ್ಟು ಸಮುದಾಯಗಳು ಇಂದಿಗೂ ಸಹ ರೂಢಿಸಿಕೊಂಡು ಬರುತ್ತಿದ್ದಾರೆ. ಬುಡಕಟ್ಟು ಚಿತ್ತಾರಗಳಿಗೆ ಸಂಬಂಧಪಟ್ಟಂತೆ ಗೌಳಿಗರು ಗೋಡೆಯ ಚಿತ್ತಾರಗಳಲ್ಲಿ ಸುಣ್ಣವನ್ನು ಬಳಸುತ್ತಾರೆ. ಇವರು ಮೊದಲು ಸೇಡಿಯಿಂದ ಚಿತ್ರಗಳನ್ನು ಬರೆಯುತ್ತಿದ್ದರು. ಇಂದು ಸೇಡಿಯ ಜೊತೆಗೆ ಸುಣ್ಣವನ್ನು ಬಳಸುತ್ತಾರೆ. ಅಂತೆಯೇ ನಗರ ಸಂಪರ್ಕವನ್ನು ಹೊಂದಿರುವ ಬುಡಕಟ್ಟು ಸಮುದಾಯಗಳು ತಮ್ಮ ಮಾದರಿಯ ಮನೆಗಳನ್ನು ಬಿಟ್ಟು ಸರ್ಕಾರ ಕಟ್ಟಿಕೊಟ್ಟಿರುವ ಮನೆಗಳಲ್ಲಿ ವಾಸಿಸುತ್ತಿದ್ದರೆ. ಹಾಗಾಗಿ ಸುಣ ಮತ್ತು ನಗರಗಳಲ್ಲಿ ಸಿಗುವ ಬಣ್ಣಗಳ ಪರಿಚಯ ಇವರಿಗಿದೆ.

ಮನೆಯ ಗೋಡೆಗೆ ಸುಣ್ಣವನ್ನು ಬಳಸದೇ ಇದ್ದರೂ ಕರ್ನಾಟಕದ ಪ್ರತಿ ಬುಡಕಟ್ಟು ಜನರಲ್ಲಿ ಸುಣ್ಣದ ಪರಿಚಯವಿದೆ. ಏಕೆಂದರೆ ಪ್ರತಿಯೊಂದು ಬುಡಕಟ್ಟಿನವರೂ ಅಡಿಕೆ, ಎಲೆ, ಸುಣ್ಣವನ್ನು ಹಾಕುತ್ತಾರೆ. ಅದರಲ್ಲೂ ಕಡಲು ಮತ್ತು ಕಾಡುಗಳ ನಡುವೆ ಇರುವ ಬುಡಕಟ್ಟುಗಳಲ್ಲಂತೂ ಅಡಿಕೆ, ಎಲೆ, ಸುಣ್ಣದ ಜೊತೆಗೆ ಹೊಗೆ ಸೊಪ್ಪನ್ನು ಹಾಕುತ್ತಾರೆ. ಹಾಗಾಗಿ ಹಿಂದಿನಿಂದಲೂ ಸುಣ್ಣದ ಪರಿಚಯ ಇವರಿಗಿದೆ.

೧೦ ಅಕ್ಕಿ : ಅಕ್ಕಿಯಿಂದ ಚಿತ್ತಾರಗಳನ್ನು ಬರೆಯುವುದು ಬುಡಕಟ್ಟು ಚಿತ್ರಕಲೆಯ ವಿಶೇಷ. ಜನಪದರು ಹಸೆ ಚಿತ್ತಾರಗಳನ್ನು ಬರೆಯುವಾಗ ಅಕ್ಕಿ ಮತ್ತು ಕೆಲವು ಕಾಳುಗಳಿಂದ ಬರೆಯುತ್ತಾರೆ. ಇದನ್ನು ಸಾರ್ವತ್ರಿಕವಾಗಿ ಹೇಳಲು ಬರುವುದಿಲ್ಲ. ಅವರವರು ಆಚರಿಸಿಕೊಂಡು ಬಂದಿರುವುದರ ಮೇಲೆ ಸಂಪ್ರದಾಯಗಳು, ಆಚರಣೆಗಳು ನಡೆಯುತ್ತವೆ. ಬುಡಕಟ್ಟು ಸಮುದಾಯಗಳಲ್ಲಿ ಅದರಲ್ಲೂ ಹಸಲರು ಮತ್ತು ದೀವರಲ್ಲಿ ಅಕ್ಕಿಯನ್ನು ನೆನಸಿ ರುಬ್ಬಿ ಅದರಿಂದ ನೆಲದ ಮೇಲೆ, ಗೋಡೆಗಳ ಮೇಲೆ, ಕೆಲವು ವಸ್ತುಗಳ ಮೇಲೆ ಚಿತ್ತಾರಗಳನ್ನು ಬರೆಯುತ್ತಾರೆ. ಇವರ ಭಿತ್ತಿ ಚಿತ್ತಾರಗಳಲ್ಲಿ ಹಲವು ಬಗೆಯ ಹಸೆಯ ಚಿತ್ರ, ತೇರಿನ ಚಿತ್ರ, ಕಳಸಗಳ ಚಿತ್ರಗಳನ್ನು ಬರೆಯುತ್ತಾರೆ. ಈ ಚಿತ್ರಗಳನ್ನು ಮದುವೆಯ ಸಂದರ್ಭಗಳಲ್ಲಿ ಮನೆಯ ಶುಭಕಾರ್ಯಗಳ ಸಂದರ್ಭದಲ್ಲಿ ಬರೆಯಲಾಗುತ್ತದೆ. ಇವು ರೇಖೆಯ ಚಿತ್ರಗಳು. ಹೀಗೆ ಭೂಮಿ ಹುಣ್ಣಿಮೆಯಲ್ಲಿ ಭೂಮಣಿ ಪುಟ್ಟಿಯ ಮೇಲೂ ಅಕ್ಕಿಯಿಂದ ಚಿತ್ತಾರಗಳನ್ನು ಬರೆಯುತ್ತಾರೆ.

ರೇಖಾಧಾರಿತ ರಂಗೋಲಿಯ ಬೆಡಗು ಕನ್ನಡ ಕರಾವಳಿಯ ನಾಡವರ ಹುಲಿ ಮತ್ತು ಶಿವಮೊಗ್ಗ ಜಿಲ್ಲೆಯ ದೀವರ ಚಿತ್ತಾರಗಳಲ್ಲಿ, ರಾಜಸ್ಥಾನದ ಮಾಂಡನಾದಲ್ಲಿ, ತಮಿಳುನಾಡಿನ ಐಶ್ವರ್ಯ ಕೋಲಂ, ಪಡಿಕೋಲಂ ಮುಂತಾದ ಕೋಲಂಬಗಳಲ್ಲಿ ಕಾಣಬಹುದಾಗಿದೆ. ಈ ರೀತಿಯ ರೇಖಾಧಾರಿತ ಚಿತ್ರಗಳು ಬಹುತೇಕ ಎಲ್ಲಾ ಬುಡಕಟ್ಟುಗಳಲ್ಲಿ ಕಾಣಸಿಗುತ್ತವೆ. ಈ ಚಿತ್ರಗಳು ಮಹಾರಾಷ್ಟ್ರದ ವಾರ್ಲಿ ಚಿತ್ರಗಳನ್ನು ಹೋಲುತ್ತವೆ. ಈ ವಾರ್ಲಿ ಚಿತ್ರಗಳೂ ಸಹ ರೇಖೆಯ ಚಿತ್ರಗಳಾಗಿಯೇ ಇರುತ್ತವೆ. ಈ ಚಿತ್ರಗಳೂ ಕೂಡ ಅಕ್ಕಿಯಿಂದ ಬರೆದ ಚಿತ್ರಗಳು ಎಂಬುದನ್ನು ಗಮನಿಸಬಹುದು.

ಚಿತ್ರ ಬರೆಯಲು ಅಕ್ಕಿಯನ್ನು ತಯಾರು ಮಾಡಿಕೊಳ್ಳುವ ವಿಧಾನವೆಂದರೆ ಅಕ್ಕಿಯನ್ನು ಚೆನ್ನಾಗಿ

[illegible]

ತೊಳೆದು ನೀರಿನಲ್ಲಿ ನೆನೆಸಿ ಇಡುತ್ತಾರೆ. ಅದನ್ನು ಎರಡು ಮೂರು ದಿನ ನೀರಿನಲ್ಲೇ ಬಿಡುತ್ತಾರೆ. ಕೆಲವರು ಒಂದು ವಾರದ ತನಕವೂ ನೀರಿನಲ್ಲಿ ನೆನೆಯಲು ಬಿಡುತ್ತಾರೆ. ಚೆನ್ನಾಗಿ ನೆಂದ ಅಕ್ಕಿಯನ್ನು ರುಬ್ಬುವ ಕಲ್ಲಲ್ಲಿ ಚೆನ್ನಾಗಿ ರುಬ್ಬುತ್ತಾರೆ. ಅಕ್ಕಿ ಎಷ್ಟು ಚೆನ್ನಾಗಿರುತ್ತದೆಯೋ ಅಷ್ಟೇ ಚೆನ್ನಾಗಿ ರುಬ್ಬಲು ಸಹಾಯಕವಾಗುತ್ತದೆ. ಆಗ ಚೆನ್ನಾಗಿ ಚಿತ್ರ ಬರೆಯಲು ಸಹಾಯಕವಾಗುತ್ತದೆ. ರುಬ್ಬಿದ ಅಕ್ಕಿಯ ಹಿಟ್ಟಿನಿಂದ ಚಿತ್ರ ಬರೆಯಲು ಪುಂಡಿ ಗಿಡದ ಕಡ್ಡಿಯಿಂದ ಮಾಡಿದ ಕುಂಚಗಳನ್ನು ಬಳಸುತ್ತಾರೆ. ಕೆಲವೊಮ್ಮೆ ಒಣ ಅಕ್ಕಿಯನ್ನು ಬೀಸಿ ಪುಡಿಮಾಡಿ, ರಂಗೋಲಿ ಹಾಕಲು ಬಳಸುತ್ತಾರೆ.

೧೧ **ಗುರುಗೆ ಕಾಯಿ ಬಣ್ಣ :** ಇದು ಕಾಡಿನಲ್ಲಿ ಸಿಗುವ ಒಂದು ರೀತಿಯ ಮರದ ಕಾಯಿ. ಈ ಕಾಯಿಯನ್ನು ತಂದು ಮೇಲಣ ಸಿಪ್ಪೆಯನ್ನು ತೆಗೆದು ಒಳಗಿನ ಬೀಜದಿಂದ ಎಣ್ಣೆಯನ್ನು ತೆಗೆಯುತ್ತಾರೆ. ಈ ಎಣ್ಣೆಯನ್ನು ಅಡುಗೆಗೆ ಉಪಯೋಗಿಸುತ್ತಾರೆ. ಗುರುಗೆಕಾಯಿ ಸಿಪ್ಪೆಯನ್ನು ಚೆನ್ನಾಗಿ ಅರೆದು ಅದನ್ನು ಬಣ್ಣವಾಗಿ ಉಪಯೋಗಿಸುತ್ತಾರೆ. ಈ ಗುರುಗೆಕಾಯಿ ಬಣ್ಣವು ಹಳದಿಬಣ್ಣವಾಗಿರುತ್ತದೆ. ಇದನ್ನು ಹಸಲರು ದೀವರು, ಕುಣಬಿಯರು ತಮ್ಮ ಚಿತ್ರಗಳಿಗೆ ಬಣ್ಣ ಹಾಕಲು ಬಳಸುತ್ತಾರೆ. ಮದುವೆ ಮತ್ತಿತರ ಕಾರ್ಯಗಳ ಸಂದರ್ಭಗಳ ಚಿತ್ತಾರಕ್ಕಾಗಿಯೇ ಈ ಬಣ್ಣವನ್ನು ಬಳಸುತ್ತಾರೆ. ಈ ಚಿತ್ತಾರಗಳು ಹಸೆ, ಬಾಗಿಲ ಅಲಂಕಾರ, ಭಿತ್ತಿ ಚಿತ್ರಗಳು ಆಗಿರುತ್ತವೆ. ಗುರಗೆ ಕಾಯಿ ಬಣ್ಣ ಆಕರ್ಷಿತ ಬಣ್ಣವಾಗಿ ಕಾಣುತ್ತದೆ.

೧೨ **ಅರಿಷಿಣ :** ಇದರಲ್ಲಿ ರೈತರು ಬೆಳೆಯುವ ಅರಿಶಿಣ ಮತ್ತು ಕಾಡುಅರಿಷಿಣ ಎಂಬ ಎರಡು ರೀತಿಯಲ್ಲಿವೆ. ಕಾಡು ಅರಿಷಿಣದ ಪರಿಷ್ಕರಣವೇ ರೈತರು ಬೆಲೆಯುವ ಅರಿಷಿಣವಾಗಿದೆ. ಬುಡಕಟ್ಟುಗಳು ಬಹುತೇಕವಾಗಿ ಕಾಡನಲ್ಲಿನ ಇರುವುದರಿಂದ ಇವರಲ್ಲಿ ಕಾಡು ಅರಿಷಿಣದ ಬಳಕೆ ಹೆಚ್ಚಾಗಿ ಇದೆ. ಹಾಗಾಗಿ ಈ ಅರಿಷಿಣವನ್ನೇ ಹೆಚ್ಚಾಗಿ ಬಳಸುತ್ತಾರೆ. ಇದನ್ನು ಆಹಾರದ ಜೊತೆಗೆ ತಮ್ಮ ಚಿತ್ರಗಳಲ್ಲಿ ಬಳಸುತ್ತಾರೆ. ಜೇನುಕುರುಬರು, ಯರವರು, ಕಾಡುಕುರುಬರು ಪಣಿಯರು ತಮ್ಮ ಮನೆಗಳಲ್ಲಿ ಸಣ್ಣ ಸಣ್ಣ ರಂಗೋಲಿಗಳನ್ನು ಬರೆಯಲು ಹಸಿ ಕಾಡು ಅರಿಷಿಣದ ಗೆಡ್ಡೆಗಳ ತುಂಡುಗಳನ್ನು ಬಳಸುತ್ತಾರೆ. ಈ ಅರಿಷಿಣದಿಂದ ಬರೆದ ಚಿತ್ರಗಳು ಬರೆಯುವಾಗ ಹಸಿಯಾಗಿದ್ದು ಅದು ಒಣಗಿದ ನಂತರ ರಂಗಾಗಿ ಕಾಣುತ್ತವೆ. ಈ ಅರಿಷಿಣವನ್ನು ಕೆಲವು ಔಷಧಿಗಳಿಗೆ ಬಳಸುತ್ತಾರೆ. ಇದನ್ನು ಕಾಡಿನಿಂದ ತಂದು ಚೆನ್ನಾಗಿ ಬೇಯಿಸಿ ನಂತರ ಒಣಗಿಸುತ್ತಾರೆ. ಚೆನ್ನಾಗಿ ಒಣಗಿದ ನಂತರ ಪುಡಿಯನ್ನು ಮಾಡಿಟ್ಟುಕೊಳ್ಳುತ್ತಾರೆ. ಚಿತ್ರ ಬರೆಯುವ ಸಂದರ್ಭದಲ್ಲಿ ಈ ಪುಡಿಗಳನ್ನು ಉಪಯೋಗಿಸುತ್ತಾರೆ. ಹಾಗೆಯೇ ಔಷಧಿಗಳಿಗೆ ಬೇಕಾದಾಗ ಈ ಪುಡಿಯನ್ನೇ ಬಳಸುತ್ತಾರೆ. ಇಲ್ಲವೇ ಅರಿಷಿಣದ ಕೊನೆಗಳನ್ನು (ತುಂಡು) ಕಲ್ಲ ಮೇಲೆ ಉಜ್ಜಿ (ತೇದು) ಉಪಯೋಗಿಸುತ್ತಾರೆ.

೧೩ **ಕುಂಕುಮ :** ಸಾಮಾನ್ಯವಾಗಿ ಎಲ್ಲ ಪ್ರದೇಶದ ಜನರು ಆಚರಣೆ, ಸಂಪ್ರದಾಯ, ದಿನಬಳಕೆ ಮತ್ತಿತರ ಸಂದರ್ಭಗಳಲ್ಲಿ ದೇವರ ಕಾರ್ಯಗಳಲ್ಲಿ ಕುಂಕುಮ, ಅರಿಷಿಣಗಳ ಬಳಕೆ ಸಾಮಾನ್ಯವಾಗಿದೆ. ಅಂತೆಯೇ ಈ ಕುಂಕುಮ ಬಳಕೆಯನ್ನು ಬುಡಕಟ್ಟು ಸಮುದಾಯದವರೂ ಇಟ್ಟುಕೊಂಡಿದ್ದಾರೆ. ಕುಂಕುಮ ಕೆಂಪು

ಬಣ್ಣದ ಪುಡಿ. ಇದು ಮಾನವನ ಪ್ರಾರಂಭದ ಬಣ್ಣ. ಕೆಂಪು ಬಣ್ಣ ಅಥವಾ ಕುಂಕುಮ ಇಂದಿಗೂ ಕೂಡ ಪ್ರಮುಖ ಸ್ಥಾನವನ್ನು ಪಡೆದಿವೆ. ಸಾಂಪ್ರದಾಯಿಕವಾಗಿ ಮುತ್ತೈದೆತನವನ್ನು ಇದು ಸೂಚಿಸುತ್ತದೆ. ಮದುವೆ, ಮಾಟ, ಮಂತ್ರ ತಂತ್ರ ಮತ್ತಿತರ ಸಂಪ್ರದಾಯಗಳಲ್ಲಿ ಮತ್ತು ಹಬ್ಬ ಹರಿದಿನಗಳಲ್ಲಿ ಬರೆಯುವ ಚಿತ್ತಾರಗಳಲ್ಲಿ ಈ ಕುಂಕುಮವನ್ನು ಬಳಸುತ್ತಾರೆ. ಈ ಕುಂಕುಮವನ್ನು ಬುಡಕಟ್ಟುಗಳು ಬಂಡಾರವೆಂದು ಕರೆಯುತ್ತಾರೆ. ಇದನ್ನು ಭಕ್ತಿಯ ನೆಲೆಯಲ್ಲಿ ಬಳಸುತ್ತಾರೆ.

೧೪ **ಮುರಿನ ಕಾಯಿಯ ಬಣ್ಣ :** ಇದೂ ಕೂಡ ಗುರುಗೆಕಾಯಿಯಂತೆ ಕಾಡಿನಲ್ಲಿ ಸಿಗುವ ಒಂದು ರೀತಿಯ ಮರದ ಕಾಯಿ. ಇದರ ಬೀಜದಿಂದಲೂ ಎಣ್ಣೆಯನ್ನು ತೆಗೆಯುತ್ತಾರೆ. ಈ ಎಣ್ಣೆಯನ್ನು ಅಡುಗೆಗೂ ಸಹ ಬಳಸುತ್ತಾರೆ. ಈ ಕಾಯಿಯ ಸಿಪ್ಪೆಯನ್ನು ಪುಡಿಮಾಡಿ, ಅದನ್ನು ನೀರಲ್ಲಿ ನೆನಸಿ ಬಣ್ಣವನ್ನು ತಯಾರುಮಾಡಿಕೊಳ್ಳುತ್ತಾರೆ. ಹೀಗೆ ತಯಾರಿಸಿದ ಬಣ್ಣವನ್ನು ಚಿತ್ರಗಳಿಗೆ ಬಳಸುತ್ತಾರೆ. ಈ ಕಾಯಿಯ ಬಣ್ಣವು ಕೆಂಪು ಬಣ್ಣವಾಗಿರುತ್ತದೆ. ಈ ಕಾಯಿಯ ಸಿಪ್ಪೆಯನ್ನು 'ಹುಳಿ'ಗೆ ಬಳಸುತ್ತಾರೆ. ಅಂದರೆ ಆಹಾರಕ್ಕೆ ಬಳಸುತ್ತಾರೆ. ಮುರಿನಕಾಯಿಯನ್ನು ಕೊಯ್ದು ಸೀಳಿ ಚೆನ್ನಾಗಿ ಒಣಗಿಸಿ ಇಟ್ಟುಕೊಳ್ಳುತ್ತಾರೆ. ಈ ಕಾಯನ್ನು ಬಣ್ಣದ ಬಳಕೆಗೆ ಹಾಗೂ ಆಹಾರದ ಬಳಕೆಗೆ ಗೊಂಡರು, ಕುಣಬಿಯರು, ಮತ್ತು ಹಾಲಕ್ಕಿ ಒಕ್ಕಲಿಗರು ಉಪಯೋಗಿಸುತ್ತಾರೆ.

೧೫ **ರಂಗೋಲಿ :** "'ರಂಗ' ಎಂಬುದಕ್ಕೆ ಬಣ್ಣ, ಸೊಗಸು ಎಂಬವೇ ಪ್ರಕೃತಾರ್ಥಗಳಿವೆ, 'ವಲ್ಲಿ' ಎಂದರೆ ಬಳ್ಳಿ ಬಣ್ಣದ ಅಥವಾ ಬೆಣಚುಕಲ್ಲಿನ ಪುಡಿಯಿಂದ ಇಲ್ಲವೇ ಸೇಡಿಯ ಕರ್ದಮದಿಂದ ಬೊಟ್ಟುಗಳನ್ನೋ ಗೆರೆಗಳನ್ನೋ ಹಾಕಿ ಬಗೆಬಗೆಯ ಬಳ್ಳಿಗಳ, ಹೂವುಗಳ, ಆಕೃತಿಗಳ ರೂಪವನ್ನು ಕಾಣಿಸುವ ಈ ಕಲೆ ಚಿತ್ರ ಕಾಲಾಂತರ್ಗತವಾದದ್ದು."[೨೦] ಈ ರಂಗವಲ್ಲಿ ಕಲೆಯನ್ನು ಬುಡಕಟ್ಟು ಸಂಸ್ಕೃತಿಯಲ್ಲಿ ಹಲಿ ಬರೆಯುವುದು ಅಂತ ಕರೆಯುತ್ತಾರೆ. ಆದರೆ 'ಹಲಿ' ಎಂದರೆ ಬರೀ ರಂಗೋಲಿ ಚಿತ್ರಗಳಲ್ಲ. ಅವುಗಳ ರಂಗೋಲಿ ಚಿತ್ತಾರಗಳು. ಬುಡಕಟ್ಟುಗಳಲ್ಲಿ 'ಹಲಿ' ಬರೆಯುವುದನ್ನು ಸಾಂಪ್ರದಾಯಿಕವಾಗಿ 'ಹಲಿ' ಹಾಕುವುದು, ಬರೆಯುವುದು, ಸೇಡಿ ಚಿತ್ರ ಹೀಗೆ ಹಲವು ರೀತಿಯಲ್ಲಿ ಕರೆಯುತ್ತಾರೆ. ಕೆಲವು ಹಬ್ಬ ಹರಿದಿನ ಮುಂತಾದ ಸಂದರ್ಭಗಳಲ್ಲಿ ಇವರದೇ ಪ್ರಾಮುಖ್ಯತೆ ಇರುತ್ತದೆ. ಸೇಡಿ ಸಿಗದ ಬುಡಕಟ್ಟು ಸಮುದಾಯದವರು ರಂಗವಲ್ಲಿ (ಬೆಣಚು ಕಲ್ಲಿನಪುಡಿ)ಯನ್ನು ಬೆಳಸುತ್ತಾರೆ. ರಂಗವಲ್ಲಿಯನ್ನು ಇವರು ಭಕ್ತಿಯ ಭಾವದಿಂದ ನೋಡುತ್ತಾರೆ. ಬಿಟ್ಟ ರಂಗೋಲಿಯನ್ನು ತುಳಿಯುವುದಿಲ್ಲ. ಅದು ದಿನಪೂರ್ತಿ ಹಾಗೆಯೇ ಇರುವಂತೆ ಜೋಪಾನ ಮಾಡುತ್ತಾರೆ. ಮರುದಿವಸ ಅದನ್ನು ಗುಡಿಸಿ ತೆಂಗಿನಗಿಡದ ಬುಡಕ್ಕೆ ಹಾಕಿ ಪುನಃ ರಂಗೋಲಿಯನ್ನು ಹಾಕುತ್ತಾರೆ. ಸೋಲಿಗರು, ಜೇನುಕುರುಬರು, ಗೌಳಿಗರು, ದೀವರು, ಹಸಲರು ರಂಗವಲ್ಲಿಯನ್ನು ದಿನನಿತ್ಯ ಹಾಕುವ ಸಂಪ್ರದಾಯದಂತೆ ಮನೆಯ ಮುಂದೆ, ಬಾಗಿಲ ಹೊಸ್ತಿಲಿಗೆ ಹಾಕಿ ಅದರ ಮೇಲೆ ಹೂವನ್ನು ಇಟ್ಟು ಪೂಜೆಯನ್ನು ಮಾಡುತ್ತಾರೆ. ಪೂಜೆಯ ಕ್ರಮದಲ್ಲಿ ರಂಗೋಲಿಯನ್ನು ಹಾಕುವುದು ಮುಖ್ಯವಾದ ಕೆಲಸವೇ ಆಗಿರುತ್ತದೆ.

[illegible]

[illegible]

[illegible]

೧೬ ಕಾಡು ಎಲೆ, ಸೊಪ್ಪುಗಳ ಬಣ್ಣ : ಬುಡಕಟ್ಟುಗಳ ಚಿತ್ರಗಳಲ್ಲಿ ಕಾಡಿನ ಎಲೆ, ಸೊಪ್ಪುಗಳನ್ನು ಅರೆದು, ಅದರಿಂದ ರಸ ತೆಗೆದು ಹಾಕುವುದನ್ನು ನೋಡುತ್ತೇವೆ. ಈ ಚಿತ್ರಗಳು ಸಮೃದ್ಧಿಯಾಗಿ ಕಾಣಸಿಗದಿದ್ದರೂ, ಅಲ್ಲಲ್ಲಿ ಕ್ವಚಿತ್ತಾಗಿ ಕಂಡುಬರುತ್ತವೆ. ಕಾಡು ಎಲೆ, ಸೊಪ್ಪುಗಳಲ್ಲಿ ಅಂಟಿನ ಅಂಶ ಇರುವುದರಿಂದ ಅವುಗಳ ಬಣ್ಣ ಹೆಚ್ಚು ಗಟ್ಟಿಯಾಗಿರುತ್ತವೆ.

೧೭. ಹೂವಿನ ಬಣ್ಣ : ಹೂವಿನ ಕಲ್ಪನೆ, ಹೂವಿನ ಬಣ್ಣಗಳ ಕಲ್ಪನೆಯನ್ನು ಬುಡಕಟ್ಟು ಸಮುದಾಯಗಳು ಚೆನ್ನಾಗಿ ಹೊಂದಿವೆ. ಗೋಡೆಗೆ ಚಿತ್ರ ಬರೆಯುವ ಸಂದರ್ಭದಲ್ಲಿ ಕಾಡಿನಲ್ಲಿ ಕಂಡ ಹೂವುಗಳನ್ನು ತಂದು ಅರೆದು ರಸ ಮಾಡಿ ಚಿತ್ರಗಳಿಗೆ ಹಚ್ಚುತ್ತಾರೆ. ನಂತರದಲ್ಲಿ ಇದು ಕೈಯಿಗೆ ಹತ್ತುವುದಿಲ್ಲ. ಮತ್ತು ಬಣ್ಣದ ಗುಣಮಟ್ಟವನ್ನು ಕಾದಿರಿಸಿಕೊಳ್ಳುತ್ತದೆ. ಏಕೆಂದರೆ ಪ್ರತಿಯೊಂದು ಹೂವಿನಲ್ಲಿಯೂ ಮಕರಂದ ಜೇನು ಇರುತ್ತದೆ. ಈ ಹೂವಿನ ಬಣ್ಣದಲ್ಲಿ ಜೇನಿನ (ಅಂಟಿನ) ಅಂಶ ಇರುವುದರಿಂದ, ಚಿತ್ರಕ್ಕೆ ಹಾಕಿದ ಈ ಬಣ್ಣ ಕೈಗೆ ಹತ್ತುವುದಿಲ್ಲ. ಮತ್ತು ಅಳಿಸಲು ಆಗುವುದಿಲ್ಲ. ಹೂವಿನಲ್ಲಿ ಪಿಗ್ಮೆಂಟ್ಸ್ (ಘಾಡತೆ ಬಣ್ಣ)ದಲ್ಲಿ ಇರುವುದರಿಂದ ಆಕರ್ಷಿಸುವ ಗುಣ ಹೊಂದಿರುತ್ತದೆ. ಹೂವನ್ನು ಅರೆದು ರಸಮಾಡುವಾಗ ಹೂವಿನಲ್ಲಿರುವ ತೇವ, ಘಾಡತೆಯ ಬಣ್ಣ, ಪಾರದರ್ಶಕದಂತಿರುವ ಜೇನು ಇವು ಇರುವುದರಿಂದ ಹೂವಿನ (ರಸ) ಬಣ್ಣ ರಂಗಾಗಿ ಕಾಣುತ್ತದೆ.

೧೮ ಆಧುನಿಕ ಬಣ್ಣ : ಆಧುನಿಕ ಬಣ್ಣಗಳು ಬುಡಕಟ್ಟು ಸಮುದಾಯಗಳಲ್ಲಿ ಇತ್ತೀಚಿಗೆ ಬಳಕೆಯಲ್ಲಿವೆ. ಇದು ಒಂದು ರೀತಿಯ ಆಧುನಿಕರಣದ ಪ್ರಭಾವ ಎನ್ನಬಹುದು. ಕೆಲವು ಪ್ರದೇಶದ ಬುಡಕಟ್ಟುಗಳಲ್ಲೂ ಸಹ ಮನೆಗಳ ಮೂಲ ಸ್ಥಿತಿಯಲ್ಲೂ ಸಹ ಬದಲಾವಣೆಯನ್ನು ಕಾಣಬಹುದು. ಬುಡಕಟ್ಟಿನ ಹಳೆಯ ಪೋಡು, ಆಡಿ, ವಾಡಿನಗಳಲ್ಲಿನ ಜನರಿಗೆ ಇಂದಿಗೂ ಕೂಡ ಆಧುನಿಕ ಬಣ್ಣಗಳು ಪರಿಚಯವಾಗಿಲ್ಲ. ಬದಲಾವಣೆ ಹೊಂದಿರುವ ಕಡೆಗಳಲ್ಲಿ ಅಂದರೆ ಸರ್ಕಾರ ಕಟ್ಟಿಸಿಕೊಟ್ಟ ಕೆಲವು ಮನೆಗಳಲ್ಲಿ ಇಲ್ಲವೇ ತಾವೇ ಕಟ್ಟಿಕೊಂಡ ಮನೆಗಳಲ್ಲಿ ಕಾಣಸುತ್ತವೆ. ಇಲ್ಲಿ ಪುಡಿ ಬಣ್ಣಗಳು ಮತ್ತು ಕಿಟಗಿ ಬಾಗಿಲಿಗೆ ಹಾಕುವ ಬಣ್ಣಗಳು ಮಾತ್ರ ಪರಿಚಯವಾಗಿವೆ. ಗೋಡೆ, ಬಾಗಿಲ ಅಲಂಕಾರಕ್ಕೆ ಈ ಬಣ್ಣಗಳನ್ನು ಬಳಸುತ್ತಿದ್ದಾರೆ. (ಆಧುನಿಕ ಬಣ್ಣಗಳ ವಿವರಣೆಯನ್ನು ಈ ಅಧ್ಯಯದ 'ಹಲವು ರೀತಿಯ ಬಣ್ಣಗಳು' ಎಂಬ ಭಾಗದಲ್ಲಿ ವಿವರಿಸಲಾಗಿದೆ.)

ಆದಿವಾಸಿಗಳು ಚಿತ್ರ ಬರೆಯಲು ಬಳಸುವ ಸಾಧನಗಳು



ಹೀಗೆ ಕರ್ನಾಟಕದ ಬುಡಕಟ್ಟು ಸಮುದಾಯಗಳು ತಮ್ಮದೇ ಆದಂತ ರೀತಿಯಲ್ಲಿ ಚಿತ್ರಕಲೆಯನ್ನು ಉಳಿಸಿಕೊಂಡು ಬರುತ್ತಿದ್ದಾರೆ. ಈ ಚಿತ್ರಗಳಿಗೆ ತಕ್ಕಂತೆ ಬಣ್ಣಗಳನ್ನು ತಾವೇ ತಯಾರು ಮಾಡಿಕೊಳ್ಳುತ್ತಾರೆ. ಅಂತೆಯೇ ಚಿತ್ರಗಳನ್ನು



ಬರೆಯಲು ಬೇಕಾದ ಕುಂಚಗಳನ್ನು, ಹಾಗೂ ಇತರೆ ಸಾಧನಗಳನ್ನು ತಾವೇ ತಯಾರು ಮಾಡಿಕೊಳ್ಳುತ್ತಾರೆ.

ಸೋಲಿಗರು ಮನೆಗೆ ಬಣ್ಣಗಳನ್ನು ಬಳಿಯಲು ಕಾಡಿನಲ್ಲಿ ಸಿಗುವ ನಾರಿನ ತೊಗಟೆಯನ್ನು ಬಳಸುತ್ತಾರೆ. ನೀರಿನಲ್ಲಿ ಚೆನ್ನಾಗಿ ನೆನಸಿ, ಜಜ್ಜಿ ಅದರಿಂದ ಕುಂಚಗಳನ್ನು ತಯಾರುಮಾಡಿಕೊಳ್ಳುತ್ತಾರೆ. ಅದರಿಂದ ಗೋಡೆಗೆ ಬಣ್ಣವನ್ನು ಬಳಿಯುತ್ತಾರೆ. ಕೆಲವೊಮ್ಮೆ ಕಾಡಿನಲ್ಲಿ ಸಿಗುವ ಮರಗಳ ಕಡ್ಡಿಗಳಿಗೆ ಬಟ್ಟೆಯನ್ನು ಸುತ್ತಿಕೊಂಡು ಬರೆಯುತ್ತಾರೆ; ಇಲ್ಲವೆ ಕಡ್ಡಿಯ ತುದಿಯನ್ನು ಚೆನ್ನಾಗಿ ನೆನಸಿ ಕುಂಚಗಳನ್ನು ತಯಾರು ಮಾಡಿಕೊಳ್ಳುತ್ತಾರೆ. ಎರವರು, ಪಣಿಯರು, ಕಾಡುಕುರುಬರು, ಜೇನು ಕುರುಬರು, ಪಣಿಯರು ತಮ್ಮ ಮನೆಯ ಗೋಡೆಗಳಿಗೆ ಕೈಯಿಂದಲೇ ಚಿತ್ತಾರಗಳನ್ನು ಬಿಡಿಸುತ್ತಾರೆ.



ಹಾಲಕ್ಕಿಗಳು ಪಣಿಯರು ಸಿದ್ಧಿಯರು ಗೌಳಿಗರು

ಹಸಲರು ಮತ್ತು ದೀವರು ತಮ್ಮ ಚಿತ್ತಾರಗಳನ್ನು ಬರೆಯಲು ಪುಂಡಿ ಕಡ್ಡಿಯಿಂದ ಮಾಡಿದ ಕುಂಚಗಳನ್ನು ಬಳಸುತ್ತಾರೆ. ಈ ಪುಂಡಿ ಕಡ್ಡಿಯನ್ನು ನೀರಿನಲ್ಲಿ ಚೆನ್ನಾಗಿ ನೆನೆಸಿ ಹಾಕಿ ಅದನ್ನು ಕಲ್ಲಿನಿಂದ ಜಜ್ಜಿ ಅದರಿಂದ ಬಂದ ನಾರಿನಿಂದ ಕುಂಚಗಳನ್ನು ತಯಾರುಮಾಡಿಕೊಳ್ಳುತ್ತಾರೆ.

ಗೊಂಡರು ಅಡಿಕೆಯ ಸಿಪ್ಪೆಯನ್ನು ತಮಗೆ ಬೇಕಾದ ಬೆರಳುಗಳ ಆಕೃತಿಯಲ್ಲಿ ಕತ್ತರಿಸಿ, ಅದರಿಂದ ಚಿತ್ತಾರಗಳನ್ನು ಬರೆಯುತ್ತಾರೆ. ಕುಣಬಿಯರು ಕಡ್ಡಿಗೆ ಬಟ್ಟೆಯನ್ನು ಸುತ್ತಿಕೊಂಡು ಇಲ್ಲವೆ ಕಡ್ಡಿಯಿಂದಲೇ ಕುಂಚಗಳನ್ನು ತಯಾರುಮಾಡಿಕೊಂಡು ಚಿತ್ತಾರಗಳನ್ನು ಬರೆಯುತ್ತಾರೆ.

ಹಾಲಕ್ಕಿ ಒಕ್ಕಲಿಗರು ಬಟ್ಟೆಯನ್ನು ಸೇಡಿಯಲ್ಲಿ ನೆನಸಿ ಅದನ್ನು ಕೈಬೆರಳುಗಳ ಮೇಲೆ ಹಿಂಡುತ್ತಾ ನೆಲದ ಮೇಲಿನ ಚಿತ್ತಾರಗಳನ್ನು ಬರೆಯುತ್ತಾರೆ. ಗೋಡೆಯ ಮೇಲಿನ ಚಿತ್ರಗಳನ್ನು ಬರೆಯಲು



ಕುಂಚಗಳನ್ನು ತಯಾರುಮಾಡಿಕೊಳ್ಳುತ್ತಾರೆ. ಹಾಗೆಯೇ ಸಿದ್ಧಿಯರು, ಗೌಳಿಗರು ಕಾರನ ಕಡ್ಡಿಗಳಿಂದ ಕುಂಚಗಳನ್ನು ತಯಾರುಮಾಡಿಕೊಂಡು ಚಿತ್ರವನ್ನು ಬರೆಯುತ್ತಾರೆ.

ಹೀಗೆ ಪ್ರತಿಯೊಂದು ಬುಡಕಟ್ಟು ಸಮುದಾಯವೂ ಕೂಡ ತಮ್ಮದೇ ಆದ ರೀತಿಯಲ್ಲಿ ಚಿತ್ತಾರಗಳನ್ನು ಬರೆಯಲು ವಿವಿಧ ಬಗೆಯ ವಸ್ತುಗಳನ್ನು ಬಳಸಿ ವಿವಿಧ ರೀತಿಯ ಸಾಧನಗಳನ್ನು ಮಾಡಿಕೊಂಡಿರುವುದನ್ನು ನೋಡಬಹುದು. ಇವು ಸಂಪೂರ್ಣವಾಗಿ ತಮ್ಮ ಪರಿಸರದಲ್ಲೇ ಸಿಗುವ ವಸ್ತುಗಳಾಗಿರುತ್ತವೆ. ಇವುಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳುತ್ತಾರೆ.

ಅಡಿಟಿಪ್ಪಣಿಗಳು

೧. ಕನ್ನಡ ರತ್ನಕೋಶ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು, ಪುಟ: ೧೬೫

೨. ಕನ್ನಡ ಕನ್ನಡ ಶಬ್ದಕೋಶ, ಬಿ.ಜಿ. ಸಂಕೇಶ್ವರ ಆಂಡ್ ಕಂಪನಿ, ಬೆಂಗಳೂರು, ಪುಟ: ೪೪೮

೩. ಅದೇ. ಪುಟ: ೪೭೬

೪. ಕೆ.ವಿ. ಕಾಳೆ, ಕರ್ನಾಟಕ ಚಿತ್ರಕಲೆಗಳಲ್ಲಿ ಬಣ್ಣಗಳ ಬಳಕೆ, ಪುಟ: ೧೨

೫. ಅ. ಸುಂದರ, ಪಿ.ಆರ್. ತಿಪ್ಪೆಸ್ವಾಮಿ, ಕರ್ನಾಟಕ ಪ್ರಾಗಿತಿಹಾಸ ಕಾಲದ ಕಲೆ, ಪುಟ: ೧೬

೬. ಅದೇ. ಪುಟ: ೧೬

೭. ವಿ.ಟಿ. ಕಾಳೆ, ಚಿತ್ರಕಲಾ ದರ್ಪಣ, ಪುಟ: ೯

೮. ಅದೇ. ಪುಟ: ೨೭

೯. ಅದೇ. ಪುಟ: ೨೭

೧೦. ಪ್ರ.ಸಂ. ಆರ್. ತಿಪ್ಪೇಸ್ವಾಮಿ, ಕಲಾಕೋಶ, ಪುಟ: ೨೧೯

೧೧. ವಿ.ಟಿ.ಕಾಳೆ, ಚಿತ್ರಕಲಾ ದರ್ಪಣ, ಪುಟ: ೫೩

೧೨. ಡಾ. ಅ.ಲ. ನರಸಿಂಹನ್, ಕರ್ನಾಟಕ ಭಿತ್ತಿ ಚಿತು ಪರಂಪರೆ, ಪುಟ: ೫೩

೧೩. ಡಾ. ಎಚ್.ಎಂ. ಮಹೇಶ್ವರಯ್ಯ, ಹಚ್ಚೆ ಒಂದು ಜನಪದ ಕಲೆ, ಪುಟ: ೧೫

೧೪. ಅದೇ. ಪುಟ: ೧೫

೧೫. Ram Dhamijia, 'Rock Shetter' Painting Image India

೧೬. ಡಾ. ಎಸ್.ಸಿ. ಪಾಟೀಲ, ಕರ್ನಾಟಕ ಜನಪದ ಚಿತ್ರಕಲೆ, ಉದ್ಧರಣೆ, ಪುಟ: ೨೭

೧೭. ಮೋಹನ ಸೋನ, ಸಂ. ಎಚ್.ಎಸ್. ಶಿವಪ್ರಕಾಶ್, ಸಿರಿಸಂಪಿಗೆ ಕಂಬಾರ, ಪುಟ: ೧೫೭

೧೮. ಡಾ. ಪಿ.ಎನ್. ಹರೀಶ, ಯರವರ ಸಂಸ್ಕೃತಿ, ಪುಟ: ೩೪೬

೧೯. ಕಟಗದ ಪುಡಿ ಹಳದಿ ಮಣ್ಣಿನ ಪುಡಿ, ಕಲ್ಲು ಮಿಶ್ರಿತ ಹಳದಿ ಮೃದು ಕಲ್ಲಿನ ಪುಡಿ, ಪುಟ:೧೯


೨೦. ಬಿ.ಪಿ. ಬಾಯಾರಿ, ಭಾರತೀಯ ಸಂಸ್ಕೃತಿಯಲ್ಲಿ ರಂಗವಲ್ಲಿ, ಪುಟ: ೫

*****

[illegible]

ಆದಿವಾಸಿಗಳ ಬಣ್ಣಗಳ ಬಳಕೆ

ಮುಖವರ್ಣಿಕೆ





ಮುಖವರ್ಣಿಕೆ



ಶರೀರದ ಮೇಲಿನ ಚಿತ್ರಗಳು



ಬಣ್ಣದ ಸಾಧನಗಳು

ಅಧ್ಯಾಯ ೭
ಬುಡಕಟ್ಟು ಸಮುದಾಯಗಳ ಕರಕುಶಲ ಕಲೆಗಳು

ಬುಡಕಟ್ಟು ಸಮುದಾಯಗಳ ಕರಕುಶಲ ಕಲೆಗಳು

೧ ಕರಕುಶಲ ಕಲೆಗಳ ಪರಿಚಯ : 'ಕರಕುಶಲಕಲೆ ಎಂದರೆ ಕೈಯಿಂದ ಮಾಡಿದ ಕುಶಲ ಕಲೆ. ಅಂದರೆ ಕೈಯಿಂದ ಮಾಡಿದ ಚಾತುರ್ಯ ಕಲೆ. ಇದು ಹಲವು ವಸ್ತುಗಳನ್ನು ಬಳಸಿಕೊಂಡು ಮಾಡಿದ ಕಲೆ. ಈ ಕಲೆಗೆ ಕೈಯಿಂದಲೇ ಕುಶಲತೆಯನ್ನು ತುಂಬುವುದು ಆಗಿರುತ್ತದೆ.' ಕರಕುಶಲಕಲೆಯ ಬಗ್ಗೆ ಕನ್ನಡ ವಿಶ್ವವಿದ್ಯಾಲಯವು 'ಕರಕುಶಲ ಕಲೆಗಳು' ಎಂಬ ವಿಶ್ವಕೋಶವೊಂದನ್ನು ಹೊರತಂದಿದೆ. ಈ ವಿಶ್ವಕೋಶದಲ್ಲಿ ಕರಕುಶಲ ಕಲೆಯನ್ನು ಐದು ರೀತಿಯಲ್ಲಿ ವಿಭಾಗಮಾಡಿಕೊಂಡು ಈ ವಿಭಾಗ ಕ್ರಮಕ್ಕನುಸಾರವಾಗಿ ಲೇಖನಗಳನ್ನು ಸಿದ್ಧಪಡಿಸಿ ವಿವರಿಸಲಾಗಿದೆ. ಅವು ಈ ರೀತಿಯಲ್ಲಿ ಇವೆ.

೧. ಅಲಂಕರಣ ಸಂಬಂಧಿ ಕರಕುಶಲ ಕಲೆಗಳು

೨. ಆರಾಧನಾ ಸಂಬಂಧಿ ಕರಕುಶಲ ಕಲೆಗಳು

೩. ಗೃಹೋಪಯೋಗಿ ಕರಕುಶಲ ಕಲೆಗಳು

೪. ಮನರಂಜನಾ ಸಂಬಂಧಿ ಕರಕುಶಲ ಕಲೆಗಳು

೫. ವ್ಯವಸಾಯ ಸಂಬಂಧಿ ಕರಕುಶಲ ಕಲೆಗಳು ಎಂಬುದಾಗಿ ವಿಗಡಿಸಿಕೊಂಡಿದ್ದಾರೆ.

ಈ ಐದು ರೀತಿಯ ಕರಕುಶಲ ಕಲೆಗಳಿಗೆ ಸಂಬಂಧಿಸಿದಂತೆ ಹಲವು ರೀತಿಯಲ್ಲಿ ಕರಕುಶಲ ಕಲೆಗಳನ್ನು ನೋಡಬಹುದು. ಅಲಂಕರಣದಲ್ಲಿ ಅಲಂಕಾರಕ್ಕೆ ಸಂಬಂಧಿಸಿದ ಕಲೆಗಳನ್ನು, ಅಂದರೆ ಇಲ್ಲಿ ಉಡುಪು, ಉಡುಗೆ-ತೊಡುಗೆ, ಆಭರಣಗಳು, ಚಿತ್ರಕಲೆ, ರಂಗೋಲಿ ಮುಂತಾದವುಗಳನ್ನು ಒಳಗೊಂಡಿರುತ್ತವೆ. ಆರಾಧನಾ ಸಂಬಂಧಿ ಕರಕುಶಲ ಕಲೆಯಲ್ಲಿ ದೇವರು, ಧರ್ಮ ಮತ್ತು ಭೂತಗಳಿಗೆ ಸಂಬಂಧಿಸಿದಂತೆ ಕರಕುಶಲ ಕಲೆಗಳನ್ನು ನೋಡುತ್ತೇವೆ. ಇದರಲ್ಲಿ ದೀಪ, ಗಂಟೆ ಮುಂತಾದ ದೇವರಿಗೆ ಸಂಬಂಧಿಸಿದಂತ ಕರಕುಶಲ ಕಲೆಗಳು ಕಾಣಿಸುತ್ತವೆ. ಗೃಹೋಪಯೋಗಿ ಕರಕುಶಲ ಕಲೆಗಳಲ್ಲಿ ಗೃಹಗಳ ಅಲಂಕರಣಕ್ಕೆ ಸಂಬಂಧಿಸಿದಂತ ವಸ್ತುಗಳು ಒಳಗೊಳ್ಳುತ್ತವೆ. ಮನರಂಜನಾ ಸಂಬಂಧಿ ಕರಕುಶಲ ಕಲೆಗಳಲ್ಲಿ ವಿವಿಧ ವೇಷಗಳು, ವಾದ್ಯೋಪಕರಣಗಳು ಮನರಂಜನಾ ಪರಿಕರಗಳು ಈ ಭಾಗದಲ್ಲಿ ಕಾಣಸಿಗುತ್ತವೆ. ಅಂತೆಯೇ ವ್ಯವಸಾಯಕ್ಕೆ ಸಂಬಂಧಿಸಿದ ಕರಕುಶಲ ಕಲೆಗಳಲ್ಲಿ ವ್ಯವಸಾಯದ ಪರಿಕರಗಳನ್ನು ಒಳಗೊಂಡಿರುತ್ತವೆ.

ಕರಕುಶಲ ಕಲೆಗಳು ಇಂದಿನದ್ದಲ್ಲ, ಇವು ತನ್ನದೇ ಆದ ಹಿನ್ನೆಲೆಯನ್ನು ಹೊಂದಿವೆ. ಇದನ್ನು ಮಾನವನ ಬೆಳವಣಿಗೆಯ ವಿಕಾಸದಿಂದ ನೋಡಬಹುದು. "ಆದಿಮಾನವನು ಕೃಷಿಯನ್ನು ಪ್ರಧಾನ

[illegible]

[illegible]

[illegible]

[illegible]

ವೃತ್ತಿಯಾಗಿಸಿಕೊಂಡಂದಿನಿಂದಲೇ ಕರಕುಶಲ ಕಲೆಗಳು ಬೆಳಕು ಕಂಡವು ಎಂದು ಹೇಳಬಹುದು. ಕೈಚಳಕ ಬಳಸಿ ಆಕರ್ಷಕವೂ ಆದ ವಸ್ತುಗಳನ್ನು ತಯಾರಿಸುತ್ತಿದ್ದ ಕುಶಲಕರ್ಮಿ ಅದನ್ನು ಮುಖ್ಯ ವೃತ್ತಿಯಾಗಿಸಿಕೊಂಡಿದ್ದಾನೆ. ದೈಹಿಕ ದುಡಿಮೆ ಪ್ರಧಾನವಾದ ಕರಕುಶಲವಸ್ತು ತಯಾರಿಕೆ ಇಂದು ಸಣ್ಣ ಕೈಗಾರಿಕೆಯೆನಿಸಿದೆ."[೧] ಮನುಷ್ಯನಿಗೆ ಯಾವಾಗ ಕಲ್ಪನೆಗಳು ಬರಲು ತೊಡಗಿದವೋ ಅಂದಿನಿಂದಲೇ ತನ್ನ ಬೆಳವಣಿಗೆಯ ಜೊತೆ ಜೊತೆಯಲ್ಲಿ ಅಗತ್ಯಗಳನ್ನು ಸೃಷ್ಟಿಸಿಕೊಂಡು ಸಿಕ್ಕ ಅವಕಾಶಗಳನ್ನು ಉಪಯೋಗಿಸಿಕೊಂಡ. ಸೌಂದರ್ಯದ ಜೊತೆಗೆ ಅನುಕೂಲಗಳನ್ನು ಮಾಡಿಕೊಂಡ, ಆಗ ತನ್ನಲ್ಲಿದ್ದ ಕಲೆಯೊಂದಿಗೆ ಕರಕುಶಲ ಕಲೆಗಳನ್ನು ಸೃಷ್ಟಿಸಿಕೊಳ್ಳತೊಡಗಿದ. "ನಮ್ಮ ಗ್ರಾಮೀಣ ರೈತರು ವ್ಯವಸಾಯಕ್ಕೆ ಬಳಸುವ ನೇಗಿಲು ಈಚು, ನೊಗ, ಕುಳ, ಜಿಗಣೆ, ಈಚಿನ ಬೆಣೆ, ಮೇಣಿ, ತಲೆ ಹಿಡಿ, ಕಿತ್ತುಂಡೆ, ಜೊತ್ತಿಗೆ, ಕೂರಿಗೆಬಟ್ಟಲು, ಜಂಗಿನ ಸರ, ಎತ್ತಿನ ಜೂಲು, ಕೋಡಂಚು, ಹುಡಿಚೀಲ, ಊರುಗೋಲು, ಕೈನಳಗ, ಕನ್ನಿಕಂಬ ಇವೇ ಅಲ್ಲದೆ ಅಳತೆ ಮಾಡುವ ಸೋಲಗಿ, ಕಳಸಗಿ, ಪಡಗ, ಬಳ್ಳ, ಬೆಣ್ಣೆ ತೂಗುವ ಕೋಲು ಮುಂತಾದವುಗಳನ್ನು ಕಾಣಬಹುದಾಗಿದೆ."[೨] ಕೃಷಿಯನ್ನು ಯಾವಾಗ ಮಾನವ ಪ್ರಧಾನ ವೃತ್ತಿಯನ್ನಾಗಿ ಮಾಡಿಕೊಂಡನೋ ಅಂದಿನಿಂದಲೇ ಅದಕ್ಕೆ ಸಂಬಂಧಿಸಿದ ಉಪಕರಣಗಳನ್ನು ತಯಾರು ಮಾಡಿಕೊಳ್ಳಲು ಪ್ರಾರಂಭಿಸಿದ ಆನಂತರದಲ್ಲಿ ಹಲವು ರೀತಿಯ ಕರಕುಶಲ ಕಲೆಗಳು ಉಗಮಗೊಂಡವು.

ಆದಿಕಾಲದಿಂದ ಕರಕುಶಲಕಲೆಯು ಮಾನವನ ಬೆಳವಣಿಗೆಯ ಜೊತೆ ಜೊತೆಯಲ್ಲಿಯೇ ಬೆಳೆದು ಬಂದಿತು. ಇದು ಒಂದು ಅಧ್ಯಯನ ಶಿಸ್ತಾಗಿ ಬೆಳೆದು ಬಂದದ್ದು ಈಚೆಗೆ "ಕ್ರಿ.ಶ. ೧೮ ಮತ್ತು ೧೯ನೆಯ ಶತಮಾನದಲ್ಲಿ ಹಲವಾರು ದೇಶಗಳಲ್ಲಿ ಕಲೆಗಳನ್ನು ಕುರಿತು ಯಾವುದೇ ಚಟುವಟಿಕೆಗಳು ಪೂರ್ಣ ಪ್ರಮಾಣದಲ್ಲಿ ನಡೆದಿಲ್ಲವೆನ್ನಬಹುದು. ಆದರೆ ೧೯ನೆಯ ಶತಮಾನದ ಅಂತ್ಯದಲ್ಲಿ, ಸಾಮಾಜಿಕ ನೆಲೆಯಲ್ಲಿ ಕಲಾತ್ಮಕವಾಗಿ ಜಾಗೃತಿಯೊಂದು ಬೆಳೆಯತೊಡಗಿತು. ಇದಕ್ಕೆ ಕಾರಣ ಪೂಗಿನ್ ಮತ್ತು ರಸ್ಕಿನ್ ಹುಟ್ಟು ಹಾಕಿದ 'ಮಧ್ಯಕಾಲೀನ ಗಿಲ್ಡ್'ನ ಪ್ರಭಾವ ಇವರಿಬ್ಬರಿಗೂ ಸಿಕ್ಕ ಪ್ರೇರಣೆಗಳು ವ್ಹಿಲಿಯಂ ಮೋರಿಸ್ ಎಂಬುವನ ಯೋಜನೆಗಳಿಂದ. ಈ ಯೋಜನೆಗಳಿಂದಲೇ ಹಲವಾರು ಸಂಘ ಸಂಸ್ಥೆಗಳು ರೂಪಗೊಂಡವು. ಕರಕುಶಲಕಲೆಯ ಕುರಿತ ಯೋಜನೆಗಳು ಪ್ರಾರಂಭಗೊಂಡವು. ೧೮೮೦ರ ವೇಳೆಗಾಗಲೇ ಕರಕುಶಲ ವಸ್ತು ಪ್ರದರ್ಶನಗಳು ಲಂಡನ್ ಮತ್ತು ಬ್ರಿಸಲ್‌ಗಳಲ್ಲಿ ಪ್ರಾರಂಭಗೊಂಡವು."[೩] ಇದು ಒಂದು ಅಧ್ಯಯನವಾಗಿ ಕಲೆಯ ಸೂಕ್ಷ್ಮತೆ, ಕುಸರಿ ಕೆತ್ತನೆಯ ಕೆಲಸಗಳನ್ನು ಗುರುತಿಸಲು ಸಹಾಯಕವಾಯಿತು. ಆನಂತರ ಇದರ ಬಗೆಗಿನ ಹಲವು ರೀತಿಯ ಅಧ್ಯಯನಗಳು ಲೇಖನಗಳು ಕಾಣತೊಡಗಿದವು. ಈ ಅಧ್ಯಯನಗಳಲ್ಲಿ ಕಲೆಯ ಆದಿಯ ಬಗ್ಗೆ ತಿಳಿದುಕೊಳ್ಳಲು ಸಹಾಯಕವಾಯಿತು. ಕರಕುಶಲಕಲೆಯ ಆದಿಯ ಬಗ್ಗೆ ಹೇಳುವಾಗ ಕಸುಬುದಾರಿಕೆ ಮತ್ತು ಅದರ ಕೌಶಲ್ಯ ಮುಖ್ಯವಾಯಿತು. "ಕ್ರಿ.ಪೂ. ೩೨೦೦ ವರ್ಷಗಳ ತನಕ ಮಣ್ಣು ಮತ್ತು ಇಟ್ಟಿಗೆಗಳಿಂದ ಮನೆ ಕಟ್ಟುತ್ತಿದ್ದ ಇಲ್ಲಿನ ಓಡಾರಿಗಳು ಒಮ್ಮಿಂದೊಮ್ಮೆಗೆ ಎಂಬಂತೆ ಲೋಹ ಆಯುಧಗಳಿಂದ ಕಲ್ಲನ್ನು ಕಡಿದು ಅದ್ಭುತ ವಸ್ತುಗಳನ್ನು, ಶಿಲ್ಪಗಳನ್ನು ನಿರ್ಮಿಸತೊಡಗಿದರು. ಅಲ್ಲಿಂದ

[illegible]

ಮುಂದೆ ಅವರು ಕೇವಲ ಎರಡು ಮೂರು ಶತಮಾನಗಳ ಅವಧಿಯಲ್ಲಿ ಪಿರಾಮಿಡ್ ನಂತರ ಬೃಹತ್ ಸಮಾಧಿಗಳನ್ನು ರಚಿಸಿದರು. ಈ ಪಿರಾಮಿಡ್‌ಗಳು ಮೃತರ ಪರೋಹರ ಸಮಾಧಿಗಳು. ಸಮಾಧಿಗಳಲ್ಲಿ ಅವರು ತುಂಬಿಸಿದ ನಿತ್ಯೋಪಯೋಗಿ ವಸ್ತು, ಆಭರಣ, ಅಲಂಕಾರ, ಸಜ್ಜಿಕೆಗಳನ್ನೆಲ್ಲಾ ಕೂಡಿಸಿ, ಮಾಡಿದ ವಿವಿಧ ರೀತಿಯ ಅಲಂಕಾರಿಕ ಒಡವೆಗಳು ಆ ಕಾಲದ ವೃತ್ತಿಕಾರರ ಅದ್ಭುತ ಕರಕೌಶಲ್ಯವನ್ನು ತೋರುತ್ತವೆ."[೪] ಆ ಕಾಲದಲ್ಲಿಯೇ ಸುಂದರ ಒಡವೆಗಳನ್ನು ಲೋಹದಿಂದ ನಿರ್ಮಿಸುತ್ತಿದ್ದು ಮತ್ತು ಮರ ಕಲ್ಲುಗಳಲ್ಲಿ ಕೆತ್ತಿದ ಕೆತ್ತನೆಯ ಕುಸರಿ ಕಲೆಗಳು ಕಾಣಿಸುತ್ತವೆ. ಹಾಗಾಗಿ ಕರಕುಶಲಕಲೆ ಮನುಷ್ಯನಿಗೆ ಸೌಂದರ್ಯ ಕಲ್ಪನೆ ಯಾವಾಗ ಬಂತೋ ಅಂದಿನಿಂದಲೇ ಉಗಮಗೊಂಡಿತು ಎಂದು ಹೇಳಬಹುದು.

"ಭಾರತದಲ್ಲಿ ಜನಪದ ಕಲೆ ಹಾಗೂ ಕರಕುಶಲಕಲೆ ಜನಜೀವನದ ಅವಿಬಾಜ್ಯ ಅಂಗವಾಗಿ ಬೆಳೆದು ಬಂದಿದೆ. ನಮ್ಮ ಮನೆಯಲ್ಲಿ ನಿತ್ಯ ಬಳಸುವ ಸಾಮಗ್ರಿಗಳು ಹಬ್ಬ ಹುಣ್ಣಿಮೆ, ಸಡಗರದ ದಿನಗಳಲ್ಲಿ ಉತ್ಸವ ಹಾಗೂ ವಿಧಿವಿಧಾನಗಳಲ್ಲಿ ಬಳಸುವ ವಿಶೇಷ ವಸ್ತುಗಳು ನಮ್ಮ ಜನರ ಕರಕುಶಲಕಲೆಯ ಅಭಿವ್ಯಕ್ತಿ ಮಾಧ್ಯಮಗಳಾಗಿ ನೂರಾರು, ಸಾವಿರಾರು ವರ್ಷಗಳಿಂದ ಸಂಸ್ಕೃತಿ ಸಂಪ್ರದಾಯದ ಬೆಳವಣಿಗೆಯ ಜೊತೆಗೆ ಬೆಳೆದು ಬಂದದ್ದನ್ನು ನಾವು ಗಮನಿಸಬಹುದಾಗಿದೆ."[೫] ಕರಕುಶಲಕಲೆ ಪ್ರತಿಯೊಬ್ಬ ಮಾನವನ ಅಗತ್ಯ ಪೂರೈಸಿಕೊಳ್ಳುವಲ್ಲಿ ಹುಟ್ಟಿಕೊಂಡಿದೆ. ಇದು ಹುಟ್ಟಿನಲ್ಲಿ ಜನಾಂಗೀಯವಾಗಲಿ, ಸಮುದಾಯ ಕೇಂದ್ರಿತವಾಗಲಿ ಇರಲಿಲ್ಲ. ಕೆಲವು ಕರಕುಶಲಕಲೆಗಳು ಇಂದು ಸಮುದಾಯ ಕೇಂದ್ರಿತವಾಗಿವೆ. ಇದನ್ನು ನಾವು ಕುಲಕಸುಬಿನ ಹಿನ್ನೆಲೆಯಿಂದ ನೋಡಬಹುದಾಗಿದೆ.

ಕರಕುಶಲಕಲೆ ಆಧುನಿಕ ಜಗತ್ತಿನ ವಿಶಿಷ್ಟ ಕಲೆಯಾಗಿ ಒಂದು ವರ್ಗದ ಜನರನ್ನು ಆಕರ್ಷಿಸುತ್ತದೆ. ಈ ಕಲೆಗಳು ಒಂದು ರೀತಿಯಲ್ಲಿ ಪ್ಯಾಷನ್ ಆಗಿ ಕಾರ್ಯನಿರ್ವಹಿಸುತ್ತಾ ಇದೆ. ಕರಕುಶಲ ವಸ್ತುಗಳೆಂದರೆ ಹೆಚ್ಚು ಬೆಲೆ ಬಾಳುವ, ಕೇವಲ ಶ್ರೀಮಂತರಿಗಾಗಿ ಮಾಡಿದ ಭೋಗದ ವಸ್ತುಗಳು ಎನ್ನುವುದಲ್ಲ. "ಕರಕುಶಲ ವಸ್ತುಗಳೆಂದರೆ ಮಾನವನ ಕೌಶಲ್ಯದಿಂದ ಕೈಯಿಂದ ಮಾಡಿದ ವಸ್ತುಗಳು ಎಂದೇ ಹೇಳಬಹುದು. ಈ ವಿವಿಧ ಕರಕುಶಲ ವಸ್ತುಗಳು ಮಾನವನಲ್ಲಿಯ ಕಲೆಯನ್ನು ಪ್ರದರ್ಶಿಸುವ ಮಾಧ್ಯಮಗಳು ಮಾತ್ರ. ಅವು ಬೆಲೆಬಾಳುವ ವಸ್ತುಗಳಿಂದ ಮಾಡಿದಾಗ ಕ್ರಯ ಹೆಚ್ಚಾಗಬಹದೇ ಹೊರತು ನಮ್ಮ ದಿನನಿತ್ಯದ ಸಾಮಾನ್ಯ ಜನರ ಬಳಕೆಯ ವಸ್ತುಗಳಲ್ಲಿ ಕಲಾತ್ಮಕ ವಸ್ತುಗಳನ್ನು ನಾವು ನೋಡುತ್ತೇವೆ."[೬] ಸೌಂದರ್ಯದ ಮೂಲದಿಂದ ಕರಕುಶಲಕಲೆಗಳು ಉಗಮಗೊಂಡಿವೆ. ಈ ಕರಕುಶಲಕಲೆಗಳು ಪ್ರತಿ ಸಮುದಾಯಗಳಲ್ಲಿ ಕಂಡು ಬಂದರೂ ಸಮುದಾಯಗಳ ಅನನ್ಯತೆಗಳು ಕರಕುಶಲಕಲೆಗಳಲ್ಲಿ ಕಾಣಿಸುತ್ತವೆ. ಅವುಗಳನ್ನು ಪಾರಂಪರಿಕ ಹಿನ್ನೆಲೆಯನ್ನೊಳಗೊಂಡ ಕರಕುಶಲಕಲೆಗಳಲ್ಲಿ ಕಾಣಬಹುದು.

ಆಧುನಿಕರಲ್ಲಿ, ಜನಪದರಲ್ಲಿ ಕರಕುಶಲಕಲೆಗಳು ಕಂಡುಬರುವಂತೆ ಕರ್ನಾಟಕ ಬುಡಕಟ್ಟು ಸಮುದಾಯಗಳಲ್ಲೂ ಕೂಡ ಕರಕುಶಲಕಲೆಗಳನ್ನು ನೋಡಬಹುದಾಗಿದೆ. ಕರ್ನಾಟಕ ಬುಡಟ್ಟು ಚಿತ್ರಕಲೆಯನ್ನು ಕೇಂದ್ರೀಕರಿಸಿ ಅಧ್ಯಯನ ಮಾಡುತ್ತಿರುವ ಈ ಅಧ್ಯಯದಲ್ಲಿ ಚಿತ್ರಕಲೆಯೊಂದಿಗೆ ಅವರ ಕರಕುಶಲಕಲೆಯನ್ನು

[illegible]

[illegible]

ಇಲ್ಲಿಯ ಅಧ್ಯಯದೊಂದಿಗೆ ಸೇರಿಸಲಾಗಿದೆ. ಏಕೆಂದರೆ ಚಿತ್ರಕಲೆ, ಕರಕುಶಲ ಕಲೆ ಇವರ ಬದುಕು ಜೊತೆಯಲ್ಲಿ ಇವೆ. ಇವು ತಮ್ಮ ಸಮುದಾಯಗಳಿಗೆ ಪೂರಕವಾಗಿವೆ. ಹಾಗಾಗಿ ಕರಕುಶಲಕಲೆಯನ್ನು ಒಂದು ಅಧ್ಯಯನವನ್ನಾಗಿ ಇಲ್ಲಿ ಮಾಡಿಕೊಳ್ಳಲಾಗಿದೆ.

ಕರ್ನಾಟಕ ಬುಡಕಟ್ಟು ಕರಕುಶಲ ಕಲೆಯನ್ನು ಅಧ್ಯಯನದ ದೃಷ್ಟಿಯಿಂದ ಐದು ರೀತಿಯಲ್ಲಿ ವಿಂಗಡಿಸಿಕೊಳ್ಳಲಾಗಿದೆ.

೧. ಬೇಟೆಗೆ ಸಂಬಂಧಿಸಿದ ಕರಕುಶಲಕಲೆ
೨. ಆಚರಣಾ ಸಂಬಂಧಿ ಕರಕುಶಲಕಲೆ
೩. ವೃತ್ತಿಗೆ ಸಂಬಂಧಿ ಕರಕುಶಲಕಲೆ
೪. ಅಲಂಕರಣ ಸಂಬಂಧಿ ಕರಕುಶಲಕಲೆ
೫. ಮಕ್ಕಳ ಆಟಿಕೆ ಸಾಮಗ್ರಿ ಕರಕುಶಲಕಲೆ

ಬಿದಿರು, ಬೆತ್ತ, ಮರ, ಬೇರು ಹಲವು ಬಗೆಯ ಹುಲ್ಲುಗರಿ, ಮಣ್ಣು, ಕಲ್ಲು, ಚರ್ಮ, ಬಟ್ಟೆ, ಕಾಗದ, ಸೂಲಂಗಿ ಬೆಂಡು. ಪ್ರಾಣಿಗಳ ಕೊಂಬು, ಕೂದಲು ಮರದ ಅಂಟು ಮುಂತಾದವುಗಳನ್ನು ಈ ಕರಕುಶಲಕಲೆಗಳಲ್ಲಿ ಬಳಸಿಕೊಂಡಿರುವುದನ್ನು ನೋಡಬಹುದಾಗಿದೆ.

೧ ಬೇಟೆಗೆ ಸಂಬಂಧಿಸಿದ ಕರಕುಶಲಕಲೆ : ಕರ್ನಾಟಕದ ಪ್ರತಿಯೊಂದು ಬುಡಕಟ್ಟು ಸಮುದಾಯವೂ ಕೂಡ ಮಾಂಸಹಾರಿ ಆಹಾರ ಪದ್ಧತಿಯನ್ನು ಅನುಸರಿಸುತ್ತಿದೆ. ಈ ಅಧ್ಯಯನಕ್ಕೆ ಒಳಪಡುವ ಎಲ್ಲಾ ಬುಡಕಟ್ಟು ಸಮುದಾಯಗಳು ಕಾಡಿನಲ್ಲಿ ಬದುಕು ನಡೆಸುತ್ತಿವೆ. ಹಿಂದೆ ಇವರಲ್ಲಿ ಬೇಟೆಯು ಒಂದು ಸಂಸ್ಕೃತಿಯಾಗಿ ಇತ್ತು. ಇಂದು ಪ್ರಾಣಿಗಳನ್ನು ಬೇಟೆಯಾಡುವುದನ್ನು ಸರ್ಕಾರ ನಿಷೇಧಿಸಿರುವುದರಿಂದ ಬೇಟೆಯು ಬುಡಕಟ್ಟು ಸಮುದಾಯಗಳಲ್ಲಿ ಇಂದು ಕಡಿಮೆಯಾಗಿದೆ. ಆದರೂ ತಮ್ಮ ಬದುಕಿನಲ್ಲಿ ರಕ್ಷಣೆಗೆ ಮತ್ತು ಆಹಾರಕ್ಕೆ ಬೇಟೆಯುನ್ನು ಇನ್ನೂ ಇಟ್ಟುಕೊಂಡಿರುವುದನ್ನು ನೋಡಬಹುದು. ಈ ಬೇಟೆಗೆ ಸಂಬಂಧಿಸಿದಂತೆ ಸಲಕರಣಗಳನ್ನು ಎಲ್ಲಾ ಬುಡಕಟ್ಟು ಸಮುದಾಯದವರೂ ಕೂಡ ತಮ್ಮದೇ ಆದಂತ ರೀತಿಯಲ್ಲಿ ತಯಾರು ಮಾಡಿಕೊಳ್ಳುವುದನ್ನು ನೋಡುತ್ತೇವೆ. ಅವುಗಳಲ್ಲಿ ಪ್ರಾಣಿಗಳಿಗೇ ಬೇಟೆಯ ಸಲಕರಣೆಗಳನ್ನು ತಯಾರು ಮಾಡಿಕೊಂಡಂತೆ ಪಕ್ಷಿಗಳನ್ನು ಹಿಡಿಯಲು ಮತ್ತು ಮೀನುಗಳನ್ನು ಹಿಡಿಯಲು ಸಲಕರಣೆಗಳನ್ನು ತಯಾರು ಮಾಡಿಕೊಳ್ಳುತ್ತಾರೆ. ಇವು ಪ್ರತಿ ಬುಡಕಟ್ಟು ಸಮುದಾಯಗಳಲ್ಲೂ ಭಿನ್ನತೆಯನ್ನು ಹೊಂದಿರುವುದನ್ನು ನೋಡಬಹುದು.



ಯರವರು ಬೇಟೆಗೆ ಬಳಸುವ ಪರಿಕರಗಳು



ಮೀನುಗಳನ್ನು ಹಿಡಿಯಲು ಬಲೆಗಳನ್ನು ಇವರೇ ಹೆಣೆಯುತ್ತಾರೆ. ಕೂಳಿಗಳನ್ನು ತಯಾರು ಮಾಡಿಕೊಳ್ಳುತ್ತಾರೆ. ಈ ಕೂಳಿಗಳಲ್ಲಿ ಇರಗೂಳಿ, ಸೊಸಲು ಗೂಳಿ ಎಂಬ ಬಗೆಗಳಿವೆ. ಇದನ್ನು ಕೆರೆಯಲ್ಲಿ ಮೀನು ಹಿಡಿಯಲು ಜೊತೆಗೆ ಗಾಳವನ್ನು ಬಳಸಿಯೂ ಮೀನನ್ನ ಹಿಡಿಯುತ್ತಾರೆ. ಇದು ಒಂದು ವಿಧಾನ ಮತ್ತೊಂದು ವಿಧಾನ ಬಲೆಯನ್ನು ಬಳಸಿ ಮೀನನ್ನು ಹಿಡಿಯುವುದು. ಮೀನನ್ನು ಹಿಡಿಯುವ ಬಲೆಗಳು ಮೀನಿನ ಗಾತ್ರಕ್ಕೆ ಅನುಗುಣವಾಗಿರುತ್ತವೆ. ಇದಕ್ಕೆ ಸಂಬಂಧಿಸಿದಂತೆ ಸರಕನ್ನು ತಂದು ಅದನ್ನು ಸಿದ್ಧಪಡಿಸಿಕೊಂಡು ಬೇಟೆಯ ಸಲಕರಣೆಗಳನ್ನು ತಯಾರುಮಾಡಿಕೊಳ್ಳುತ್ತಾರೆ.

ಹಲವು ರೀತಿಯ ವಿಧಾನಗಳನ್ನು ಬಳಸಿ ಹಕ್ಕಿಗಳನ್ನು ಹಿಡಿಯುತ್ತಾರೆ. ಬಿದಿರನ್ನು ಸಣ್ಣ, ಸಣ್ಣ ಕಡ್ಡಿಯನ್ನಾಗಿ ಮಾಡಿಕೊಂಡು ಅವುಗಳ ಒಂದು ತುದಿಯ ಭಾಗಕ್ಕೆ ಮರದ ಅಂಟನ್ನು ಅಂಟಿಸಿ ಇನ್ನೊಂದು ಭಾಗವನ್ನು ಚೂಪುಮಾಡಿ ಹಕ್ಕಿಗಳು ಕೂರುವ ಜಾಗಕ್ಕೆ ಮರಗಳ ಜಾಗಕ್ಕೆ ಸಿಕ್ಕಿಸಿ ಹಕ್ಕಿಗಳನ್ನು ಹಿಡಿಯುತ್ತಾರೆ. ಮರದ ಅಂಟು ಹಕ್ಕಿಗಳು ರಕ್ಕೆ ಕಾಲುಗಳಿಗೆ ಅಂಟಿಕೊಂಡು ಸಿಕ್ಕಿ ಬೀಳುತ್ತವೆ. ಹಾಗೆಯೇ ಕ್ಯಾಟರ್ ಬಿಲ್ಲಿನಿಂದ ಹಕ್ಕಿಗಳನ್ನು ಹೊಡೆದು ಹಿಡಿಯುತ್ತಾರೆ. ಹೀಗೆ ಕೆಲವು ತಂತ್ರಗಳನ್ನು, ಸಾಧನಗಳನ್ನು ಬಳಸಿ ಹಿಡಿಯುತ್ತಾರೆ. ಬಿಲ್ಲುಗಳಿಗೆ ಸಣ್ಣ, ಸಣ್ಣ ಬಾಣವನ್ನು ಬಳಸಿ ಹಕ್ಕಿಯನ್ನು ಹಿಡಿಯುವುದರ ಜೊತೆಗೆ ಮಣ್ಣಿನ ಉಂಡೆಗಳನ್ನು ತಯಾರುಮಾಡಿಕೊಂಡು ಹಕ್ಕಿಗಳನ್ನು, ಪ್ರಾಣಿಗಳನ್ನು ಬೇಟೆಯಾಡುತ್ತಾರೆ. ಈ ಸಾಧನಗಳನ್ನು ಆಹಾರ ಬೆಳೆಗಳನ್ನು ಹಾಳು ಮಾಡಲು ಬಂದ ಪ್ರಾಣಿಗಳನ್ನು ಓಡಿಸಲು ಮತ್ತು ಹಿಡಿಯಲು ಬಳಸುತ್ತಾರೆ.

೨ ಆಚರಣಾತ್ಮಕ ಕರಕುಶಲಕಲೆ : ಕರ್ನಾಟಕ ಬುಡಕಟ್ಟು ಬದುಕಿನಲ್ಲಿ ಆಚರಣೆಗಳು ಬೆರತು ಹೋಗಿವೆ. ಆಚರಣೆಗಳಿಗೆ ಸಂಬಂಧಿಸಿದ ಕರಕುಶಲಕಲೆಗಳನ್ನು ನೋಡಬಹುದು. ಇದರಲ್ಲಿ ಮುಖವಾಡಗಳು ಮುಖವರ್ಣಿಕೆಗಳು ಕಂಡುಬರುತ್ತವೆ. ಕೃಷಿಗೆ ಸಂಬಂಧಿಸಿದ ಹಬ್ಬಗಳಲ್ಲಿ, ಸಮುದಾಯಗಳಿಗೆ ಸಂಬಂಧಿಸಿದ ಹಬ್ಬಗಳಲ್ಲಿ ತಯಾರಿಸಿಕೊಂಡ ಕರಕುಶಲಕಲೆಗಳು ಕಾಣಸಿಗುತ್ತವೆ. ಇವುಗಳನ್ನ ಹಾಲಕ್ಕಿ ಒಕ್ಕಲಿಗರ ಸುಗ್ಗಿ ಕುಣಿತ, ಗೌಳಿಗರ, ಕುಣಬಿಗಳ ಹೋಳಿ ಹುಣ್ಣಿಮೆ ಕುಣಿತ, ಸಿದ್ಧಿಯರ ಪುಗಡಿಕುಣಿತ, ಯರವರ ದುಡಿ ಕುಣಿತ ಮುಂತಾದವುಗಳಲ್ಲಿ ನೋಡಬಹುದು. ಹಾಲಕ್ಕಿ ಒಕ್ಕಲಿಗರಲ್ಲಿ ತುರಾಯಿ ಮನುಷ್ಯನ ಕುಣಿತ, ಮುಖವಾಡಿಕೆ, ಕೀಲು ಕುದುರೆ ಕುಣಿತಗಳಲ್ಲಿ ನೋಡಬಹುದು. ಬಹುತೇಕ ಬುಡಕಟ್ಟು ಸಮುದಾಯಗಳ ಕುಣಿತಗಳಲ್ಲಿ ಬಳಸುವ ವಾದ್ಯ ಪರಿಕರಗಳನ್ನು ಇವರೇ ತಯಾರುಮಾಡಿಕೊಳ್ಳುತ್ತಾರೆ. ಇವುಗಳನ್ನು ಯರವರ ದುಡಿ, ಚೀನಿ, ಸಿದ್ಧಿಯರ ಪುಗಡಿ, ಹಾಲಕ್ಕಿಗಳ ಗುಮಟೆ ಮುಂತಾದ ವಾದ್ಯ ಪರಿಕರಗಳು ಕಾಣಸಿಗುತ್ತವೆ.

೩ ವೃತ್ತಿಗೆ ಸಂಬಂಧಿಸಿದ ಕರಕುಶಲಕಲೆಗಳು : ಇದರಲ್ಲಿ ವೃತ್ತಿಗೆ ಸಂಬಂಧಿಸಿದಂತೆ ತಯಾರಾದ ಕರಕುಶಲಕಲೆಗಳು ಕಾಣಿಸುತ್ತವೆ. ಇದರಲ್ಲಿ ವ್ಯವಸಾಯಕ್ಕೆ ಸಂಬಂಧಿಸಿದಂತೆ ಕರಕುಶಲಕಲೆಗಳನ್ನು ನೋಡಬಹುದು. ಇದನ್ನು ಜೀವನೋಪಾಯ ಕರಕುಶಲಕಲೆಗಳೆಂದು ಕರೆಯಬಹುದು. ಕರ್ನಾಟಕದ ಕೆಲವು

[illegible]


[illegible]

[illegible]

[illegible]

ಬುಡಕಟ್ಟು ಸಮುದಾಯಗಳು ಕರಕುಶಲಕಲೆಗಳನ್ನು ವೃತ್ತಿಯ ಮೂಲವಾಗಿ ಇಟ್ಟುಕೊಂಡಿದ್ದಾರೆ. ಮಂಕರಿ, ಬುಟ್ಟಿ, ಹಲವು ವಿನ್ಯಾಸಗಳ ಬುಟ್ಟಿ, ಚಾಪೆ, ಮೊರ ಮುಂತಾದ ವಸ್ತುಗಳನ್ನು ತಯಾರಿಸುತ್ತಾರೆ. ಇವುಗಳನ್ನು ಮುಖ್ಯವಾಗಿ ಸೋಲಿಗರಲ್ಲಿ, ಕುಣಬಿಯರಲ್ಲಿ, ಹಸಲರಲ್ಲಿ, ಸಿದ್ಧಿಯರಲ್ಲಿ, ಯರವರಲ್ಲಿ, ಪಣಿಯರಲ್ಲಿ ಕಾಣಬಹುದಾಗಿದೆ. ಸೋಲಿಗರ ಕರಕುಶಲ ವಸ್ತುಗಳನ್ನು ಮಲೆಮಾದೇಶ್ವರ ಬೆಟ್ಟ, ಬಿಳಿಗಿರಿರಂಗನ ಬೆಟ್ಟಗಳಲ್ಲಿ ನೋಡಬಹುದಾಗಿದೆ. ಇವನ್ನು ಬಿದಿರು ಮತ್ತು ಬೆತ್ತಗಳಿಂದ ತಯಾರು ಮಾಡಿಕೊಳ್ಳುವುದನ್ನು ನೋಡಬಹುದು. ಕೃಷಿಗೆ ಸಂಬಂಧಿಸಿದಂತೆ ಹಲವು ಬಗೆಯ ಸಲಕರಣೆಗಳನ್ನು ಕೂಡ ಇವರು ತಯಾರುಮಾಡಿಕೊಳ್ಳುತ್ತಾರೆ. ನೇಗಿಲು, ನೊಗ, ಈಚು, ಮೇಣಿ, ಕುಂಟೆ ಮುಂತಾದವುಗಳನ್ನು ನೋಡಬಹುದು.


ಕುಣಬಿಯರ ಕಲಾತ್ಮಕ ಬುಟ್ಟಿಗಳು


ಗೃಹೋಪಯೋಗಿ ವಸ್ತುಗಳ ಮೇಲೆ ದೀವರ ಕಲೆ

ಳ **ಅಲಂಕರಣಕ್ಕೆ ಸಂಬಂಧಿಸಿದ ಕರಕುಶಲಕಲೆಗಳು :** ಇವರೂ ಕೂಡ ಅಲಂಕರಣ ಪ್ರಿಯರು. ಇಲ್ಲಿ ಗೃಹಾಲಂಕಾರ ಕರಕುಶಲಕಲೆ. ಉಡುಪುಗಳು, ವೇಷಭೂಷಣಗಳು ಮುಂತಾದವುಗಳು ಕಂಡುಬರುತ್ತವೆ. ಇಲ್ಲಿ ಸೌಂದರ್ಯ ಕಲ್ಪನೆ ಹೆಚ್ಚು ಕೆಲಸಮಾಡುತ್ತದೆ. "ಕಲೆಯು ಸೌಂದರ್ಯವನ್ನು ಸೃಷ್ಟಿಸುತ್ತದೆ. ಅದಕ್ಕೂ ರೂಪವನ್ನು ಸುಂದರಗೊಳಿಸುತ್ತದೆ. ಅವ್ಯಕ್ತವನ್ನು ವ್ಯಕ್ತಗೊಳಿಸುತ್ತಾರೆ. ಅರ್ಥಾತ್ ಅದು ಮನಸ್ಸಿಗೆ ಆನಂದ ಕೊಡುವ ವಿಶಿಷ್ಟ ಪ್ರೇರಣೆಯಾಗಿದೆ. ಮನೋರಂಜನೆಯು ಸಾಧಾರಣ ಮಾತಲ್ಲವಾದರೂ ಕಲೆಯು ಮನಸ್ಸನ್ನು ಸುಸಂಸ್ಕೃತಗೊಳಿಸುತ್ತದೆಯೂ ಕೂಡ. ಸೃಷ್ಟಿಯು ಕಲೆಯ ಸಾರವಾಗಿದೆ. ಹಾಗೂ ನವ ಚೈತನ್ಯದ ಹುಟ್ಟು ಹೊಸ ಆಯಾಮ ಮತ್ತು ಸ್ಫೂರ್ತಿಯ ಉದಯ. ಇವು ಸೃಷ್ಟಿಯ ಸರ್ವಸ್ವವಾಗಿವೆ."[2] ಸೌಂದರ್ಯವು ಅಲಂಕರಣಕ್ಕೆ ಸಂಬಂಧವನ್ನು ಹೊಂದಿದೆ. ಇಲ್ಲಿನ ಬುಡಕಟ್ಟು ಸಮುದಾಯಗಳಲ್ಲಿ ದೈಹಿಕ ಅಲಂಕರಣ ಮತ್ತು ಗೃಹೋಪಯೋಗಿ ಅಲಂಕರಣ ಎಂದು ವಿಂಗಡಿಸಿಕೊಳ್ಳಬಹುದು. ದೇಹದ ಅಲಂಕರಣಕ್ಕೆ ಸಂಬಂಧಿಸಿದವರಿಂದ ಕರಕುಶಲಕಲೆಗಳನ್ನು ಮಾಡಿಸುತ್ತಾರೆ. ಇದು ತಮ್ಮ ಸಮುದಾಯಗಳ ಸಂಸ್ಕೃತಿಯನ್ನು ಪ್ರತಿನಿಧಿಸುತ್ತವೆ. ಹಾಗೆಯೇ ಮನೆಗಳಿಗೆ ಸಂಬಂಧಿಸಿದ





ಅಲಂಕಾರವನ್ನು ಪ್ರತಿ ಬುಡಕಟ್ಟು ಸಮುದಾಯಗಳೂ ಕೂಡ ತಮ್ಮದೇ ಆದಂತ ಸಂಸ್ಕೃತಿಯ ಅನನ್ಯತೆಯನ್ನು ಪ್ರತಿನಿಧಿಸುವ ಅಲಂಕರಣ ಕರಕುಶಲ ವಸ್ತುಗಳನ್ನು ಹೊಂದಿರುತ್ತವೆ.

ಬುಡಕಟ್ಟು ಸಮುದಾಯಗಳು ಕಾಡಿನ ಸಂಪರ್ಕದಲ್ಲಿ ಬದುಕನ್ನು ನಡೆಸುತ್ತಿವೆ. ಅಂತೆಯೇ ಕೃಷಿಯನ್ನೇ ಹೆಚ್ಚಾಗಿ ಅಲಂಬಿಸಿದ್ದಾರೆ. ಕಾಡಿನಲ್ಲಿ ಬದುಕುತ್ತಿರುವ ಇವರಿಗೆ ಕಾಡುಪ್ರಾಣಿಗಳ ಕೊಂಬುಗಳು ಸಿಗುತ್ತವೆ. ಅವುಗಳ ಬೇಟೆಯ ಸಂದರ್ಭದಲ್ಲಾಗಬಹುದು. ಇಲ್ಲವೆ ಅವು ಸಹಜವಾಗಿ ಸತ್ತ ಸಂದರ್ಭದಲ್ಲಾದರು ಆಗಬಹುದು. ಅವುಗಳ ಕೋಡುಗಳನ್ನು, ಮನೆಯ ಅಲಂಕರಣಕ್ಕೆ ತಕ್ಕಂತೆ ಅವುಗಳಿಗೆ ಒಂದು ರೂಪವನ್ನು ಕೊಡುತ್ತಾರೆ. ತಮ್ಮ ಭಾವನೆಗೆ ತಕ್ಕಂತೆ ಕರಕುಶಲಕಲೆಗಳನ್ನು ಅಲ್ಲಿ ತುಂಬುತ್ತಾರೆ. ಜೊತೆಗೆ ಬತ್ತದ ಕೊಯ್ಲಿನ ಸಂದರ್ಭದಲ್ಲಿ ಬತ್ತದ ತೆನೆಗಳಿಂದ ಬಾಗಿಲ ಅಲಂಕರಣಕ್ಕೆ, ಮನೆಯ ಅಲಂಕರಣಕ್ಕೆ ಹಲವು ರೀತಿಯಲ್ಲಿ ಕರಕುಶಲಕಲೆಗಳನ್ನು ತಯಾರುಮಾಡುತ್ತಾರೆ. ಹಾಗೆಯೇ ಪ್ರಾಕೃತಿಕವಾಗಿ ಸಿಗುವ ನೊಣಬೆಹುಲ್ಲು, ಬತ್ತದ ಹುಲ್ಲು, ಭತ್ತ ಮುಂತಾದವುಗಳಿಂದ ಹಲವು ರೀತಿಯಲ್ಲಿ ತಮ್ಮ ಕೌಶಲ್ಯಕ್ಕೆ ತಕ್ಕಂತೆ ಹಲವು ರೀತಿಯಲ್ಲಿ ಕರಕುಶಲ ತಯಾರುಮಾಡಿ ಮನೆಯನ್ನು ಸಿಂಗರಿಸುವುದನ್ನು ನೋಡುತ್ತೇವೆ. ಕರ್ನಾಟಕ ಬುಡಕಟ್ಟು ಸಮುದಾಯಗಳ ಕರಕುಶಲಕಲೆಯನ್ನು ನೋಡುವಾಗ ಇಲ್ಲಿ ಸಂಪೂರ್ಣವಾಗಿ ಪ್ರಾಕೃತಿಕ ಸಂಪನ್ಮೂಲಗಳನ್ನು ಬಳಸಿಕೊಂಡಿರುವುದು ಕಾಣಸಿಗುತ್ತವೆ.

೫ ಮಕ್ಕಳ ಆಟಿಕೆ ಸಾಮಗ್ರಿ ಕರಕುಶಲಕಲೆ



ಗೊಂಡರ ಮಕ್ಕಳ ಆಟಿಕೆಗಳು

ಮಕ್ಕಳ ಆಟದ ವಸ್ತುಗಳನ್ನು ಇಲ್ಲಿ ನೋಡಬಹುದಾಗಿದೆ. ಇಲ್ಲಿ ಮಕ್ಕಳ ಭಾವನೆಗಳು ಕಾಣಸಿಗುತ್ತವೆ. ಕಾಡಿನಲ್ಲಿ ವಾಸಿಸುತ್ತಿರುವ ಇವರಿಗೆ ನಗರದ ವಸ್ತುಗಳು, ವಾಹನಗಳು ಇವರನ್ನು ಆಕರ್ಷಿಸುತ್ತವೆ. ಅವು ಕರಕುಶಲಕಲೆಯಾಗಿ ಹೊರಹೊಮ್ಮುತ್ತವೆ. ಅಂತೆಯೇ ಆಟಕ್ಕೆ ಅವುಗಳನ್ನು ಬಳಸಿಕೊಳ್ಳುತ್ತಾರೆ. ತಾವು ಕಂಡ ಪ್ರಾಣಿಗಳ ಮತ್ತು ವಸ್ತುಗಳನ್ನು ಮರದಿಂದ, ಮಣ್ಣಿನಿಂದ ಮಾಡಿಕೊಂಡು ಆಟ ಆಡುವುದನ್ನು ಇಲ್ಲಿ ನೋಡಬಹುದಾಗಿದೆ.

ಮಕ್ಕಳ ಆಟಕ್ಕಾಗಿ ಮಕ್ಕಳೇ ಸಾಮಗ್ರಿಗಳನ್ನು ತಯಾರುಮಾಡಿಕೊಳ್ಳುವುದು ಒಂದು ರೀತಿಯಾದರೆ ಮತ್ತೊಂದು ರೀತಿಯಲ್ಲಿ ಪೋಷಕರು ಆಟದ ಸಾಮಗ್ರಿಗಳನ್ನು ತಯಾರುಮಾಡಿಕೊಡುತ್ತಾರೆ. ಮತ್ತು ಇಲ್ಲಿ ಸಂಬಂಧಿಸಿದ ಆಟಗಳ ಸಲಕರಣೆಗಳನ್ನು ತಯಾರಿಸಿಕೊಳ್ಳುತ್ತಾರೆ. ಹುಣಸೇ ಬೀಜದ ಮಣೆ, ಬುಗುರಿ, ಚಿಣ್ಣಿದಾಂಡು, ಗಾಡಿ, ಎರೋಪ್ಲೇನ್, ಜೀಪು ಮುಂತಾದವುಗಳು ಕಾಣಸಿಗುತ್ತವೆ. ಇವೆಲ್ಲವು ಮಕ್ಕಳ ಆಟಕ್ಕೆ ಸಂಬಂಧಪಟ್ಟಂತ ವಸ್ತುಗಳು ಆಗಿವೆ. ಆಧುನಿಕ ಜಗತ್ತಿನಲ್ಲಿ ಮಕ್ಕಳ ಆಟದ ವಸ್ತುಗಳು



ಅನೇಕಾನೇಕ ರೀತಿಯಲ್ಲಿ ಬಂದಿವೆ. ಇವುಗಳನ್ನು ಪಡೆಯುವವರು ಹಲವು ರೀತಿಯಲ್ಲಿ ಸಾಮಗ್ರಿಗಳನ್ನು ಹೊಂದಿದ್ದರೆ ಬುಡಕಟ್ಟು ಸಮುದಾಯಗಳು ತಮ್ಮ ಕೈಯಿಗೆ ಎಟುಕುವ ಆಟದ ಸಾಮಗ್ರಿಗಳನ್ನು ತಾವೇ ತಯಾರುಮಾಡಿಕೊಳ್ಳುವುದು ಇಲ್ಲಿ ವಿಶೇಷವಾಗಿ ಕಾಣಸಿಗುತ್ತವೆ.

ಅಡಿಟಿಪ್ಪಣಿಗಳು

೧. ಬೆನಕನಹಳ್ಳಿ, ಜಿ. ನಾಯಕ, ಕರ್ನಾಟಕ ಕಲೆಗಳು, ಮೂರನೇ ಸಂಪುಟ, ಪುಟ: ೭

೨. ಪಿ.ಆರ್. ತಿಪ್ಪೇಸ್ವಾಮಿ, ಸುವರ್ಣ ಜಾನಪದ, ಪುಟ: ೧೭೫

೩. ಪ್ರ.ಸಂ. ತಿಪ್ಪೇರುದ್ರಸ್ವಾಮಿ, ಕಲಾಕೋಶ, ಪುಟ: ೮೦

೪. ಡಾ. ಶಿವರಾಮ ಕಾರಂತ, ಕಲಾ ಪ್ರಪಂಚ, ಪುಟ: ೧೨೬

೫. ಶಂಕರ ಪಾಟೀಲ, ಚಿತ್ರಕಲಾ ಚಿಂತನೆ, ಪುಟ: ೩

೬. ಅದೇ. ಪುಟ: ೨೪

೭. ಅನ. ಡಾ. ಕಾಶಿನಾಥ ಅಂಬಲಿಗೆ ಸೌಂದರ್ಯಶಾಸ್ತ್ರ, ಪುಟ: ೭

❄❄❄❄❄

[illegible]

ವಿವಿಧ ಬುಡಕಟ್ಟುಗಳ ಕರಕುಶಲಕಲೆಯ ಛಾಯಾಚಿತ್ರಗಳು



ಮರದಿಂದ ತಯಾರಿಸಿದ ಮೀನಿನ ಕಲಾಕೃತಿ



ಕಟ್ಟಿಗೆಯಿಂದ ತಯಾರಿಸಿದ ಹುಲಿಯ ಕಲಾಕೃತಿ



ಸಿದ್ಧಿಯರು ರಚಿಸಿದ ಕಲಾಕೃತಿ



ದೀವರ ಕರಕುಶಲ ಕಲೆಗಳು









ವಿವಿಧ ಬುಡಕಟ್ಟುಗಳ ಕರಕುಶಲಕಲೆಯ ಛಾಯಾಚಿತ್ರಗಳು



ಕರಕುಶಲದಲ್ಲಿ ನಿರತಳಾದ ದೀವರ ಮಹಿಳೆ



ಸಿದ್ದಿಯರು ಕಲಾತ್ಮಕ ವಸ್ತುಗಳು



ಜೇನುಕುರುಬರು ಮಣ್ಣಿನಿಂದ ತಯಾರಿಸಿದ ಆಟಿಕೆ



ಗೊಂಡರ ಕಲಾತ್ಮಕ ಸಿಂಬೆಗಳು



ಅಧ್ಯಾಯ ೮

ಸಮಾರೋಪ

ಸಮಾರೋಪ

ಪ್ರಕೃತಿ ಮತ್ತು ಮನುಷ್ಯನ ಅನುಸಂಧಾನದ ಪ್ರಕ್ರಿಯೆಯಲ್ಲಿ ವಿಜ್ಞಾನ ಮತ್ತು ಕಲೆಗಳು ಹುಟ್ಟಿಕೊಂಡಿವೆ. ಸದಾ ಸವಾಲು ಒಡ್ಡುವ, ವಿಸ್ಮಯಗಳನ್ನ ಹುಟ್ಟಿಸುವ ಪ್ರಕೃತಿ ಮತ್ತು ಬುದ್ಧಿವಂತ ಮನುಷ್ಯನ ಈ ಮುಖಾಮುಖಿಯ ಪರಿಣಾಮದಿಂದಾಗಿ ಇಂದು ಭೂಗೋಳದ ಮೇಲೆ ಅನೇಕ ಆವಿಷ್ಕಾರಗಳು ಎದ್ದು ನಿಂತಿವೆ. ಅದ್ಭುತ ಚೈತನ್ಯದ, ನಿಗೂಢ ಶಕ್ತಿಯ ನಿಸರ್ಗದ ಆತಂಕ ಮತ್ತು ರೋಮಾಂಚನಗಳೇ, ಮನುಷ್ಯ ವಿಜ್ಞಾನ ಮತ್ತು ಕಲೆಗಳನ್ನ ಕಂಡುಕೊಳ್ಳುವಂತೆ ಮಾಡಿದವು. ನಿಸರ್ಗದ ಆತಂಕಗಳನ್ನ ನಿವಾರಿಸಿಕೊಳ್ಳಲು ವಿಜ್ಞಾನಕ್ಕೆ ಮೊರೆ ಹೋದ ಮಾನವ, ಪ್ರಕೃತಿಯ ರೋಮಾಂಚನಗಳನ್ನು ಅಭಿವ್ಯಕ್ತಿಸಲು ಅನೇಕ ಕಲೆಗಳನ್ನು ರೂಢಿಸಿಕೊಂಡ. ಮನುಷ್ಯ ಇಂದು ಈ ಆಧುನಿಕ ಜಗತ್ತಿನ ಮೇಲೆ 'ಕಟ್ಟಿ, ಎತ್ತಿ ನಿಲ್ಲಿಸಿದ' ಪ್ರತಿಯೊಂದು ಭೌತ ವಸ್ತುವೂ ಈ ಪ್ರಕೃತಿಯ ನೊಂದ ರೂಪಗಳೇ ಆಗಿವೆ. ಅಗಾಧ ಸಂಪತ್ತಿನ ನಿಸರ್ಗದ ಮೇಲೆ ಮನುಷ್ಯನ ವಿಜ್ಞಾನದ ಆವಿಷ್ಕಾರಗಳ ದಾಳಿ ನಡೆದೇ ಇದೆ. ವಿಜ್ಞಾನ ಇಂದು ಶಕ್ತಿವಂತನ ಬಂಡವಾಳವಾಗಿ ಈ ಸುಂದರ ಭೂಗೋಳವನ್ನ ಧ್ವಂಸಮಾಡುತ್ತಿದೆ. ಇದೇ ನಿಸರ್ಗದ ಕೊಡುಗೆಯಾದ ಮಾನವನ ಕಲೆಯ ಅಭಿವ್ಯಕ್ತಿಕ್ರಮ ಮಾತ್ರ ಇನ್ನೂ ಜೀವವಿರೋಧಿಯಾಗದೆ, ಮಾನವಮುಖಿಯಾಗಿ ಉಳಿದುಕೊಂಡಿದೆ.

ಮನುಷ್ಯನ ಅಭಿವ್ಯಕ್ತಿಯ ಹುಟ್ಟು, ಪ್ರಕೃತಿಯ ತಲ್ಲಣ ಮತ್ತು ಅದು ಹುಟ್ಟಿಸುವ ರೋಮಾಂಚನದ ಪರಿಣಾಮವಾಗಿಯೇ ಸಂಭವಿಸಿತು. ಮಾತು ಮತ್ತು ಅದಕ್ಕೆ ಪೂರಕವಾದ ಆಂಗಿಕ ಅಭಿವ್ಯಕ್ತಿಗಳು ನಿಸರ್ಗದ ಭಯಗಳಿಂದಲೇ ಮನುಷ್ಯರಲ್ಲಿ ಹುಟ್ಟಿಕೊಂಡವು. ವಿಕಾಸಗೊಂಡ ಬುದ್ಧಿಮತ್ತೆ ಮತ್ತು ಮಹತ್ವಾಕಾಂಕ್ಷೆಗಳು ಮನುಷ್ಯನನ್ನು ಪ್ರಾಣಿಗಳಿಗಿಂತ ಸ್ಪಷ್ಟವಾಗಿ ಭಿನ್ನವಾಗಿಸಿದವು. ಕೇವಲ ಮಾನವನ ಬೌದ್ಧಿಕ ವಿಕಾಸವೊಂದೇ ನಿಸರ್ಗದ ಎಲ್ಲ ಅಮಾಯಕ ಸಂಗತಿಗಳನ್ನ ಆಳತೊಡಗಿತು. ಮಾನವನ ಬೌದ್ಧಿಕ ರೂಪಾಂತರಗಳು ಹೇಗೆ ಈ ಜಗತ್ತಿನ ಮೇಲೆ ಸುಂದರ ವಸ್ತುಗಳನ್ನ ಸೃಷ್ಟಿಸಿದವೋ, ಅಷ್ಟೇ ವಿಕಾರಗಳನ್ನೂ ಈ ಭೂಗೋಲದ ಮೇಲೆ ನಿರ್ಮಿಸಿಬಿಟ್ಟವು. ಭೌತಿಕ ಸುಖಗಳನ್ನ ಕೊಡುವ ವಿಜ್ಞಾನದ ಅವಿಷ್ಕಾರಗಳು, ಮನುಷ್ಯನ ಆಸೆಬುರುಕ ಪ್ರವೃತ್ತಿಗೆ ಬಲಿಯಾದಂತೆ, ಕಲೆಗಳು ಮತ್ತು ಅಭಿವ್ಯಕ್ತಿ ಸಾಧ್ಯತೆಗಳು

[illegible]

[illegible]

[illegible]

ಬಲಿಯಾಗಲಿಲ್ಲ. ಬುದ್ಧಿ ಮತ್ತು ಹೃದಯದ ಸಮ್ಮಿಳನದಿಂದ ಸಾಧ್ಯವಾಗುವ ಕಲಾಭಿವ್ಯಕ್ತಿ ಹೆಚ್ಚು ಮಾನವೀಯವಾಗಿರುತ್ತದೆ. ಕೇವಲ ಬುದ್ಧಿಯ ಸರಕಾದ ವಿಜ್ಞಾನ ಮತ್ತು ತಂತ್ರಜ್ಞಾನ ಮಾನವನ ದುರಾಸೆಗೆ ಬಂಡವಾಳವಾಗಿ ಜೀವವಿರೋಧಿಗಳೇ ಆಗಿಬಿಡುತ್ತವೆ. ಹೀಗಾಗಿ ವಿಜ್ಞಾನ ನಿಸರ್ಗವನ್ನ ಪ್ರಯೋಜನದ Utility ದೃಷ್ಟಿಯಿಂದ ನೋಡಿದರೆ, ಕಲೆಗಳು ಸೌಂದರ್ಯದ ದೃಷ್ಟಿಯಿಂದ ಪ್ರಕೃತಿಯನ್ನು ಪರಿಭಾವಿಸುತ್ತವೆ.

ಇರಲಿ, ಈ ಮೊದಲೇ ಹೇಳಿದಂತೆ ಮಾನವನ ಕಲೆಯ ಅನೇಕ ಸಾಧ್ಯತೆಗಳು ನಿಸರ್ಗದ ರೋಮಾಂಚನಗಳಿಂದಲೇ ರೂಪಗೊಂಡವು. ಮನುಷ್ಯನ ಅಭಿವ್ಯಕ್ತಿಗಳಲ್ಲಿ ಮೊದಲು ಸಂಭವಿಸಿದ್ದು ಚಿತ್ರಕಲೆ. ಈ ಚಿತ್ರಕಲೆಯ ಮೂಲಕವೇ ಮುಂದೆ ಭಾಷೆಯೂ ಕಂಡುಕೊಳ್ಳಲ್ಪಟ್ಟಿತು. ಇಂದಿಗೂ ಜಗತ್ತಿನ ಬಹುತೇಕ ಭಾಷೆಗಳ ಲಿಪಿಗಳು ಚಿತ್ರದ ರೂಪದಲ್ಲಿರುವುದೇ ಇದಕ್ಕೆ ಸಾಕ್ಷಿ. ಹೀಗಾಗಿ ಚಿತ್ರಕಲೆ ಎಂಬುದು ಎಲ್ಲಾ ಅಭಿವ್ಯಕ್ತಿಗಳ ತಾಯಿಯೆಂದೇ ಹೇಳಬಹುದು. ಆದಿಮ ಸಮಾಜದ ಮಾನವನ ಈ ಅಭಿವ್ಯಕ್ತಿ ಕ್ರಮದ ಅಧ್ಯಯನ ಒಂದು ವಿಚಿತ್ರ ಅನುಭವವನ್ನ ಕೊಡುತ್ತದೆ. ಇಂದು ಕಲೆಗಳ ಅಭಿವ್ಯಕ್ತಿ ಕ್ರಮದಲ್ಲಿ ಅತ್ಯಂತ ಶ್ರೇಷ್ಟ ನೆಲೆಯನ್ನು ಕಂಡುಕೊಂಡಿರುವ ಮಾನವ, ಮತ್ತೆ ತನ್ನ ಮೂಲಗಳಿಗೆ ಹಿಂದಿರುಗುವ ಹಂಬಲ ವ್ಯಕ್ತಪಡಿಸುತ್ತಿದ್ದಾನೆ. ಈವತ್ತಿನ ಮುಕ್ತ ವ್ಯಾಪಾರದ ಜಗತ್ತಿನಲ್ಲಿ, ಏನನ್ನೋ ಕಳೆದುಕೊಂಡವನಂತೆ ತನ್ನನ್ನು ಹುಡುಕಿಕೊಳ್ಳುವ ಚಡಪಡಿಕೆಗಳಲ್ಲಿ ಮನುಷ್ಯ ತೊಡಗಿದ್ದಾನೆ. ಇದು ಸಹಜವೂ ಹೌದು. ವಿಶ್ವವೇ ಒಂದು ಗ್ರಾಮವಾಗಿ 'ಗುರುತಗಳೆಲ್ಲ' ಸಮವಾಗಿ ಬಿಡುವ ಈ ಹೊತ್ತಿನಲ್ಲಿ, ತನ್ನನ್ನ ಹುಡುಕಿಕೊಳ್ಳುವ ಮಾನವ ಸ್ವಭಾವ ಅತ್ಯಂತ ಸಹಜವಾದದ್ದು. ಅದಕ್ಕಾಗಿಯೇ ನಮ್ಮ ಸಂಸ್ಕೃತಿಯ ಮೂಲಗಳಿಗೆ, ಆದಿಮ ಕುರುಹುಗಳನ್ನ ಹುಡುಕಿಕೊಂಡು ನಾವಿಂದು ಹೊರಟಿದ್ದೇವೆ. ವಿಶ್ವವಿದ್ಯಾಲಯಗಳು, ಅಕಾಡೆಮಿಗಳು, ಉನ್ನತ ಶಿಕ್ಷಣ ಸಂಸ್ಥೆಗಳ ಒಳಗೆ ಈ ಬಗೆಯ ಪ್ರವೃತ್ತಿ ಒಂದು ಕೈ ಹೆಚ್ಚಾಗಿಯೇ ಕಾಣಿಸುತ್ತಿದೆ. ಅದಕ್ಕಾಗಿ ಆದಿವಾಸಿಗಳ, ಕೆಳಜಾತಿಗಳ, ಭಾಷಿಕ ಜನಾಂಗಗಳ ಕುರಿತ ಅಧ್ಯಯನಗಳು ಇಂದು ಹೆಚ್ಚಾಗಿ ನಡೆಯುತ್ತಿವೆ. ಈ ಬಗೆಯ ಶೈಕ್ಷಣಿಕ ಪ್ರವೃತ್ತಿಗಳ ಮತ್ತು ಹಂಬಲಗಳ ಒಂದು ಭಾಗವಾಗಿ ನಾನು ಇಂದು ಕರ್ನಾಟಕದ ಬುಡಕಟ್ಟು ಚಿತ್ರಕಲೆಯ ಕುರಿತು ಅಧ್ಯಯನ ಕೈಗೊಂಡಿದ್ದೇನೆ.

ಬುಡಕಟ್ಟು ಸಮುದಾಯಗಳು ನಮ್ಮಂತೆ ಬದುಕುತ್ತಿದ್ದಾರೆ ಎಂಬುದು ಎಷ್ಟೋ ನಗರವಾಸಿಗಳಿಗೆ ಗೊತ್ತೇ ಇಲ್ಲ. ಅದರಲ್ಲೂ ಅವರ ಜೀವನ ವಿಧಾನಗಳು, ಪದ್ಧತಿಗಳು ಪರಿಚಯ ಇಲ್ಲವೇ ಇಲ್ಲ. ಹಾಗಾಗಿ ಬುಡಕಟ್ಟು ಸಮುದಾಯಗಳಿಗೆ ಸಂಬಂಧಿಸಿದಂತೆ ಕೃತಿಗಳು, ಸಂಶೋಧನ ಗ್ರಂಥಗಳು, ಸಿನಿಮಾ ಡಾಕ್ಯುಮೆಂಟರಿಗಳು ಕೆಲವು ನಗರವಾಸಿ ಜನರಿಗೆ ವಿಸ್ಮಯವನ್ನು ಹುಟ್ಟಿಸಬಹುದು. ಕಾಡ ಕತ್ತಲಲ್ಲಿ ಬದುಕನ್ನು ನಡೆಸುತ್ತಿರುವ ಬುಡಕಟ್ಟು ಸಮುದಾಯಗಳ ಬದುಕಿನ ಜೊತೆಯಲ್ಲಿಯೇ ಒಂದು ಅಂಗವಾಗಿ ಚಿತ್ರಕಲೆ ಸಾಗಿಬಂದಿದೆ. ಆಧುನಿಕ, ಜನಪದ, ಶಿಷ್ಟ ಚಿತ್ರಕಲೆಗಳಂತೆ ಬುಡಕಟ್ಟು ಚಿತ್ರಕಲೆಯೂ ತನ್ನದೇ ಆದಂತ ಅನನ್ಯತೆಯನ್ನು ಹೊಂದಿದೆ. ಇದು ಅವರವರ ಸಂಸ್ಕೃತಿಯ ಪ್ರತೀಕದಂತೆ ಇರುವುದನ್ನು ಕಾಣುತ್ತೇವೆ. ಈ ಚಿತ್ರಕಲೆ ಸಮುದಾಯದ ವ್ಯಕ್ತಿಗಳ ಮನಸಿನಾಳದ ಭಾವನೆಗಳ ಪ್ರತಿಬಿಂಬವಾಗಿದೆ.

[illegible]

ಕರ್ನಾಟಕದ ಬುಡಕಟ್ಟುಗಳ ಕುರಿತು ಭಾರತದ ಮಾನವಶಾಸ್ತ್ರಜ್ಞರಿಗೆ ಒಂದು ಬಗೆಯ ಅಸಡ್ಡೆ. ಅಲ್ಲದೆ ಭಾರತದ ಉಳಿದ ಆದಿವಾಸಿಗಳ ಕುರಿತ ಅಧ್ಯಯನಗಳಿಗೆ ಹೋಲಿಸಿದರೆ, ಕರ್ನಾಟಕದ ಬುಡಕಟ್ಟುಗಳ ಅಧ್ಯಯನಗಳಿಗೆ ದೊಡ್ಡ ಪರಂಪರೆಯೇನಿಲ್ಲ. ಈಚೆಗೆ ಕರ್ನಾಟಕದ ಆದಿವಾಸಿಗಳ ಕುರಿತ ಅಧ್ಯಯನಗಳು ಪ್ರಾರಂಭವಾಗಿದ್ದರೂ, ಚಿತ್ರಕಲೆಯ ಕುರಿತ ಅಧ್ಯಯನ ನಡೆದಿಲ್ಲ. ಸ್ವತಹ ಚಿತ್ರಕಲೆಯ ವಿದ್ಯಾರ್ಥಿಯಾದ ನಾನು, ಸಹಜ ಕುತೂಹಲದಿಂದ ಈ ಅಧ್ಯಯನವನ್ನು ಕೈಗೊಂಡಿದ್ದೇನೆ. ಎರಡು ವರ್ಷಗಳ ಸುದೀರ್ಘ ಕ್ಷೇತ್ರಕಾರ್ಯದಲ್ಲಿ ಕರ್ನಾಟಕದ ಅತ್ಯಂತ ಅಜ್ಞಾತ ಸ್ಥಳಗಳಲ್ಲಿನ ಆದಿವಾಸಿಗಳನ್ನ ಭೇಟಿ ಮಾಡಿದ್ದೇನೆ. ಈ ಮೂರು ವರ್ಷಗಳ ಕಾಲಾವಧಿಯಲ್ಲಿ ಕನ್ನಡವೆಂಬ ವೈವಿಧ್ಯಮಯ ಸಮಾಜದ ವಿಶಿಷ್ಟ ಜಗತ್ತೊಂದನ್ನು ಈ ಆದಿವಾಸಿಗಳು ನನಗೆ ತೋರಿಸಿಕೊಟ್ಟಿದ್ದಾರೆ. ವಿದ್ವಾಂಸರು ಅಷ್ಟೇನು ಮುಟ್ಟಿ ನೋಡದ ಕನ್ಯೆ ನೆಲ ಈ ಆದಿವಾಸಿಗಳ ಲೋಕ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಆದಿವಾಸಿಗಳ ಮೂಲಕ ಅವರದೇ ಅನೇಕ ಚಿತ್ರಗಳನ್ನ ಬರೆಸಿದ್ದೇನೆ. ಆಚರಣಾ ಸಂಬಂಧಿ ಚಿತ್ರಗಳನ್ನು ಅವುಗಳ ಸಂದರ್ಭದಲ್ಲಿಯೇ ಚಿತ್ರೀಕರಿಸಿಕೊಂಡಿದ್ದೇನೆ. ಕೆಲವು ಚಿತ್ರಗಳ ಯಥಾವತ್ತು ಪ್ರತಿಗಳನ್ನ ನಾನೇ ತಯಾರಿಸಿದ್ದೇನೆ. ಈ ಪ್ರಬಂಧದ ಮುಖ್ಯ ಭಾಷೆ ಚಿತ್ರಗಳೇ ಆಗಿವೆ. ಆಧುನಿಕ ಚಿತ್ರಕಲೆಯ ಗುಂಗಿನಲ್ಲಿದ್ದಾಗ ಆದಿವಾಸಿಗಳ ಈ ಅಮಾಯಕ ಲೋಕ ನನ್ನನ್ನು ಹೀಗೆ ಪ್ರಭಾವಿಸಿದೆ ಎಂದರೆ ತಪ್ಪಾಗಲಾರದು. ಪ್ರಕೃತಿಯ ಸಂಕೀರ್ಣ ಸ್ವಭಾವ ಮತ್ತು ಆಧುನಿಕ ಜಗತ್ತಿನ ತಳಮಳಗಳು ಆದಿವಾಸಿಗಳ ಕಲಾಭಿವ್ಯಕ್ತಿಯಲ್ಲಿ ಏಕೀಭವಿಸಿದಂತೆ ಕಾಣುತ್ತವೆ. ಆಧುನಿಕ ಪರಿಕರಗಳನ್ನ ಹೊಂದದ, ನವನಾಗರಿಕ ಥಳಕುಗಳನ್ನ ದಕ್ಕಿಸಿಕೊಳ್ಳಲಾರದ ಆದಿವಾಸಿಗಳು ಭೌತಿಕವಾಗಿ ನಿರ್ಗತಿಕರಂತೆ ಕಂಡರೂ, ಚಿಂತನೆಯಲ್ಲಿ ಮತ್ತು ಹೃದಯ ಶ್ರೀಮಂತಿಕೆಯಲ್ಲಿ ಮುಂದುವರೆದವರೂ ಮತ್ತು ಜಟಿಲ ಸ್ವಭಾವದವರೂ ಆಗಿದ್ದಾರೆ. 'ಆಧುನಿಕ' ವಾಗುವುದೆಂದರೆ, ಹೊಸ ತಂತ್ರಜ್ಞಾನದ ಫಲವಾಗಿ ಅವಿಷ್ಕಾರಗೊಂಡ ಪರಿಕರಗಳನ್ನ ಹೊಂದುವುದೆಂದೇ ನಗರವಾಸಿಗಳು ಭಾವಿಸಿದ್ದಾರೆ. ಆದರೆ ಒಟ್ಟು ಆಲೋಚನಾ ವಿಧಾನದಲ್ಲಿ 'ಆಧುನಿಕ' ಅಹಂನ ನಗರವಾಸಿಗಳು ಹೆಚ್ಚು ಹೆಚ್ಚು ರೂಢಿರಾಕ್ಷಸರಾಗುವ ಪರಿಯನ್ನ ಕಾಣುತ್ತಿದ್ದೇವೆ. ಆದರೆ ಆದಿವಾಸಿಗಳು 'ಚಿಂತನೆ'ಯಲ್ಲಿ ಆಧುನಿಕರಾಗಿದ್ದಾರೆ. ನಾನು ಭೇಟಿ ಮಾಡಿದ ಅನೇಕ ಆದಿವಾಸಿ ಕಲಾವಿದರನ್ನ ಸಂಪರ್ಕಿಸಿದಾಗ, 'ನಾಗರಿಕ ಜಗತ್ತು' ನಾಚುವಂತಹ ಪ್ರಾಂಜಲ ಅಂತರಂಗಗಳನ್ನ ತೆರೆದಿಟ್ಟಿದ್ದಾರೆ. ಆದಿವಾಸಿಗಳು ನಿಜ ಅರ್ಥದಲ್ಲಿ 'ಆಧುನಿಕರು'. ಅವರಿಗೆ ಪರಂಪರೆಯ ಕುರಿತು ವಾಕರಿಕೆ ಬರಿಸುವ ತಿರಸ್ಕಾರಗಳೇನಿಲ್ಲ. ರಕ್ತ ಚೆಲ್ಲಿಯಾದರೂ ಇತಿಹಾಸವನ್ನು ಮರುಕಳಿಸಲೇಬೇಕೆಂಬ ಮೂಲಭೂತವಾದೀ ಹಂಬಲಗಳಿಲ್ಲ. ಅಲ್ಲದೆ ಆಧುನಿಕತೆಯ ಕುರಿತು ಸಲ್ಲದ ಪೂರ್ವಗ್ರಹಗಳೂ ಇಲ್ಲ. ಆದಿವಾಸಿಗಳು ಮತ್ತು ಕೆಳಜಾತಿಗಳು ಚರಿತ್ರೆಯನ್ನ ಪುರಾಣೀಕರಿಸಿಬಿಡುವ ಚಮತ್ಕಾರವನ್ನು ತೋರಿಸುತ್ತಾರೆ. ಇವರ ಕಲೆ ಅತ್ಯಂತ ಪ್ರತಿಮಾತ್ಮಕವೂ, ಜಟಿಲವೂ ಆಗಿರುತ್ತದೆ. ಆದಿವಾಸಿಗಳ ಮೌಖಿಕ ಸಾಹಿತ್ಯವೂ ಸಹ ಪ್ರತಿಮೆಗಳ ದಟ್ಟ ಬಂಧದಿಂದ ರೂಪಗೊಂಡಿರುತ್ತದೆ. ಇವರ ಚಿತ್ರಕಲೆಯೂ ಸಹ ಇದೇ ಬಗೆಯ ಸಂಕೀರ್ಣ ಅಭಿವ್ಯಕ್ತಿಯಾಗಿದೆ. ಬಣ್ಣದ ಆಯ್ಕೆ ಮತ್ತು ಬಳಸುವ ಪರಿಕರಗಳಿದ ಹಿಡಿದು, ಚಿತ್ರದ ಆಯ್ಕೆಯ ತನಕವೂ ಇವರ ಚಿತ್ರಕಲೆ,

[illegible]

ವಿಶಿಷ್ಟ ಜಗತ್ತೊಂದನ್ನ ತನ್ನಲ್ಲಿ ಹುದುಗಿಸಿಕೊಂಡಂತೆ ಭಾಸವಾಗುತ್ತದೆ. ಅತ್ಯಂತ ಸರಳ ಬಣ್ಣ ಮತ್ತು ಪರಿಕರಗಳ ಮೂಲಕ ಆದಿವಾಸಿಗಳು, ಆಧುನಿಕ ಕಲಾಜಗತ್ತಿನ ಮುಂದೆ ಸವಾಲೆಸೆಯುವ ಕಲಾಕೃತಿಯೊಂದನ್ನ ರಚಿಸಿಬಿಡುತ್ತಾರೆ. ಪರಂಪರೆ ಮತ್ತು ಆಧುನಿಕತೆಗಳೆರಡೂ ಸಮ್ಮಿಳನಗೊಂಡ ಅದ್ಭುತ ಕಲಾಪ್ರಪಂಚ ಇವರದು.

ನಾನು ಅಧ್ಯಯನಕ್ಕೆ ಆಯ್ಕೆಮಾಡಿಕೊಂಡ ಹನ್ನೆರಡು ಬುಡಕಟ್ಟು ಸಮುದಾಯಗಳ ಎಲ್ಲ ಬಗೆಯ ಚಿತ್ರಗಳನ್ನ ಸಂಗ್ರಹಿಸಲು, ಮಾಹಿತಿ ಪಡೆಯಲು ಯತ್ನಿಸಿದ್ದೇನೆ. ನಾನೊಬ್ಬ ಕಲೆಯ ವಿದ್ಯಾರ್ಥಿಯಾಗಿ ಗಹನ ಭಾಷೆಯನ್ನ ರೂಢಿಸಿಕೊಳ್ಳಲಾಗಿಲ್ಲ. ಇದೊಂದು ಮಿತಿಯೆಂಬ ಖಬುರು ನನಗಿದೆ. ಆದರೆ ಈ ಹನ್ನೆರಡು ಬುಡಕಟ್ಟುಗಳ ಚಿತ್ರಗಳನ್ನ ಮತ್ತು ಪ್ರಾಥಮಿಕ ಮಾಹಿತಿಗಳನ್ನೆಲ್ಲ ಕಲೆ ಹಾಕಿದ್ದೇನೆ. ಇದನ್ನ ಪೂರ್ಣ ಪ್ರಮಾಣದ ಸಂಶೋಧನೆಯೆಂದು ನಾನು ಭಾವಿಸಲಾರೆ. ಮುಂದೆ ಈ ಕ್ಷೇತ್ರದಲ್ಲಿ ಅದ್ವಿತೀಯ ಅಧ್ಯಯನಗಳನ್ನ ಮಾಡಬಲ್ಲ ಇತರರಿಗೆ ಸೂಚಿಯಾಗಬಲ್ಲ ಅಧ್ಯಯನ ಇದಾಗಿದೆ. ಈ ಅಧ್ಯಯನದ ಮೂಲಕ, ಕನ್ನಡ ನಾಡಿನ ಚಿತ್ರಕಲೆಯ ಪರಂಪರೆಯೊಂದನ್ನ ಕಟ್ಟಿಕೊಂಡುವಂತಾದರೆ ನನ್ನ ಈ ಪ್ರಯತ್ನ ಸಾರ್ಥಕವೆಂದು ಭಾವಿಸಿದ್ದೇನೆ.

ಈ ಮಹಾಪ್ರಬಂಧದಲ್ಲಿ ಒಟ್ಟು ಎಂಟು ಅಧ್ಯಯನಗಳಿವೆ. ಜೊತೆಗೆ ಅನುಬಂಧದಲ್ಲಿ ಮಹಾಪ್ರಬಂಧಕ್ಕೆ ಸಂಬಂಧಿಸಿದ ಹಲವು ಮಾಹಿತಿಗಳನ್ನು ಕೊಡಲಾಗಿದೆ. ಯಾವುದೇ ಸಂಶೋಧನೆಯ ಶೀರ್ಷಿಕೆಯ ವಿಷಯಕ್ಕೆ ತಕ್ಕಂತೆ ಸಂಶೋಧನೆ ನಡೆಯುತ್ತದೆ. ಹಾಗಾಗಿ ಅಧ್ಯಯನಕ್ಕೆ ಒಂದು ಉದ್ದೇಶವಿರುತ್ತದೆ, ವಿಧಾನವಿರುತ್ತದೆ ಮತ್ತು ವ್ಯಾಪ್ತಿ ಇರುತ್ತದೆ. ಇದು ಅಧ್ಯಯನದ ದೃಷ್ಟಿಯಿಂದ ಸೂಕ್ತವಾದದ್ದು. ಈ ಅಧ್ಯಯನದ ಉದ್ದೇಶ ವ್ಯಾಪ್ತಿ ವಿಧಾನಕ್ಕೆ ಸಂಬಂಧಪಟ್ಟಂತೆ ಅಧ್ಯಾಯ ಒಂದರಲ್ಲಿ ಸೂಕ್ಷ್ಮವಾಗಿ ಪರಿಚಯ ಮಾಡಿಕೊಡಲಾಗಿದೆ.

ಅಧ್ಯಾಯ ಎರಡರಲ್ಲಿ ಕಲೆಗೆ ಸಂಬಂಧಿಸಿದಂತೆ ವರ್ಗೀಕರಣ ಮಾಡಿಕೊಂಡು ಅಧ್ಯಯನ ಮಾಡಲಾಗಿದೆ. ಅದನ್ನು ಕಲೆ, ಕಲೆಯ ವರ್ಗೀಕರಣ, ಕಲೆಯ ಉಗಮ ಮತ್ತು ವಿಕಾಸ, ಆದಿಮ ಕಲೆ, ಬುಡಕಟ್ಟು ಚಿತ್ರಕಲೆ, ಜನಪದ ಚಿತ್ರಕಲೆ, ಶಿಷ್ಟಪದ ಚಿತ್ರಕಲೆ, ಆಧುನಿಕ ಚಿತ್ರಕಲೆ, ಹೀಗೆ ವಿಭಾಗ ಮಾಡಿಕೊಂಡು ಅವುಗಳ ಬಗ್ಗೆ ವಿವರಗಳನ್ನು ಅವುಗಳ ತಾತ್ವಿಕ ಚರ್ಚೆಯನ್ನು ಈ ಅಧ್ಯಯದಲ್ಲಿ ನೀಡಲಾಗಿದೆ.

ಇದು ಬುಡಕಟ್ಟು ಸಮುದಾಯಗಳ ಅಧ್ಯಯನ. ಅದರಲ್ಲೂ ನಿಖರವಾಗಿ ಬುಡಕಟ್ಟು ಸಮುದಾಯಗಳ ಚಿತ್ರಕಲೆಯನ್ನು ಕುರಿತ ಅಧ್ಯಯನವಾಗಿದೆ. ಆದರೂ ಸಹ ಈ ಅಧ್ಯಯನಕ್ಕೆ ಒಳಪಟ್ಟಿರುವ ಬುಡಕಟ್ಟುಗಳು ವಾಸಿಸುವ ಭೂಪ್ರದೇಶ, ಅವರ ಬದುಕು, ಸಂಸ್ಕೃತಿ, ಇನ್ನು ಮುಂತಾದ ವಿಷಯಗಳನ್ನು ಕ್ವಚಿತ್ತಾಗಿ ತಿಳಿಸಲು ಪ್ರಯತ್ನಿಸಿದ್ದೇನೆ. ಬುಡಕಟ್ಟು ಚಿತ್ರಕಲೆಯ ಅಧ್ಯಯನವೆಂದರೆ ಇವರ ಬದುಕಿನ ಅಧ್ಯಯನವೆಂದೇ ಅರ್ಥ. ಹೀಗಾಗಿ ಈ ಅಧ್ಯಯನದಲ್ಲಿ ಆದಿವಾಸಿಗಳ ನೆಲೆಗಳ ವಿವರಗಳನ್ನ ಸ್ಥೂಲವಾಗಿ ನೀಡಲಾಗಿದೆ.

[illegible]

ಅಧ್ಯಾಯ ನಾಲ್ಕರಲ್ಲಿ ಬುಡಕಟ್ಟು ಸಮುದಾಯಗಳ ಚಿತ್ರಕಲೆಯ ಬಗೆಗಿನ ತಾತ್ವಿಕ ಚರ್ಚೆಯನ್ನು ಮಾಡಲಾಗಿದೆ. ಈ ಸಮುದಾಯಗಳಲ್ಲಿ ಕಂಡುಬರುವ ಚಿತ್ರಗಳನ್ನು ಸಾಂಪ್ರದಾಯಿಕ ಮತ್ತು ಆಚರಣಾ ಸಂಬಂಧಿ ನೆಲೆಯಲ್ಲಿ ಚರ್ಚಿಸಲಾಗಿದೆ. ಹಾಗೆಯೇ ಹಚ್ಚೆಯ ಚಿತ್ರಗಳನ್ನು ವಿವರಣಾತ್ಮಕವಾಗಿ ಚರ್ಚಿಸಲಾಗಿದೆ.

ಅಧ್ಯಾಯ ಐದರಲ್ಲಿ ಅಧ್ಯಯನಕ್ಕೆ ಒಳಪಡುವ ಬುಡಕಟ್ಟು ಸಮುದಾಯಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ತೆಗೆದುಕೊಂಡು ಆಯಾ ಸಮುದಾಯಗಳಲ್ಲಿ ಕಂಡುಬರುವ ವಿವಿಧ ಮಾದರಿಯ ಚಿತ್ರಗಳನ್ನು ಅವುಗಳಿಗಿರುವ ವ್ಯತ್ಯಾಸಗಳನ್ನು ವಿವರಿಸಲಾಗಿದೆ. ಅಂತೆಯೇ ನೆಲದ ಮೇಲೆ ಬರೆಯುವ ಚಿತ್ರಗಳು, ಗೋಡೆಯ ಮೇಲೆ ಬರೆಯುವ ಚಿತ್ರಗಳು, ಗೃಹೋಪಯೋಗಿ ವಸ್ತುಗಳ ಮೇಲೆ ಬರೆಯುವ ಚಿತ್ರಗಳು ಹೀಗೆ ವಿಭಾಗ ಮಾಡಿಕೊಂಡು ಆಯಾ ಸಮುದಾಯಗಳ ಹಿನ್ನೆಲೆಯಲ್ಲಿ ವಿವರಿಸಲಾಗಿದೆ. ಹೀಗೆ ಒಟ್ಟು ೧೨ ಬುಡಕಟ್ಟು ಸಮುದಾಯಗಳು ಅಧ್ಯಯನಕ್ಕೆ ಒಳಪಟ್ಟಿದ್ದು, ಅವುಗಳನ್ನು ಪ್ರತ್ಯೇಕವಾಗಿ ವಿವರಿಸಲಾಗಿದೆ.

ಬುಡಕಟ್ಟು ಚಿತ್ರಕಲೆಯನ್ನು ಅಧ್ಯಯನಕ್ಕೆ ಒಳಪಡಿಸುವಾಗ ಅವರು ಬಳಸುವ ಬಣ್ಣಗಳು, ಅವನ್ನು ತಯಾರಿಸಿಕೊಳ್ಳುವ ವಿಧಾನಗಳು ಬಹುಮುಖ್ಯವಾಗುತ್ತವೆ. ನಿಸರ್ಗದ ಜೊತೆ ಬದುಕನ್ನು ನಡೆಸುತ್ತಿರುವ ಬುಡಕಟ್ಟು ಸಮುದಾಯಗಳು ತಮ್ಮದೇ ಆದಂತ ಬಣ್ಣಗಳ ಕಲ್ಪನೆಯನ್ನು ಹೊಂದಿದ್ದಾರೆ. ಇವರು ಬದುಕುತ್ತಿರುವಂತಹ ಪ್ರದೇಶದಲ್ಲಿ ಸಿಗುವಂತಹ ವಸ್ತುಗಳ ಮೂಲಕವೇ ಬಣ್ಣಗಳನ್ನ ತಯಾರಿಸಿ ಕೊಳ್ಳಲಾಗುತ್ತದೆ. ಈ ಬಣ್ಣಗಳನ್ನು ಕುರಿತ ವಿವರಗಳು ಈ ಅಧ್ಯಾಯದಲ್ಲಿದೆ.

ಕೊನೆಯ ಅಧ್ಯಾಯ ಸಮಾರೋಪವಾಗಿದೆ.

ಈ ಮಹಾಪ್ರಬಂಧದ ಕೊನೆಯ ಭಾಗ ಅನುಬಂಧದಲ್ಲಿ ಛಾಯಾಚಿತ್ರಗಳನ್ನು, ರೇಖಾಚಿತ್ರಗಳನ್ನು ಮತ್ತು ಹಚ್ಚೆ ಚಿತ್ರಗಳನ್ನು ಕೊಡಲಾಗಿದೆ. ಅಧ್ಯಯನಕ್ಕೆ ಸಂಬಂಧಿಸಿದ ವಕ್ತೃಗಳ ವಿವರಗಳನ್ನು, ಅವರ ಪೋಡು, ಹಾಡಿ, ವಾಡಗಳ ಪರಿಚಯವನ್ನು ಕೊಡಲಾಗಿದೆ. ಕೊನೆಯಲ್ಲಿ ಅಧ್ಯಯನಕ್ಕೆ ಸಹಾಯಕವಾದ ಗ್ರಂಥಗಳ ವಿವರವನ್ನು ನೀಡಲಾಗಿದೆ.

❄❄❄❄❄

ಅನುಬಂಧ

ಪರಾಮರ್ಶನ ಗ್ರಂಥಗಳು

೧. ಅಂಬಳಿಕೆ ಹಿರಿಯಣ್ಣ, **ಕಟ್ಟೆಗೌಳಿಗರ ಸಂಸ್ಕೃತಿ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೯೩

೨. ಅಬ್ದುಲ್ ಬಷೀರ್ .ಜಿ, **ಕಾವ್ಯಮೀಮಾಂಸೆ ಮತ್ತು ಸಾಹಿತ್ಯ ವಿಮರ್ಶೆ**, ಹಂಸ ಧ್ವನಿ ಪ್ರಕಾಶನ, ಬೆಂಗಳೂರು, ೧೯೯೭

೩. ಉಪಾಧ್ಯಾಯ ಕೆ.ಎನ್. **ಜಾನಪದ ಕಲೆ ಮತ್ತು ಬದುಕು**, ಕರ್ನಾಟಕ ಸಂಘ, ಪುತ್ತೂರು, ೧೯೯೪

೪. ಕರೀಗೌಡ ಬೀಚನಹಳ್ಳಿ,ಸಂ. **ಕರಕುಶಲ ಕಲೆಗಳು**, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೫. ಕರೋಮ್ಮಿನ್ .ಎಫ್, **ಪುರಾತನ ಜಗತ್ತಿನ ಇತಿಹಾಸ**, ನವ ಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು, ೧೯೮೭

೬. ಕಾಳೆ ಕೆ.ವಿ, **ಕರ್ನಾಟಕದ ಚಿತ್ರಕಲೆಯಲ್ಲಿ ಬಣ್ಣದ ಬಳಕೆ**, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೦

೭. ಕಾಳೆ ವ್ಹಿ.ಟಿ, ಮತ್ತು ಪಿ.ಆರ್. ತಿಪ್ಪೇಸ್ವಾಮಿ, **ಚಿತ್ರಕಲಾ ದರ್ಪಣ**, ಕರ್ನಾಟಕ ಲಲಿತ ಆಕಾಡೆಮಿ, ಬೆಂಗಳೂರು, ೧೯೯೪

೮. ಕಾಳೇಗೌಡ ನಾಗಾವಾರ, ಮತ್ತು ಎನ್. ಹುಚ್ಚಪ್ಪ ಮಾಸ್ತರ್, **ಗಿರಿಜನ ಸಂಸ್ಕೃತಿ**, ಕರ್ನಾಟಕದ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೨೦೦೦

೯. ಕಾಳೇಗೌಡ ನಾಗಾವಾರ, **ಜನಪದ ಸಾಹಿತ್ಯ**, ಯುಗಾದಿ ಪ್ರಕಾಶನ, ಬೆಂಗಳೂರು, ೧೯೯೬

೧೦. ಕಾಳೇಗೌಡ ನಾಗಾವಾರ ಮತ್ತು ಜಿ.ವಿ. ಆನಂದಮೂರ್ತಿ, **ಜಾನಪದ ತುಂಬು ಹೊಳೆ**, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೨೦೦೦

೧೧. ಕಾಳೇಗೌಡ ನಾಗಾವಾರ ಮತ್ತು ಹಿ.ಚಿ. ಬೋರಲಿಂಗಯ್ಯ, ಸಂ. **ಗಿರಿಜನ ಕಾವ್ಯ**, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೨೦೦೦

೧೨. ಕಾಸರವಳ್ಳಿ ಜಿ. ರವೀಶ, **ಜಿ.ಎಸ್. ಶಣೈ**, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೫

೧೩. ಕುಲಕರ್ಣಿ ಆರ್.ಎಚ್, **ಕಿನ್ನಾಳ ಚಿತ್ರಕಲೆ**, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೨

೧೪. ಕುಲಕರ್ಣಿ (ಎನ್ಕೆ) **ಸಮಗ್ರ ಶಿಕ್ಷಣ**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೧೯೯೭

೧೫. ಕೃಷ್ಣಯ್ಯ ಎಂ. ಹೆಚ್. **ಕಲೆ ಮತ್ತು ರಸ ಸ್ವಾದನೆ**, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೮೯

೧೬. ಕೃಷ್ಣಯ್ಯ ಎಂ.ಎಚ್, **ರೂಪಶಿಲ್ಪಿ ಬಸವಯ್ಯ**, ಕರ್ನಾಟಕ ಲಲಿತ ಕಲಾ ಅಕಾಡೆಮಿ, ಬೆಂಗಳೂರು, ೧೯೮೬

೧೭. ಕೃಷ್ಣಯ್ಯ ಎಂ.ಎಚ್, ಆರ್. ಎಂ. **ಹಡಪದ್**, ಕರ್ನಾಟಕ ಲಲಿತ ಕಲಾ ಅಕಾಡೆಮಿ, ಬೆಂಗಳೂರು, ೧೯೯೭

೧೮. ಕೃಷ್ಣ ಎಂ. ಎಚ್. **ಕನ್ನಡ ನಾಡಿನ ಚರಿತ್ರೆ**, ಕನ್ನಡ ನಾಡಿನ ಕಲೆಗಳು, ಮೂರನೆಯ ಭಾಗ ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೧೯೮೯

೧೯. ಕೃಷ್ಣ ಶೆಟ್ಟಿ, ಚಿ.ಸು **ವರ್ಣಾವರಣ**, ಚಿತ್ತಾರ ಪ್ರಕಾಶನ, ಬೆಂಗಳೂರು, ೨೦೦೧

೨೦. ಖಂಡೋಬಾ ಪಿ.ಕೆ, **ಲಂಬಾಣಿ ಕಲೆ ಮತ್ತು ಸಂಸ್ಕೃತಿ**, ಜಾನಪದ ೧೯೯೪, ನೀಲಗಿರಿ ತಳವಾರ, ಸಂ. ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೬

೨೧. ಗಿರಿಜಾ ಟಿ, **ಚಿತ್ರದುರ್ಗ ಜಿಲ್ಲಾ ದರ್ಶಿನಿ**, ರೇಖಾ ಪ್ರಕಾಶನ, ದಾವಣಗೆರೆ ೨೦೦೧

೨೨. ಗುರುಮೂರ್ತಿ, **ವ್ಯವಹಾರಿಕ ಮಾನವಶಾಸ್ತ್ರ**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೨

೨೩. ಗೋಕಾಕ್ ವಿ.ಕೃ, **ಕಲೆಯ ನೆಲೆ**, ಮೈಸೂರು ವಿಶ್ವವಿದ್ಯಾಲಯ, ೧೯೭೮

೨೪. ಗೋಪಾಲ ಕೃಷ್ಣ, ಪಿ. ನಾಯಕ **ಉತ್ತರ ಕನ್ನಡ ಜನಪದ ಕಲೆ**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೮

೨೫. ಗೋಪಾಲ ಕೃಷ್ಣ ಹೆಗಡೆ, **ಯಕ್ಷಗಾನ ವರ್ಣ ವೈಭವ**, ಕನ್ನಡ ವಿಶ್ವವಿದ್ಯಾಲಯ, ಹಂಪೆ, ೧೯೯೯

೨೬. ಚಂದ್ರಶೇಖರ್ ಎಸ್.ಎನ್. ಸಂ. **ಕರ್ನಾಟಕ ಕಲಾವಿದರ ಪರಿಚಯಾವಳಿ**, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೨೦೦೧

೨೭. ಚಂದ್ರಶೇಖರ್ ಸಿ, ಸಂ. **ಕಲಾವಿದರ ವಿಳಾಸ ಕೈಪಿಡಿ**, ಲಲಿತ ಕಲಾ ಅಕಾಡೆಮಿ, ಬೆಂಗಳೂರು, ೧೯೯೭

೨೮. ಚಂದ್ರಶೇಖರ ಕಂಬಾರ, ಸಂ. **ಕನ್ನಡ ಜಾನಪದ ವಿಶ್ವಕೋಶ**, ಸಂಪುಟ: ೨, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೫

೨೯. ಚಂದ್ರಕಾಂತ ಕುಸುನೂರ, **ಕಲೆ ಅನುಭವ ಮತ್ತು ಅನುಭಾವ**, ಮಾಲಗತ್ತಿ ಪ್ರಿಂಟಿಂಗ್ ಆ್ಯಂಡ್ ಪಬ್ಲಿಷಿಂಗ್ ಹೌಸ್, ಬೆಳಗಾವಿ, ೧೯೯೦

೩೦. ಚಂದ್ರುಕಾಳೇಹಳ್ಳಿ, **ಸೋಲಿಗರ ಸಂಸ್ಕೃತಿ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩

೩೧. ಚನ್ನಪ್ಪ ಎಸ್. ಪಾಟೀಲ್, **ಕರ್ನಾಟಕ ಶಿಲ್ಪಗಳಲ್ಲಿ ಪಂಚತಂತ್ರ**, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ೧೯೯೪

೩೨. ಚೆನ್ನಬಸಪ್ಪ ಗೊ.ರು, **ಕರ್ನಾಟಕ ಜನಪದ ಕಲೆಗಳು**, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೧೯೭೭

೩೩. ಚನ್ನಬಸಪ್ಪ ಗೊ.ರು, **ಜಾನಪದ ದೃಶ್ಯ ಕಲೆಗಳು**, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೬

೩೪. ಚನ್ನಬಸಪ್ಪ ಗೊ.ಕು, **ಕರ್ನಾಟಕದ ಜನಪದ ಕಲೆಗಳು**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೭

೩೫. ಚಲುವರಾಜು, **ಹಂಪಿಯ ಸ್ಮಾರಕಗಳಲ್ಲಿ ಜನಪದೀಯ ಅಂಶಗಳು**, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೦

೩೬. ಚಿದಾನಂದ ಮೂರ್ತಿ ಎಂ, **ಹೊಸತು ಹೊಸತು**, ಕನ್ನಡ ವಿಶ್ವವಿದ್ಯಾಲಯ, ಹಂಪೆ, ೧೯೯೩

೩೭. ದೃವರಾಜ, ನಾ, ಗದಗಕರ, **ದೇಗುಲ ರಥ ಶಿಲ್ಪ**, ಕನ್ನಡ ವಿಶ್ವವಿದ್ಯಾಲಯ, ಹಂಪೆ, ೧೯೯೯

೩೮. ತಪಸ್ವೀ ಕುಮಾರ್, **ಸಂಸ್ಕೃತಿ ವಿಕಾಸ**, ಭಾರತೀ ಪ್ರಕಾಶನ, ಸರಸ್ವತಿ ಪುರಂ, ಮೈಸೂರು, ೧೯೯೫

೩೯. ತಿಪ್ಪೇರುದ್ರಸ್ವಾಮಿ ಎಚ್, **ಕರ್ನಾಟಕ ಸಂಸ್ಕೃತಿ ಸಮೀಕ್ಷೆ**, ಡಿ.ವಿ.ಕೆ. ಮೂರ್ತಿ, ಕೃಷ್ಣಮೂರ್ತಿಪುರಂ, ಮೈಸೂರು, ೧೯೬೮

೪೦. ತಿಪ್ಪೇಸ್ವಾಮಿ ಪಿ.ಆರ್, **ಚಿತ್ರಕಲಾ ದರ್ಪಣ**, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೪

೪೧. ತಿಪ್ಪೇಸ್ವಾಮಿ ಪಿ.ಆರ್, **ಜನಪದ ಚಿತ್ರ ಮತ್ತು ಶಿಲ್ಪಕಲೆ**, ಸುವರ್ಣ ಜನಪದ ಸಂ.೧, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೮

೪೨. ತಿಪ್ಪೇಸ್ವಾಮಿ ಪಿ.ಆರ್, **ಕಲಾಕೋಶ**, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೪

೪೩. ನಂಜುಂಡರಾವ್ ಎಂ.ಎಸ್, **ಕರ್ನಾಟಕ ತೊಗಲುಗೊಂಬೆ**, ಕರ್ನಾಟಕ ಚಿತ್ರಕಲಾ ಪರಿಷತ್ತು, ಬೆಂಗಳೂರು, ೨೦೦೦

೪೪. ನರಸಿಂಹನ್ ಅ.ಲ, **ಕರ್ನಾಟಕ ಬಿತ್ತಿ ಚಿತ್ರ ಪರಂಪರೆ**, ಕರ್ನಾಟಕ ಲಲಿತಕಲಾ ಅಕಾಡೆಮಿ, ೧೯೯೮

೪೫. ನಾಗಭೂಷಣ ಸ್ವಾಮಿ, ಓ.ಎಲ್, **ಪುರಾಣ**, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೩

೪೬. ನಾಯಕ ಎನ್.ಆರ್, **ಉತ್ತರ ಕನ್ನಡ ಜಿಲ್ಲೆಯ ಬುಡಕಟ್ಟು ಜನಾಂಗಗಳ ಜಾನಪದ**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೯

೪೭. ನಾಯಕ ಹಾ.ಮಾ, **ಕನ್ನಡ ವಿಶ್ವಕೋಶ**, ಸಂ.೪, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ೧೯೭೦

೪೮. ನಾಯಕ ಎನ್.ಆರ್, **ಹಾಲಕ್ಕಿ ಒಕ್ಕಲಿಗರ ಸಂಸ್ಕೃತಿ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩

೪೯. ನಾಯಕ ಹಾ.ಮಾ. **ಅರುವತ್ತರ ಅರಲು**, ತಳುಕಿನ ವೆಂಕಣ್ಣಯ್ಯನವರ ಸ್ಮಾರಕ ಗ್ರಂಥಮಾಲೆ, ಗೋಕುಲಂ, ಮೈಸೂರು, ೧೯೯೫

೫೦. ನಾಯಕ ಜಿ. ಬೆನಕನಹಳ್ಳಿ, **ಕರ್ನಾಟಕ ಕಲೆಗಳು**, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೧೯೮೬

೫೧. ಪ್ಲೆಖನೋವ್ ಜಿ.ವಿ, ಮತ್ತು ರಾಮಚಂದ್ರ ಮೂರ್ತಿ, ಎಚ್.ಕೆ. ಅನು: **ಕಲೆ ಮತ್ತು ಸಾಮಾಜಿಕ ಜೀವನ**, ನವ ಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು, ೧೯೭೯

೫೨. ಪರಮ ಶಿವಯ್ಯ ಜೀ.ಶಂ. ಜನಪದ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೮೬

೫೩. ಪರಮಶಿವಯ್ಯ, **ಜೀ.ಶಂ. ಪಿ.ಆರ್. ತಿಪ್ಪೆಸ್ವಾಮಿ**, ಕರ್ನಾಟಕ ಲಲಿತ ಕಲಾ ಅಕಾಡೆಮಿ, ಬೆಂಗಳೂರು, ೧೯೯೪

೫೪. ಪಾಟೀಲ್ ಎಸ್.ಸಿ, **ಜನಪದ ಚಿತ್ರಕಲೆ**, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೫

೫೫. ಪಾಟೀಲ್ ಎಸ್.ಸಿ, **ಬಾರೋಕ್ ಕಲೆ**, ಭಾರತೀಯ ಕಲಾಕೇಂದ್ರ, ಧಾರವಾಡ, ೧೯೮೭

೫೬. ಪುರುಷೋತ್ತಮ ಬಿಳಿಮಲೆ ಮತ್ತು ಚಲುವರಾಜ, **ಹಂಪಿ ಜಾನಪದ**, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೬

೫೭. ಪುರುಷೋತ್ತಮ ಬಿಳಿಮಲೆ, ಸಂ. ನಾವಡ ಎ.ವಿ, ವಿದ್ವಾನ್ ರಾಮಚಂದ್ರ ಉಚ್ಚಿಲ, **'ಸಿರಿ' ಶ್ರೀ ಅಮೃತ ಸೋಮೇಶ್ವರ ಅಭಿನಂದನ**, ಸಂ. ಕಲಾ ಗಂಗೋತ್ರಿ, ಸೋಮೆಶ್ವರ ಉಜ್ಜಿಲ, ೧೯೯೫

೫೮. ಪುರುಷೋತ್ತಮ ಬಿಳಿಮಲೆ, **ಜಾನಪದ ಕ್ಷೇತ್ರಕಾರ್ಯ ಆಧುನಿಕ ವಿಧಾನಗಳು**, ಕನ್ನಡ ವಿಶ್ವವಿದ್ಯಾಲಯ, ಹಂಪೆ, ೧೯೯೩

೫೯. ಪ್ರಭಾಕರ ಎ.ಎಸ್, **ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು**, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೬೦. ಪ್ರಭಾಕರ ಎ.ಎಸ್, **ಮ್ಯಾಸಬೇಡರ ಕಥನಗಳು**, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೬೧. ಬಾಯಿರಿ ಬಿ.ಪಿ, **ಭಾರತೀಯ ಚಿತ್ರಕಲೆ**, ಪ್ರತಿಭಾ ಗ್ರಂಥಮಾಲೆ, ಧಾರವಾಡ, ೧೯೭೯

೬೨. ಬಾಯಿರಿ ಬಿ.ಪಿ, ರಂಗವಲ್ಲಿ, **ಚಿತ್ರ ಕುಟೀರ**, ಉಡುಪಿ, ೧೯೯೨

೬೩. ಬೋರಲಿಂಗಯ್ಯ ಹಿ.ಚಿ, **ಗಿರಿಜನ ನಾಡಿಗೆ ಪಯಣ**, ರಾಗಿರೊಟ್ಟಿ ಪ್ರಕಾಶನ, ಬೆಂಗಳೂರು, ೧೯೯೧

೬೪. ಬೋರಲಿಂಗಯ್ಯ ಹಿ.ಚಿ, **ಕರ್ನಾಟಕ ಜನಪದ ಕಲೆಗಳ ಕೋಶ**, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೬

೬೫. ಬೋರಲಿಂಗಯ್ಯ ಹಿ.ಚಿ, **ಕಾಡು ಕಾಂಕ್ರೀಟ್ ಮತ್ತು ಜನಪದ**, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೯೫

೬೬. ಬೋರಲಿಂಗಯ್ಯ ಹಿ.ಚಿ, **ಸಿದ್ಧಿಯರ ಸಂಸ್ಕೃತಿ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩

೬೭. ಭಟ್ಟ ಜೆ.ಎಸ್. **ಹಸಲರ ಸಂಸ್ಕೃತಿ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩

೬೮. ಮಂಜುನಾಥ ಬೇವಿನಕಟ್ಟಿ, **ಜಾನಪದ ನಂಬಿಕೆಗಳು**, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೫

೬೯. ಮಧುವೆಂಕಾರೆಡ್ಡಿ, **ಜನಪದ ಕಸೂತಿ**, ಕನ್ನಡ ವಿಶ್ವವಿದ್ಯಾಲಯ, ಹಂಪಿ,೨೦೦೦

೭೦. ಮಮತಾ ಚತುರ್ವೇದಿ, ಅನು: ಕಾಶೀನಾಥ ಅಂಬಲಗೆ, **ಸೌಂದರ್ಯ ಶಾಸ್ತ್ರ**, ಕರ್ನಾಟಕ ಲಲಿತ ಕಲಾ ಅಕಾಡೆಮಿ, ಬೆಂಗಳೂರು, ೨೦೦೧

೭೧. ಮರಿಶಾಮಾಚಾರ್ ಎನ್. **ಭಾರತದ ದೃಶ್ಯ ಕಲಾವಿದರು**, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು,೧೯೯೨

೭೨. ಮರಿಶಾಮಾಚಾರ್ ಎನ್, **ದೃಶ್ಯ ಕಲಾ** ಸಿ.ಎಂ.ಎನ್ ಪ್ರಕಾಶನ ಜಯನಗರ, ಬೆಂಗಳೂರು, ೨೦೦೧

೭೩. ಮರಿಶಾಮಾಚಾರ್ ಎನ್. **ಕೆ.ಕೆ. ಹೆಬ್ಬಾರ್**, **ಕರ್ನಾಟಕ ಲಲಿತಕಲಾ ಅಕಾಡೆಮಿ**, ಬೆಂಗಳೂರು, ೧೯೮೭

೭೪. ಮರಿಶಾಮಾಚಾರ್ ಎನ್, **ಭಾರತದ ಜಾನಪದ ಕಲೆ**, ಸಿ.ಎಂ. ಎನ್ ಪ್ರಕಾಶನ, ಬೆಂಗಳೂರು, ೧೯೯೧

೭೫. ಮಲ್ಲಿಕಾರ್ಜುನ ಜೆ, **ಚಿತ್ರಕಲೆ ಮತ್ತು ಸಂವಹನ**, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೬

೭೬. ಮಹದೇವ ಸಿ, **ಬಳ್ಳಾರಿ ಜಿಲ್ಲೆಯ ಮರದ ವಾಸ್ತು**, ಕನ್ನಡ ವಿಶ್ವವಿದ್ಯಾಲಯ, ಹಂಪೆ, ೨೦೦೦

೭೭. ಮಹೇಶ್ವರಯ್ಯ ಎಚ್.ಎಂ, **ಹಚ್ಚೆ ಒಂದು ಜಾನಪದ ಕಲೆ**, ಸುವರ್ಣ ಜನಪದ ಸಂ.೨, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೮

೭೮. ಮಹೇಶ್ ತಿಪ್ಪಶೆಟ್ಟಿ, **ಇಳಕಲ್ಲ ಸೀರೆ**, ಕನ್ನಡ ವಿಶ್ವವಿದ್ಯಾಲಯ, ಹಂಪೆ, ೨೦೦೦

೭೯. ಮೀರಾಸಾಬಿಹಳ್ಳಿ ಶಿವಣ್ಣ, **ದುರುಗ ಜಾನಪದ**, ಶಕ್ತಿ ಮುದ್ರಣ ಮತ್ತು ಪ್ರಕಾಶನ, ಬೆಂಗಳೂರು, ೧೯೯೯

೮೦. ಮುರಾರಿ ಬಲ್ಲಾಳ ನಿ, **ನಿತ್ಯ ವರ್ತಮಾನ**, ಅರಿವು ಪ್ರಕಾಶನ, ಹೊಸಪೇಟೆ, ೨೦೦೧
೮೧. **ಮೊಗಳ್ಳಿ ಗಣೇಶ್**, **ದೇಶಿ**, ಕನ್ನಡ ವಿಶ್ವವಿದ್ಯಾಲಯ, ಹಂಪೆ, ೧೯೯೭
೮೨. ರಂಗಾರೆಡ್ಡಿ ಕೋಡಿರಾಂಪುರ, **ಬಂಡಾಯ ಜಾನಪದ**, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೫
೮೩. ರವೀಂದ್ರನಾಥ್ ಟಾಗೂರು, ಎಚ್.ಎಸ್. ಶ್ರೀಮತಿ, ಅನು: **ಕಲೆಯ ಅರ್ಥ**, ಕರ್ನಾಟಕ ಚಿತ್ರಕಲಾ ಪರಿಷತ್ತು, ಬೆಂಗಳೂರು, ೧೯೮೮
೮೪. ರಾಮಕೃಷ್ಣ ಹೆಚ್.ಜೆ, ಕ ಅನುವಾದ ಪ್ರಕಾಶ ಸಿಂಗ್, **ನಾಗಾಲ್ಯಾಂಡ್**, ನಾಷನಲ್ ಬುಕ್ ಟ್ರಸ್ಟ್, ಇಂಡಿಯಾ, ಹೊಸದೆಹಲಿ, ೧೯೭೨
೮೫. ರಾಮಚಂದ್ರೇಗೌಡ ಹಿ.ಶಿ, ಮತ್ತು ಕೃಷ್ಣಮೂರ್ತಿ ಹನೂರು, ಸಂ. **ಸುವರ್ಣ ಜಾನಪದ** ಸಂ. ೨, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೮
೮೬. ರಾಮದಾಸ್ ಅಡ್ಯಂತಾಯ, ಎಂ. ರಾಮನರಸಯ್ಯ, **ಕರ್ನಾಟಕ ಲಲಿತಕಲಾ ಅಕಾಡೆಮಿ**, ಬೆಂಗಳೂರು, ೨೦೦೦
೮೭. ರಾಮಪ್ರಸಾದ್ ಎನ್.ಎಸ್, ವಿಶ್ವಕನ್ನಡ ಸಂ.೨, **ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ**, ಬೆಂಗಳೂರು, ೧೯೮೬
೮೮. ಲಕ್ಕಪ್ಪಗೌಡ ಎಚ್.ಜೆ, **ಸುವರ್ಣ ಜಾನಪದ**, ಸಂಪುಟ.೨, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೮
೮೯. ಲಕ್ಕಪ್ಪಗೌಡ ಎಚ್.ಜೆ, **ಕರ್ನಾಟಕ ಬುಡಕಟ್ಟು**, ಸಂಪುಟ: ೨, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೨೦೦೦
೯೦. ಲಲಿತಾ ಎ.ಸಿ, **ಕಾಡುಕುರುಬರ ಮತ್ತು ಜೇನುಕುರುಬರ ಸಂಸ್ಕೃತಿ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩
೯೧. ವೆಂಕೋಬರಾವ್ ಬಿ, **ಮೈಸೂರು ದೇಶದ ವಾಸ್ತುಶಿಲ್ಪ**, ವಿಚಾರ ಸಾಹಿತ್ಯ ಪ್ರೈವೇಟ್ ಲಿಮಿಟೆಡ್, ಬಳೆಗಾರ ಪೇಟೆ, ಬೆಂಗಳೂರು, ೧೯೫೯
೯೨. ವಿವೇಕ ಪೈ ಬಿ.ಎ, **ಅನ್ವಯಿಕ ಜಾನಪದ**, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು, ೧೯೮೫
೯೩. ವೇಣಿಮಾಧವ ಶಾಸ್ತ್ರಿ, **ಸಂಸ್ಕೃತ ಸಾಹಿತ್ಯಗಳಲ್ಲಿ ಉತ್ಸವಗಳು**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೬
೯೪. ವೈಕುಂಠ ರಾಜು, ಬಿ.ವಿ, **ಕನ್ನಡ ರಂಗಭೂಮಿ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭
೯೫. ಶಂಕರ ಪಾಟೀಲ, **ಚಿತ್ರಕಾಲ ಚಿಂತನೆ**, ಪ್ರಗತಿ ಪ್ರಕಾಶನ, ದಾವಣಗೆರೆ, ೧೯೯೫
೯೬. ಶಂಕರ ಪಾಟೀಲ, **ಚಿತ್ರಾಂತ ರಂಗ**, ಪ್ರಗತಿ ಪ್ರಕಾಶನ, ಕಲಾಭವನ, ವಿದ್ಯಾನಗರ, ದಾವಣಗೆರೆ, ೧೯೯೮
೯೭. ಶಂಕರಪ್ಪ, **ಕರ್ನಾಟಕ ಕಲಾವಿದರ ಕಲಾಕೃತಿಗಳ ಪ್ರದರ್ಶನ**, ಕರ್ನಾಟಕ ಲಲಿತ ಕಲಾ ಅಕಾಡೆಮಿ, ಬೆಂಗಳೂರು, ೨೦೦೧
೯೮. ಶಾಂತಿನಾಯಕ, **ರಂಗೋಲಿ**, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೪
೯೯. ಶಾಂತ್‌ರಾಜ್ ಆರ್.ಎ, **ಕಲೆಗಳಲ್ಲಿ ಸಂಸ್ಕೃತಿ ಹಾಗೂ ಪರಂಪರೆ**, ಸದನ ಚಿತ್ರಕಲಾವಿದರ ಯುವ ಬಳಗ, ಬೆಂಗಳೂರು, ೧೯೯೫
೧೦೦. ಶಾಸ್ತ್ರಿ ಬಿ.ವಿ.ಕೆ, **ನವ ಕಲೆಗಳ ನವ ಮುಖಗಳು**, ಕರ್ನಾಟಕ ಲಲಿತ ಕಲಾ ಅಕಾಡೆಮಿ, ಬೆಂಗಳೂರು, ೧೯೯೨
೧೦೧. ಶಿವರಾಮಕಾರಾಂತ, **ಭಾರತದ ಪರಿಸರ**, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೫
೧೦೨. ಶಿವರಾಮಕಾರಂತ, **ಕಲಾಜಗತ್ತು**, ಸಂಪುಟ: ೨, ಬಿ. ಮಾಲಿನಿ ಮಲ್ಯ, ಮಂಗಳೂರು ವಿಶ್ವವಿದ್ಯಾಲಯ, ೧೯೯೪

೧೦೩. ಶಿವರಾಮಕಾರಂತ, **ಚಿತ್ರಶಿಲ್ಪ ವಾಸ್ತುಕಲೆಗಳು**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೫

೧೦೪. ಶಿವರಾಮಕಾರಂತ, **ಕಲಾ ಪ್ರಪಂಚ**, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೭೮

೧೦೫. ಶಿವರಾಮಕಾರಂತ, **ಸ್ಮೃತಿ ಪಟಲದಿಂದ** ಸಂಪುಟ: ೧, ರಾಜಲಕ್ಷ್ಮಿ ಪ್ರಕಾಶನ, ಬೆಂಗಳೂರು, ೧೯೭೭

೧೦೬. ಶಿವರಾಮಕಾರಂತ, **ಕರ್ನಾಟಕದ ಚಿತ್ರಕಲೆ**, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೧

೧೦೭. ಶಿವಪ್ಪ ಕೆ.ಸಿ, ಅನು: **ಬೆಡಗಿನ ಬಾಟಿಕ್**, ಬೆಂಗಳೂರು ವಿಶ್ವವಿದ್ಯಾಲಯ, ೧೯೮೩

೧೦೮. ಶ್ರೀಧರಮೂರ್ತಿ, **೬೪ ಕಲೆಗಳು**, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೪

೧೦೯. ಸದಾಶಿವ ಕೆ, **ಸಮಗ್ರ ಭಾರತ ಇತಿಹಾಸ**, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ೧೯೯೮

೧೧೦. ಸಮಸ್ಯ ಅರ್ಜುನ ಹ, ಕೊಳಚೆ, **ಗ್ರಾಮೀಣ ಪ್ರದೇಶದಲ್ಲಿ ವಕ್ಕಲುತನ**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೫

೧೧೧. ಸವಿತಾ ನಾಯಕ, **ಬುಡಕಟ್ಟು ಮಹಿಳೆಯರ ಪ್ರಸಾದನ ಕಲೆ**, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೧೧೨. ಸಿ.ಸಿ.ಎ.ಪೈ, ಎಸ್.ಜೆ, **ಜಾನಪದ ವೈಜ್ಞಾನಿಕ ಕ್ಷೇತ್ರಕಾರ್ಯ**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೮

೧೧೩. ಸೀತಾರಾಮ ಭಟ್ ಬಿ, **ಅಮೆಜಾನ್**, ಕೃಂತಜ ಪ್ರಕಾಶನ, ದಕ್ಷಿಣ ಕನ್ನಡ, ೧೯೯೪

೧೧೪. ಸೀತಾರಾಮಯ್ಯ ವಿ, **ಕಲಾನುಭವ**, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೬

೧೧೫. ಸುಂದರ ಅ, ಸಂ. **ಕರ್ನಾಟಕ ಪ್ರಾಗಿತಿಹಾಸ ಕಾಲದ ಕಲೆ**, ಕರ್ನಾಟಕ ಲಲಿತ ಕಲಾ ಅಕಾಡೆಮಿ, ಬೆಂಗಳೂರು, ೧೯೯೪

೧೧೬. ಸುಂದರ ಅ, ಸಂ. **ಕರ್ನಾಟಕ ಚರಿತ್ರೆ ಸಂಪುಟ ೧**, ಕನ್ನಡ ವಿಶ್ವವಿದ್ಯಾಲಯ, ಹಂಪೆ, ೧೯೯೭

೧೧೭. ಸುಸೀಲಾ, ಪಿ, ಉಪಾಧ್ಯಾಯ, **ಜನಪದ ಆರಾಧನೆ ಮತ್ತು ರಂಗಕಲೆ**, ಪ್ರಾದೇಶಿಕ ಜನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಎಂ.ಜಿ.ಎಂ. ಕಾಲೇಜು, ಉಡುಪಿ, ೧೯೮೯

೧೧೮. ಸೈಯದ್ ಜಮೀರುಲ್ಲಾ ಷರೀಫ್, **ಗೊಂಡರ ಸಂಸ್ಕೃತಿ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩

೧೧೯. ಸ್ವಾಮಿ ಪಿ.ಕೆ, ಅನು: **ಮಾರ್ಕ್ಸ್‌ವಾದ, ಮತಧರ್ಮ, ಹಿಂದುತ್ವ**, ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು, ೧೯೯೨

೧೨೦. ಹಸನಬಿ ಬೀಳಿಗಿ, **ಜಾನಪದ ಸೃಷ್ಟಿ-ದೃಷ್ಟಿ**, ಸಾಯಿ ಪ್ರಕಾಶನ, ಧಾರವಾಡ, ೨೦೦೦

೧೨೧. ಹಡಪದ ಆರ್.ಎಂ, **ಸಮಕಾಲೀನ ಕಲೆ**, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೮೧

೧೨೨. ಹಿರೆಮಲ್ಲೂರ ಈಶ್ವರನ್, **ಜಂಗಮ**, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೧೨೩. ಹಿರೇಮಠ ಎಸ್.ಎಸ್, **ಮಾದರ ಚನ್ನಯ್ಯನ ನಾಡಿನಲ್ಲಿ**, ಸಮತಾ ಪ್ರಕಾಶನ, ಹರಪನಹಳ್ಳಿ, ೧೯೯೭

೧೨೪. ಹೆಂಡಿ ಬಿ.ಬಿ, **ಪಾಶ್ಚಾತ್ಯ ಕಾವ್ಯ ಮೀಮಾಂಸೆ**, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೧

೧೨೫. ಹೆಗಡೆ, ಜಿ.ಎಂ, **ಮಾಸ್ತಿಯವರ ವಿಮರ್ಶೆ ಒಂದು ಅಧ್ಯಯನ**, ಶ್ರೀಮಾತಾ ಪ್ರಕಾಶನ, ಧಾರವಾಡ, ೧೯೯೧

ENGLISH BOOKS

1. Ajit Mookerjee, Folk Art of India, Ciarion Books, Associated with Hind pocket Books, 1986

2. Applied Art in The North of The Soviet Union in The Land of the Reindeer, Auroraart Publishers, Lenningrad

3. Encyclopdia of Knowledge, Fight Published in Great Braatian in 1979

4. Ghosh D.P, Kamaratna, R & K, Publishing House 5, Scindia House, New Delhi, 1973
5. Grace Morley, Pre, columbain Art, National Museum, New Delhi, 1968
6. Jyotindjain, Painted Myths of Creation, Art and Ritual of Indian Tribe, Lalit Kala Akademi, New Delhi, India, 1984
7. Kahane P.P, Ancient and, Classical Art, 20,000 years of World, Painting Vol-1, Dell Publishing, 750 Third Aueme, Newyork, 1968
8. Krishnaiah S.K, karnataka Puppetry, Regional Resources, Centre for folk performing, Arts, M.G.M, Coleage Udapi 1988
9. Ram Dhamija, Image India Heritage of Indian Art and Creats, Vikas Publiscations, Delhi
10. Yashodhara Dalmia, The Painted World of the Warlies lalithakala Akademi, New Delhi, 1988
11. British Museum London, News week Great Museum of The World, New york, P: News Week, Inc & Arnoldo Monddorieditore, 1968
12. National Museum Of Anthropology, Mexicocitty, Great Museums of The World, News Week/ Great Museum of the World p: News Week, Inc, 1971

ಪತ್ರಿಕೆಗಳು

ವಿಜಯಕರ್ನಾಟಕ

ಪ್ರಜಾವಾಣಿ

ಸಂಯುಕ್ತ ಕರ್ನಾಟಕ

ಜನತಾವಾಣಿ

ಉದಯವಾಣಿ

ನಗರವಾಣಿ

ತರಂಗ

ಭಾವನಾ

[illegible]

[illegible]

ವಕ್ತೃಗಳ ವಿವರ

ಸಂ.	ಹೆಸರು	ವಯಸ್ಸು	ವಿಳಾಸ
	ಸೋಲಿಗರು		
೧	ಪಟೇಲ ಬಂಗಾರ ಗಿರಿಯಪ್ಪ	೪೦	ಬಿಳಿಗಿರರಂಗನ ಬೆಟ್ಟ
೨	ಮುದೇಗೌಡ	೭೫	ಯರಕನಗಡ್ಡೆ ಪೊಡು, ಬಿಳಿಗಿರಿರಂಗನಬೆಟ್ಟ
೩	ರಾಜು	೩೨	ಕಾರ್ಯಕರ್ತ ವಿವೇಕನಾಂದ ಗಿರಿಜನ ಕಲ್ಯಾಣಕೇಂದ್ರ, ಬಿಳಿಗಿರರಂಗನಬೆಟ್ಟ
೫	ಸಿದ್ದಮ್ಮ	೮೨	ಕೆರೆದಿಂಬ ಪೋಡು, ಬಿಳಿಗಿರಿರಂಗನಬೆಟ್ಟ
೭	ಮಹದೇವಮ್ಮ	೫೦	ಹೊಸಗಡ್ಡೆಪೋಡು, ಬಿಳಿಗಿರಿರಂಗನಬೆಟ್ಟ
	ಜೇನುಕುರುಬರು		
೧	ನೀಲಮ್ಮ	೩೦	ಆನೆಮಾಳಾಡಿ, ಹುಣುಸೂರು
೨	ಚಂದ್ರ	೪೫	ಆನೆಮಾಳಾಡಿ, ಹುಣುಸೂರು
	ಕಾಡು ಕುರುಬರು		
೧	ಸಣ್ಣಯ್ಯ	೬೫	ಕಪ್ಪನಗದ್ದಿ ಆಡಿ
೨	ಚಿಕ್ಕಮ್ಮ	೪೦	ಹೊಸ ಗೋಳುರು ಆಡಿ
	ಯರವರು		
೧	ತೋಲಯ್ಯ	೬೦	ಗೋಳೂರು ಆಡಿ
೨	ಬಸವಯ್ಯ	೮೦	ಗೋಳೂರು ಆಡಿ
೩	ಜೋಗಯ್ಯ	೫೦	ಗೋಳೂರು ಆಡಿ
೪	ಮಲ್ಲಮ್ಮ	೩೫	ಗೋಳೂರು ಆಡಿ
೫	ಬೊಮ್ಮಿ	೩೦	ಕ್ರೆಷ್ ಶಿಶುಪಾಲನಾ ಕೇಂದ್ರ, ಆನೆಮಳಾಡಿ
	ಪಣಿಯರು		
೧	ನಂಜಮ್ಮ	೪೦	ಕೊಲ್ಲಿಹಾಡಿ, ಕಾಕನಕೋಟೆ
೨	ಲಕ್ಷ್ಮಿ	೨೦	ಕೊಲ್ಲಿಹಾಡಿ, ಕಾಕನಕೋಟೆ
	ಹಸಲರು		
೧	ಗಣಪತಿಗಾಲಿಮನೆ	೫೪	ಹಿರೇಮನೆ, ತಾಳಗುಪ್ಪ
೨	ಬೀರಪ್ಪ	೬೫	ಗಾಲಿಮನೆ, ತಾಳಗುಪ್ಪ
೩	ಸುಕ್ರಿ ಕರಿಯ	೭೪	ಹಿರೇಮನೆ, ತಾಳಗುಪ್ಪ
	ದೀವರು		
೧	ಗೌರಮ್ಮ	೬೦	ಹಿರೇಮನೆ, ತಾಳಗುಪ್ಪ
೨	ಈಶ್ವರ ನಾಯಕ	೬೫	ಚಿತ್ತಾರ ಚಾವಡಿ, ಹಸವಂತಿ, ನಂಜೂರು
೩	ಪಾರ್ವತಿ	೪೫	ಹಿರೇಮನೆ, ತಾಳಗುಪ್ಪ
೪	ಚಂದ್ರಶೇಖರ	೫೦	ಹಿರೇಮನೆ, ತಾಳಗುಪ್ಪ
೫	ನಾಗರಾಜ, ಸದಸ್ಯರು	೭೫	ಮಂಜಿನಾಕನು, ಸಾಗರದ ಹತ್ತಿರ
	ಗೊಂಡರು		
೧	ತಿಮ್ಮಪ್ಪ ಗೊಂಡರು	೬೫	ನಾಗವಳ್ಳಿ

೨	ಸುಕ್ರ ಗೊಂಡರು	೫೦	ಮೆಘಾನಾ ಹತ್ತಿರ
೩	ಕುಪ್ಪಯ್ಯ	೫೦	ನಾಗವಳ್ಳಿ

ಕುಣಬಿಯರು

೧	ಗಣೇಶ	೭೨	ಮೆಘಾನೆ
೨	ಸೋಮಿ	೪೦	ಮೆಘಾನೆ
೩	ಲಕ್ಷ್ಮೀ	೩೦	ಮೆಘಾನೆ

ಹಾಲಕ್ಕಿ ಒಕ್ಕಲಿಗರು

೧	ಸುಕ್ರಿಬೊಮ್ಮನಗೌಡ	೭೬	ಬಡಿಗೇರಿ, ಅಂಕೋಲ
೨	ತುಳಸಿ	೪೫	ಬಡಿಗೇರಿ, ಅಂಕೋಲ
೩	ಗುಲಾಬಿ	೪೦	ಬಡಿಗೇರಿ, ಅಂಕೋಲ
೪	ದಿ. ವೆಂಕಟೇಶಗಣಪಗೌಡ	೫೨	ಅಪ್ಪಿಗೇರಿ, ಹೊನ್ನಾವರ
೫	ಕುಮಾರಿ ತುಳಸಿತಿಮ್ಮಪ್ಪಗೌಡ	೧೭	ಗೋಕರ್ಣ
೬	ಚೋಮಿಗೌಡ	೭೫	ಶಿರೂರು, ಅಂಕೋಲ
೭	ಆನಂದ	೫೦	ಕೂಜಿಹಳ್ಳಿ, ಕುಮಟ
೮	ಕುಮಾರಿ ಚಂದ್ರಿ	೧೮	ಕೂಜಿಹಳ್ಳಿ, ಕುಮಟ
೯	ವೆಂಕಟೇಶಗೌಡ	೨೬	ಹೊನ್ನಾವರ

ಗೌಳಿಗರು

೧	ವಿಠಲ್ ಬಾಬು ಪೋಂಡೆ	೩೫	N.G.O.ಕಾರ್ಯಕರ್ತ, ಕೋಳಿವಾಡ, ಎಲ್ಲಾಪುರ
೨	ಬೊಮ್ಮಾಬಾಯಿ	೬೦	ಕೋಳಿವಾಡ, ಎಲ್ಲಾಪುರ
೩	ಕೋಂಡುಚೋರ್ಯ	೩೦	ಗಣೇಶ್‌ವಾಡ, ಚಿಕ್ಕಕೇರಿ,
೪	ಸಕ್ಕೂಬಾಯಿತೋರ್‌ವತ್	೨೫	ಮಜ್ಜಿಗೆಹಳ್ಳಿ, ಚಿಕ್ಕಪ್ಪಗೇರಿ, ಯಲ್ಲಾಪುರ

ಸಿದ್ಧಿಯರು

೧	ಹನುಮಂತಪ್ಪಸಿದ್ಧಿ	೫೫	ದೇವರಕಲ್ಲಹಳ್ಳಿ, ಯಲ್ಲಾಪುರ
೨	ಗಣೇಶಸಿದ್ದಿ	೨೫	ದೇವರಕಲ್ಲಹಳ್ಳಿ, ಯಲ್ಲಾಪುರ
೩	ಪಾರ್ವತಿ	೩೫	ದೇವರಕಲ್ಲಹಳ್ಳಿ, ಯಲ್ಲಾಪುರ

ಸಾಮಾನ್ಯ ವಕ್ತೃಗಳು

೧	ಬಾಬು (ಪೋಸ್ಟ್ ಮಾಸ್ಟರ್)	೪೦	ಕೂಜಿಹಳ್ಳಿ, ಕುಮಟ
೨	ಶ್ರೀಕಾಂತ್	೬೬	ಡೀಡ್ ಸಂಸ್ಥೆಯ ಅಧ್ಯಕ್ಷರು, ಹುಣಸೂರು
೩	ಶ್ರೀ ಹುಚ್ಚಪ್ಪಮಾಸ್ತರ್	೬೩	ಹಿರೇಮನೆ, ತಾಳಗುಪ್ಪ, ಸಾಗರ
೪	ವಿಠಲನಾಣ್ಣೆ	೫೨	ಕಾರ್ಯದರ್ಶಿ ಕೃಷಿಕರ ಸಂಘ ಹೆಗ್ಗಡ ದೇವನ ಕೋಟಿ ಕೋಟೆ
೫	ಸೋಮಣ್ಣ ಜಿಲ್ಲಾಸಂಚಾಲಕರು	೬೦	ಗಿರಿಜನ ಜಿಲ್ಲಾ ಸಮಿತಿ, ಮೈಸೂರು
೬	ನಾಗೇಂದ್ರಪ್ಪ ಕಾಯಕರ್ತರು	೩೨	ಹೆಗ್ಗಡೆದೇವನಕೋಟೆ
೭	ಎಂ.ಪಿ.ನಾಗೇಶ್ M.S.W ಕಾರ್ಯಕರ್ತರು	೩೨	ಹೆಗ್ಗಡೆದೇವನಕೋಟೆ

❄❄❄❄❄

ಕರ್ನಾಟಕ

ಕ್ಷೇತ್ರಕಾರ್ಯ ಕೈಗೊಂಡ ಬುಡಕಟ್ಟುಗಳ ನೆಲೆಗಳು



ಹಾಲಕ್ಕಿಗಳು
೧. ಕಾರವಾರ
೨. ಅಂಕೋಲ
೩. ಕುಮಟ
೪. ಹೊನ್ನಾವರ
ಕುಣಬಿಯರು
೫. ಭಟ್ಕಳ
ಗೌಳಿಗರು
೬. ಯಲ್ಲಾಪುರ
೭. ದಾಂಡೇಲಿ
೮. ಹಳಿಯಾಳ
ಯರವರು
೯. ನಾಗರಹೊಳೆ
ಕಾಡುಕುರುಬರು
ಜೇನುಕುರುಬರು
೧೦. ಹುಣಸೂರು
೧೧. ಎಚ್.ಡಿ. ಕೋಟೆ
ಸೋಲಿಗರು
೧೨. ಬಿಳಿಗಿರಿರಂಗನಬೆಟ್ಟ
೧೩. ಮಲೆಯಮಾದೇಶ್ವರ
ಹಸಲರು
ದೀವರು
೧೪. ಸಾಗರ



ಛಾಯಾಚಿತ್ರಗಳು


ಗೌಳಿಗರ ಚಿತ್ತಾರ


ದೀವರ ಬಾಗಿಲ ಚಿತ್ತಾರ


ಹಾಲಕ್ಕಿಗಳ ಹಗರಣ


ಸಿದ್ಧಿಯರ ಗೃಹೋಪಯೋಗಿ ವಸ್ತುಗಳು


ಹಾಲಕ್ಕಿ ಚಿತ್ತಾರ



ಹಾಲಕ್ಕಿಗಳ ಚಿತ್ತಾರ



ಚಿತ್ರ ಬರೆಯುತ್ತಿರುವ ಹಾಲಕ್ಕಿಗಳು



ಗೊಂಡರ ಅಕ್ಕಿಯ ಮುಡಿ



ಕುಂಬದ ಮೇಲಿನ ದೀವರ ಚಿತ್ತಾರ



ಹಾಲಕ್ಕಿಗಳ ಕಲಾಕೃತಿ



ಯರವರ ಕಾಷ್ಠ ಶಿಲ್ಪ



ಹಾಲಕ್ಕಿಗಳು ಸಿದ್ಧ ಪಡಿಸಿದ ಮುಖವಾಡ


ಹಾಲಕ್ಕಿಗಳ ತುರಾಯಿ


ಹಾಲಕ್ಕಿಗಳ ಹಗರಣದ ವೇಷ


ಹಾಲಕ್ಕಿಗಳ ಕಿರೀಟ


ಹಾಲಕ್ಕಿಗಳ ಎದೆಪಟ್ಟಿ



ಗೊಂಡರ ಹರಿಸೇವೆ



ಹಾಲಕ್ಕಿಗಳ ಮದುವೆಯಲ್ಲಿ ಬರೆಯುವ ಚಿತ್ರ

ಬುಡಕಟ್ಟು ಮುಖವಾಡಗಳು







ದೀವರ ಭೂಮಿಣಿ ಬುಟ್ಟಿಯ ಚಿತ್ತಾರ






ಕುಣಬಿಯರ ಬಾಗಿಲ ಚಿತ್ತಾರ



ಗೌಳಿಗರ ಗೋಡೆಯ ಚಿತ್ತಾರ



ಹಾಲಕ್ಕಿಗಳ ಗೋಡೆಯ ಮೇಲಿನ ಚಿತ್ತಾರ



ಕುಣಬಿಯರ ಬಾಗಿಲ ಚಿತ್ತಾರ



ಗೌಳಿಗರ ಗೋಡೆಯ ಮೇಲಿನ ಚಿತ್ತಾರ



ಕುಣಬಿಯರ ಗೋಡೆಯ ಮೇಲಿನ ಚಿತ್ತಾರ



[illegible]



ಹಾಲಕ್ಕಿಗಳ ನೆಲದ ಮೇಲಿನ ಚಿತ್ತಾರ



ಹಾಲಕ್ಕಿಗಳ ಕದುರು ಕಟ್ಟುವ ಚಿತ್ತಾರ


[illegible]

ಹಾಲಕ್ಕಿಗಳ ನೆಲದ ಮೇಲಿನ ಚಿತ್ತಾರ





ಯರವರು ತಿಥಿ ಸಂದರ್ಭದಲ್ಲಿ ಬರೆಯುವ ಚಿತ್ರ



AKSHARA GRANTHALAYA
ACC.NO 050530




ಮಹೇಂದ್ರ